ಸಂವಾದ

ಅಕ್ಟೋಬರ್ ೨೦೦೭ ರೂ. ೨೦

ಬುದ್ಧನೆಂದರೆ ಯಾವ ಬುದ್ಧ?

ಪರಮಾಣು ಒಪ್ಪಂದದ ಒಳಮರ್ಮ

ತಲ್ಲಣಗಳ ಕವಿ ಢಸಾಳ

ಹಾಸಿಗೆ ಹಿಡಿದ ಚಿರತೆ!

ಸಂವಾದ

ಮಾಸ ಪತ್ರಿಕೆ

ಸಂಪುಟ ೫ ಸಂಚಿಕೆ ೧೨
ಅಕ್ಟೋಬರ್ ೨೦೦೭

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
© ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
© 080-23287943, 94480 48306
e- mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ



- ❑ ಪತ್ರಗಳು ೦೩
- ❑ ಹೊಸ ಪುಸ್ತಕ ೦೪
- ❑ ಅಂತರಂಗ ೦೫
- ❑ ಜಾತಿ ಪದ್ಧತಿ: ಭಾರತದ ಜನಾಂಗೀಯ ತಾರತಮ್ಯ ೦೬
  - ○ ಬಾಲಕೃಷ್ಣನ್ ರಾಜಗೋಪಾಲ್
- ❑ ಸಂಪಾದಕರೊಂದಿಗೆ ಸಂವಾದ ೦೮
  - ○ ಡಿ.ಎಂ. ಚಿಣ್ಣಪ್ಪ, ಸೋಮವಾರಪೇಟೆ
- ❑ ಭಾರತದ ಭಾಷೆಗಳ ಹೊಸ ಸಮೀಕ್ಷೆ ೧೦
  - ○ ಮೇಟಿ ಮಲ್ಲಿಕಾರ್ಜುನ್





- ❑ ತಲ್ಲಣಗಳ ಕವಿ ಢಸಾಳ್ ೧೨
  - ○ ಸತ್ಯಪ್ರಕಾಶ್ ಎಂ.ಆರ್
- ❑ ಭಯೋತ್ಪಾದನೆ ಚರ್ಚೆ ೧೮
  - ○ ಡಾ॥ ಜಿ. ರಾಮಕೃಷ್ಣ
  - ○ ಡಿ.ಎಸ್. ನಾಗಭೂಷಣ್
  - ○ ಎಚ್.ಎಸ್. ದೊರೆಸ್ವಾಮಿ
  - ○ ಎಸ್.ಜಿ. ಸಿದ್ಧರಾಮಯ್ಯ
  - ○ ಡಾ॥ ಕಮಲಾ ಹಂಪನಾ
- ❑ ಬುದ್ಧನೆಂದರೆ ಯಾವ ಬುದ್ಧ? ೨೨
  - ○ ಡಾ॥ ಜಿ. ರಾಮಕೃಷ್ಣ
- ❑ ೧ ೨ ೩ ಪರಮಾಣು ಒಪ್ಪಂದದ ಒಳಮರ್ಮ
  - ○ ನಾ. ದಿವಾಕರ್ ೨೬
- ❑ ಕರಡಿಯಾಡಿಸುವ ಖಲಂದರರು ೩೦
  - ○ ರಹಮತ್ ತರೀಕೆರೆ
- ❑ ಬುದ್ಧನೆಡೆಗೆ ಮರಳಿ ಮನೆಗೆ ೩೪
  - ○ ಡಾ॥ ಎಲ್. ಹನುಮಂತಯ್ಯ
- ❑ ದಲಿತ್ ಡೈರಿ ೩೮
  - ○ ಚಂದ್ರಭಾನ್ ಪ್ರಸಾದ್/ ಡೊಮಿನಿಕ್
- ❑ ಬುದ್ಧಾಯಣ ೪೨
  - ○ ಸಿ.ಎಚ್ ರಾಜಶೇಖರ್



ಕವನಗಳು :

- ❑ ಅವಳು ಹೋದ ಆ ದಿನ... ೧೪
- ❑ ಕ್ರೌರ್ಯ ೧೭

ಮುಖಪುಟ: ನಾಮ್‌ದೇವ್ ಢಸಾಳ (ಸೌಜನ್ಯ: ನವಯಾನ) ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ನನ್ನ ಆಲೋಚನೆ ಸಾಣೆ ಹಿಡಿದಿದೆ

ಪ್ರೀತಿಯ ಇಂದೂಧರವರಿಗೆ ನಮಸ್ಕಾರ.

ಬುದ್ಧಾಯಣದಲ್ಲಿನ 'ಬಾ ಸೋಪಕ ನನ್ನ ತೊಡೆ ನಿನಗಾಗಿ' ಬರಹ ಎಂಥ ಪ್ರೀತಿಯದು

ಮಗು ನಿನ್ನ ಹೆಸರೇನು?

'ಸೋಪಕ' ಎಂದು ಗುರುದೇವಾ

'ಬಹಳ ಮುದ್ದಾದ ಹೆಸರು ಮೋಹಕವಾದ ಮುಖ ಇತ್ತ ಬಾ' ಎಂದು ಕೈ ಚಾಚಲು ಬುದ್ಧನಿಂದ ದೂರ ಸರಿದ ಸೋಪಕ.

'ಬೇಡ ಗುರುದೇವಾ, ನಿಮ್ಮ ಕೈ ಸ್ಪರ್ಶಕ್ಕೆ ನಾನು ಅರ್ಹನಲ್ಲ. ನಾನು ಕುಲದಲ್ಲಿ ಪಂಚಮ'

'ಹಾಗೇನು ಒಳ್ಳೆಯದೇ ಆಯಿತು, ಹಾಗದರೆ ನನ್ನ ತೊಡೆಯ ಮೇಲೆ ಕೂರಲು ನೀನು ಅರ್ಹ' ಎಂದ ಬುದ್ಧ ಸೋಪಕನನ್ನು ಪ್ರೀತಿಯಿಂದ ಬಾಚಿ, ತಬ್ಬಿ ಎತ್ತಿ ಮುದ್ದಾಡಿ ತನ್ನ ತೊಡೆಯ ಮೇಲೆ ಕೂರಿಸಿಕೊಂಡು, 'ಈಗ ಹೇಳು ನಿನ್ನ ಆಸೆ ಏನು? ನಿನ್ನ ಕನಸೇನು? ಬರಹದ ಈ ಭಾಗ ಬುದ್ಧನನ್ನು ಅರ್ಥಮಾಡಿಸುತ್ತದೆ.' ಬುದ್ಧನ ಈ ಪ್ರೀತಿ ತತ್ವ ಎಷ್ಟೊಂದು ಸಹಜವಾದದ್ದು, ಯಾಕೆ ಈ ಪ್ರೀತಿ ತತ್ವದ ನದಿ ಭಾರತದ ಮನಸ್ಸಿನಲ್ಲಿ ಹರಿದು ಕೊಳಕು ತೊಳೆಯುವುದು ಸಾಧ್ಯವಾಗುತ್ತಿಲ್ಲ.

'ದಲಿತ್ ಡೈರಿ'ಯ ಚಂದ್ರಭಾನ್ ಕೊಟ್ಟಿರುವ 'ಎಮ್ಮೆ'ಯ ರೂಪಕ ತುಂಬಾ ಪ್ರಸ್ತುತ. ಇದು ನನ್ನ ಆಲೋಚನೆ ಸಾಣೆ ಹಿಡಿದಿದೆ.

'ಕಾಲಮಾನ ಬದಲಾಗಿದೆ. ಇಂದು ಎಮ್ಮೆ ಎನ್ನುವುದು ಬಹುದೊಡ್ಡ ಶಾಪವಾಗಿದೆ. ಒಂದು ಎಮ್ಮೆ ಬ್ರಾಹ್ಮಣನನ್ನು ಒಬ್ಬ ಓ.ಬಿ.ಸಿ.ಯನ್ನಾಗಿ ಮಾರ್ಪಡಿಸಬಲ್ಲದು...' ಈ ಮಾತು, ನಮ್ಮೂರಿನ ವಾಸು ಎಂಬ ಬ್ರಾಹ್ಮಣ ೧೦ ವರ್ಷ ಒಂದು ಎಮ್ಮೆ ಕಾದು ಸೋತು ಸುಸ್ತಾಗಿ, ಬೆಂಗಳೂರಿಗೆ ಸಾಗಿ ಬೇಕರಿ ಮಾಡಿ, ಬೇಕರಿಯನ್ನೆ ಉದ್ಯಮ ಮಾಡಿಕೊಂಡು ಈಗ ೨೦ ವರ್ಷದ ನಂತರ ಅವನ ಆಸ್ತಿ ೨೫ ಕೋಟಿಗೂ ಹೆಚ್ಚು ತೂಗುತ್ತಿರುವ ಸತ್ಯ ಕತೆ ನೆನಪಾಯಿತು. ಆದರೆ ಹೀಗೆ ಊರು ಬಿಟ್ಟು ನಗರ ಆಕ್ರಮಿಸುವ ಶಕ್ತಿ ಎಷ್ಟು ಜನಕ್ಕಿದೆ, ಅದಕ್ಕೆ ಬೇಕಾದ ಪರಿ ಕರಗಳು ಎಲ್ಲಿವೆ?

ನನ್ನ ವಿದ್ಯಾರ್ಥಿಗಳಿಗೆ ಸಂವಾದ ಓದಿಸುತ್ತಿರುವೆ. ಒಂದು 'ಸಂವಾದ' ನೂರು ಸಂವಾದಕ್ಕೆ ಎಡೆಮಾಡಿಕೊಟ್ಟಿದೆ. ಅದಕ್ಕಾಗಿ ನಿಮಗೆ ನಮಿಸುವೆ.

ಕೃಷ್ಣಮೂರ್ತಿ ಬಿಳಿಗೆರೆ

ಮನೆ ಮನೆಗೂ ಸಾಗಲಿ

ಶೋಷಿತರ, ದಲಿತ, ಅಸ್ಪೃಶ್ಯರ ಅಭಿವೃದ್ಧಿಗೆಂದು ಸದಾ ಶ್ರಮಿಸುತ್ತಿರುವ ಇಂದೂಧರ ಹೊನ್ನಾಪುರರವರಿಗೆ ಆದಿಮ ಶಕ್ತಿ ವಿದ್ಯಾರ್ಥಿ ಮತ್ತು ಯುವಜನ ವೇದಿಕೆ (ಕೋಲಾರ ಜಿಲ್ಲೆ)ಯಿಂದ ಜೈ ಭೀಮ್.

'ಸಂವಾದ' ಪತ್ರಿಕೆಯು ಹೆಚ್ಚು ಹೆಚ್ಚು ವಿಚಾರಗಳನ್ನು ಹೊರ ತುರುವುದು ದಲಿತರ ಶೋಷಿತರ ಅಭಿವೃದ್ಧಿಗಾಗಿಯೇ, ಹೀಗೆ ವಿಚಾರಗಳನ್ನು ವಿನಿಮಯ ಮಾಡುವ ಈ ಪತ್ರಿಕೆಯು ಮನೆ-ಮನೆಗೂ ಸಾಗಿ ಮುಂದಿನ ದಿನಗಳಲ್ಲಿ ಅದ್ಭುತವಾಗಿ ಬೆಳೆಯಲಿ ಎಂದು ಆಶಿಸುವ ನಿಮ್ಮವ,

ದಳಸಗೆರೆ ನರಸಿಂಹಮೂರ್ತಿ
ಕೋಲಾರ

'ಸಂವಾದ'ದ ಅಗತ್ಯ

ಪ್ರಿಯ ಶ್ರೀ ಇಂದೂಧರ ಹೊನ್ನಾಪುರ ಅವರಿಗೆ, ವಂದನೆಗಳು.

ನಿಮ್ಮ 'ಸಂವಾದ' ಚೆನ್ನಾಗಿ ಬರುತ್ತಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಇಂತಹದೊಂದು ಪತ್ರಿಕೆಯ ಅಗತ್ಯ ಬಹಳ ಇದೆ. ಅದನ್ನು ನೀವು ಮಾಡುತ್ತಿದ್ದೀರಿ. ಅದಕ್ಕಾಗಿ ನಿಮಗೆ ನನ್ನ ಅಭಿನಂದನೆಗಳು.

ವಿಶ್ವಾಸದಿಂದ,

ಎಸ್. ಮಾಲತಿ, ಸಾಗರ

ಸಮರ್ಥ ಪತ್ರಿಕೆ

ಮಾನ್ಯ ಸಂಪಾದಕರಿಗೆ

ಪತ್ರಿಕೆ ನಿಮ್ಮ ನೇತೃತ್ವದಲ್ಲಿ ಸಮರ್ಥವಾಗಿ ಬರುತ್ತದೆ. ನಿಮ್ಮ ಸಂಪಾದಕೀಯಗಳು ತುಂಬ ಪ್ರಖರವಾಗಿರುತ್ತವೆ. ಆ ನಿಮ್ಮ ಚೈತನ್ಯ ಯಾವತ್ತು ನಿಚ್ಚಳವಾಗಿ ಇರಲಿ ಎಂದು ಹಾರೈಸುತ್ತೇನೆ.

ಡಾ॥ ಹಿ.ಶಿ. ರಾಮಚಂದ್ರೇಗೌಡ,
ಮೈಸೂರು

'ನೊಂದವರ ಧ್ವನಿ'

ಪ್ರಿಯ ಸಂಪಾದಕರೇ

'ಸಂವಾದ' ನಾಡಿನ ನೊಂದವರ ಧ್ವನಿಯಾಗಿ ಹೊರಬರುತ್ತಿದೆ.

ಅನೇಕ ವೈಚಾರಿಕ ಲೇಖನಗಳಿಗೆ ಮಾನ್ಯತೆ ಕೊಟ್ಟು ಪ್ರಕಟಿಸುತ್ತಿದ್ದೀರಿ.

ಎಲ್ಲಾ ವರ್ಗದವರು ಓದುವಂತಹ ಲೇಖನಗ ಳನ್ನು ಪ್ರಕಟಿಸುವ ಮೂಲಕ ಪತ್ರಿಕಾ ವಲ ಯದಲ್ಲಿಯೇ 'ಸಂವಾದ' ಮಹತ್ತರವಾದ ಹೆಜ್ಜೆಯನ್ನಿಡುತ್ತಿದೆ.

ಮಡಿವಾಳಪ್ಪ ಎಸ್.ಕೆ.
ಚಿತ್ತಾಪೂರ

ಒಂದನೇ ಸ್ವಾತಂತ್ರ್ಯೋತ್ಸವದೆಡೆಗೆ ಹೊರಳಿಸಿದ ಸಂಪಾದಕೀಯ

ಮಾನ್ಯ ಸಂಪಾದಕರೆ, ವಂದನೆಗಳು,

ಸಂವಾದವು ಕೈ ಸೇರಿದ ದಿನವಿಡೀ ಮಾಡಲೆಣಿಸಿದ್ದ ಯಾವುದೇ ಕೆಲಸ ಸಾಧ್ಯವಾಗುವುದಿಲ್ಲ. ಸೆಪ್ಟೆಂಬರ್ 2007ರ ಸಂಚಿಕೆಯ ಸಂಪಾದಕೀಯದ ಶಿರೋನಾಮೆಯಂತೂ ನನ್ನನ್ನು ೧ನೆಯ ಸ್ವಾತಂತ್ರ್ಯೋತ್ಸವದೆಡೆಗೆ ಹೊರಳಿಸಿತು.

ನಾನಾಗ ನಮ್ಮೂರಿನ (ಈಗ ಉಡುಪಿ ಜಿಲ್ಲೆಗೆ ಸೇರಿರುವ) ಬೋರ್ಡ್ ಎಲಿಮೆಂಟರಿ ಶಾಲೆಯ ಐದನೆಯ ಕ್ಲಾಸಿನಲ್ಲಿದ್ದೆನು. ಒಂದು ದಿನ ಅಲ್ಲಿದ್ದ ಇಬ್ಬರೊಬ್ಬ ಅಧ್ಯಾಪಕರು, ಒಂದು ಉದ್ದವಿದ್ದ ಸೀಮೆ ಕೋಲಿನ ತುದಿಗೆ ತ್ರಿವರ್ಣ ಧ್ವಜವನ್ನು ಬಿಗಿದು, ಶಾಲೆಯ ಮೈದಾನವೆನ್ನಬಹುದಾದ ಖಾಲಿ ಜಮೀನಿನಲ್ಲಿ ಅದನ್ನು ನೆಟ್ಟಗೆ ನಿಲ್ಲಿಸಿ, ವಿದ್ಯಾರ್ಥಿಗಳೆಲ್ಲರನ್ನು (೨೦-೩೦ ಮಂದಿಯಾಗಿರಬಹುದು) ಕರೆದು, ಅದರ ಸುತ್ತ ಸಾಲಾಗಿ ನಿಲ್ಲಿಸಿ, ಜನಗಣ ಮನ ಹಾಡಿಸಿ, ಧ್ವಜಕ್ಕೆ ಸೆಲ್ಯೂಟ್ ಹೊಡೆಸಿ, ಅವರಂದಂತೆ ಭಾರತ್ ಮಾತಾಕಿ ಜೈ ಎಂದು ನಾವು ಅರಚಿದ್ದು ಅದರ ಬೆನ್ನಿಗೆ ಅಧ್ಯಾಪಕರೊಬ್ಬರು- 'ಈ ದಿನ ನಮ್ಮ ಸ್ವಾತಂತ್ರ್ಯ ದಿನ. ಇದೊಂದು ಹಬ್ಬವೆಂದು ಪ್ರತಿವರ್ಷವೂ ಈ ದಿನವನ್ನು ಆಚರಿಸಬೇಕು ಎಂದು ಏನೇನೋ, ಹೇಳಿ ಭಾಷಣ ಮಾಡಿದ್ದು, ಆ ಮೇಲೆ ಸಮಾರೋಪವೆನ್ನುವಂತೆ ತಾವು ತಂದಿದ್ದ ಹಳದಿ ಲಡ್ಡುಗಳನ್ನು ನಮಗೆ ಹಂಚಿದ್ದು, ಅದನ್ನು ತಿಂದು ನಾವು ಸಂಭ್ರಮಿಸಿದ್ದು ಎಲ್ಲವೂ ಈಗ ಹಸಿರಾಗಿದೆ.

ಆ ದಿನ ಸಾಯಂಕಾಲ-ಅಂದಾಜು ಆಕೆಗೆ ಆಗ ೭೦ ವರ್ಷ-ನನ್ನ ಅಜ್ಜಿ ತನ್ನ ಸೊಸೆಯೊಂದಿರೊಂದಿಗೆ ಮಾತಾಡುತ್ತಾ- 'ಇನ್ನು ನಮಗೆ ಸ್ವತಂತ್ರವಂತೆ! ಅಂಗಡಿ ಸಾಮಾನೆಲ್ಲ ಅಗ್ಗದಲ್ಲಿ ಸಿಗುತ್ತಂತೆ! ನಾವು ಮಾಡುವ ಕುಕ್ಕೆ ಹಗ್ಗಕ್ಕೆ ಈಗಲೇ ಬೆಲೆಯಿಲ್ಲ, ಇನ್ನೇನಾಗುತ್ತೋ?" ಎಂದು ದುಗುಡಗೊಂಡುದು ನನಗೆ ಆಗ ಅರ್ಥವಾಗಿರಲಿಲ್ಲ. ಈಗ ನಾನು ಆಕೆಯ ವಯಸ್ಸಿನ ಸರಿ ಸುಮಾರಾಗಿದ್ದೇನೆ. ಆಕೆ ಅಂದು ಆಡಿದ್ದ ಮಾತಿನ ಇಂಗಿತ ಇಂದು ನನಗೆ ಮನದಟ್ಟಾಗಿದೆ, ಕ್ಷಣ ಕ್ಷಣಕ್ಕೂ ಕಣ್ಮುಂದೆ ಕುಣಿಯುತ್ತಲಿದೆ!

ಪಳ್ಳೀ ಗೋಕುಲ್‌ದಾಸ್,
ಮಂಗಳೂರು

ಚಂದಾ ವಿವರ
ಬಿಡಿ ಪ್ರತಿ ರೂ.೨೦/-
೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ
ರೂ.೧೦೦/- ರೂ.೩೦೦/- ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೪೦/- ರೂ.೬೦೦/- ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-
ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-
ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಅಡ್ಡಗೋಡೆಗಳನ್ನೊಡೆದು...
ಮುನ್ನಡೆದ ಹನ್ನೆರಡು ಮಹಿಳೆಯರ ಕಥೆಗಳು
ಮೂಲ: ಪಾರ್ವತಿ ಮೆನನ್
ಅನು: ಡಾ. ಎನ್. ಗಾಯತ್ರಿ
ಬೆಲೆ: ರೂ. ೬೦/

ತಮ್ಮ ಜೀವಿತಾವಧಿಯಲ್ಲಿ ಶೋಷಕ ವ್ಯವಸ್ಥೆಯನ್ನು ದಿಟ್ಟತನದಿಂದ ಎದುರಿಸಿದ ಹನ್ನೆರಡು ಮಹಿಳೆಯರ ಕುರಿತ ಅಪರೂಪದ ಪುಸ್ತಕವಿದು. ಮಹಿಳಾ ವಿಮೋಚನೆಯ ಆಂದೋಲನ ಕಟ್ಟಲು ಶ್ರಮಿಸಿದ ಕತೆ ಇಲ್ಲಿದೆ.

ಅಹಲ್ಯಾರಾಂಗ್ನೇಕರ್, ಇಳಾ ಭಟ್ಟಾಚಾರ್ಯ, ಕನಕ ಮುಖರ್ಜಿ, ಲಕ್ಷ್ಮಿ ಸೆಹಗಲ್, ಮಲ್ಲು ಸ್ವರಾಜ್ಯಂ, ಮಂಗಳೇಶ್ವರಿ ದೇಬ್‌ಬರ್ಮಾ, ಮಂಜರಿ ಗುಪ್ತಾ ಮತ್ತಿತರ ೧೨ ಮಂದಿ ಇಲ್ಲಿನ ಅಸಾಮಾನ್ಯ ಮಹಿಳೆಯರು. ಡಾ. ಗಾಯತ್ರಿ ಅವರು ಸುಂದರವಾಗಿ ಅನುವಾದಿಸಿದ್ದಾರೆ.

ಪ್ರಕಾಶಕರು: ಅಧ್ಯಯನ ಪ್ರಕಾಶನ ಶಿರಸಿ.



ಟಿಪ್ಪುಸುಲ್ತಾನನ ಖಡ್ಗ
ಮೂಲ: ಭಗವಾನ್ ಎಸ್. ಗಿದ್ವಾನಿ
ಅನು: ಎಸ್.ಬಿ. ರಂಗನಾಥ್
ಬೆಲೆ: ರೂ. ೨೦೦/

ನಮ್ಮ ದೇಶದ ಮೊದಲ ಸ್ವಾತಂತ್ರ್ಯ ಹೋರಾಟಗಾರ ಅರಸು ಟಿಪ್ಪು ಸುಲ್ತಾನನ ಜೀವನ ಮತ್ತು ಐತಿಹ್ಯ ಕುರಿತ ಚಾರಿತ್ರಿಕ ಕಾದಂಬರಿ.

ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಕುರಿತಂತೆ ಮೂಲ ಲೇಖಕ ಗಿದ್ವಾನಿ ಅವರು ದೇಶ-ವಿದೇಶಗಳಲ್ಲಿ ಸಂಚರಿಸಿ ಸತತ ಸಂಶೋಧನೆ ನಡೆಸಿ ಬರೆದ ಕೃತಿ 'ದ ಸ್ವೋರ್ಡ್ ಆಫ್ ಟಿಪ್ಪು ಸುಲ್ತಾನ್'. ಇದರ ಅನುವಾದವೇ 'ಟಿಪ್ಪು ಸುಲ್ತಾನನ ಖಡ್ಗ'. ಆತನ ಬಗ್ಗೆ ತಿಳಿಯಲು ಆಸಕ್ತರು ಓದಲೇಬೇಕಾದ ಕೃತಿ ಇದು.

ಪ್ರಕಾಶಕರು: ಸಾಹಿತ್ಯ ಸಿರಿ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಸಿರಿಗೆರೆ.

ಸಂಕರ ಬಂಡಿ (ಕವನ ಸಂಕಲನ)
ಲೇ: ರಾಮಲಿಂಗಪ್ಪ ಟಿ.ಬೇಗೂರು
ಬೆಲೆ: ರೂ. ೫೦/

ಕಾವ್ಯ ರಚನೆ ಮತ್ತು ವಿಮರ್ಶೆಗಳಲ್ಲಿ ತೊಡಗಿರುವ ರಾಮಲಿಂಗಪ್ಪ ಅವರ ಎರಡನೇ ಕವನ ಸಂಕಲನ ಇದು. ಮನುಷ್ಯ ಸಂಬಂಧಗಳಲ್ಲಿ ಕಾಣಿಸಿಕೊಂಡಿರುವ ಬಿಕ್ಕಟ್ಟುಗಳನ್ನು ಕವಿ ಗ್ರಹಿಸಿದ್ದಾರೆ. ಜಾಗತೀಕರಣದಿಂದ ಆಧುನಿಕ ಜೀವನಕ್ಕೆ ಪ್ರಾಪ್ತಿಯಾಗುತ್ತಿರುವ ವೇಗವು 'ಮೆಟಾಮಾರ್ಫಸಿಸ್' ಕವನದಲ್ಲಿ ಅಭಿವ್ಯಕ್ತಿಗೊಂಡಿದೆ. 'ಯಾ ಅಲ್ಲಾಹ್' ಕವನದಲ್ಲಿ ಧರ್ಮಗಳು ಮುಂಜಾನೆಯ ಪ್ರಶಾಂತ ವಾತಾವರಣವನ್ನು ಕದಡುವುದನ್ನು ತಿಳಿಸಿದ್ದಾರೆ. ಕವನಗಳು ಸರಳವಾಗಿದ್ದು ಸುಲಭವಾಗಿ ಓದಿಸಿಕೊಂಡು ಹೋಗುತ್ತವೆ.

ಪ್ರಕಾಶಕರು: ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್ ಕೃಷ್ಣಾಪುರ ದೊಡ್ಡಿ

ಲೋಹಿಯಾ
ಅನುವಾದ ಮತ್ತು ಸಂಪಾದನೆ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಮತ್ತು ಎಂ.ಡಿ. ಎವಿನ್.ಸ್ವಾಮಿ.
ಬೆಲೆ: ರೂ. ೪೫/

ಖ್ಯಾತ ಸಮಾಜವಾದಿ ರಾಮ್ ಮನೋಹರ್ ಲೋಹಿಯಾ ಅವರ ಇಂಗ್ಲಿಷ್‌ನ ಮಾರ್ಕ್ಸ್, ಗಾಂಧಿ ಮತ್ತು ಸಮಾಜವಾದ, ಜಾತಿಪದ್ಧತಿ, ಭಾಷೆ, ಇತಿಹಾಸ ಚಕ್ರ ಮತ್ತಿತರ ಪುಸ್ತಕಗಳ ಅನುವಾದಿತ ಕೃತಿ ಇದು. ಲೋಹಿಯಾ ಅವರ ಸಮಗ್ರ ಕೃತಿಗಳನ್ನು ಓದುವ ಹಂಬಲ ಉಳ್ಳವರಿಗೆ ಇದೊಂದು ಉತ್ತಮ ಪುಸ್ತಕ. ಜಾತಿ ಪದ್ಧತಿ, ಭಾಷೆ, ರೈತ ಕಾರ್ಮಿಕರ ಹೋರಾಟ ಕುರಿತ ಲೋಹಿಯಾರ ಚಿಂತನೆಗಳು ಇಲ್ಲಿವೆ.

ಪ್ರಕಾಶಕರು: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು



ತತ್ರಾಣಿ(ಕವನ ಸಂಕಲನ)
ಲೇ: ಬಸವರಾಜ ಹೂಗಾರ
ಬೆಲೆ: ರೂ. ೩೦/

ಕಾವ್ಯ ಕ್ಷೇತ್ರದಲ್ಲಿ ತೊಡಗಿರುವ ಯುವ ಬರಹಗಾರ ಬಸವರಾಜ ಹೂಗಾರರ ಮೊದಲ ಕವನಸಂಕಲನ. ಸಮುದಾಯದ ಹಿತ ಬಯಸುವ ಕವಿ ತಮ್ಮ ಕವನಗಳುದ್ದಕ್ಕೂ ಶಾಂತಿ, ಸಾಮರಸ್ಯ, ಸಂಬಂಧ, ಪ್ರೀತಿಯನ್ನು ಬೆಸೆಯುವ ಆಶಯ ವ್ಯಕ್ತಪಡಿಸಿದ್ದಾರೆ.

ವಿವಿಧ ಪತ್ರಿಕೆಗಳಲ್ಲಿ ಬೆಳಕು ಕಂಡಿರುವ ಕವಿತೆಗಳು ಇಲ್ಲಿವೆ. ಸಮಾಜ ಮುಖಿ ಚಿಂತನೆಯ ಈ ಕೃತಿಗೆ ೨೦೦೭ ನೇ ಸಾಲಿನ ಕಡೆಂಗೋಡ್ಲು ಸ್ಮಾರಕ ಪ್ರಶಸ್ತಿ ಲಭಿಸಿದೆ. ಮೃದು ಮನಸ್ಸಿನ ಹೂಗಾರ ಅಧ್ಯಯನ ಮತ್ತು ಅನುಭವಗಳಿಂದ ಕಾವ್ಯ ಕೃಷಿಯಲ್ಲಿ ತೊಡಗಿದ್ದಾರೆ.

ಪ್ರಕಾಶಕರು: ಲಡಾಯಿ ಪ್ರಕಾಶನ, ಗದಗ



ಹೊಸ ಪುಸ್ತಕ

ಭಾರತ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್
ಲೇ: ಸಿ.ಎಚ್.ಜಾಕೋಬ್ ಲೋಬೋ
ಬೆಲೆ: ರೂ. ೧೦೦/

ಅಂಬೇಡ್ಕರ್ ಅವರಿಂದ ತೀವ್ರ ಪ್ರಭಾವಕ್ಕೊಳಗಾದ ಸ್ವಾತಂತ್ರ್ಯ ಹೋರಾಟಗಾರ ಸಿ.ಎಚ್. ಜಾಕೋಬ್ ಲೋಬೋ ಅವರು ಅಂಬೇಡ್ಕರ್ ಬಗ್ಗೆ ಬರೆದಿರುವ ಕೃತಿ ಇದು. ಅಂಬೇಡ್ಕರ್ ಅವರಿಗೆ ಬಾಲ್ಯದಲ್ಲೇ ಅನೇಕ ಕಹಿ ಅನುಭವಗಳಾಗಿದ್ದವು. ಹಿಂದೂ ಧರ್ಮ ಅಸಮಾನತೆ, ಶೋಷಣೆಗೆ ಬದ್ಧವಾದ ಧರ್ಮ ಎಂಬುದು ಜೀವಿತದುದ್ದಕ್ಕೂ ತಮ್ಮ ಮೇಲೆ ಆದ ಹಲ್ಲೆಗಳಿಂದ ಖಚಿತವಾಗಿತ್ತು. ಈ ಬಗ್ಗೆ ಕೃತಿಯಲ್ಲಿ ವಿವರಿಸಲಾಗಿದೆ. ಅಧ್ಯಯನ ಮಾಡುವವರಿಗೆ ಉತ್ತಮ ಕೈಪಿಡಿ.

ಪ್ರಕಾಶಕರು: ಬ್ಯಾಲದಗೆರೆ ಪ್ರಕಾಶನ



ಸಂಪಾದಕೀಯ

ಅಂತರಂಗ

ಸಂಘಪರಿವಾರದ ಭಯೋತ್ಪಾದನೆ

ಸಂಘ ಪರಿವಾರದ ಧೂರ್ತ ಮನಸ್ಸು ಮತ್ತೆ ಕೆರಳಿದೆ. 'ರಾಮಸೇತು'ವಿನ ವಿವಾದ ಕುರಿತಂತೆ ತಮಿಳುನಾಡು ಮುಖ್ಯಮಂತ್ರಿ ನೀಡಿದ ಹೇಳಿಕೆಯನ್ನು ನೆಪವಾಗಿಟ್ಟುಕೊಂಡು ಬೆಂಗಳೂರಿನ ಸಂಘ ಪರಿವಾರದ ಪುಂಡರು ತಮಿಳುನಾಡಿನ ಬಸ್ಸೊಂದಕ್ಕೆ ಬೆಂಕಿಹಚ್ಚಿ ಮೂವರು ಅಮಾಯಕರನ್ನು ಕೊಂದು ಹಾಕಿದ್ದಾರೆ. ಕರುಣಾನಿಧಿಯವರ ಮಗಳ ಮನೆ ಮೇಲೆ ದಾಳಿ ನಡೆಸಿದ್ದಾರೆ.

ಯಾವ ಭಯೋತ್ಪಾದನೆಗೂ ಕಡಿಮೆ ಇಲ್ಲದಂತೆ ನಡೆದಿರುವ ಈ ಘಟನೆ ಕುರಿತು ನಮ್ಮ ಯಾವ ಮಾಧ್ಯಮಗಳಿಗೂ ಆತಂಕವಾಗಿಲ್ಲ. ಅದು ಹಿಂದೂ ಭಯೋತ್ಪಾದಕ ಕೃತ್ಯವಾದುದರಿಂದ ಅದಕ್ಕೆ ಹೆಚ್ಚು 'ಮೈಲೇಜ್' ಸಿಕ್ಕುವುದಿಲ್ಲ. ಮುಸ್ಲಿಮನೊಬ್ಬನ ಮನೆಯಲ್ಲಿ ಸಣ್ಣ ಪಟಾಕಿ ಸಿಡಿದರೂ ಆರ್‌ಡಿಎಕ್ಸ್ ಬಾಂಬ್ ಸಿಡಿಯಿತೆಂದು ಬಣ್ಣಿಸುವ ಹಾಗೂ ಅದಕ್ಕೆ ಐಎಸ್‌ಐ ಅಥವಾ ತಾಲಿಬಾನ್‌ನ ನೆಂಟು ಗಂಟು ಹಾಕುವ ಮಾಧ್ಯಮಗಳು ಈ ದೇಶೀ ಭಯೋತ್ಪಾದನೆ ಕುರಿತಂತೆ ಸದ್ದೇ ಮಾಡುತ್ತಿಲ್ಲ. ಸರ್ಕಾರ, ಪೊಲೀಸ್ ಎಲ್ಲರೂ ತಣ್ಣಗೆ ಕೈಚೆಲ್ಲಿ ಕುಳಿತಿದ್ದಾರೆ.

ಇಷ್ಟಕ್ಕೂ, ತಮಿಳುನಾಡು ಮುಖ್ಯಮಂತ್ರಿ ಹೇಳಿದ್ದೇನು? 'ರಾಮಾಯಣದ ಕಥೆಯಲ್ಲಿ ಬರುವ ರಾಮ ಪಾತ್ರಧಾರಿ ಒಂದು ಕಲ್ಪನೆಯೇ ಹೊರತು ನೈಜ ವ್ಯಕ್ತಿಯಲ್ಲ. ರಾಮಾಯಣಕ್ಕೆ ಯಾವುದೇ ಐತಿಹಾಸಿಕ ಸಾಕ್ಷಿ, ಪುರಾವೆಗಳಿಲ್ಲ. ಆದುದರಿಂದ ರಾಮ ಸೇತು ಕೇವಲ ಕಲ್ಪನೆಯೇ ಹೊರತು ನೈಜವಾದುದಲ್ಲ' ಇದಿಷ್ಟು ಕರುಣಾನಿಧಿ ಹೇಳಿದ ವಿಚಾರ. ಕರುಣಾನಿಧಿಯವರ ಈ ಹೇಳಿಕೆಯಿಂದ ಸಂಘ ಪರಿವಾರದವರು ಕೆರಳುವಂಥದ್ದಾದರೂ ಏನಿದೆ? ಸತ್ಯ ಹೇಳುವುದೇ ದೊಡ್ಡ ಅಪರಾಧವೆ? ಪುರಾಣ–ಇತಿಹಾಸ, ಸತ್ಯ ಮತ್ತು ಮೂಢ ನಂಬಿಕೆಗಳ ಮೇಲಿನ ವ್ಯತ್ಯಾಸವೇ ಈ ದುಷ್ಟ ಕೂಟಕ್ಕೆ ತಿಳಿಯದೇ ಹೋದರೆ ಏನು ಮಾಡುವುದು?

ಮಾತೆತ್ತಿದರೆ ಸಂಘ ಪರಿವಾರದ ನಂಬಿಕೆಯ ಮಾತನಾಡುತ್ತದೆ. ಯಾವುದು ಈ ನಂಬಿಕೆ? ಆ ನಂಬಿಕೆಗೆ ಯಾವುದಾದರೂ ಐತಿಹಾಸಿಕ ಅಥವಾ ವೈಜ್ಞಾನಿಕ ಆಧಾರಗಳು ಇವೆಯೇ? ವಿಚಿತ್ರವೆಂದರೆ ಅಡ್ವಾಣಿ–ವಾಜಪೇಯಿಯವರಂಥ ಹಿರಿಯ ರಾಜಕಾರಣಿಗಳೂ ಕಿಂಚಿತ್ತೂ ಜವಾಬ್ದಾರಿ ಇಲ್ಲದವರಂತೆ ವರ್ತಿಸುತ್ತಿದ್ದಾರೆ. ಅಡ್ವಾಣಿ ಅವರಂತೂ ರಾಮನನ್ನು ಗುತ್ತಿಗೆ ಪಡೆದವರಂತೆ ಬಾಯಿಗೆ ಬಂದದ್ದನ್ನೆಲ್ಲ ಒದರುತ್ತಿದ್ದಾರೆ. ಇವರ ನಂಬಿಕೆಗಳ ಆಧಾರದ ಮೇಲೆ ದೇಶ ಆಳುವುದಾದರೆ ನಾವು ಶಿಲಾಯುಗಕ್ಕೆ ಹೋಗಬೇಕಾಗುತ್ತದೆ. ಕಿಂಚಿತ್ತು ವೈಜ್ಞಾನಿಕ ಚಿಂತನೆಗಳಿಲ್ಲದೆ ಕೇವಲ ಜನರನ್ನು ವಂಚಿಸಿ ಅವರ ಮನಸ್ಸಿನಲ್ಲಿ ಭಯಗಳನ್ನು ಹುಟ್ಟಿಸಿ ಇಡೀ ವ್ಯವಸ್ಥೆಯನ್ನು ಹಿಡಿದಿಟ್ಟುಕೊಳ್ಳುವುದೇ ಈ ಎಲ್ಲಾ ನಡವಳಿಕೆಗಳ ಹಿಂದಿನ ಗುಪ್ತ ಆಲೋಚನೆ.

ರಾಮ ಆದರ್ಶ ಪುರುಷನಾದರೆ ಅದು ಅವನನ್ನು ನಂಬುವವರ ಆರಾಧಿಸುವವರ ವೈಯಕ್ತಿಕ ವಿಷಯವೇ ಹೊರತು ಸಾಮಾಜಿಕವಾದದ್ದಲ್ಲ. ಕಾಗಕ್ಕ ಗುಬ್ಬಕ್ಕನ ಕಥೆಗಳಿಗೆಲ್ಲ ನಂಬಿಕೆಯ ಪೋಷಾಕು ತೊಡಿಸಿ ಇಡೀ ಸಮಾಜದ ಮೇಲೆ ಹೇರುವುದು ಅತ್ಯಂತ ಹೇಯ ಕೆಲಸ. ಇಂಥ ಪ್ರಯತ್ನಗಳೇ ಭಾರತವನ್ನು ಒಡೆದು ಅಸಮಾನ ಸಾಮಾಜಿಕ ವ್ಯವಸ್ಥೆಗೆ ಕಾರಣವಾಗಿವೆ. ಸಮಾನತೆಯ ತತ್ವದ ಆಧಾರದ ಮೇಲೆ ರಚಿತವಾದ ಸಂವಿಧಾನದ ಅನ್ವಯ ದೇಶದ ಎಲ್ಲ ವ್ಯವಹಾರಗಳೂ ನಡೆಯಬೇಕೆ ಹೊರತು ಯಾರೋ ಕೆಲವರ ನಂಬಿಕೆಗಳ ಮೇಲಲ್ಲ. ಬಹುಸಂಖ್ಯಾತರದ್ದೆಂದು ಹೇಳುವ ನಂಬಿಕೆಗಳೆಲ್ಲ, ಅಲ್ಪಸಂಖ್ಯಾತರು ಬಹುಸಂಖ್ಯಾತರ ಮೇಲೆ ಮೋಸದಿಂದ ಹೇರಿರುವ ವಿಚಾರಗಳೇ ಹೊರತು ಬಹುಸಂಖ್ಯಾತರ ಒಳಗಿನಿಂದ ಮೂಡಿಬಂದವುಗಳಲ್ಲ. ಭಾರತೀಯರಾದ ನಾವೆಲ್ಲ ನಮ್ಮ ಬದ್ಧತೆಯನ್ನು ತೋರಿಸಬೇಕಾಗಿರುವುದು ಸಂವಿಧಾನಕ್ಕೇ ಹೊರತು ಸಂಘ ಪರಿವಾರದ ನಂಬಿಕೆಗಳಿಗಲ್ಲ.

ದುರಂತವೆಂದರೆ ಈ ರಾಮ ಸೇತು ಅಥವಾ ಸೇತು ಸಮುದ್ರಂ ಯೋಜನೆಗೆ ಚಾಲನೆಕೊಟ್ಟವರೇ ಈ ಸಂಘಪರಿವಾರದ ಜನ. ವಾಜಪೇಯಿ ನೇತೃತ್ವದ ಎನ್.ಡಿ.ಎ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗಲೇ ಈ ಯೋಜನೆ ಚಾಲ್ತಿಗೆ ಬಂದದ್ದು. 'ಭಾರತ ಪ್ರಕಾಶಿಸುತ್ತಿದೆ' ಎಂದು ಬೊಗಳೆ ಬಿಡುತ್ತಲೇ ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಸಾವಿರಾರು ಕೋಟಿ ರೂಪಾಯಿಗಳಷ್ಟು ಹಣವನ್ನು ಲೂಟಿ ಮಾಡತೊಡಗಿದ ಸಂಘ ಪರಿವಾರದ ಸರ್ಕಾರ, ತನ್ನ ಲೂಟಿ ಯೋಜನೆಯ ಅಂಗವಾಗಿಯೇ ಈ ಸೇತು ಸಮುದ್ರಂ ಯೋಜನೆಯನ್ನು ಕೈಗೆತ್ತಿಕೊಂಡಿತ್ತು. ಆಗ ಸಂಘ ಪರಿವಾರಕ್ಕೆ ಕಾಣಿಸದಿದ್ದ 'ರಾಮಸೇತುವೆ' ಅಧಿಕಾರ ಕಳೆದುಕೊಂಡ ಮೇಲೇಕೆ ಕಾಣಿಸುತ್ತಿದೆ? ಆಷಾಡಭೂತಿತನಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಉಂಟಾ?

ದೇಶದಲ್ಲಿ ಸಂಘ ಪರಿವಾರಕ್ಕಾಗಲಿ ಅದರ ರಾಜಕೀಯ ಮುಖವಾದ ಬಿಜೆಪಿಗಾಗಲಿ ಹೋರಾಡಲು ಬೇರೆ ಸಮಸ್ಯೆಗಳೇ ಕಾಣಿಸುವುದಿಲ್ಲ. ನಿರುದ್ಯೋಗ, ಬಡತನ, ಅಸಮಾನತೆ ತಾಂಡವವಾಡುತ್ತಿದ್ದರೂ ಇವರ ಕಣ್ಣಿಗೆ ಬೀಳುವುದಿಲ್ಲ. ಚಾಮಲಾಪುರದ ಉಷ್ಣವಿದ್ಯುತ್ ಯೋಜನೆ ಜಾರಿಗೆ ಬಂದರೆ ಇಡೀ ಮೈಸೂರು ಜಿಲ್ಲೆಯೇ ಸರ್ವನಾಶವಾಗುತ್ತದೆ ಎಂದು ಗೊತ್ತಿದ್ದರೂ ಸಂಘ ಪರಿವಾರ ಬಾಯಿ ಬಿಡುವುದಿಲ್ಲ. ಅತಿವೃಷ್ಟಿ ಅನಾವೃಷ್ಟಿಗಳಿಂದ ನಾಡಿಗೆ ನಾಡೇ ಗುಳೇ ಹೊರಟರೂ ಇವರಿಗೇನೂ ಅನ್ನಿಸುವುದಿಲ್ಲ. ತಿನ್ನಲು ಮೇವಿಲ್ಲದೆ ಕುಡಿಯಲು ನೀರಿಲ್ಲದೆ ದನಕರುಗಳು ಸಾಯುತ್ತಿದ್ದರೂ ಇವರಿಗೆ ಕಾಣಿಸುವುದಿಲ್ಲ. ಆದರೆ ಕೋಟಿಗಟ್ಟಲೆ ಹಣ ಖರ್ಚು ಮಾಡಿ ಗೋ ಸಮ್ಮೇಳನ ಮಾಡುತ್ತಾರೆ. ಹೊಟ್ಟೆಬಾಕ ಮಠಾಧೀಶರಿಗೆ ತುಲಾಭಾರ ಮಾಡುತ್ತಾರೆ. ದಲಿತರ ಅಲ್ಪಸಂಖ್ಯಾತರ ಮೇಲೆ ನಿರಂತರ ದಾಳಿ ಮಾಡುತ್ತಾರೆ.

ವಿಜ್ಞಾನಿಗಳು, ಪುರಾತತ್ವ ಶಾಸ್ತ್ರಜ್ಞರು ಹಾಗೂ ಇತಿಹಾಸಕಾರರ ಪ್ರಕಾರ ಈ ರಾಮ ಸೇತು ಮನುಷ್ಯ ನಿರ್ಮಿತವೂ ಅಲ್ಲ. ವಾನರ ನಿರ್ಮಿತವೂ ಅಲ್ಲ. ಲಕ್ಷಾಂತರ ವರ್ಷಗಳ ನಿರಂತರ ಪ್ರಾಕೃತಿಕ ಪ್ರಕ್ರಿಯೆಯಲ್ಲಿ ತಂತಾನೇ ರೂಪುಗೊಂಡ ಒಂದು ಆಕೃತಿ. ಅದು ಸೇತುವೆಯ ರೂಪದಲ್ಲಿ ಕಂಡಾಕ್ಷಣ ಅದು ರಾಮ ಸೇತು ಆಗುವುದಿಲ್ಲ. ಹಾಗೆ ನೋಡಿದರೆ ದೇಶದ ಉದ್ದಗಲಕ್ಕೂ ರಾಮ ಸೀತೆಯರು ಕುಂತರು, ನಿಂತರು, ಸ್ನಾನ ಮಾಡಿದರು ಎಂದು ಹೇಳುವ ಸಾವಿರಾರು ಸ್ಥಳ ಪುರಾಣಗಳಿವೆ. ಪಾಂಡವರು ವಾಸಿಸಿದ್ದರು ಎಂದು ಹೇಳುವ ಸಾವಿರಾರು ಸ್ಥಳ ಪುರಾಣಗಳೂ ಇವೆ. ಇವನ್ನೆಲ್ಲ ನಂಬುತ್ತಾ ಕೂತರೆ ಮನುಷ್ಯ ಮಾತ್ರದವರು ಮನುಷ್ಯರಾಗಿ ಉಳಿಯಲಾಗುವುದಿಲ್ಲ. ಹತ್ತು ಹಲವು ಕಾರಣಕ್ಕೆ ಹುಟ್ಟಿಕೊಳ್ಳುವ ಈ ಕಥೆಗಳನ್ನೆಲ್ಲ ನಂಬುವವರು ಹುಚ್ಚರು ಮಾತ್ರ. ಇಲ್ಲ ಮತಿ ಭ್ರಮಣೆಗೊಳಗಾದವರು. ಆದರೆ ಸಂಘ ಪರಿವಾರ ಬಹು ಬುದ್ಧಿವಂತಿಕೆಯಿಂದ ಈ ನಂಬಿಕೆಯ ತಂತ್ರ ಬಳಸಿ, ಬಹುಸಂಖ್ಯಾತರನ್ನು ಯಾಮಾರಿಸಿ ತನ್ನ ಹೊಟ್ಟೆ ತುಂಬಿಸಿಕೊಳ್ಳುತ್ತಿದೆ. ಸಾವಿರಾರು ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತಿರುವ ಈ ಮೋಸ ಆಧುನಿಕ ಕಾಲದಲ್ಲೂ ಮುಂದುವರೆಯುತ್ತಿರುವುದು ಮಾತ್ರ ವಿಪರ್ಯಾಸ.

○ ಇಂದೂಧರ ಹೊನ್ನಾಪುರ

ಜಾತಿ ಪದ್ಧತಿ: ಭಾರತದ ಜನಾಂಗೀಯ ತಾರತಮ್ಯ

ಭಾರತದಲ್ಲಿ ಸಾವಿರಾರು ವರ್ಷಗಳಿಂದ ಈ ನಾಡಿನ ಮೂಲನಿವಾಸಿಗಳಾದ ದಲಿತರ ವಿರುದ್ಧ ಅವ್ಯಾಹತವಾಗಿ ಜಾತಿ ತಾರತಮ್ಯ ನಡೆಯುತ್ತಿದೆ. ದಲಿತರು ಮೇಲ್ವರ್ಗದವರಿಂದ ನಿರಂತರ ಶೋಷಣೆ, ದಬ್ಬಾಳಿಕೆಗೆ ಒಳಗಾಗುತ್ತಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದು ದಶಕಗಳೇ ಕಳೆದರೂ ದಲಿತರ ವಿರುದ್ಧ ಶೋಷಣೆ, ಜಾತಿತಾರತಮ್ಯ ನಿಂತಿಲ್ಲ. ಅವರ ಜೀವನ ಮಟ್ಟ ಸುಧಾರಿಸಿಲ್ಲ. ದಲಿತರ ಜಾತಿ ತಾರತಮ್ಯವನ್ನು ದೇಶದ ಪ್ರಧಾನ ಮಂತ್ರಿಗಳೇ ಒಪ್ಪಿಕೊಂಡಿದ್ದು ಅದನ್ನು ದಕ್ಷಿಣ ಆಫ್ರಿಕಾದ ಜನಾಂಗೀಯ ಪದ್ಧತಿಗೆ ಹೋಲಿಸಿ ಹೇಳಿಕೆ ನೀಡಿದ್ದಾರೆ. ಆದರೆ ಅದನ್ನು ಭಾರತದ ಅಧಿಕಾರಿಗಳು ಸಾರಾಸಗಟಾಗಿ ನಿರಾಕರಿಸಿದ್ದಾರೆ. ಪ್ರಧಾನಿಗಳ ಹೇಳಿಕೆಯನ್ನೇ ಸ್ಪಷ್ಟವಾಗಿ ನಿರಾಕರಿಸಿರುವ ಭಾರತೀಯ ಅಧಿಕಾರಶಾಹಿಯ ಈ ವರ್ತನೆ ಪ್ರಧಾನ ಮಂತ್ರಿಗಳ ಹೇಳಿಕೆಯನ್ನೇ ಅಣಕಿಸುವಂತಿತ್ತು.

ಮೂಲ: **ಬಾಲಕೃಷ್ಣನ್ ರಾಜಗೋಪಾಲ್**
ಅನು: **ಅನುಷಾ ಹೊನ್ನೇಕೂಲು**

ಕಳೆದ ೨೦೦೬ರ ಡಿಸೆಂಬರ್ ೨೬ರಂದು ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರು ಭಾರತದಲ್ಲಿ ದಲಿತರ ತಾರತಮ್ಯವನ್ನು ದಕ್ಷಿಣ ಆಫ್ರಿಕಾದ ಜನಾಂಗೀಯ ಪದ್ಧತಿಗೆ ಹೋಲಿಸುವ ಮೂಲಕ ಬಹುಶಃ ವಿವಾದಾತ್ಮಕ ಎನ್ನಬಹುದಾದ ಹೇಳಿಕೆ ನೀಡಿದ್ದರು.

ಎರಡು ತಿಂಗಳ ನಂತರ ಫೆಬ್ರವರಿಯಲ್ಲಿ ಭಾರತೀಯ ಅಧಿಕಾರಿಗಳು ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಯ ಅಸ್ತಿತ್ವ ಇರುವುದನ್ನು ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಜನಾಂಗೀಯ ತಾರತಮ್ಯ ನಿರ್ಮೂಲನಾ ಸಮಾವೇಶದ ಶಿಫಾರಸುಗಳ ಜಾರಿ ಸಮಿತಿಯ ಮುಂದೆ ನಿರಾಕರಿಸಿದರು. ಭಾರತೀಯ ಸಾಲಿಸಟರಲ್ ಜನರಲ್ ಜಾತಿ ತಾರತಮ್ಯದ ಬಗ್ಗೆ ಹೊರ ಜಗತ್ತು ಕಾಳಜಿಹಿಸುವ ಬಗ್ಗೆ ಅಗತ್ಯ ಇದೆ ಎಂಬುದನ್ನು ಸ್ಪಷ್ಟವಾಗಿ ನಿರಾಕರಿಸಿದರು.

ಭಾರತೀಯ ಅಧಿಕಾರಶಾಹಿಯ ಈ ವರ್ತನೆ ಪ್ರಧಾನ ಮಂತ್ರಿಗಳ ಸ್ವಂತ ಹೇಳಿಕೆಯನ್ನೇ ಅಣಕಿಸುವಂತಿತ್ತು. ಅಷ್ಟೇ ಅಲ್ಲ ಭಾರತದಲ್ಲಿ ದಲಿತರ ವಿರುದ್ಧ ಜಾತಿ ತಾರತಮ್ಯ ನಡೆದಿರುವ ದಾಖಲೆಗೆ ಸರಿಹೊಂದುವಂತಿರಲಿಲ್ಲ. ಅವರ ಹೇಳಿಕೆ ಕೇವಲ ರಕ್ಷಣಾತ್ಮಕವಾಗಿ ಇರಬಾರದು. ಆದರೆ ಆಂತರಿಕ ಅಡಚಣೆಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಇಚ್ಛಾಶಕ್ತಿಯನ್ನು ಹೊಂದಿರಬೇಕು. ಈ ವರ್ತನೆ ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಕಡೆಗೆ ಭಾರತೀಯ ವಿದೇಶಾಂಗ ನೀತಿಯು ವರ್ಷಗಳ ಕಾಲ ನಕಾರಾತ್ಮಕ ಮನೋಸ್ಥಿತಿ ಹೊಂದಿರುವುದನ್ನು ಬಯಲು ಮಾಡಿದೆ. ನೀತಿಯ ಈ ಮನೋಸ್ಥಿತಿಯು ಬದಲಾಗಬೇಕಾದ ಅಗತ್ಯ ಇದೆ.

ಭಾರತದಲ್ಲಿ ದಲಿತರ ವಿರುದ್ಧ ಜಾತಿ ತಾರತಮ್ಯ, ವ್ಯಾಪಕವಾಗಿರುವುದು ಜನಜನಿತ ಸತ್ಯ. ಇದು ಮುಕ್ತವಾಗಿ ನಡೆದಿರುವ ರಾಜಕೀಯ ವಾಸ್ತವ ಮತ್ತು ಸಾಮಾಜಿಕ ಸತ್ಯ. ದಲಿತರು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹಿಂಸೆಗೆ ತುತ್ತಾಗುತ್ತಿದ್ದಾರೆ. ದಲಿತ ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ ಮತ್ತು ಅವರ ಜಮೀನನ್ನು ಇತರರು ಕಬಳಿಸುತಿದ್ದಾರೆ. ಭಾರತೀಯ ಸಮಾಜದಲ್ಲಿ ಶೌಚಾಲಯ ಶುದ್ಧೀಕರಣ ಸೇರಿದಂತೆ ಚರ್ಮ ಹದ ಮಾಡುವಂಥ ಅಪಾಯಕಾರಿಯಾದಂತಹ ಮತ್ತು ಕೀಳು ಮಟ್ಟದ ಉದ್ಯಮದಲ್ಲಿ ಅತ್ಯಂತ ಕಡಿಮೆ ವೇತನಕ್ಕೆ ಕೆಲಸ ಮಾಡುತ್ತಿದ್ದಾರೆ.



ಗುಜರಾತ್‌ನಲ್ಲಿ ಕಳೆದ ಎರಡು ವರ್ಷಗಳಿಂದ ಮೆಸಾಚುಯೇಟ್ಸ್ ತಂತ್ರಜ್ಞಾನ ಸಂಸ್ಥೆಯು ಪ್ರಮುಖ ದಲಿತ ಹಕ್ಕುಗಳ ಸರ್ಕಾರೇತರ ಸಂಸ್ಥೆ ನೌಸರ್ಜನ್ ಜತೆಗೂಡಿ ಕೆಲಸ ಮಾಡುತ್ತಿದೆ. ಗುಜರಾತ್‌ನಲ್ಲಿ ಮಾನವ ಶೌಚಾಲಯ (Manual scavenging) ಶುದ್ಧೀಕರಣದಲ್ಲಿ ತೊಡಗುವುದರಿಂದ ಉಂಟಾಗುವ ಸಮಾಜೋ ಆರ್ಥಿಕ ಮತ್ತು ಆರೋಗ್ಯದ ಮೇಲೆ ಉಂಟಾಗುವ ಪರಿಣಾಮ ದಾಖಲಿಸುವ ಕೆಲಸ ಇವರು ಮಾಡುತ್ತಿದ್ದಾರೆ. ಈ ಸಮಸ್ಯೆಗೆ ನೂತನ ತಂತ್ರಜ್ಞಾನ ಮತ್ತು ಯೋಜಿತ ಪರಿಹಾರಗಳನ್ನು ಇವರು ಸಿದ್ಧಪಡಿಸುತ್ತಿದ್ದಾರೆ. ಇದು ಜಾತಿತಾರತಮ್ಯ ಅಥವಾ ನಿರ್ದಿಷ್ಟ ವಲಯ ಕಾನೂನುಗಳು ಮತ್ತು ಕೇವಲ ನಿಯಮ ಅನುಸರಿಸುವುದಕ್ಕೆ ಮೀರಿ ಪರಿಹಾರವನ್ನು ರೂಪಿಸಿದೆ.

ಗುಜರಾತ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಮತ್ತು ಸರ್ಕಾರಿ ಆದೇಶಗಳಿಂದ ಸಾಧ್ಯವಾದಷ್ಟು ಕಾನೂನುಬದ್ಧವಾಗಿ ನಡೆಯುವ ಪ್ರಯತ್ನ ಮುನ್ನಡೆದಿದೆ. ಆದರೂ ಶೌಚಾಲಯ ಶುದ್ಧೀರಣ ಕಾರ್ಯದಲ್ಲಿ ತೊಡಗಿರುವವರ ಸಂಖ್ಯೆ ಹೆಚ್ಚುತ್ತಲೇ ಇರುವುದನ್ನು ಅಂಕಿಅಂಶಗಳು ಬಯಲು ಮಾಡಿವೆ. ಗುಜರಾತ್ ರಾಜ್ಯವೊಂದರಲ್ಲೇ ೫೦ರಿಂದ ೬೦ ಸಾವಿರ ಮಂದಿ ಈ ಕೆಲಸದಲ್ಲಿ ನಿರತರಾಗಿದ್ದಾರೆ. ಪುಸ್ತಕಗಳಲ್ಲಿರುವ ಕಾನೂನುಗಳೇನೇ ಇದ್ದರೂ ದಲಿತರ ವಿರುದ್ಧ ಸಾಮಾಜಿಕ ಮತ್ತು ಆರ್ಥಿಕ ತಾರತಮ್ಯ ಆತಂಕ ಹುಟ್ಟಿಸುವ ರೀತಿಯಲ್ಲಿ ಮುಂದುವರಿದಿರುವುದನ್ನು ಈ ಸಂಶೋಧನೆ ಬಯಲು ಮಾಡಿದೆ. ಉದಾಹರಣೆಗೆ ಗುಜರಾತ್‌ನ ಪಲಿಯಾಡ್ ಗ್ರಾಮದಲ್ಲಿ ಈ ಶುದ್ಧೀಕರಣ ಕಾರ್ಯದಲ್ಲಿ ತೊಡಗುವ ವ್ಯಕ್ತಿಗಳನ್ನು ಆಗಿಂದಾಗ್ಗೆ ಅಥವಾ ಯಾವತ್ತೂ ಕೂಡ ಮಾರುಕಟ್ಟೆ ಸ್ಥಳಗಳಿಗೆ ಪ್ರವೇಶ ನಿರಾಕರಿಸಲಾಗುತ್ತಿದೆ. ಈ ಮೂಲಕ ಸಹಜ ಆರ್ಥಿಕ ಚಟುವಟಿಕೆ, ಅವರ ಕೆಲಸ ಕಾರ್ಯಗಳಿಗೆ ಅಡ್ಡಿ ಮಾಡಲಾಗುತ್ತಿದೆ. ಈ ಬಗ್ಗೆ ಎಂಐಟಿ ಪತ್ತೆ ಹಚ್ಚಿದೆ. ಕೆಲವು ವೃತ್ತಿಗಳು... ವ್ಯಾಪಾರ, ಮಾಧ್ಯಮ, ಪೋಲಿಸ್ ಇಲಾಖೆ, ಸೇನೆ, ನ್ಯಾಯಾಂಗ ಸೇರಿದಂತೆ ಸರ್ಕಾರದ ಉನ್ನತ ಮಟ್ಟದ ಹುದ್ದೆಗಳಲ್ಲಿ ದಲಿತರಿಗೆ ಅತಿ ಕಡಿಮೆ ಪ್ರಾತಿನಿಧ್ಯ ಇದೆ.

ಈ ತಂಡ ನಡೆಸಿದ ಅಧ್ಯಯನದ ಪ್ರಕಾರ ಭಾರತದ ಮುಖ್ಯ ನ್ಯಾಯಮೂರ್ತಿಗಳಲ್ಲಿ ಶೇ. ೪೭ರಷ್ಟು ಮಂದಿ ಬ್ರಾಹ್ಮಣರು (ಜನಸಂಖ್ಯೆಯಲ್ಲಿ ಶೇ. ೬.೪ರಷ್ಟು ಇದ್ದಾರೆ) ಮತ್ತು ಇತರ ನ್ಯಾಯಾಧೀಶರಲ್ಲಿ ಶೇ. ೪೦ರಷ್ಟು ಬ್ರಾಹ್ಮಣರೇ ಇದ್ದಾರೆ. ಜಾತಿ ಆಧಾರಿತ

ಭಾರತ ಸ್ವಾತಂತ್ರ್ಯಾ ನಂತರ ಮೊದಲು ಕೆಲವು ದಶಕಗಳಲ್ಲಿ ಗಳಿಸಿದ ಉನ್ನತ ನೈತಿಕತೆಯ ಮಟ್ಟವನ್ನು ಮತ್ತೆ ಸ್ಥಾಪಿಸುವುದಕ್ಕೆ ಯಾವುದೇ ಕಾರಣ ತೋರಿಸಿಲ್ಲ. ಗಾಂಧೀವಾದದ ವಸಾಹತುಶಾಹಿ ವಿರೋಧಿ ಮತ್ತು ಆಯಾ ಕಾಲಘಟ್ಟದಲ್ಲಿ ಮಾನವ ಹಕ್ಕುಗಳ ವಿಚಾರದಲ್ಲಿ ಮುಂಚೂಣಿಯಲ್ಲಿದ್ದ ಭಾರತ ಈಗ ಹಿಂದೆ ಸರಿದಿದೆ. ಅದರ ಬದಲು ಮಾನವ ಹಕ್ಕುಗಳ ಕಾರ್ಯಸೂಚಿ ಯನ್ನು ಪಾಶ್ಚಿಮಾತ್ಯ ರಾಷ್ಟ್ರಗಳಿಗಾಗಿ ಬಿಟ್ಟುಕೊಟ್ಟಿದೆ.

ವ್ಯವಸ್ಥಿತ ಮದುವೆಗಳು ಸೇರಿದಂತೆ ದಲಿತರ ವಿರುದ್ಧ ಸಾಮಾಜಿಕ ತಾರತಮ್ಯ ತೀವ್ರ ರೀತಿಯಲ್ಲಿ ಕಂಡು ಬಂದಿವೆ. ಎಲ್ಲರೂ ಬೆರೆಯುವ ಉತ್ಸವಗಳು ಅಥವಾ ಸಾಮಾಜಿಕ ವಿಚಾರ ವಿನಿಮಯ ಕಾರ್ಯಕ್ರಮಗಳಲ್ಲಿ ಮುಂದುವರಿದ ಜಾತಿಗಳು ದಲಿತರ ಜತೆ ಸಾಮಾಜಿಕವಾಗಿ ಬೆರೆಯುವುದು ತುಂಬ ಕಡಿಮೆ. ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳ ವಸತಿ ಪ್ರದೇಶಗಳಲ್ಲಿ ಜಾತಿ ಆಧಾರಿತ ವಿಭಜನೆಗಳು ಮುಂದುವರಿದಿರುವುದನ್ನು ಈಗಲೂ ಕಾಣಬಹುದು.

ಸಮಾಜದಲ್ಲಿ ದಲಿತರ ವಿರುದ್ಧ ಜಾತಿ ತಾರತಮ್ಯ ಆಳವಾಗಿ ಬೇರೂರಿದೆ ಮತ್ತು ಕಾನೂನಿನ ಮೂಲಕ ನೀಡುವ ತಾತ್ಕಾಲಿಕ ಪರಿಹಾರಗಳು ಇದಕ್ಕೆ ನೆರವಾಗುವುದಿಲ್ಲ. ದಲಿತರ ಸಮುದಾಯದ ಒಳಗೇ ಇರುವ ಜಾತಿ ತಾರತಮ್ಯ ದಲಿತರಲ್ಲೇ ಶುದ್ಧೀಕರಣ ಕಾರ್ಯದಲ್ಲಿ (Manual scavenging) ತೊಡಗುವವರು ಹೆಚ್ಚು ತಾರತಮ್ಯಕ್ಕೆ ಒಳಗಾಗುತ್ತಿದ್ದು ತಾರತಮ್ಯ ವಿರೋಧಿ ಕಾರ್ಯಕ್ರಮಗಳು ಹೆಚ್ಚಿನ ಸಮಸ್ಯೆ ಸೃಷ್ಟಿಸಿವೆ. ಉದಾಹರಣೆಗೆ ಪಾಲಿಯಾಡ್ ಗ್ರಾಮದಲ್ಲಿ ಶುದ್ಧೀಕರಣ ಕಾರ್ಯದಲ್ಲಿ ತೊಡಗುವವರಲ್ಲಿ ಶೇ. ೪೭ರಷ್ಟು ಮಂದಿ ಮನೆಗೆ ನೀರು ತರುವುದಕ್ಕೆ ೩೦ ನಿಮಿಷಗಳ ಕಾಲ ನಡೆಯಬೇಕಾಗುತದೆ. ಶುದ್ಧೀಕರಣ ಕಾರ್ಯದಲ್ಲಿ ತೊಡಗದಿರುವ ಜನ ಐದು ನಿಮಿಷ ಅಥವಾ ಅದಕ್ಕಿಂತ ಕಡಿಮೆ ಅವಧಿಯಲ್ಲಿ ನೀರು ಸಿಗುತ್ತದೆ.

ನೀರು ಸಂಗ್ರಹಿಸಲು ಇಷ್ಟೊಂದು ದೂರ ತೆರಳಬೇಕಾಗಿರುವುದರಿಂದ ಆರೋಗ್ಯ, ಆರ್ಥಿಕ ಉತ್ಪಾದನಾ ಸಾಮರ್ಥ್ಯ, ಲಿಂಗ ಅಸಮಾನತೆ ಮತ್ತಿತರ ಪರಿಣಾಮ ಉಂಟು ಮಾಡಿದೆ. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘಟಕದ ಎದುರು ಹಾಜರಾದ ಭಾರತೀಯ ಸರ್ಕಾರದ ನಿಯೋಗ ದಲಿತರ ವಿರುದ್ಧ ಜಾತಿ ತಾರತಮ್ಯ ಮತ್ತು ಹಿಂಸೆ ಕೊನೆಗಾಣಿಸಲು ಜಾರಿ ಮಾಡಿದ ಕಾನೂನುಗಳ ಪಟ್ಟಿಯನ್ನು ಮುಂದಿಟ್ಟಿತು. ಇಷ್ಟರಮಟ್ಟಿಗೆ ಇದು ನಿಜವೂ ಹೌದು. ಕಾನೂನಿನ ಮೂಲಕ ಸಮಾನತೆಯ ವ್ಯವಸ್ಥೆ ಸ್ಥಾಪಿಸಲು ನಡೆಸಿರುವ ಪ್ರಯತ್ನಕ್ಕೆ ಅದು ನಿಶ್ಚಿತವಾಗಿ ಹೆಮ್ಮೆಪಡಬೇಕಾಗಿದೆ.

ವಿವಿಧ ಪಕ್ಷಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ದಲಿತರು ಪಡೆದಿರುವ ಪಾಲುದಾರಿಕೆ ನಿಜಕ್ಕೂ ಸಾಮಾಜಿಕ ಪಿಡುಗನ್ನು ಕೊನೆಗಾಣಿಸುವ ಭಾರತೀಯ ಪ್ರಜಾಸತ್ತೆಯ ಮೌಲ್ಯಕ್ಕೆ ಒಂದು ಆರೋಗ್ಯಕರ ಉದಾಹರಣೆಯಾಗಿದೆ. ಆದರೆ ಆಚರಣೆಯಲ್ಲಿ ಈ ಕಾನೂನುಗಳು ತುಂಬ ದುರ್ಬಲವಾಗಿ ಜಾರಿಯಾಗಿವೆ. ಆದರೆ ಭಾರತೀಯ ನಿಯೋಗ ಈ ಬಗ್ಗೆ ಜಾರಿಯಾದ ಅಂಕಿ ಅಂಶಗಳನ್ನು ಕಾನೂನುಬದ್ಧವಾಗಿ ವಿಶ್ವಸಂಸ್ಥೆಯ ಮಾನವಹಕ್ಕುಗಳ ಘಟಕದ ಎದುರು ಇಡಬೇಕಾಗಿದ್ದರೂ ಹಾಗೆ ಮಾಡಲು ವಿಫಲರಾಗಿದ್ದಾರೆ. ಅದರ ಬದಲು ಜನಾಂಗೀಯ ತಾರತಮ್ಯ ಕುರಿತು ವಿಶ್ವಸಂಸ್ಥೆ ನಡೆಸಿದ ಸಮಾವೇಶ (CERD)ದಲ್ಲಿ ವಿಶ್ವಸಂಸ್ಥೆಯ ನಿರ್ದಿಷ್ಟ ನೀತಿಯಂತೆ ಕುಲಾಧಾರಿತ ತಾರತಮ್ಯ ಜನಾಂಗೀಯ ತಾರತಮ್ಯ ಆಗುವುದಿಲ್ಲ ಎಂದು ಸರ್ಕಾರದ ನಿಯೋಗ ವಾದಿಸಿತು.

ಇದು ಹಾದಿ ತಪ್ಪಿಸಿದ ಪರಿಸ್ಥಿತಿ. ಸ್ವತಃ ಭಾರತದ ಪ್ರಧಾನ ಮಂತ್ರಿ ಜಾತಿ ತಾರತಮ್ಯವನ್ನು ಜನಾಂಗವಾದಕ್ಕೆ ಹೋಲಿಸಿ ಇದು ಜನಾಂಗೀಯ ತಾರತಮ್ಯದ ಅತಿಕೆಟ್ಟ ಉದಾಹರಣೆ ಎಂದು ಹೇಳಿದ್ದಾರೆ. ಕಳೆದ ೫೦ ವರ್ಷಗಳಲ್ಲಿ ಮಾನವಹಕ್ಕುಗಳ ಕಾನೂನು ರೂಪಿಸುವ ಸಂಬಂಧದ ಇತಿಹಾಸಕ್ಕೆ ವಿರುದ್ಧವಾಗಿ ಸದ್ಯದ ಸ್ಥಿತಿ ಇದೆ ಎಂಬುದನ್ನು ಭಾರತ ಮರೆಯಕೂಡದು. ವ್ಯಂಗ್ಯ ಎಂದರೆ ವಿಶ್ವಸಂಸ್ಥೆಯ ಸಮಾವೇಶದಲ್ಲಿ ಸ್ವತಃ ಭಾರತವೇ ವಂಶಾಡಳಿತ ತಾರತಮ್ಯ ವ್ಯಾಖ್ಯಾನ ನೀಡಿ ಒಪ್ಪಂದದ ಕರಡು ರೂಪಿಸುವಾಗ ಜಾತಿಯನ್ನು ಕೂಡ ಸೇರಿಸಿತ್ತು. ಭಾರತದ ಸದ್ಯದ ಪರಿಸ್ಥಿತಿ ಅದರ ಇತಿಹಾಸವನ್ನೇ ನಿರಾಕರಿಸುವಂತಿದೆ.

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘಟಕದ ಎದುರು ಭಾರತ ತನ್ನ ವಿದೇಶಾಂಗ ನೀತಿಯಲ್ಲಿ ಮಾನವ ಹಕ್ಕುಗಳ ಸಂಬಂಧ ತನ್ನ ಒಟ್ಟಾರೆ ಮನೋಧರ್ಮ ಏನೆಂಬುದನ್ನು ತೋರಿಸಿಕೊಟ್ಟಿದೆ. ತೃತೀಯ ಜಗತ್ತಿನ ವಾದಿಗಳಿಗೆ ತಮ್ಮ ಪ್ರಜಾಸತ್ತೆಯ ಮೌಲ್ಯಗಳ ಬಗ್ಗೆ ನಂಬಿಕೆ ಇಲ್ಲ. ಭಾರತ ಸತತವಾಗಿ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ವಿಚಾರದಲ್ಲಿ ಜಿಂಬಾವ್ವೆ ಮತ್ತು ಸೂಡಾನ್ ದೇಶಗಳ ಪರವಾಗಿ ನಿಂತಿದೆ.

ಭಾರತ ಸ್ವಾತಂತ್ರ್ಯಾ ನಂತರ ಮೊದಲು ಕೆಲವು ದಶಕಗಳಲ್ಲಿ ಗಳಿಸಿದ ಉನ್ನತ ನೈತಿಕತೆಯ ಮಟ್ಟವನ್ನು ಮತ್ತೆ ಸ್ಥಾಪಿಸುವುದಕ್ಕೆ ಯಾವುದೇ ಕಾರಣ ತೋರಿಸಿಲ್ಲ. ಗಾಂಧೀವಾದದ ವಸಾಹತುಶಾಹಿ ವಿರೋಧಿ ಮತ್ತು ಆಯಾ ಕಾಲಘಟ್ಟದಲ್ಲಿ ಮಾನವ ಹಕ್ಕುಗಳ ವಿಚಾರದಲ್ಲಿ ಮುಂಚೂಣಿಯಲ್ಲಿದ್ದ ಭಾರತ ಈಗ ಹಿಂದೆ ಸರಿದಿದೆ. ಅದರ ಬದಲು ಮಾನವಹಕ್ಕುಗಳ ಕಾರ್ಯಸೂಚಿಯನ್ನು ಪಾಶ್ಚಿಮಾತ್ಯ ರಾಷ್ಟ್ರಗಳಿಗಾಗಿ ಬಿಟ್ಟುಕೊಟ್ಟಿದೆ.

ದಲಿತರ ವಿರುದ್ಧ ಜಾತಿ ತಾರತಮ್ಯ ವಿಚಾರದಲ್ಲಿ ಭಾರತ ನಿಯಮದಂತೆ ನಡೆದುಕೊಳ್ಳಲು ನಿರಾಕರಿಸಿದೆ ಮತ್ತು ಅಮೆರಿಕಾ ತನ್ನ ಅಲ್ಪ ಸಂಖ್ಯಾತರು ಅಥವಾ ದಕ್ಷಿಣ ಆಫ್ರಿಕಾದ ಬಿಳಿಯರು ತೋರಿದ ಜನಾಂಗೀಯತೆ ಉದಾಹರಣೆಯಂತಿದೆ. ಹೀಗಾಗಿ ಪ್ರಧಾನಿ ಜಾತಿತಾರತಮ್ಯವನ್ನು ಜನಾಂಗೀಯವಾದಕ್ಕೆ ಹೋಲಿಸಿರುವುದರಲ್ಲಿ ಅಚ್ಚರಿ ಏನಿಲ್ಲ.

ಜನಾಂಗೀಯ ತಾರತಮ್ಯದ ವಿರುದ್ಧ ಆರೋಪ ಮಾಡುವುದಕ್ಕೆ ಹಿಂಜರಿದಿರುವುದನ್ನು ಕಾಣಬಹುದು. ಆದರೆ ಭಾರತೀಯ ಅಧಿಕಾರಶಾಹಿ ತನ್ನ ಮೇಲಿನ ಅಪವಾದ ತಪ್ಪಿಸಿಕೊಳ್ಳುವ ವಿಚಾರದಲ್ಲಿ ಮಾತ್ರ ಚುರುಕಾಗಿರುತ್ತದೆ. ಪ್ರಧಾನಮಂತ್ರಿಗಳ ಜನಾಂಗೀಯವಾದದ ಪ್ರಸ್ತಾಪ ಜಾತಿತಾರತಮ್ಯದ ವಿರುದ್ಧ ನೈತಿಕತೆಯ ಜ್ವಾಲೆಯನ್ನು ಹುಟ್ಟುಹಾಕಬೇಕಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ದಕ್ಷಿಣ ಆಫ್ರಿಕಾದ ಜನಾಂಗೀಯವಾದದ ವಿರುದ್ಧ ಹೋರಾಡಿರುವ ಹೆಮ್ಮೆಯ ಇತಿಹಾಸ ಭಾರತಕ್ಕಿದೆ ಮತ್ತು ಯಾವುದೇ ದೇಶ ಇತರ ದೇಶಗಳ ಆಂತರಿಕ ವ್ಯವಹಾರವನ್ನು ಟೀಕಿಸುವ ಧೈರ್ಯ ತೋರದಿದ್ದ ಸಂದರ್ಭದಲ್ಲಿ ೧೯೪೮ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಅಧಿವೇಶನದ ಕಾರ್ಯಸೂಚಿಯಲ್ಲಿ ಜನಾಂಗೀಯ ವಾದ ವಿಚಾರವನ್ನು ಇರಿಸಿದ ಮೊದಲ ರಾಷ್ಟ್ರ ಭಾರತ. ಜನಾಂಗೀಯ ತಾರತಮ್ಯ ಮತ್ತು ಜನಾಂಗೀಯ ವಾದದ ವಿರುದ್ಧ ತಾತ್ವಿಕ ನಿಲುವು ತಳೆದಿದ್ದರೂ ಭಾರತ ಸಂಕೀರ್ಣ ಸಮಾಜದಲ್ಲಿ ಜಾತಿ ತಾರತಮ್ಯವನ್ನು ಪರಿಣಾಮಕಾರಿಯಾಗಿ ಕೊನೆಗಾಣಿಸಲು ತನ್ನ ಹಿಂದೆ ತೃತೀಯ ಜಗತ್ತಿನ ಪೊಳ್ಳು ಸಂವೇದನೆಯನ್ನು ಬಚ್ಚಿಟ್ಟುಕೊಂಡಿದೆ.

ದಲಿತರ ವಿರುದ್ಧ ಜಾತಿ ತಾರತಮ್ಯ ಕೊನೆಗಾಣಿಸುವುದು ಹೇಗೆ ಎಂಬುದು ತುಂಬ ಗಹನವಾದ ವಿಚಾರ. ಏಕೆಂದರೆ ಅದರ ಬೇರುಗಳು ಭಾರತೀಯ ಸಮಾಜ ಮತ್ತು ಆರ್ಥಿಕ ವ್ಯವಸ್ಥೆಯ ಕಾರ್ಯ ನಿರ್ವಹಿಸುವ ಬುಡಕ್ಕೇ ಅಂಟಿಕೊಂಡಿದೆ. ಜಾತಿ ತಾರತಮ್ಯ ಕೊನೆಗೊಳಿಸುವ ಶಾಸನ ಜಾರಿಗೆ ತಂದ ನಂತರ ಜಾತಿಯನ್ನು ಕೊನೆಗಾಣಿಸದೇ ಜಾತಿತಾರತಮ್ಯವನ್ನು ಯಾರಾದರೂ ಕೊನೆಗೊಳಿಸಲು ಸಾಧ್ಯವೇ ಎಂದು ಈಗ ಪ್ರಶ್ನಿಸುವುದು ನ್ಯಾಯಸಮ್ಮತವಾಗಿದೆ.

ಹಾಗಿದ್ದ ಮೇಲೆ ನೀತಿ ನಿರೂಪಣೆ ಮತ್ತು ಕಾನೂನು ಸೂಚಿಸುವುದಾದರೂ ಏನು? ಜನರು ಜಾತಿಯಲ್ಲಿ ನಂಬಿಕೆ ಮುಂದುವರಿಸಿರುವ ಕಾರಣದಿಂದಲೇ ಜಾತಿ ತಾರತಮ್ಯ ಉಳಿದಿದೆ. ಭಾರತೀಯ ಪ್ರಜಾಸತ್ತೆ ವಿರೋಧಾಭಾಸದ ಅಪರಾಧಿಯಾಗಿದೆ. ಭಾರತ ಪ್ರತಿಸಲ ಚುನಾವಣೆ ನಡೆಸುವಾಗಲೂ ನಿರ್ದಿಷ್ಟ ಜಾತಿಯ ಗುರುತಿಸುವಿಕೆಯನ್ನು ಪ್ರೋತ್ಸಾಹಿಸುತ್ತ ಬಂದಿದೆ. ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ಬಹುಜನಸಮಾಜ ಪಕ್ಷದ ಚುನಾವಣಾ ಗಳಿಕೆ ಎರಡಲಗಿನ ಜಾತಿ ಸ್ವರೂಪವನ್ನು ಪ್ರದರ್ಶಿಸುತ್ತದೆ. ಭಾರತೀಯ ಸಮಾಜ ಮತ್ತು ಸರ್ಕಾರವನ್ನು ಜಾತಿ ವ್ಯವಸ್ಥೆಯಿಂದ ಹೊರಗಿಟ್ಟು ಊಹಿಸುವುದೂ ಸಾಧ್ಯವಿಲ್ಲ. ದಲಿತ ಕ್ರೈಸ್ತರು, ಸಿಖ್ಖರು ಮತ್ತು ಮುಸ್ಲಿಮರು ವಿಭಿನ್ನ ಧರ್ಮಗಳನ್ನು ಸ್ವೀಕರಿಸಿದ ನಂತರವೂ ಜಾತಿ ತಾರತಮ್ಯಕ್ಕೆ ಒಳಗಾಗುವುದು ಮುಂದುವರಿದಿದೆ.

ದಲಿತರ ವಿರುದ್ಧ ಜಾತಿತಾರತಮ್ಯ ಆಧುನಿಕ ಭಾರತದ ಚಿಂತನೆಯ ಮೇಲಿನ ಕಪ್ಪು ಕಲೆಯಾಗಿದೆ ಮತ್ತು ಜಾತಿತಾರತಮ್ಯ ಪರಿಣಾಮಕಾರಿಯಾಗಿ ಮೂಲೋತ್ಪಾಟನೆ ಮಾಡುವ ಅಗತ್ಯವಿದೆ.

ಭಾರತೀಯ ಸಂವಿಧಾನ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯವನ್ನು ನಿಷೇಧಿಸಿದ್ದರೂ ಕಾನೂನುಬಾಹಿರವೆಂದು ಘೋಷಿಸಿದ್ದರೂ ಅದು ಜಾತಿಯನ್ನು ತೊಡೆದು ಹಾಕಿಲ್ಲ. ಇದು ಸ್ವತಃ ಜಾತಿ ಸರ್ವನಾಶಕ್ಕೆ ಕರೆ ನೀಡಿದ ಭಾರತೀಯ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರಿಗೆ ಅರಿವಾಗಿತ್ತು. ಈ ಗುರಿಯ ಕಡೆಗೆ ಸರ್ಕಾರ ಮತ್ತು ಸಮಾಜ ಪುನರ್ ಮನನ ಮಾಡುವುದಕ್ಕೆ ಇದು ಸಕಾಲವಾಗಿದೆ ಮತ್ತು ಭಾರತೀಯ ಜನಾಂಗೀಯ ಪದ್ಧತಿ ಕೊನೆಗಾಣಿಸುವ ಪ್ರಕ್ರಿಯೆಯನ್ನು ಆರಂಭಿಸಬೇಕಾಗಿದೆ.

(ಸೌಜನ್ಯ: 'ದಿ ಹಿಂದೂ') □

ಸಂವಾದ -೧

ಬ್ರಾಹ್ಮಣರು ಮತ್ತು ಬಿ.ಎಸ್.ಪಿ

ಬ್ರಾಹ್ಮಣರು ಬಿ.ಎಸ್.ಪಿ. ಯನ್ನು ಅಪ್ಪಿಕೊಳ್ಳುತ್ತಿರುವುದೇನೊ ಸರಿ. ಆದರೆ ಅವರ ಉದ್ದೇಶವೇನಿರಬಹುದು? ರಾತ್ರಿ ಬೆಳಗಾಗುವುದರೊಳಗೆ ಮಾಯಾವತಿ ಇವರಿಗೆ ಹೇಗೆ ಸಾಮಾಜಿಕ ಸುಧಾರಣೆಗಳ ಹರಿಕಾರರಂತೆ ಕಂಡು ಬಂದರು? ಬೇರಾರಲ್ಲೂ ಇರದ ಉತ್ತಮ ಗುಣ ಈಕೆಯ ರಾಜನೀತಿಯಲ್ಲಿ ಹೇಗೆ ಬಿಂಬಿತವಾಗಿದೆ? ಬ್ರಾಹ್ಮಣರ ಈ ಅನಿರೀಕ್ಷಿತ ಬೆಂಬಲದ ಮರ್ಮವೇನಿರಬಹುದು? ಆಯಕಟ್ಟಿನ ಸ್ಥಾನಗಳನ್ನು ಆಕ್ರಮಿಸಿಕೊಂಡು ಕೊನೆಗೆ 'WRECK IT FROM WITHIN' ನೀತಿ ಅನುಸರಿಸಿದರೆ? ಹೀಗೆಲ್ಲಾ ಏಕೆ ಆಲೋಚಿಸಬೇಕು ಎಂದರೆ ಬ್ರಾಹ್ಮಣರು ರಾಜರಾಗಿ ಆಳಿದ್ದು ಕಡಿಮೆ. ಆದರೆ ಎಲ್ಲ ರಾಜರ ಆಸ್ಥಾನಗಳಲ್ಲೂ ಇವರಿಗೆ ಮಹತ್ವದ ಸ್ಥಾನಮಾನವಿತ್ತು. ಅರಸ ಹಿಂದುವೊ ಯಾ ಮುಸಲ್ಮಾನನೋ. ಆದರೆ ದಿವಾನ ಸ್ಥಾನದಲ್ಲಿ ಬ್ರಾಹ್ಮಣರಿರುತಿದ್ದುದು ಸತ್ಯತಾನೆ?

ಡಿ.ಎಂ. ಚಿಣ್ಣಪ್ಪ
ಸೋಮವಾರಪೇಟೆ

ಕರ್ನಾಟಕದಲ್ಲಿ ಬಹುಜನ ಸಮಾಜ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಇತ್ತೀಚೆಗೆ ಬ್ರಾಹ್ಮಣರು ಸಾವಿರಾರು ಸಂಖ್ಯೆಯಲ್ಲಿ ಆ ಪಕ್ಷವನ್ನು ಸೇರಿದರು. ಬೆಂಗಳೂರಿನಲ್ಲಿ ಇಂತಹ ಒಂದು ಯತ್ನ ನಡೆಯಿತು ಎಂದು ವರದಿಯಾಗಿದೆ. ಉತ್ತರ ಪ್ರದೇಶದಲ್ಲಿ ಮಾಯಾವತಿ ಅವರು ಅನುಸರಿಸಿದ ನೀತಿಗನುಗುಣವಾಗಿ ಇಲ್ಲಿ ಈ ಪ್ರಯತ್ನ ನಡೆದಿದೆ.

ಬಲ್ಲ ಮೂಲಗಳ ಪ್ರಕಾರ ಕರ್ನಾಟಕದಲ್ಲಿ ಸುಮಾರು ನಲವತ್ತೆರಡು ಲಕ್ಷ ಬ್ರಾಹ್ಮಣರಿದ್ದಾರೆ. ಈ ಪೈಕಿ ಅಂದಾಜು ಹದಿನೈದು ಲಕ್ಷ ಬ್ರಾಹ್ಮಣರು ಬೆಂಗಳೂರಿನಲ್ಲಿದ್ದಾರೆ. ಬ್ರಾಹ್ಮಣರಲ್ಲಿ ಅಧಿಕ ಸಂಖ್ಯೆಯ ಮಂದಿ ಭಾ.ಜ.ಪ. ಅಭಿಮಾನಿಗಳು. ರಾಜಕೀಯವಾಗಿ ಒಂದು ಪ್ರಬಲ ಕೋಮು ಅಲ್ಲವಾದರೂ ಈ ರಾಜ್ಯದಲ್ಲಿ ದಿವಂಗತ ರಾಮಕೃಷ್ಣ ಹೆಗಡೆ, ಆರ್. ಗುಂಡೂರಾವ್ ಅವರುಗಳು ಮುಖ್ಯಮಂತ್ರಿ ಸ್ಥಾನಕ್ಕೇರಿದ್ದಾರೆ. ಬೆಂಗಳೂರಿನ ಮಟ್ಟಿಗೆ ಹೇಳುವುದಾದರೆ ಇಂದು ಅನಂತಕುಮಾರ್ ಸಂಸತ್ ಸದಸ್ಯರಾಗಿರುವುದು ದಿನೇಶ್ ಗುಂಡೂರಾವ್ ಎಂ.ಎಲ್.ಎ. ಆಗಿರುವುದು ಜಾತಿ ಬೆಂಬಲದಿಂದ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಉಳಿದಂತೆ ಆರ್.ವಿ. ದೇಶಪಾಂಡೆ, ರಮೇಶ್‌ಕುಮಾರ್ ಪ್ರಮುಖ ರಾಜಕಾರಣಿಗಳು. ಬ್ರಾಹ್ಮಣರಲ್ಲೂ ಹತ್ತಾರು ಉಪಜಾತಿಗಳಿವೆ. ಈ ಪೈಕಿ ಸ್ಮಾರ್ತರಲ್ಲಿ ಹನ್ನೆರಡು, ಮಾಧ್ವರಲ್ಲಿ ನಾಲ್ಕು ಪ್ರಮುಖವಾದವು.

ಕಂಚಿ ಮಠಾಧೀಶರ ಬಂಧನ ಸಂದರ್ಭದಲ್ಲಿ ದೇಶದ ಎಲ್ಲ ಬ್ರಾಹ್ಮಣರು ಹೇಗೆ ಎದ್ದು ನಿಂತರು ಎಂಬುದು ಎಲ್ಲರಿಗೂ ಗೊತ್ತಿದೆ. ಸಾರ್ವಜನಿಕ ಅಭಿಪ್ರಾಯವನ್ನು ಬಡಿದೆಬ್ಬಿಸುವಲ್ಲಿ ಇವರದು ಎತ್ತಿದ ಕೈ. ಆಡಳಿತ ಸೂತ್ರ ಎಲ್ಲ ರಂಗಗಳಲ್ಲೂ ಇವರ ಕೈಯಲ್ಲಿರುತ್ತದೆ. ಸ್ವಸಾಮರ್ಥ್ಯದಿಂದ ಇದನ್ನು ಅವರು ಗಳಿಸಿಕೊಳ್ಳುತ್ತಾರೆ. ಇವರು ಚಾಣಾಕ್ಷಮತಿಗಳೂ ಹೌದು. ಬ್ರಾಹ್ಮಣರು ಪ್ರತಿಭಾವಂತರು. ಅದು ಹುಟ್ಟಿನಿಂದಲೇ ಬಂದುದು. ಜತೆಗೆ ಅವರ ಜೀವನ ಶೈಲಿ ತಲತಲಾಂತರದಿಂದ ಅವರು ಉನ್ನತ ಸ್ಥಾನಕ್ಕೇರುವಲ್ಲಿ ನೆರವಾಗಿದೆ. ಕಾಲಕಾಲಕ್ಕೆ ಬದಲಾಗುವ ಸನ್ನಿವೇಶಗಳಿಗೆ ಹೊಂದಿಕೊಂಡು ಬದುಕುವುದು ಅವರಿಗೆ ರಕ್ತಗತವಾಗಿ ಬಂದಿದೆ. ತಮ್ಮತನವನ್ನು ಬಿಟ್ಟುಕೊಡದೆ ಅವರು ರಾಷ್ಟ್ರ ಜೀವನದ ಮುಖ್ಯ ವಾಹಿನಿಯಲ್ಲಿ ಸೇರ್ಪಡೆಗೊಳ್ಳುತ್ತಾರೆ.

"ಬ್ರಾಹ್ಮಣರು ಭೋಜನ ಪ್ರಿಯರು" ಎಂದು ಬ್ರಾಹ್ಮಣ ಮಿತ್ರನೊಬ್ಬನನ್ನು ಛೇಡಿಸಿದರೆ ಆತ "ತಪ್ಪು ತಪ್ಪು; ಬ್ರಾಹ್ಮಣರು ಬಹುಜನ ಪ್ರಿಯರು" ಎಂದು ಹೇಳುತ್ತಿದ್ದುದು ನೆನಪಿಗೆ ಬರುತ್ತಿದೆ. ಇತಿಹಾಸದ ಪುಟಗಳನ್ನು ತಿರುವುತ್ತ ಹೋದರೆ ಸಮಾಜದಲ್ಲಿ ಈ ವರ್ಗಕ್ಕಿದ್ದ ಸ್ಥಾನಮಾನಗಳನ್ನು ಕಣ್ಣಿಗೆ ಬೀಳುತ್ತವೆ. ತಾವು ಇತರರಿಗಿಂತ ಶ್ರೇಷ್ಠರು ಎಂದೇ ಬಹುತೇಕ ಬ್ರಾಹ್ಮಣರು ತಿಳಿಯುತ್ತಾರೆ ಮಾತ್ರವಲ್ಲ ಅದನ್ನು ಇತರರು ಒಪ್ಪಿಕೊಳ್ಳುವ ರೀತಿಯಲ್ಲಿ ತಮ್ಮ ವಾದವನ್ನು ಮಂಡಿಸುತ್ತಾರೆ.

ಬ್ರಾಹ್ಮಣರು ಬಿ.ಎಸ್.ಪಿ.ಯನ್ನು ಅಪ್ಪಿಕೊಳ್ಳುತ್ತಿರುವುದೇನೊ ಸರಿ. ಆದರೆ ಅವರ ಉದ್ದೇಶವೇನಿರಬಹುದು? ರಾತ್ರಿ ಬೆಳಗಾಗುವುದರೊಳಗೆ ಮಾಯಾವತಿ ಇವರಿಗೆ ಹೇಗೆ ಸಾಮಾಜಿಕ ಸುಧಾರಣೆಗಳ ಹರಿಕಾರಳಂತೆ ಕಂಡು ಬಂದರು? ಬೇರಾರಲ್ಲೂ ಇರದ ಉತ್ತಮ ಗುಣ ಈಕೆಯ ರಾಜನೀತಿಯಲ್ಲಿ ಹೇಗೆ ಬಿಂಬಿತವಾಗಿದೆ? ಬ್ರಾಹ್ಮಣರ ಈ ಅನಿರೀಕ್ಷಿತ ಬೆಂಬಲದ

(ಮುಂದಿನ ಪುಟದ ೨ನೇ ಕಾಲಂಗೆ)

ವ್ಯಂಗ್ಯ ಚಿತ್ರ ಸೌಜನ್ಯ: ದಿ ಹಿಂದೂ

ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ

ಸೆಪ್ಟೆಂಬರ್ ಸಂಚಿಕೆಯಲ್ಲಿನ ರಹಮತ್ ತರೀಕೆರೆಯವರ "ಮನಸ್ಸು ಕದಡಿದ ವಾಚಕರ ವಾಣಿ" ನನ್ನ ಮನಸ್ಸನ್ನು ಕದಡಿತು. ನಕ್ಸಲ್ ಸಿದ್ಧಾಂತ, ನಕ್ಸಲ್ ಪರ-ನಿರೋಧಿ ಹೇಳಿಕೆಗಳು ನಕ್ಸಲ್ ಹಿತೈಷಿಗಳನ್ನು ಬಗ್ಗು ಬಡಿಯಲು ಪೊಲೀಸರು ಅನುಸರಿಸುವ ಕ್ರಮಗಳು ಎಲ್ಲ ಒತ್ತಟ್ಟಿಗಿರಲಿ.

ಶೃಂಗೇರಿ ವಿಭಾಗದ ಶ್ರೀಮತಿ ಭಾಗ್ಯ ಹಾಗಲಗಂಚಿಯವರು ಅನುಭವಿಸಿರಬಹುದಾದ ಮಾನಸಿಕ ಯಾತನೆ ಹೇಗಿರಬಹುದು ಎಂದು ಯೋಚಿಸುತ್ತ ಬೆವತು ಹೋದೆ. ಈ ವ್ಯವಸ್ಥೆಯಲ್ಲಿ ತನ್ನ ಭಾವನೆಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವೂ ಓರ್ವ ಬರಹಗಾರ್ತಿಗೆ ಇಲ್ಲವಾಗಿರುವುದನ್ನು ಎಂತಹ ಶಬ್ಧಗಳಿಂದ ಖಂಡಿಸುವುದೆಂದೇ ತೋಚುತ್ತಿಲ್ಲ. ತಮ್ಮ ಮೇಲಧಿಕಾರಿಗಳನ್ನು ಸಂತೃಪ್ತಗೊಳಿಸಲು ಕೆಳಮಟ್ಟದ ಅಧಿಕಾರಿಗಳು ಯಾವ

ಸಂವಾದ-೨

ಮಟ್ಟಕ್ಕೆ ಇಳಿಯಬಲ್ಲರು ಎಂಬುದರ ಕುರಿತು ನನಗೆ ಸ್ಪಷ್ಟ ಕಲ್ಪನೆಯಿದೆ. ಆದರೆ 'ನಕ್ಸಲ್ ಹಿತೈಷಿ' ಎಂಬ ಹಣೆಪಟ್ಟಿ ಕಟ್ಟಿ ಓರ್ವ ಮಹಿಳೆಯನ್ನು DEMORALISE ಮಾಡುವ ಮಟ್ಟಕ್ಕೆ ಅಧಿಕಾರಿಗಳು ಇಳಿದಿರುವುದು ನಾಚಿಕೆಗೇಡಿನ ಸಂಗತಿ. ನಾಗರಿಕ ಸಮಾಜ ನಾಚಿಕೆಯಿಂದ ತಲೆ ತಗ್ಗಿಸಬೇಕಾದ ಘಟನೆ ಇದು. ಓರ್ವ ವ್ಯಕ್ತಿಯ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಯತ್ನ ಖಂಡನೀಯ.

ಇನ್ನು ಆಕೆಯ ಮನೆಯನ್ನು ಜಪ್ತಿ ಮಾಡಿ ವಶಪಡಿಸಿಕೊಂಡಿರುವ ಸಾಮಗ್ರಿಗಳ ಪಟ್ಟಿ ನೋಡಿ ಥೂ...., ಛೀ ಅಂದುಕೊಂಡೆ. ಪೇಟೆ ಪಟ್ಟಣಗಳಲ್ಲಾದರೆ ಈ ಕುರಿತು ಧ್ವನಿಯೆತ್ತಲು ನಾಲ್ವರು ನಾಗರಿಕರು ಸಿಗಬಹುದು ಅಥವಾ ಪ್ರಗತಿಪರ ಸಂಘಟನೆಗಳಿರಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಕೂಗಿದರೂ ಓಗೊಡಲು ಜನ ಬರಲಾರರು. ಆಕೆಯ ಅಸಹಾಯಕತೆಯ ಬಗ್ಗೆ ನನ್ನಲ್ಲಿ ಅನುಕಂಪ ಉಂಟಾಯಿತು. 'ನರಿಕೂಗು ಗಿರಿ ಮುಟ್ಟೀತೆ?' ಹಾಗೆಂದು ಕೈ ಕಟ್ಟಿ ಕುಳಿತುಕೊಳ್ಳಲೂ ಸಾಧ್ಯವಿಲ್ಲ.

IF TELLING TRUTH IS A SIN, LET IT BE MY PROUD PRIVILEGE TO BE A SINNER ಎಂದಿದ್ದನಂತೆ ಪಾಶ್ಚಾತ್ಯ ಪತ್ರಕರ್ತನೋರ್ವ. PLAIN SPEAKING IS ALWAYAS UNPLEASANT. ಬಹುಶಃ ಈ ಕಾರಣಕ್ಕಾಗಿಯೇ 'ನ ಭ್ರೂಯಾತ್ ಸತ್ಯಂ ಅಪ್ರಿಯಂ' ಎಂಬ ಪಲಾಯನವಾದ ಹುಟ್ಟಿಕೊಂಡಿತೇನೊ.

ಯಾವುದಾದರು ಟಿ.ವಿ. ಚಾನೆಲ್‌ನವರಿಂದ ಈಕೆಯ ಸಂದರ್ಶನ ಏರ್ಪಟ್ಟರೆ ಬಹುಶಃ ಈ ಘಟನೆ ಹೊರ ಜಗತ್ತಿಗೆ ಗೊತ್ತಾಗಬಹುದು. ಇಂತಹ ಘಟನೆಗಳು ಬೆಳಕಿಗೆ ಬಾರದಂತೆ ನೋಡಿಕೊಳ್ಳುವ ಮಂದಿಯೂ ನಮ್ಮ ನಡುವೆ ಇದ್ದಾರೆ. ತಾಯಿಯೊಬ್ಬಳು ತನ್ನ ಮಗುವನ್ನು ಶಾಲೆಗೆ ಕಳುಹಿಸಲೂ ಹೆದರಬೇಕಾದ ಪರಿಸ್ಥಿತಿ ಉದ್ಭವಿಸಿರುವುದು ಅಸಹನೀಯ. ಇನ್ನು ಗ್ರಾಮಾಂತರ ಪ್ರದೇಶದಲ್ಲಿನ 'ಕೇಸರಿಪಡೆ' ಅಟ್ಟ ಹಾಸ ಹೇಳ ತೀರದು. ಅವರು ಆಡಿದ್ದೇ ಆಟ. ಎದುರಾಡಿದವರಿಗೆ ಇಲ್ಲದ ಕಿರುಕುಳ. ಇದು ಸ್ವತಂತ್ರ ಭಾರತದ ಚಿತ್ರಣ. ಪ್ರತಿಭಟಿಸಲು ನಾಲಿಗೆಯಲ್ಲಿ ಪಸೆ ಇಲ್ಲದ ಸ್ಥಿತಿ.

'ಸಂವಾದ' ಪತ್ರಿಕಾಲಯದಿಂದ ಸಂಬಂಧಪಟ್ಟ ಮೇಲಧಿಕಾರಿಗಳಿಗೆ ಒಂದು ಪತ್ರ ರವಾನಿಸುವಂತಾಗಲಿ. ತನ್ಮೂಲಕ ಭಾಗ್ಯ ಅವರ ಅಳಲನ್ನು ಆಲಿಸಲು ಜನ ಇದ್ದಾರೆ ಎಂಬುದು ಆಳುವ ಮಂದಿಗೆ ತಿಳಿಯುವಂತಾಗಲಿ. ಭಾಗ್ಯ ಅವರು ಚಿತ್ತ ಸಮತೋಲನ ಕಳೆದುಕೊಳ್ಳಬಾರದು. ನಿಮ್ಮೊಂದಿಗೆ ನಾವಿದ್ದೇವೆ. □

'ನಕ್ಸಲ್ ಹಿತೈಷಿ' ಎಂಬ ಹಣೆಪಟ್ಟಿ ಕಟ್ಟಿ ಓರ್ವ ಮಹಿಳೆಯನ್ನು DEMORALISE ಮಾಡುವ ಮಟ್ಟಕ್ಕೆ ಅಧಿಕಾರಿಗಳು ಇಳಿದಿರುವುದು ನಾಚಿಕೆಗೇಡಿನ ಸಂಗತಿ. ನಾಗರಿಕ ಸಮಾಜ ನಾಚಿಕೆಯಿಂದ ತಲೆ ತಗ್ಗಿಸಬೇಕಾದ ಘಟನೆ ಇದು. ಓರ್ವ ವ್ಯಕ್ತಿಯ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಯತ್ನ ಖಂಡನೀಯ.

(ಹಿಂದಿನ ಪುಟದಿಂದ)

ಮರ್ಮವೇನಿರಬಹುದು. ಆಯಕಟ್ಟಿನ ಸ್ಥಾನಗಳನ್ನು ಆಕ್ರಮಿಸಿಕೊಂಡು ಕೊನೆಗೆ "WRECK IT FROM WITHIN" ನೀತಿ ಅನುಸರಿಸಿದರೆ? ಹೀಗೆಲ್ಲಾ ಏಕೆ ಆಲೋಚಿಸಬೇಕು ಎಂದರೆ ಬ್ರಾಹ್ಮಣರು ರಾಜರಾಗಿ ಆಳಿದ್ದು ಕಡಿಮೆ. ಆದರೆ ಎಲ್ಲ ರಾಜರ ಆ ಸ್ಥಾನಗಳಲ್ಲೂ ಇವರಿಗೆ ಮಹತ್ವದ ಸ್ಥಾನಮಾನವಿತ್ತು. ಅರಸ ಹಿಂದುವೊ ಯಾ ಮುಸಲ್ಮಾನನೋ, ಆದರೆ ದಿವಾನ ಸ್ಥಾನದಲ್ಲಿ ಬ್ರಾಹ್ಮಣರಿರುತಿದ್ದುದು ಸತ್ಯತಾನೆ? ರಾಜರ ಆಸ್ಥಾನಗಳಲ್ಲಿನ ಎಷ್ಟೊಂದು ಮಂತ್ರಿಗಳ ತಲೆದಂಡ ಆಗಿಲ್ಲ. ಹೊಗಳು ಭಟ್ಟರು ಎನ್ನುವಲ್ಲಿ 'ಭಟ್ಟ' ಎಂಬ ಶಬ್ಧವೇಕೆ ಬಂತು?

ವಾದವಿವಾದಗಳೇನೇ ಇರಲಿ, ಬ್ರಾಹ್ಮಣರು ಸಂಘಟಿತರಾಗಿ ಒಂದು ಪರಿವರ್ತನಾ ಕೆಲಸಕ್ಕೆ ಕೈ ಹಾಕಿದ್ದಾರೆ. ಸಾಮಾಜಿಕ ಪರಿವರ್ತನೆ ಇಂದಿನ ತುರ್ತು ಅಗತ್ಯ. ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸೋಣ. ಎಲ್ಲವನ್ನು ವಾರೆಗಣ್ಣಿನಿಂದ ನೋಡುವ, ಹಳದಿ ಕನ್ನಡಕ ಧರಿಸಿ ನೋಡುವ ಪ್ರವೃತ್ತಿ ಬೇಡ. ಹೊಸತನ್ನು ಸ್ವಾಗತಿಸುವ, ಸ್ವೀಕರಿಸುವ ಹೃದಯವಂತಿಕೆ ನಮ್ಮದಾಗಿರಲಿ. ಬಿ.ಎಸ್.ಪಿ. ಸುಭದ್ರವಾದ ರಾಜಕೀಯ ತಳಹದಿಯೊಂದಿಗೆ ಇಲ್ಲಿ ನೆಲೆಯೂರಿದರೆ ಕ್ರಮೇಣ ಅ.ಹಿಂ.ದ. ಇತ್ತ ವಾಲಿದರೆ ಅಚ್ಚರಿಯೇನಿಲ್ಲ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಭಾರತದ ಭಾಷೆಗಳ ಹೊಸ ಸಮೀಕ್ಷೆ :
ಭಾಷಿಕ ಅನನ್ಯತೆಯ ಪುನರ್‌ಶೋಧವೇ?

ಮೇಟಿ ಮಲ್ಲಿಕಾರ್ಜುನ

ಕೇಂದ್ರ ಸರ್ಕಾರದ ಪ್ರಾಯೋಜಕತ್ವದಿಂದ ಮೈಸೂರಿನಲ್ಲಿರುವ ಭಾರತೀಯ ಭಾಷಾ ಸಂಸ್ಥಾನದ ನೇತೃತ್ವದಲ್ಲಿ ಭಾರತದ ಭಾಷೆಗಳ ಹೊಸ ಸಮೀಕ್ಷಾ ಕಾರ್ಯ ಪ್ರಾರಂಭಿಸಲಾಗಿದೆ. ಇದೊಂದು ಬೃಹತ್ ಯೋಜನೆ. ವಿಭಿನ್ನ ಚಾರಿತ್ರಿಕ ಕಾಲಘಟ್ಟದಲ್ಲಿ ಭಾರತದ ಹೆಚ್ಚಿನ ಭಾಷೆಗಳ ಸಮೀಕ್ಷಾ ಕಾರ್ಯ ನಡೆಸುವ ಪ್ರಯತ್ನ ಮಾಡಲಾಗಿತ್ತು. ಒಂದು ಶತಮಾನದ ನಂತರ ಮತ್ತೆ ಭಾಷಾ ಸಮೀಕ್ಷೆ ಶುರುವಾಗಿದೆ. ದೇಶದ ಹಲವು ಜಾತಿ ಬುಡಕಟ್ಟು ಭಾಷಾ ಸಮುದಾಯಕ್ಕೆ ಅವರದೇ ಭಾಷೆಯ ಮೂಲಕ ಅವರ ಸಾಂಸ್ಕೃತಿಕ ಅಗತ್ಯ ಮತ್ತು ಅಭಿವ್ಯಕ್ತಿಯನ್ನು ರೂಪಿಸಿ ಕೊಡುವ ಜರೂರತ್ತು ಯಾಕಿಲ್ಲ ಎಂಬುದನ್ನು ಈ ಸಮೀಕ್ಷೆಯಿಂದ ಕಂಡುಕೊಳ್ಳಬೇಕಾಗಿದೆ.

ಭಾರತದ ಭಾಷಾ ಚರಿತ್ರೆಯಲ್ಲಿಯೇ ಒಂದು ಚಾರಿತ್ರಿಕ ದಾಖಲೆಯೇನೆಂದರೆ, ಭಾರತದ ಭಾಷೆಗಳ ಸಮೀಕ್ಷೆ. ಮತ್ತೆ ಈ ಚಾರಿತ್ರಿಕ ದಾಖಲೆಯ ಪುನರಾವರ್ತನೆ. ಭಾರತೀಯ ಭಾಷಾ ಸಂಸ್ಥಾನ, ಮೈಸೂರು ಇದರ ನೇತೃತ್ವದಲ್ಲಿ ಭಾರತದ ಭಾಷೆಗಳ ಹೊಸ ಸಮೀಕ್ಷೆಯ ಪೂರ್ವ ಸಿದ್ಧತೆಗಳು ಪ್ರಾರಂಭಗೊಂಡಿವೆ. ಕುತೂಹಲದ ವಿಷಯವೇನೆಂದರೆ, ಭಾರತೀಯ ಭಾಷೆಗಳ ಸಮೀಕ್ಷೆ ಶುರು ಮಾಡಿದ್ದು ವಿಭಿನ್ನ ಚಾರಿತ್ರಿಕ ಕಾಲಘಟ್ಟದಲ್ಲಿ. ವಸಾಹತುಶಾಹಿ ಸಂದರ್ಭದಲ್ಲಿ ಜಿ.ಎ.ಗ್ರೀಯರ್‌ಸನ್‌ನು ಭಾರತದ ಹೆಚ್ಚಿನ ಭಾಷೆಗಳನ್ನು ಸಮೀಕ್ಷೆ ಮಾಡಿ ಅವುಗಳ ರಚನಾ ವಿನ್ಯಾಸದ ಲಕ್ಷಣಗಳನ್ನು ಗುರುತಿಸುವ ಪ್ರಯತ್ನ ಮಾಡಿದನು. ಇದರ ಉದ್ದೇಶ ರಾಜಕೀಯವೇ ಇರಬಹುದು, ಲಾಭವೇನೆಂದರೆ ಭಾರತದಲ್ಲಿ ಬಳಕೆಯಲ್ಲಿರುವ ಭಾಷೆಗಳ ಒಂದು ಅಂದಾಜು ನಮಗೆ ಲಭ್ಯವಾಗಿದ್ದು ಈ ಒಂದು ಸಮೀಕ್ಷೆಯಿಂದ. ಇವತ್ತು, ಅಂದರೆ ಸುಮಾರು ಒಂದು ಶತಮಾನದ ನಂತರ ಕೈಗೊಳ್ಳುವ ಈ ಹೊಸ ಸಮೀಕ್ಷೆಯು ಕೂಡ ಕುತೂಹಲಕಾರಿಯಾಗಿದೆ.

ಯಾಕೆಂದರೆ, ಅಂದು ವಸಹಾತುಶಾಹಿಯ ನೇರ ಯಜಮಾನಿಕೆ ಮತ್ತು ಪ್ರಾಬಲ್ಯದ ಮಧ್ಯ ಆ ಭಾಷಾ ಸಮೀಕ್ಷೆ ನಡೆಯಿತು. ಆದರೆ, ಇಂದು ಜಾಗತೀಕರಣದಂತಹ ಪರೋಕ್ಷ ಯಜಮಾನಿಕೆ ಮತ್ತು ಪ್ರಾಬಲ್ಯದ ಸಂದರ್ಭದಲ್ಲಿ ಭಾರತದ ಭಾಷೆಗಳ ಹೊಸ ಲೆಕ್ಕಾಚಾರ ಮಾಡುವ ಬೃಹತ್ ಯೋಜನೆ ಶುರುವಾಗುವುದು. ನಿಜ, ನಾವೆಲ್ಲರೂ ಗ್ರಹಿಸಿದಂತೆ ಇದೊಂದು ಬೃಹತ್ ಮತ್ತು ಅದ್ಭುತವಾದ ಯೋಜನೆ. ಇದು ಕೇಂದ್ರ ಸರಕಾರದ ಪ್ರಾಯೋಜತ್ವದಲ್ಲಿ ನಡೆಯುವುದು. ಈ ಹೊಸ ಸಮೀಕ್ಷೆಯ ಅಗತ್ಯವೇನೆಂದರೆ, ಸ್ಪಷ್ಟ ಮತ್ತು ನೇರ ರೂಪುರೇಷೆ ಮತ್ತು ಉತ್ತರಗಳು ದೊರಕಲಾರವು. ಹೌದು, ಅಂದು ಗ್ರೀಯರ್‌ಸನ್ ಮಾಡಿದ ಸಮೀಕ್ಷೆ ಅಪೂರ್ಣವಾಗಿದೆ. ಹಾಗಾಗಿ ಹಲವಾರು ಯೋಜನೆ ಹಾಗೂ ಜನಗಣತಿ ಪ್ರಯತ್ನದಿಂದಲೂ ಭಾರತದ ಒಟ್ಟು ಭಾಷೆಗಳ ಸ್ಪಷ್ಟ ಚಿತ್ರಣ ನಮಗೆ ದೊರಕಿಲ್ಲ. ಉದಾಹರಣೆಗೆ ಈ ಕೆಳಗಿನ ವಿವರಗಳನ್ನು ಪರಿಶೀಲಿಸಬಹುದು.

ಒಂದು ಸಮುದಾಯದ ಜನರ ಬದುಕನ್ನು ರೂಪಿಸಿಕೊಳ್ಳಲು ಬೇಕಾದ ಅನುಕೂಲತೆಗಳನ್ನು ದಕ್ಕಿಸಿಕೊಳ್ಳುವ ಸಂದರ್ಭಕ್ಕೆ ಭಾಷೆ ಅಗತ್ಯ. ಅಂದರೆ, ಶಿಕ್ಷಣ, ಉದ್ಯೋಗ, ರಾಜಕಾರಣ ಮುಂತಾದವುಗಳ ಸನ್ನಿವೇಶದಲ್ಲಿ ಭಾಷೆಯ ಪಾತ್ರ ಬಹಳ ಪ್ರಮುಖವಾದುದು.

ಭಾರತದ ಒಟ್ಟು ಭಾಷೆಗಳ ಒಂದು ವ್ಯವಸ್ಥಿತ ವರದಿ ನಮಗೆ ಇದುವರೆಗೂ ಲಭ್ಯವಾಗಿಲ್ಲ. ಆದರೆ, ಇಲ್ಲಿ ನಮೂದಿಸಿದ ಕೋಷ್ಟಕ-೧ರ ವಿವರಗಳು ವಿಚಿತ್ರವಾಗಿ ಅಸಂಬದ್ಧವಾಗಿ ತೋರಿದರೂ ಭಾರತದ ಭಾಷೆಗಳ ಒಂದು ಸ್ಥೂಲ ಪರಿಚಯವನ್ನು ಕೊಡುತ್ತವೆ. ಇದರಿಂದ ಈ ದೇಶದ ಭಾಷಿಕ- ಸಾಂಸ್ಕೃತಿಕ ಬಹುತ್ವತೆಯನ್ನು ಗುರುತಿಸಬಹುದು.

ಈಗ ಮತ್ತೆ ಭಾರತದ ಭಾಷೆಗಳ ಹೊಸ ಲೆಕ್ಕ ಹೊಸ ಪಟ್ಟಿ ಸಿದ್ಧಪಡಿಸಿ ಆ ಭಾಷೆಯ ವ್ಯಾಕರಣ, ರಚನಾವಿನ್ಯಾಸ, ಎರವಲು ಪದಗಳ ಪಟ್ಟಿ, ಆ ಪದಗಳ ಸಾಂಸ್ಕೃತಿಕ ಸಂಬಂಧ, ಪ್ರಭಾವ, ಪ್ರೇರಣೆ ಮತ್ತು ಸಾಂಸ್ಕೃತಿಕ-ಭಾಷಿಕ ನಂಟನ್ನು ಅರ್ಥೈಯಿಸಿಕೊಳ್ಳುವಂತಹುದು. ಇದರಾಚೆ, ಒಂದು ಭಾಷಾ ಸಮುದಾಯದ ಜನರಿಗೆ ಈ ಸಮೀಕ್ಷೆಯಿಂದ ಬೇರೆ ಏನು ಲಾಭ ಅಂದರೆ, ಆ ಭಾಷೆಯನ್ನು ಮಾತನಾಡುವ ಜನರಿಗೆ ಸಾಮಾಜಿಕ-ಸಾಂಸ್ಕೃತಿಕ-ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವ ಯೋಜನೆಗೆ ಪೂರಕವಾದ ವ್ಯವಸ್ಥೆಯನ್ನು ರೂಪಿಸಲು ಸಾಧ್ಯವೇ? ನಿಜ, ಜನಸಾಮಾನ್ಯರ ಭಾಷೆಗಳನ್ನು ಅವುಗಳ ಸಾಮಾಜಿಕ-ಸಾಂಸ್ಕೃತಿಕ-ಭಾಷಿಕ ವಿವರಗಳನ್ನು ದಾಖಲಿಸುವರು. ಆದರೆ, ಅವರ ಸಾಂಸ್ಕೃತಿಕ-ಶೈಕ್ಷಣಿಕ ಆಚರಣೆಗಳನ್ನು ಪೂರೈಸುವ ನಿಟ್ಟಿನಲ್ಲಿ ಭಾಷಾ ನೀತಿಯನ್ನು ರೂಪಿಸುವುದಕ್ಕೆ ಎಷ್ಟ ರಮಟ್ಟಿಗೆ ಸಹಕಾರಿಯಾಗುವುದು? ಹಾಗೂ ಒಂದು ಭಾಷಾ ಸಮುದಾಯದ ಭಾಷಿಕ ಆಶೋತ್ತರಗಳನ್ನು ಮತ್ತು ನಿರೀಕ್ಷೆಗಳನ್ನು ಈಡೇರಿಸುವುದಕ್ಕೆ ಸಾಧ್ಯವಾಗಬಹುದೇ? ಕೇವಲ ಚರಿತ್ರೆಯ ದಾಖಲೆಯ ವಿವರಗಳನ್ನು ಸಂಗ್ರಹಿಸಿ ದಾಖಲೀಕರಿಸುವುದಕ್ಕೆ ಇಷ್ಟೊಂದು (ರೂ ೫೮೮ ಕೋಟಿಗಳು) ಹಣ ಖರ್ಚು ಮಾಡುವುದರ ಅಗತ್ಯವೇನು? ಎನ್ನುವುದು ಬಹು ಗಂಭೀರವಾಗಿ ಕೇಳಿಕೊಳ್ಳಬೇಕಾದ ಪ್ರಶ್ನೆ.

ಅಂದು ವಸಾಹತುಶಾಹಿ ಸಂದರ್ಭದಲ್ಲಿ ಭಾರತೀಯರ ಎಲ್ಲ ಸಾಂಸ್ಕೃತಿಕ-ಸಾಮಾಜಿಕ-ರಾಜಕೀಯ ವಿವರಗಳನ್ನು ಅರ್ಥೈಯಿಸಿಕೊಳ್ಳುವ ಜರೂರತ್ತು ಇತ್ತು. ಅದಕ್ಕೆ ಸ್ಪಷ್ಟ ರಾಜಕೀಯ ಸಮರ್ಥನೆಯು ಇತ್ತು. ಆದರೆ, ಇವತ್ತಿನ ಈ ಸಮೀಕ್ಷೆಗೆ

ಕೋಷ್ಟಕ –೧

ಸಮೀಕ್ಷೆಯ ವಿವರಗಳು	ಮಾತೃ ಭಾಷೆಗಳ ಸಂಖ್ಯೆ	ಜನಸಂಖ್ಯೆ	ಉಪಭಾಷೆಗಳ ಸಂಖ್ಯೆ	ಅವರ್ಗೀಯ ಭಾಷೆಗಳ ಸಂಖ್ಯೆ
ಗ್ರೀಯರ್‌ಸನ್‌ರ ಸಮೀಕ್ಷೆ	೧೭೯	–	೫೪೪	–
೧೯೨೧ರ ಜನಗಣತಿ	೧೮೮	–	೪೯	–
೧೯೬೧ ರ ಜನಗಣತಿ	೧೮೪	ಹತ್ತು ಸಾವಿರಕ್ಕೂ ಹೆಚ್ಚು ಜನ*	೧೬೫೨*	೫೨೭
೧೯೮೧ ರ ಜನಗಣತಿ	೧೧೨	ಹತ್ತು ಸಾವಿರಕ್ಕೂ ಹೆಚ್ಚು ಜನ*	–	–
ಪೀಪಲ್ಸ್ ಆಫ್ ಇಂಡಿಯಾ ಯೋಜನೆ (೧೯೮೦-೯೦)	೭೫	–	೩೨೫	–

ಒಟ್ಟು ೧೫೭೯ ಮಾತೃ ಭಾಷೆಗಳಿವೆ. ೨೧೬ಮಾತೃಭಾಷೆಗಳನ್ನು ಹತ್ತು ಸಾವಿರಕ್ಕೂ ಹೆಚ್ಚು ಜನ ಮಾತನಾಡುವವರು.

ಕೋಷ್ಟಕ –೧

೧. *ಭಾಷೆ-ಉಪಭಾಷೆಗಳು ಸೇರಿ ೧೬೫೨. ಇವುಗಳನ್ನು ಐದು ಭಾಷಾ ಪರಿವಾರಗಳನ್ನಾಗಿ ವರ್ಗೀಕರಿಸಲಾಗಿದೆ. ಆದರೆ ಮೂಲಭೂತವಾಗಿ ನಾಲ್ಕು ಭಾಷಾ ಪರಿವಾರಗಳನ್ನು ಗುರುತಿಸಬಹುದು ೧.ದ್ರಾವಿಡನ್ ೨. ಇಂಡೊ-ಆರ್ಯನ್ ೩.ಆಷ್ಟ್ರೋ-ಏಷ್ಯಾಟಿಕ್ ೪.ಟಿಬೆಟೋ-ಬರ್ಮನ್.೨.* ಹತ್ತು ಸಾವಿರಕ್ಕೆ ಇರುವ ಮಹತ್ವವೇನೆಂಬುದು ಗೊತ್ತಿಲ್ಲ.

ಯಾವುದೇ ರಾಜಕೀಯ ಲಾಭಕ್ಕಾಗಿ ಮಾಡುವ ಅಗತ್ಯವಿಲ್ಲ. ಹಾಗಂತ, ಭಾಷಾ ಸಮುದಾಯದ ಎಲ್ಲ ನಿರೀಕ್ಷೆಗಳನ್ನು ಈಡೇರಿಸುವ ಇರಾದೆಯು ಈ ಸಮೀಕ್ಷೆಯ ಪ್ರಣಾಲಿಕೆಯಲ್ಲಿಲ್ಲ. ಆದರೆ ಒಂದು ಸಮಾಧಾನದ ಸಂಗತಿಯೇನೆಂದರೆ, ಉಪೇಕ್ಷಿತ ಜನ ಸಮುದಾಯದ ಭಾಷೆಗಳ ಅಂಕಿ-ಸಂಖ್ಯೆ, ವರ್ಗೀಕರಣ, ಕೊಡುಕೊಳ್ಳುವಿಕೆ, ಪ್ರಭಾವ, ಪ್ರೇರಣೆ, ಸಾಮಾಜಿಕ ಭಾಷಾ ಶಾಸ್ತ್ರೀಯ-ಜಾನಪದೀಯ ಹಾಗೂ ಸಂಸ್ಕೃತಿಯ-ಭೌತಿಕ ಮಾನವ ಶಾಸ್ತ್ರದ ವಿವರಗಳನ್ನು ದಾಖಲಿಸುವುದು. ಹೌದು, ಅವಸಾನದಂಚಿನಲ್ಲಿರುವ ಮತ್ತು ಬುಡಕಟ್ಟು ಇನ್ನೂ ಮುಂತಾದ ಭಾಷೆಗಳ ಡಾಕುಮೆಂಟೇಶನ್ ಮಾಡುವುದು ಬಹಳ ಪ್ರಮುಖವಾದ ಕೆಲಸ. ಇದರಿಂದ ಇನ್ನೊಂದು ಭಾರತದ ದರ್ಶನವಾಗುವುದು. ಆದರೆ ಇದು ಕೇವಲ ಚಾರಿತ್ರಿಕವಾಗಿ ಲಾಭ ತರುವಂತಹದು ಮತ್ತು ಭಾರತದ ಭಾಷಿಕ-ಸಾಂಸ್ಕೃತಿಕ ವೈವಿಧ್ಯತೆಯನ್ನು ಅರ್ಥೈಯಿಸಿಕೊಳ್ಳಬಹುದು.

ಶೈಕ್ಷಣಿಕ-ಸಾಮಾಜಿಕ-ಸಾಂಸ್ಕೃತಿಕವಾಗಿ ಹೆಚ್ಚೇನು ಮಾಡಲಾರದು ಎನ್ನುವ ಅಸಮಾಧಾನ. ಭಾರತೀಯ ಭಾಷಾ ನೀತಿ, ಯೋಜನೆ, ಶೈಕ್ಷಣಿಕ ಪಠ್ಯಕ್ರಮ ರೂಪಿಸುವ ನಿಟ್ಟಿನಲ್ಲಿ ಈ ಯೋಜನೆಯನ್ನು ಬಳಸಿಕೊಳ್ಳಲು ಸಾಧ್ಯವಾದರೆ ಈ ಯೋಜನೆ ಇನ್ನೂ ಹೆಚ್ಚು ಸಫಲವಾಗಬಹುದು. ಯಾಕೆಂದರೆ, ಈ ದೇಶದ ಹಲವು ಜಾತಿ, ಜನಾಂಗ, ಧರ್ಮ, ಬುಡಕಟ್ಟು ಭಾಷಾ ಸಮುದಾಯಕ್ಕೆ ಅವರದೇ ಭಾಷೆಯ ಮೂಲಕ ಅವರ ಸಾಂಸ್ಕೃತಿಕ ಅಗತ್ಯ ಮತ್ತು ಅಭಿವ್ಯಕ್ತಿಯನ್ನು ರೂಪಿಸಿಕೊಡುವ ಜರೂರತ್ತು ಯಾಕಿಲ್ಲ ಎನ್ನುವುದನ್ನು ಈ ಭಾರತದ ಭಾಷೆಗಳ ಹೊಸ ಸಮೀಕ್ಷೆಯಿಂದ ಕಂಡುಕೊಳ್ಳಬೇಕಾಗಿದೆ. ಈ ಸಮೀಕ್ಷೆಯು ಭಾಷಾವಾರು ಪ್ರಾಂತಗಳ ಪುನರ್ ವಿಂಗಡಣೆಯಂತಹ ವಿಚಾರವಾಗಿ ಆಸಕ್ತಿ ತೋರದೆ ಇರುವುದು ಸಂತೋಷದ ವಿಷಯ. ಯಾಕೆಂದರೆ, ಯಾವುದೆ ಭಾಷಾ-ಪ್ರಾಂತೀಯ ದ್ವೇಷ-ಪ್ರೀತಿ/ ಮೋಹವನ್ನು ಹುಟ್ಟುಹಾಕುವ ಕಾರ್ಯ ಇದರಿಂದ ಆಗದೆ ಇರುವುದು ಸಾಂಸ್ಕೃತಿಕ ರಾಷ್ಟ್ರೀಯತೆಯ ಸ್ವಾಸ್ಥ್ಯವನ್ನು ಕಾಪಾಡಬಹುದು.

ಇಷ್ಟೊಂದು ಚರ್ಚೆ ಮಾಡುವುದರ ಅಗತ್ಯವೇನೆಂದರೆ, ಸಾವಿರಾರು ಭಾಷೆಗಳನ್ನು ಮಾತನಾಡುವ ಸಂದರ್ಭದ ಒಂದು ರಾಷ್ಟ್ರದಲ್ಲಿ ಕೆಲವೆ ಕೆಲವು ಭಾಷೆಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡಿರುವ ಸನ್ನಿವೇಶದಲ್ಲಿ ಉಪೇಕ್ಷಿತ ಬುಡಕಟ್ಟು ಜನರ ಭಾಷೆಗಳಿಗೆ ಯಾವ ಪ್ರಾಮುಖ್ಯತೆಯನ್ನು ಈ ಸಮೀಕ್ಷೆಯ ಪ್ರಯತ್ನದಿಂದ ಒದಗಿಸಿಕೊಡಬಹುದು. ಯಾಕೆಂದರೆ, ಶಾಸ್ತ್ರೀಯ ಭಾಷೆಯಂತಹ ಸ್ಥಾನಮಾನ ನೀಡುವ, ರಾಷ್ಟ್ರಭಾಷೆ ಎನ್ನುವ ಹಣೆ ಪಟ್ಟಿಯನ್ನು ಕಟ್ಟುವ ಮತ್ತು ಸಂಪರ್ಕ ಭಾಷೆಯಾಗಿ ಇನ್ನೊಂದನ್ನು ರೂಢಿಸಿಕೊಳ್ಳುವ ಸಂದರ್ಭದಲ್ಲಿ ಸಣ್ಣ ಪ್ರಮಾಣದ ಜನಸಮೂಹ ಮಾತನಾಡುವ ಭಾಷೆಯ ಗತಿ ಏನು? ನಿಜ, ಆ ಭಾಷೆಗಳನ್ನು ಗುರುತಿಸುವುದು ಅವುಗಳ ಭಾಷಿಕ-ಸಾಂಸ್ಕೃತಿಕ ವಿವರಗಳನ್ನು ದಾಖಲಿಸುವುದು ನಿಜವಾದರೂ, ಒಂದು ಭಾಷೆಯ ಸಂಗೋಪನಕ್ಕೆ ಬೇಕಾದ ಪೂರಕ ವ್ಯವಸ್ಥೆಯನ್ನು ಮಾಡುವುದು ಭಾಷಿಕ ಬಹುತ್ವತೆಯನ್ನು ಕಾಪಾಡುವ ಜವಾಬ್ದಾರಿಯಾಗಿದೆ. ಇದನ್ನೂ ಹೊರತುಪಡಿಸಿ ಏನು ಮಾಡಲಿಕ್ಕೆ ಸಾಧ್ಯ ಎನ್ನುವುದರ ಸಾಧ್ಯತೆಗಳನ್ನು ಗುರುತಿಸಬಹುದು. ಯಾಕೆಂದರೆ, ಇವತ್ತಿನ ಸಾಮಾಜಿಕ-ರಾಜಕೀಯ ಸಂದರ್ಭದಲ್ಲಿ ಭಾಷೆಯ ಪಾತ್ರ ಅಗಾಧವಾದುದು. ಒಂದು ಸಮುದಾಯದ ಜನರ ಬದುಕನ್ನು ರೂಪಿಸಿಕೊಳ್ಳಲು ಬೇಕಾದ ಅನುಕೂಲತೆಗಳನ್ನು ದಕ್ಕಿಸಿಕೊಳ್ಳುವ ಸಂದರ್ಭಕ್ಕೆ ಭಾಷೆ ಅಗತ್ಯ. ಅಂದರೆ, ಶಿಕ್ಷಣ, ಉದ್ಯೋಗ, ರಾಜಕಾರಣ ಮುಂತಾದವುಗಳ ಸನ್ನಿವೇಶದಲ್ಲಿ ಭಾಷೆಯ ಪಾತ್ರ ಬಹಳ ಪ್ರಮುಖವಾದುದು. ಕೊನೆಯಪಕ್ಷ ಒಂದು ಸಮುದಾಯದ ಸಾಂಸ್ಕೃತಿಕ ಚಹರೆಗಳನ್ನು ಕಾಪಾಡಿಕೊಳ್ಳುವ ವಾತಾವರಣವಾದರೂ ನಿರ್ಮಾಣವಾಗಬೇಕು. ಅದೇನೆಂದರೆ, ಭಾರತ ದೇಶದ ಭಾಷೆ, ಭಾಷಾ ಭಿನ್ನತೆ, ವೈವಿಧ್ಯತೆ, ಅನನ್ಯತೆಯನ್ನು ಕಾಪಾಡುವ ಮತ್ತು ಮರು ಶೋಧಿಸಿಕೊಳ್ಳುವ ಅಗತ್ಯ ಸೃಷ್ಟಿಯಾಗಬೇಕು.

ಈ ಸಮೀಕ್ಷೆಯು ಜಾಗತೀಕರಣ ಮತ್ತು ಇಂಗ್ಲಿಷಿನ ಯಜಮಾನಿಕೆಗೆ, ಇದು ಪ್ರತಿಕ್ರಿಯಿಸಬಹುದು ಎನ್ನುವುದು ಕೂಡ ಕುತೂಹಲದಾಯಕವಾದ್ದು. ಯಾಕೆಂದರೆ, ಸಾಂಸ್ಕೃತಿಕ-ಭಾಷಿಕ ಆಯಾಮಗಳನ್ನು ಗುರುತಿಸುವುದರ ಮೂಲಕ ಅಂಥ್ರೊಪೊಮೆಟ್ರಿಕ್ ದತ್ತವನ್ನು ಸಂಗ್ರಹಿಸಬಹುದು. ಇದರಿಂದಾಗಿ ಭಾರತದ ಎಲ್ಲ ಭಾಷಾಸಮುದಾಯಗಳ ಜೈವಿಕ-ಭಾಷಿಕ (Boi-Linguistic) ಮತ್ತು ಸಾಂಸ್ಕೃತಿಕ ವಿವರಗಳು ದಕ್ಕುವವು. ಈ ವಿವರಗಳ ಮುಖೇನ ಇಕೊ-ಕಲ್ಚರಲ್ ಹಾಗೂ ಪ್ರದೇಶ, ಪರಿಸರ ಭಾಷೆ/ಸ್ಥಳೀಯ ಸಂಸ್ಕೃತಿಗಳ ಅಂತರ್‌ಸಂಬಂಧಗಳನ್ನು ಗುರುತಿಸಿಕೊಳ್ಳಬಹುದು. ಈ ಗುರುತಿಸಿಕೊಳ್ಳುವ ಪ್ರಕ್ರಿಯೆಯಲ್ಲಿ, ಭಾರತದ ಸಾಂಸ್ಕೃತಿಕ-ಭಾಷಿಕ ವೈವಿಧ್ಯತೆ, ಸಾಮಿಪ್ಯ, ಸಹಯೋಗ ಮತ್ತು ಸಾಮರಸ್ಯವನ್ನು ಮನಗಾಣಬಹುದು. □

ಶೈಕ್ಷಣಿಕ-ಸಾಮಾಜಿಕ-ಸಾಂಸ್ಕೃತಿಕವಾಗಿ ಹೆಚ್ಚೇನು ಮಾಡಲಾರದು ಎನ್ನುವ ಅಸಮಾಧಾನ. ಭಾರತೀಯ ಭಾಷಾ ನೀತಿ, ಯೋಜನೆ, ಶೈಕ್ಷಣಿಕ ಪಠ್ಯಕ್ರಮ ರೂಪಿಸುವ ನಿಟ್ಟಿನಲ್ಲಿ ಈ ಯೋಜನೆಯನ್ನು ಬಳಸಿಕೊಳ್ಳಲು ಸಾಧ್ಯವಾದರೆ ಈ ಯೋಜನೆ ಇನ್ನೂ ಹೆಚ್ಚು ಸಫಲವಾಗಬಹುದು. ಯಾಕೆಂದರೆ, ಈ ದೇಶದ ಹಲವು ಜಾತಿ, ಜನಾಂಗ, ಧರ್ಮ, ಬುಡಕಟ್ಟು ಭಾಷಾ ಸಮುದಾಯಕ್ಕೆ ಅವರದೇ ಭಾಷೆಯ ಮೂಲಕ ಅವರ ಸಾಂಸ್ಕೃತಿಕ ಅಗತ್ಯ ಮತ್ತು ಅಭಿವ್ಯಕ್ತಿಯನ್ನು ರೂಪಿಸಿಕೊಡುವ ಜರೂರತ್ತು ಯಾಕಿಲ್ಲ ಎನ್ನುವುದನ್ನು ಈ ಭಾರತದ ಭಾಷೆಗಳ ಹೊಸ ಸಮೀಕ್ಷೆಯಿಂದ ಕಂಡುಕೊಳ್ಳಬೇಕಾಗಿದೆ. ಈ ಸಮೀಕ್ಷೆಯು ಭಾಷಾವಾರು ಪ್ರಾಂತಗಳ ಪುನರ್ ವಿಂಗಡಣೆಯಂತಹ ವಿಚಾರವಾಗಿ ಆಸಕ್ತಿ ತೋರದೆ ಇರುವುದು ಸಂತೋಷದ ವಿಷಯ.

ದೇಸಿ ಅಂಗಡಿಯಲ್ಲಿ ಕನ್ನಡ ಪುಸ್ತಕಗಳ ರಿಯಾಯಾತಿ ಮಾರಾಟ!!

ಪ್ರಕಾಶಕರು ನಮಗೆ ನೀಡುವ ಕಮಿಷನ್ನಿನಲ್ಲಿ, ಅಂಗಡಿಯ ನಿರ್ವಹಣೆಯ ಕನಿಷ್ಠ ಖರ್ಚನ್ನು ಕಳೆದು, ಮಿಕ್ಕಿದ್ದನ್ನು ನಿಮಗೇ ಬಿಟ್ಟುಕೊಡುತ್ತೇವೆ. ಕೊಂಡು ಓದುವವರಿಗೆ ಪ್ರೋತ್ಸಾಹ ನೀಡಬೇಕೆಂಬುದು ದೇಸಿ ಸಂಸ್ಥೆಯ ಉದ್ದೇಶ. ಕನ್ನಡ ಪುಸ್ತಕಗಳ ರಿಯಾಯಾತಿ ಮಾರಾಟದ ಈ ಯೋಜನೆಯು ದೇಸಿಯ ಎಲ್ಲಾ ಮಾರಾಟ ಮಳಿಗೆಗಳಲ್ಲೂ ಲಭ್ಯವಿರುತ್ತದೆ.

ಬನ್ನಿ ಕನ್ನಡ ಪುಸ್ತಕಗಳನ್ನು ಕೊಂಡು ಓದಿ!
ಪುಸ್ತಕ ಚಳವಳಿಯನ್ನು ಬೆಳೆಸಿ!

ದೇಸಿ 27, ಪಟಾಲಮ್ಮ ಗುಡಿ ಬೀದಿ,
ಸೌತ್ ಎಂಡ್ ಸರ್ಕಲ್,
ಬಸವನಗುಡಿ, ಬೆಂಗಳೂರು-560004
ಫೋನ್ : 080 – 26576669

ತಲ್ಲಣಗಳ ಕವಿ ಢಸಾಳ

ಹಾಸಿಗೆ ಹಿಡಿದ ಚಿರತೆ!

ನಾಮ್‌ದೇವ್ ಢಸಾಳ ಎಂಬ 'ಚಿರತೆ' ಹಾಸಿಗೆ ಹಿಡಿದಿದೆ. ಎಪ್ಪತ್ತರ ದಶಕದಲ್ಲಿ ದಲಿತ್ ಪ್ಯಾಂಥರ್ಸ್ ಚಳವಳಿಯನ್ನು ಸಂಘಟಿಸುವ ಮೂಲಕ ಆಳುವ ವರ್ಗಕ್ಕೆ ಸಿಂಹಸ್ವಪ್ನವಾಗಿದ್ದ ಢಸಾಳ್ ಭಾರತೀಯ ಕಾವ್ಯ ಕ್ಷೇತ್ರದ ಬಹುದೊಡ್ಡ ಪ್ರತಿಭೆ. ಕರ್ನಾಟಕ ದಲಿತ ಚಳವಳಿಗೆ ಹಾಗೂ ದಲಿತ ಸಾಹಿತಿಗಳಿಗೆ ಢಸಾಳರ ಪ್ರೇರಣೆ ಬಹುದೊಡ್ಡದು. ಕಾಲಾನಂತರದಲ್ಲಿ ಅವರ ರಾಜಕೀಯ ನಿಲುವುಗಳ ಬಗ್ಗೆ ಗಂಭೀರ ಭಿನ್ನಾಭಿಪ್ರಾಯಗಳು ವ್ಯಕ್ತವಾದವು. ಆದರೆ ಢಸಾಳರ ಕಾವ್ಯ ಮಾತ್ರ ಉಳ್ಳವರ ಎದೆಗೆ ಇಟ್ಟ ಸಿಡಿಗುಂಡೇ ಆಗಿತ್ತು. ಅಂಥ ಢಸಾಳ್ ಈಗ ಹಾಸಿಗೆ ಹಿಡಿದಿದ್ದಾರೆ. ಅವರು ಶೀಘ್ರ ಗುಣಮುಖರಾಗಲಿ ಎಂದು 'ಸಂವಾದ' ಹಾರೈಸುತ್ತದೆ. ಢಸಾಳರ ಬದುಕು, ಕಾವ್ಯ, ಚಳವಳಿ, ರಾಜಕೀಯ ಕುರಿತು 'ತೆಹಲ್ಕಾ' ಈಚೆಗೆ ಲೇಖನವೊಂದನ್ನು ಪ್ರಕಟಿಸಿತ್ತು. 'ಸಂವಾದ' ಓದುಗರಿಗೆಂದು ಅದನ್ನಿಲ್ಲಿ ಅನುವಾದಿಸಿ ಪ್ರಕಟಿಸುತ್ತಿದ್ದೇವೆ.

ಸತ್ಯಪ್ರಕಾಶ್ ಎಂ. ಆರ್

ಪದಗಳು ಬೆಂಕಿಯ ಕಿಡಿಯಂತೆ– ಇಲ್ಲಿ ತುಚ್ಛತನ, ಅಶ್ಲೀಲತೆ, ಕೊಳಕು ಮತ್ತು ಭೀಕರತೆ ಲಗಾಮಿಲ್ಲದೆ ಮೆರೆದಾಡುತ್ತವೆ; ಜತೆಗೆ ಮಧುರ ಗೀತೆಯೊಂದು ತಣಿಸುತ್ತದೆ. ಆತಂಕ, ಆದರ ಎರಡಕ್ಕೂ ಕಾರಣರಾದ ಕವಿ ನಾಮ್‌ದೇವ್ ಢಸಾಳ್‌ರ ಲೋಕದಲ್ಲಿ ಯಾವ ಅಂಶವೂ ನಿಮಗೆ ಸಾಂತ್ವನ ನೀಡುವುದಿಲ್ಲ. ಆದರೆ ನಿಮ್ಮನ್ನು ತಬ್ಬಿಬ್ಬುಗೊಳಿಸದೆ ಬಿಡುವುದಿಲ್ಲ. ದಲಿತ್ ಪ್ಯಾಂಥರ್ಸ್‌ನ ಸಂಸ್ಥಾಪಕ, ಬಿಕ್ಕಟ್ಟುಗಳ ಒಡನಾಡಿ ಕಾಮ್ರೇಡ್ ಹಾಗೂ ಹುಟ್ಟು ಅಸ್ಪೃಶ್ಯರಾದ ಢಸಾಳ್ ನಿಮ್ಮನ್ನು ತಲ್ಲಣಗೊಳಿಸುವ ವ್ಯಕ್ತಿ. ಸಾಮಾಜಿಕ ಬದಲಾವಣೆ ತರುವ ನಿಟ್ಟಿನಲ್ಲಿ ಪ್ರಕಾಶನ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ನವಯಾನ ಸಂಸ್ಥೆ ೧೯೭೨ರಿಂದ ೨೦೦೬ರವರೆಗಿನ ಢಸಾಳ್‌ರ ಕವನಗಳ ಇಂಗ್ಲಿಷ್ ಅನುವಾದವನ್ನು (ದಿಲಿಪ್ ಚಿತ್ರೆ ಬಹಳ ಅದ್ಭುತವಾದ ಅನುವಾದ ಮಾಡಿದ್ದಾರೆ) ಹೊರತಂದಿದೆ 'ತೆಹೆಲ್ಕಾ' ಪತ್ರಿಕೆಯ ಶ್ಯಾಮಾ ಹಲ್ದಾರ್, ಇಲ್ಲಿ ದಿಲಿಪ್ ಚಿತ್ರೆ ಮತ್ತು 'ನವಯಾನ'ದ ಎಸ್. ಆನಂದ್ ಜತೆ ಢಸಾಳ್‌ರ ಮಾಂತ್ರಿಕ ವ್ಯಕ್ತಿತ್ವದ ಬಗ್ಗೆ ಮಾತನಾಡಿದ್ದಾರೆ.

ಶ್ಯಾಮಾ: ದಿಲಿಪ್, ನೀವು ಕಳೆದ ನಾಲ್ಕು ದಶಕಗಳಿಂದ ನಾಮ್‌ದೇವ್ ಢಸಾಳ್‌ರ ಗೆಳೆಯರಾಗಿ, ಅನುವಾದಕರಾಗಿ, ಮತ್ತು ಅವರ ಬೆಂಬಲಿಗರಾಗಿದ್ದೀರ. ಢಸಾಳ್‌ರ ಕವನಗಳು ಮೊದಲ ಓದಿಗೆ ನಮ್ಮನ್ನು ತಬ್ಬಿಬ್ಬುಗೊಳಿಸುತ್ತವೆ. ಇವು ಯಾಕೆ ಇನ್ನೂ ದೇಶಾದ್ಯಂತ ಮನೆಮಾತಾಗಿಲ್ಲ?

ದಿಲಿಪ್: ಮರಾಠಿ ಭಾಷೆಯಲ್ಲಿ ನಾಮ್‌ದೇವ್ ಢಸಾಳ್ ಬಹುದೊಡ್ಡ ಕವಿ. ಆದರೆ ಮಹಾರಾಷ್ಟ್ರದ ಹೊರಗೆ ಅಪರಿಚಿತ. ಢಸಾಳ್ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಆದರೆ ಇದುವರೆಗೆ ಯಾವೊಬ್ಬ ವಿಮರ್ಶಕನೂ

ಖ್ಯಾತ ಲೇಖಕ ದಿಲಿಪ್ ಚಿತ್ರೆ (ಎಡ) ಹಾಗೂ ಪ್ರೀತಿಯ ಗೆಳೆಯರೊಬ್ಬರ ಜತೆ ನಾಮ್‌ದೇವ್ ಢಸಾಳ್

ಇವರ ಕಾವ್ಯದ ಬಗ್ಗೆ ಅನುಸಂಧಾನ ನಡೆಸಿ, ಇವರ ಅದ್ಭುತ ಕಾವ್ಯಪ್ರತಿಭೆಯನ್ನು ನಿಕಷಕ್ಕೆ ಒಡ್ಡುವ ಧೈರ್ಯ ಮಾಡಿಲ್ಲ. ನನ್ನ ಪ್ರಕಾರ ನಾಮ್‌ದೇವ್ ಢಸಾಳ್ ಇಪ್ಪತ್ತನೆಯ ಶತಮಾನದ ಮಹಾನ್ ಜಾಗತಿಕ ಕವಿಗಳಲ್ಲಿ ಒಬ್ಬರು. ಆದರೆ ಢಸಾಳ್‌ರ ಕವನಗಳು ಇನ್ನೂ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿಲ್ಲ. ಯಾಕೆಂದರೆ ಢಸಾಳ್‌ರ ಭಾಷೆಯನ್ನು ಅನುವಾದಕ್ಕೆ ಒಗ್ಗಿಸುವುದು ಕಷ್ಟ.

ಜತೆಗೆ, ಭಾರತದಲ್ಲಿ ಕಾವ್ಯಕ್ಕೆ ಪ್ರಾಧಾನ್ಯತೆ ನೀಡಿ, ನಿಯಮಿತವಾಗಿ ಕವನಗಳನ್ನು ಪ್ರಕಟಿಸುವ ಪ್ರಕಾಶನ ಸಂಸ್ಥೆ ಒಂದೂ ಇಲ್ಲ. ಇದು ಇಂಗ್ಲಿಷ್ ಭಾಷಾ ಕಾವ್ಯಕ್ಕೂ ಅನ್ವಯಿಸುತ್ತದೆ. ವಾಸ್ತವಾಂಶವೇನೆಂದರೆ, ಇಂಗ್ಲಿಷ್ ಕಾವ್ಯವನ್ನು ಪೋಷಿಸುವ ಪ್ರಕಾಶನ ಸಂಸ್ಥೆಗಳಿಗಿಂತಲೂ ಭಾರತೀಯ ಕಾವ್ಯಕ್ಕೆ ಒತ್ತು ನೀಡುವ ಪ್ರಕಾಶನ ಸಂಸ್ಥೆಗಳ ಸಂಖ್ಯೆ ಹೆಚ್ಚಿವೆ. ಅಕಸ್ಮಾತ್ ನೀವು ಇಂಗ್ಲಿಷ್ ಕವಿಗಳಾಗಿದ್ದರೆ, ನಿಮ್ಮ ಕಾವ್ಯವನ್ನು ಸಮಕಾಲೀನ ಸಾಹಿತಿಗಳು ಸ್ವೀಕರಿಸಬೇಕಿದ್ದರೆ, ನೀವು ಸಾವಿನ ಹೊಸ್ತಿಲಲ್ಲಿ ರಬೇಕು! ಆಗ, ಪ್ರಕಾಶಕರು ನಿಮ್ಮ ಆಯ್ದ ಕವನಗಳನ್ನು ಪ್ರಕಟಿಸಬಹುದು. ಇವೆಲ್ಲವುಗಳ ನಡುವೆ ಕೂಡ, 'ತೆಹೆಲ್ಕಾ'ದಲ್ಲಿ ಪ್ರಕಟವಾದ ಢಸಾಳ್‌ರ ನಾಲ್ಕು ಇಂಗ್ಲಿಷ್ ಕವನಗಳನ್ನು ಗಮನಿಸಿ, ಪ್ರಕಾಶನ ಸಂಸ್ಥೆ, ಕವನಗಳ ಅನುವಾದಕರನ್ನು ಜಾಲಾಡಿ, ಒಂದು ಹೊಸ ಕೃತಿಗೆ ಕಾರಣರಾಗುತ್ತಾರೆ. ಆದರೆ ಇಂತಹ ಎಷ್ಟು ಮಂದಿ ನಮ್ಮ ನಡುವೆ ಇದ್ದಾರೆ?

ಆನಂದ್: ಢಸಾಳ್‌ರ ಕವನವನ್ನು ನಾನು 'ತೆಹೆಲ್ಕಾ' ಪತ್ರಿಕೆಯಲ್ಲಿ ಗಮನಿಸುವ ಸಂದರ್ಭದಲ್ಲಿ ಅಂದರೆ ೨೦೦೪ರಲ್ಲಿ ಸಾಹಿತ್ಯ ಅಕಾಡೆಮಿಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ನಾಮ್‌ದೇವ್ ಢಸಾಳ್‌ರಿಗೆ ಜೀವಮಾನ ಸಾಧನೆಗಾಗಿ ಪ್ರಶಸ್ತಿ ಲಭಿಸಿತ್ತು. ದಿಲಿಪ್, ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿದ್ದದ್ದು ಆಗ ನನಗೆ ಗೊತ್ತಿರಲಿಲ್ಲ. ಆದರೆ, 'ತೆಹೆಲ್ಕಾ' ಪತ್ರಿಕೆಯಲ್ಲಿ ನಾಮ್‌ದೇವ್ ಕುರಿತು ದಿಲಿಪ್ ಬರೆದ ಲೇಖನವನ್ನು ಮಾತ್ರ ನಾನು ಓದಿದ್ದೆ. ಅದು 'ನವಯಾನ'ದ ಆರಂಭದ ದಿನಗಳು. ನಾವು ಯಾವ ಕವನ ಸಂಕಲನಗಳನ್ನು ಇನ್ನೂ ಪ್ರಕಟಿಸಿರಲಿಲ್ಲ. ಆದರೆ ನಾಮ್‌ದೇವ್‌ರ ಕವನಗಳನ್ನು ಪ್ರಕಟಿಸುವ ನಿರ್ಧಾರವನ್ನಂತೂ ನಾನು ಮಾಡಿದ್ದೆ. ಸಾಕಷ್ಟು ಶ್ರಮವಹಿಸಿ ಗೂಗಲ್ ಮೂಲಕ ದಿಲಿಪ್‌ರ ಫೋನ್ ನಂಬರ್ ಪತ್ತೆ ಹಚ್ಚಿದೆ.

ಶ್ಯಾಮಾ: ಅದು ಕವನಗಳ ಮಾಯೆ. ಕೆಲವೇ ಸಾಲುಗಳನ್ನು ಓದಿದ ಕೂಡಲೇ, ನೀವು ಅದ್ಭುತವಾದ ಕವಿಯನ್ನು ಕಂಡುಕೊಂಡು ಬಿಡುತ್ತೀರಾ.

ದಿಲಿಪ್: ಇಂತಹಾ ಅದ್ಭುತ ಭಾವನೆಗಳನ್ನು ಹಂಚಿಕೊಳ್ಳುವುದು ನಿಜವಾದ ಭಾಷಾಂತರ. ನೀವು ಮೆದುವಾಗಿ, ಗಂಭೀರವಾಗಿ, ಮತ್ತು ಮೇಧಾವಿಯಂತೆ ಅನುವಾದ ಮಾಡಬಹುದು. ಅಥವಾ ಕಾವ್ಯಾತ್ಮಕವಾಗಿ ಕೂಡ ಕಾವ್ಯಾನುಸಂಧಾನ ಮಾಡಬಹುದು. ನಾನು ಮರಾಠಿ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ತೊಡಗಿಸಿಕೊಂಡಿರುವ ಕವಿ, ಮತ್ತು ಅನುವಾದಕ್ಕೆ ಬದ್ಧನಾಗಿರುವ ಸಾಹಿತಿ. ೧೩ರಿಂದ ೨೧ನೇ ಶತಮಾನದವರೆಗಿನ ಮರಾಠಿ ಕಾವ್ಯವನ್ನು ಕಳೆದ ಐವತ್ತು ವರ್ಷಗಳಿಂದ ಇಂಗ್ಲಿಷ್ ಭಾಷೆಗೆ ತರ್ಜುಮೆ ಮಾಡುತ್ತಾ ಬಂದಿರುವೆ. ನಾಮ್‌ದೇವ್ ಕುರಿತು ಹೇಳುವುದಾದರೆ, ವಿಶ್ವದ ಮಹಾನ್ ಕವಿಗಳ ಸಾಲಿನಲ್ಲಿ ನಿಲ್ಲುವ ಶಕ್ತಿ ಮತ್ತು ಪ್ರತಿಭೆ ಇವರಿಗಿದೆ. ನನ್ನ ಈ ವಾದವನ್ನು ಸಾಬೀತುಪಡಿಸಲು ಇರುವ ಒಂದೇ ಮಾರ್ಗ, ಇಂಗ್ಲಿಷ್ ಓದುಗರಿಗೆ ನಾಮ್‌ದೇವ್‌ರನ್ನು ಅನುವಾದಿಸುವುದು.

ನಾಮ್‌ದೇವ್ ತಾವೇ ಹೇಳಿಕೊಳ್ಳುವಂತೆ, ಕಾವ್ಯ ಬಿಟ್ಟರೆ, ಇತರ ಯಾವುದೇ ಆಸಕ್ತಿ ಹೊಂದಿರದ ವ್ಯಕ್ತಿ– ಕೆಲವೊಮ್ಮೆ ನಾಮ್‌ದೇವ್ ಕಾವ್ಯವನ್ನು ಕಲ್ಲಿನಂತೆ ತೂರುತ್ತಾರೆ. ಹೀಗಾಗಿ



ಹಾಸಿಗೆ ಹಿಡಿದ ಚಿರತೆ!

ಚಳವಳಿ ಹಾಗೂ ಮರಾಠಿ ಕಾವ್ಯ ಕ್ಷೇತ್ರದ ಚುಂಬಕ ಶಕ್ತಿಯಾಗಿರುವ ದಲಿತ ಕವಿ ನಾಮ್‌ದೇವ್ ಢಸಾಳ್ ಅವರು ತೀವ್ರ ಅನಾರೋಗ್ಯದ ಕಾರಣ ಹಾಸಿಗೆ ಹಿಡಿದಿದ್ದಾರೆ. ಸದ್ಯ ಬಾಂಬೆ ಹಾಸ್ಪಿಟಲ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ನಾಮ್‌ದೇವ್ ನರ ಹಾಗೂ ಮಾಂಸಖಂಡಗಳ ದೌರ್ಬಲ್ಯಕ್ಕೆ ಸಂಬಂಧಿಸಿದ 'ಮೈಸ್ತೇನಿಯಾ ಗ್ರೇವಿಸ್' ಕಾಯಿಲೆಯಿಂದ ಬಳಲುತ್ತಿದ್ದಾರೆ.

ಈ ಕಾಯಿಲೆ ಅವರಿಗೆ 1980ರ ದಿನಗಳಿಂದಲೂ ಇದ್ದು ಈಗ ಉಲ್ಬಣಿಸಿದೆ. ದಿಢೀರ್ ಮಾಂಸಖಂಡ ವೈಫಲ್ಯದಿಂದ ಉಸಿರಾಟದ ತೊಂದರೆ, ಅಸಮರ್ಪಕ ಹೃದಯ ಬಡಿತ, ಮತ್ತಿತರ ಹಲವು ಆರೋಗ್ಯ ಸಮಸ್ಯೆಗಳನ್ನು ಅವರು ಎದುರಿಸುತ್ತಿದ್ದಾರೆ. ಬಾಂಬೆ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರದ ಐಸಿಯು ವಿಭಾಗದಲ್ಲಿ ಫಿಸಿಯೋತೆರಪಿ ತಜ್ಞರು ಹಾಗೂ ಶಸ್ತ್ರಚಿಕಿತ್ಸಾ ತಜ್ಞರಿಂದ ಚಿಕಿತ್ಸೆ ಪಡೆಯುತ್ತಿದ್ದರೂ ಅವರ ಸದ್ಯದ ಸ್ಥಿತಿ ಗಂಭೀರವಾಗಿದೆ.

ಸದ್ಯ ನಾಮ್‌ದೇವ್ ಚಿಕಿತ್ಸೆಗೆ ಅಪಾರ ಹಣದ ಅಗತ್ಯವಿದ್ದು ಕವಯತ್ರಿಯೂ ಆಗಿರುವ ಪತ್ನಿ ಮಲ್ಲಿಕಾ ಈಗಾಗಲೇ ಒಂದಷ್ಟು ಸಂಗ್ರಹಿಸಿದ್ದಾರೆ. ಉಳಿದ ಹಣವನ್ನು ಸಂಗ್ರಹಿಸಲಾಗುತ್ತಿದೆ. ಮಲ್ಲಿಕಾ ಅವರನ್ನು ಸಂಪರ್ಕಿಸಬಹುದಾದ ವಿಳಾಸ: ಮಲ್ಲಿಕಾ ಅಮರ್ ಶೇಖ್, ಕೇರಾಫ್ ನಾಮ್‌ದೇವ್ ಢಸಾಳ್, ನಂ. 404/ಬಿ, ಫ್ಲೋರಿಡಾ, 4ನೇ ಮಹಡಿ, ಶಾಸ್ತ್ರಿನಗರ್, ಅಂಧೇರಿ ವೆಸ್ಟ್, ಮುಂಬೈ–400053.

ಇವು ಜೀವಿಕಾಳಗಗಳ ಅಸ್ತ್ರಗಳೂ ಹೌದು. ಕವಿಗಳು ಯಾವ ಮೂಲದಿಂದಲಾದರೂ ಹುಟ್ಟಬಹುದು. ಹೀಗೆ ಹೊರ ಹೊಮ್ಮುವ ಕವಿಗಳು ತಮ್ಮ ಮೂಲದ ಕೆಲವು ತಲ್ಲಣಗಳನ್ನು ಹೊರ ಜಗತ್ತಿನ ಮುಂದಿಡುತ್ತಾರೆ– ನಾಮ್‌ದೇವ್ ಕೂಡ ಈ ಕೆಲಸವನ್ನು ಅದ್ಭುತವಾಗಿ ಮಾಡಿದ್ದಾರೆ. ನಾಮ್‌ದೇವ್ ಕವಿ ಮಾತ್ರವಲ್ಲ; ಓರ್ವ ಅತ್ಯುತ್ತಮ ಹೋರಾಟಗಾರರೂ ಹೌದು. ಇತರರ ಬೆಂಬಲವಿಲ್ಲದೆ, ದಲಿತರು ದೇಶದ ಯಾವುದೇ ಭಾಗದಲ್ಲಿಯೂ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂಬ ಅಂಶ, ಎಲ್ಲ ಸಣ್ಣ–ದೊಡ್ಡ ದಲಿತ ನಾಯಕರಂತೆ, ನಾಮ್‌ದೇವ್‌ರಿಗೆ ಕೂಡ ಗೊತ್ತು. ದಲಿತರು ಹೆಚ್ಚೆಂದರೆ, ಒತ್ತಡದ ಗುಂಪುಗಳಾಗಿ ಮಾತ್ರ ಕಾರ್ಯ ನಿರ್ವಹಿಸಬಹುದು.

ಆನಂದ್: ಮಾಯಾವತಿ ಬರುವವರೆಗೆ ಮಾತ್ರ ಪರಿಸ್ಥಿತಿ ಈ ರೀತಿ ಇತ್ತು.

ದಿಲಿಪ್: ಮಾಯಾವತಿ ಕೂಡ ತನ್ನ 'ರೈನ್ಬೋ ಒಕ್ಕೂಟ'ದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲೇಬೇಕಾಯಿತು– ಆನೆ, ಗಣಪತಿಯಾಗಿ ಬದಲಾಗಬೇಕಾಯಿತು. ಇಂತಹ ನಿದರ್ಶನಗಳು ಮುಂದುವರೆಯುತ್ತಲೇ ಇರುತ್ತದೆ, ಆದರೆ ಇದರಿಂದ ದಲಿತರ ಸ್ಥಿತಿಗತಿಯ ಬಗ್ಗೆ ಆತುರದ ನಿರ್ಧಾರಗಳನ್ನು ತಳೆಯುವುದು ಬೇಡ. ಯಾವುದೇ ಅಲ್ಪಸಂಖ್ಯಾತ ಸಮುದಾಯ ಭಾರತದಲ್ಲಿ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ– ವಾಸ್ತವವಾಗಿ, ಬಹುಸಂಖ್ಯಾತರಿಗೂ ಇದು ಸಾಧ್ಯವಾಗಿಲ್ಲ. ದೇವರ ಕೃಪೆಯಿಂದ ಹಿಂದೂಗಳು ಕೂಡ ಸಂಪೂರ್ಣ ಬಹುಮತ ಹೊಂದಿಲ್ಲ. ನಮ್ಮದು ಅಲ್ಪಸಂಖ್ಯಾತರ ದೇಶ. ನಾಮ್‌ದೇವ್ ಕಾವ್ಯ ಇಂತಹ ಅಲ್ಪಸಂಖ್ಯಾತನೋರ್ವನ ದನಿ; ತನ್ನ ಹಳ್ಳಿಗಾಡಿನ ಮೂಲದಿಂದ ಕಿತ್ತೊಗೆಯಲ್ಪಟ್ಟು, ನಗರದಲ್ಲಿ ಯಾವ ಹಕ್ಕೂ ಇಲ್ಲದೆ, ಮುಂಬೈನಂತಹ ಬೃಹತ್ ನಗರದಲ್ಲಿ ಏಳುವರ್ಷದ ಹರೆಯದಲ್ಲಿ ನೆಲೆಗೊಂಡು, ಯಾರೂ ಗಮನಿಸಲೂ ಹೋಗದ ಭೂಗತ ಲೋಕದ ದನಿ.

ಹತ್ತೊಂಬತ್ತನೆಯ ಶತಮಾನದಲ್ಲಿ ಫ್ರೆಂಚ್ ಕವಿ ಬೋದಿಲೇರ್ ಪ್ಯಾರಿಸ್ ನಗರದ ಬಗ್ಗೆ ಕಾವ್ಯ ಬರೆದ. ಈತ 'ಫ್ಲವರ್ಸ್ ಆಫ್ ಈವಿಲ್' ಮೂಲಕ ನಗರಕೇಂದ್ರಿತ ಕಾವ್ಯಕ್ಕೆ ನಾಂದಿ ಹಾಡಿದ. ಬೋದಿಲೇರ್, ಅಧಃಪತನದ ಕುರಿತು ಬರೆದ. ಬೂರ್ಜ್ವಾ ವರ್ಗಕ್ಕೆ ಸೇರಿದ ಬೋದಿಲೇರ್, ತನ್ನ ವರ್ಗದ ಹಂಗನ್ನು ತೊರೆಯಲು ಯತ್ನಿಸಿದವ. ಆದರೆ ನಾಮ್‌ದೇವ್ ನಿರ್ಗತಿಕ. ಆತ ಈಗಾಗಲೇ ವರ್ಗರಹಿತನಾಗಿದ್ದಾನೆ. ಡಾಂಟೆ ಕೂಡ ತನ್ನ 'ಕಮಿಡಿಯಾ'ನಲ್ಲಿ ನಗರಗಳನ್ನು ಕುರಿತು ನೇರವಾಗಿ ಹೇಳದೆ ಹೋದರೂ, ಸ್ವರ್ಗ, ಇಹಲೋಕ ಮತ್ತು ನರಕ ಎಂಬ ರೂಪಕಗಳ ಮೂಲಕ ತನ್ನ ಸಮಕಾಲೀನ ಜಗತ್ತಿನ ಬಗ್ಗೆ ವಿಮರ್ಶಿಸಿರುವುದು ಸ್ಪಷ್ಟವಾಗುತ್ತದೆ. ಡಾಂಟೆಯ ಮಾದರಿಯಲ್ಲಿ, ನೀವು 'ಇನ್ಫರ್ನೋ'ದಿಂದ ಆರಂಭಿಸಿ, 'ಪರ್ಗಟೋರಿಯೋ'ನಲ್ಲಿ ಮುಂದುವರೆದು, 'ಪ್ಯಾರಡಿಸೋ' ದರ್ಜೆಗೇರಿಸಲ್ಪಡುತ್ತೀರ. ಅದೇ ರೀತಿ, ಮಹಾಕಾವ್ಯ ಹಾಗೂ ಪುರಾಣ, ಎರಡರ ಕಾವ್ಯಲಕ್ಷಣವನ್ನು ಮುಂಬೈ ನಗರಕ್ಕೆ ಕೊಡುವಂತಹ ಕವಿ ನಾಮ್‌ದೇವ್. ತನ್ನ ಕಾವ್ಯಲೋಕದ ಹೃದಯ ಭಾಗದಲ್ಲಿ ಮಧ್ಯ ಮುಂಬೈ ಬಳಿಯ 'ರೆಡ್ ಲೈಟ್' ಪ್ರದೇಶ 'ಗೋಲಪೀಠ'ವನ್ನು ಪ್ರತಿಷ್ಠಾಪಿಸುತ್ತಾನೆ. ಇದು ಯಾರೂ ಭೇದಿಸಲಾಗದ ಜಗತ್ತು. ಆದರೆ, ನಾಮ್‌ದೇವ್‌ರಂತಹ ಕವಿ ಮಾತ್ರ, ಒಳಗಿನಿಂದಲೇ ಈ ಜಗತ್ತನ್ನು ಬೆಳಗುತ್ತಾರೆ. ೧೯೭೨ರಲ್ಲಿ ಪ್ರಕಟವಾದ 'ಗೋಲಪೀಠ' ನನ್ನ ಪ್ರಕಾರ ವಿಶ್ವಕಾವ್ಯ ಪ್ರಪಂಚದಲ್ಲಿ ಒಂದು ಅದ್ಭುತವಾದ ಮೈಲಿಗಲ್ಲು.

ಶ್ಯಾಮಾ: ದಲಿತ ನಾಯಕನಾಗಿ ನಾಮ್‌ದೇವ್ ಸಾಧನೆಯ ಬಗ್ಗೆ ಮಾತನಾಡೋಣ ಆನಂದ್, ಶಿವಸೇನಾದೊಂದಿಗಿನ

ನಾಮ್‌ದೇವ್‌ರ ಒಪಂದದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಆನಂದ್: 'ಓಹ್, ಈತ ಕೂಡ ಶಿವಸೇನಾ ಜತೆ ಗುರುತಿಸಿಕೊಂಡಿಲ್ಲವೇ?' ಎಂಬಂತಹ ಪ್ರತಿಕ್ರಿಯೆಗಳನ್ನು ಕೇಳಿ ನನಗೆ ತೀರ ಇರಿಸು ಮುರಿಸಾಗುತ್ತದೆ. ಜನ ಪತ್ರಿಕೆಗಳನ್ನು ಹೆಚ್ಚು ಓದುತ್ತಾರೆ. ಕಾವ್ಯವನ್ನಲ್ಲ.

ದಿಲಿಪ್: ನಾಮ್‌ದೇವ್ ಶಿವಸೇನಾ ಜತೆಗಿಲ್ಲ. ಇದು ಸತ್ಯಾಂಶವಲ್ಲ. ದಲಿತ ಪ್ಯಾಂಥರ್ಸ್ ಪಕ್ಷ ಶಿವಸೇನಾ ಪಕ್ಷಕ್ಕೆ ಬೆಂಬಲ ನೀಡಿತ್ತಷ್ಟೆ. ಆದರೆ, ಮುಂಬೈ ನಗರದಲ್ಲಿ ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ದಲಿತ ಪ್ಯಾಂಥರ್ಸ್ ಸಿಪಿಎಂಗೆ ಬೆಂಬಲ ನೀಡಿತ್ತು. ಇದು ಭಾರತೀಯ ರಾಜಕಾರಣದ ವಸ್ತುಸ್ಥಿತಿ. ನಾಮ್‌ದೇವ್ ಢಸಾಳ್‌ರನ್ನು ಮಾತ್ರ ಯಾಕೆ ಪಟ್ಟು ಮಾಡಿ ತೋರಿಸುತ್ತೀರಾ? ಈತ ದಲಿತನೆಂಬ ಕಾರಣದಿಂದಲೇ? ಮಾಯಾವತಿಯನ್ನು ಮಾತ್ರ ಯಾಕೆ ಗುರುತಿಸುತ್ತೀರಾ? ಆಕೆ ಕೂಡ ದಲಿತಳೆಂಬ ಕಾರಣದಿಂದಲೇ? ಇದು ಎಲೀಟ್ ಪತ್ರಿಕೆಗಳ ಅಪಾಡಘಾತಿ ಧೋರಣೆ. ನಾಮ್‌ದೇವ್ ಅದ್ಭುತ ಕಾವ್ಯ ಪ್ರತಿಭೆಯನ್ನು ಮರೆಮಾಚಲು. ಈ ಅಂಶವನ್ನು ಬಳಸಿಕೊಳ್ಳುವುದಂತೂ ನನಗೆ ವಿಪರೀತ ಕೋಪ ತರಿಸುವ ವಿಷಯ.

ಆನಂದ್: ನನಗೆ ತಿಳಿದಿರುವಂತೆ, ನಾಮ್‌ದೇವ್ 'ಸಾಮ್ನಾ' (ಶಿವಸೇನಾದ ಮುಖವಾಣಿ) ಪತ್ರಿಕೆಗೆ ಬರೆಯುತ್ತಾರೆ. ಶಿವಸೇನಾ ಜತೆಗಿರುವುದಕ್ಕೂ, ಪಕ್ಷದ ಪತ್ರಿಕೆಗೆ ಬರೆಯುವುದಕ್ಕೂ ಸ್ವಲ್ಪ ವ್ಯತ್ಯಾಸವಿದೆ. ಆದರೆ, ನೀವು ಏನನ್ನು ಬರೆಯುತ್ತೀರಾ ಎನ್ನುವುದು ಕೂಡ ಮುಖ್ಯವಾಗುತ್ತದೆ. ನನಗೆ ತಿಳಿದ ಮಟ್ಟಿಗೆ, 'ಸಾಮ್ನಾ'ದ ಲೇಖನಗಳಲ್ಲಿ ಕೂಡ ನಾಮ್‌ದೇವ್ ತಮಗೆ ಪ್ರಿಯವಾದ ವಿಚಾರಗಳ ಬಗ್ಗೆ ಮಾತ್ರ ಬರೆಯುತ್ತಾರೆ. ಬಾಳ್ ಠಾಕ್ರೆ ಅವರಿಗೆ ಯಾವ ಷರತ್ತನ್ನೂ ಹಾಕುವುದಿಲ್ಲ. ನಾನು ನಾಮ್‌ದೇವ್‌ರ ವ್ಯಕ್ತಿತ್ವದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ನನಗೆ ಅವರ ಕಾವ್ಯ ಮುಖ್ಯ. 'ಓಹ್ ಈತ ಶಿವಸೇನಾ ಜತೆಗಿದ್ದಾನೆ' ಎಂಬ ಕಾರಣದಿಂದ ನಾಮದೇವ್‌ರ ನಲವತ್ತು ವರ್ಷಗಳ ಕಾವ್ಯ ಕೃಷಿಯನ್ನು ತಳ್ಳಿಹಾಕಲು ಸಾಧ್ಯವೇ?

ಟ್ಯಾಕ್ಸಿ ಚಾಲಕ, ದಲಿತ್

ನಾಮ್‌ದೇವ್ ಢಸಾಳ್ ಮುಖ್ಯವಾಗುವುದೊಬ್ಬ ದಲಿತರೆಂದಲ್ಲ. ಅವರು, ವಾದಯೋಗ್ಯವಾಗಿ ೨೦ನೇ ಶತಮಾನದ ಅತಿ ಮುಖ್ಯ ಕವಿಯೆಂದು. ಅವರ ಕವಿತೆಗಳ ತೀಕ್ಷ್ಣತೆ ಮತ್ತು ಸಂಕೀರ್ಣತೆ ಮರಾಠಿಗರಿಗೆ ಚಿರಪರಿಚಿತ. ೨೦೦೧ರ ಬರ್ಲಿನ್ ಅಂತಾರಾಷ್ಟ್ರೀಯ ಸಾಹಿತ್ಯ ಸಮಾವೇಶದಲ್ಲಿ ತಮ್ಮ ಕವಿತೆಯನ್ನು ಮಂಡಿಸಿ ಅಲ್ಲಿದ್ದವರನ್ನು ದಂಗುಬಡಿಸಿದ್ದರು. ಆದರೆ ತಮ್ಮ ನಾಡಿನಲ್ಲೇ ಹೆಚ್ಚಿನ ಜನಕ್ಕೆ ಅವರು ಗೊತ್ತಿಲ್ಲದಿರುವುದು ವಿಪರ್ಯಾಸ. ವಿದ್ಯಾಧರ ಶ್ರೀಪಾದ ನೈಪಾಲ್ ತಮ್ಮ "ಇಂಡಿಯಾ: ಎ ಮಿಲಿಯನ್ ಮ್ಯೂಟನೀಸ್ ನಾವ್" ಪುಸ್ತಕದಲ್ಲಿ ಒಂದು ಅಧ್ಯಾಯವನ್ನು ನಾಮ್‌ದೇವ್‌ರ ಜತೆಗಿನ ಭೇಟಿಯ ಬಗ್ಗೆ ಬರೆದಿದ್ದಾರೆ. ಆದರೆ ನಾಮ್‌ದೇವ್‌ರ ತೀಕ್ಷ್ಣತೆಯನ್ನು ಅರಿಯುವಲ್ಲಿ ಸೋತಿದ್ದಾರೆ. (ಬಹುಶಃ ಭಾಷೆಯ ಸಮಸ್ಯೆಯಿಂದ ಇರಬಹುದು) ಡಾಮ್ ಮೋರಿಸ್ ಕೂಡ ನಾಮ್‌ದೇವ್ ಬಗ್ಗೆ ಬರೆದಿದ್ದಾರೆ. ಸೂಕ್ಷ್ಮಮತಿಯಾದ ಮೋರಿಸ್ ನಾಮ್‌ದೇವ್ ಬಗ್ಗೆ ಹೆಚ್ಚು ಶ್ರಮ ವಹಿಸಿದ್ದಾರೆ.

ಈ ನಾಮ್‌ದೇವ್ ಎಂಬ ರಾಜಕೀಯ ಕ್ರಿಯಾಶಕ್ತನಲ್ಲಿ ಚುಂಬಕಶಕ್ತಿಯುಳ್ಳ ಕಾವ್ಯಶಕ್ತಿಯೂ ಮೇಳೈಸಿದೆ. ಪತ್ರಕರ್ತರಿಗಂತೂ ನಾಮ್‌ದೇವ್ ನಿರಂತರ ಚಿಕರಿಯಾಗುವ ರೋಚಕ ಕಥಾವಸ್ತು. ಮುಂಬೈನ ಅತ್ಯಂತ ಕುಖ್ಯಾತ ರೆಡ್ ಲೈಟ್ ಪ್ರದೇಶದಲ್ಲಿ ಬೆಳೆದ ಇವರಿಗೆ ಕಳ್ಳ ಕದೀಮರಿಂದ ರಾಜಕೀಯ ನಾಯಕರು ಮತ್ತು ದರೋಡೆಕಾರರ ಒಡನಾಟ ಹೊಸದೇನಿರಲಿಲ್ಲ. ಸಮಕಾಲೀನ ಮರಾಠಿ ಕವಿಗಳಲ್ಲಿ ಅತೀ ಮುಖ್ಯವಾಗುವ ನಾಮ್‌ದೇವ್‌ಗೆ 'ಪದ್ಮಶ್ರೀ' ಲಭಿಸಿದೆ; ಮರಾಠಿಗರಲ್ಲದ ಅನೇಕರಿಗೆ ನಾಮ್‌ದೇವ್‌ರ ಇತರ ಸಾಹಿತ್ಯ ಬರವಣಿಗೆಗಳು ಗೊತ್ತಿರಲಿಕ್ಕಿಲ್ಲ. ಇವರು ಕವಿಯಷ್ಟೇ ಯಲ್ಲ. ಮನ ತಟ್ಟುವ ಎರಡು ಕಥಾನಕಗಳನ್ನು ಬರೆದಿದ್ದಾರೆ. "ಅಂಧಕಾರದ ಶತಮಾನ" ಇವರ ಯಶಸ್ವಿ ಪ್ರಬಂಧಗಳ ಸಂಕಲನ. "ಆ ಮಾಂತ್ರಿಕ ದಿವಸಗಳು" ಇವರ ಬೆರಗುಗೊಳಿಸುವ ಬಖೈರು.

ನಾಮ್‌ದೇವ್ ಕವಿತೆ ನನಗೆ ಮೊದಲೇ ಪರಿಚಯವಿದ್ದರೂ, ನಾನು ಅವರನ್ನು ಪರಿಚಯ ಮಾಡಿಕೊಂಡದ್ದು ೧೯೬೦ ಮಧ್ಯಭಾಗದಲ್ಲಿ. ಅಂದಿನ ಟಾಕ್ಸಿ ಚಾಲಕನಾಗಿ ನಾಮ್‌ದೇವ್ ಬರೆದಿರುವ ಕವಿತೆಗಳು ಅತ್ಯಂತ ತೀಕ್ಷ್ಣವಾಗಿ ಬಂದಿರುವ ಅಸಲಿನ ನಿಶ್ಚಿತಾಭಿಪ್ರಾಯಗಳ ಸೆಳವು ಎಂದರೆ ತಪ್ಪಲ್ಲ. ಇದರ ನಂತರ ಅವರನ್ನು ಮತ್ತೆ ಭೇಟಿಯಾದದ್ದು, ವಿಜಯ್ ತೆಂಡೂಲ್ಕರ್ ಅವರ ಪ್ರಸಾವನೆಯ, ನಾರಾಯಣ ಅಥವಲೆ ಪ್ರಕಟಿಸಿದ ಪುಸ್ತಕ 'ಗೋಲಪೀಠ' (೧೯೭೨) ಸಂಕಲನ ಪ್ರಕಟಣೆಗೆ ಮುಂಚೆ, ಅಥವಲೆ ಮತ್ತು ವಿಜಯ್ ತೆಂಡೂಲ್ಕರ್ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ನನ್ನ ಸಹೋದ್ಯೋಗಿಯಾಗಿದ್ದರು. ಈ ಚಿಕ್ಕ ಕವಿತೆಗಳ ಪುಸ್ತಕ ಮರಾಠಿ ಕವಿತಾ ಇತಿಹಾಸದಲ್ಲಷ್ಟೇ ಅಲ್ಲ, ಇಡೀ ದಕ್ಷಿಣ ಏಷ್ಯಾದ ಸಾಹಿತ್ಯದಲ್ಲಿ ಒಂದು ಮಹತ್ತರ ಮೈಲುಗಲ್ಲು, ಶಾಸ್ತ್ರೀಯ ಕವಿತಾ ರಚನೆಯ ಸಾಮರ್ಥ್ಯವನ್ನು ಮೀರಿ, ಮೆರೆದ ಈ ಸಂಕಲನ ಮೊದಲ ಬಾರಿಗೆ 'ಮಣ್ಣಿನ ಕಲ್ಮಷ'ಕ್ಕೆ ಬೆರಗು ಕೊಟ್ಟ ಯೋಚನಾಲಹರಿಯಾಗಿತ್ತು.

ನಾಮ್‌ದೇವ್ ದೊಡ್ಡ ಕವಿ. ಹೇಗೆ ವಿಟ್‌ಮನ್, ಮಯಾಕೋಸ್ಕಿ ಮತ್ತು ನೆರೂಡ ದೊಡ್ಡವರೋ ಹಾಗೆ. ಆದರೆ



ಅವಳು ಹೋದ ಆ ದಿನ

ಅವಳು ಹೋದ ಆ ದಿನ,
ನನ್ನ ಮುಖಕ್ಕೆ ಮಸಿ ಬಳಿದುಕೊಂಡೆ.
ತಿಕ್ಕಲು, ಕ್ರೂರ ಗಾಳಿಯ ಕಪಾಳಕ್ಕೆ ಹೊಡೆದೆ.
ನನ್ನ ಹರಕು-ಮುರುಕು ಬದುಕನು ಕೈಗೆತ್ತಿಕೊಂಡೆ.
ಒಡೆದ ಕನ್ನಡಿಯ ಮುಂದೆ ನಗ್ನನಾಗಿ ನಿಂತೆ.
ನನ್ನ ಮೇಲೆಯೇ ನನಗೆ ಕಿಚ್ಚು.
ಗತ್ತಿನಿಂದ ಸೂರ್ಯನನು 'ಮುಠ್ಠಾಳ' ಎಂದೆ.
ಬಣ್ಣಗಳ ಲೋಕದ ಹರಿಕಾರರಿಗೆ ಹುಡುಕಿ ಹುಡುಕಿ ಥೂ! ಎಂದೆ.
ಪೂರ್ವದಿಂದ ಪಶ್ಚಿಮಕ್ಕೆ ಬರಿಗಾಲಲಿ ನಡೆದೆ.
ದಾರಿಯಲಿ ಬಿದ್ದ ಕಲ್ಲುಗಳನೆತ್ತಿ ತೂರಿಕೊಂಡೆ.
ಸಂಭ್ರಮದ ಸ್ಫೂರ್ತಿಯಲಿ ಬೆಟ್ಟಗುಡ್ಡಗಳನು ಸೀಳಿ
ಹರಿವ ನೀರಿಗೆ ಯಾವ ಸಾಗರವ ಸೇರುವ ಹಂಬಲವೋ?
ಅಥವಾ, ಮಂದಗತಿಯಲಿ ಮರಳಿನ ಒಡಲೊಳಗೆ
ಇಳಿಯುವ ತವಕವೊ?

ನನ್ನೊಳಗೆ ನಾನಿಲ್ಲವೆಂಬ ಪ್ರಶ್ನೆ.
ಅವಳ ಹೆಣವನು ಬಾಚಿ ತಬ್ಬಿ
ರೋಧಿಸುವುದಿನ್ನೆಲ್ಲಿ?
ಅವಳು ಹೋದ ಆ ದಿನ,
ನನ್ನ ಮುಖಕ್ಕೆ ಮಸಿ ಬಳಿದುಕೊಂಡೆ.

ಮರಾಠಿ ಮೂಲ: ನಾಮ್‌ದೇವ್ ಢಸಾಳ್
ಇಂಗ್ಲಿಷ್‌ಗೆ: ದಿಲಿಪ್ ಚಿತ್ರೆ
ಕನ್ನಡಕ್ಕೆ: ಸತ್ಯಪ್ರಕಾಶ್ ಎಂ. ಆರ್

ಪ್ಯಾಂಥರ್, ಕವಿ

ಪತ್ನಿ ಮಲ್ಲಿಕಾ ಅಮರ್ ಶೇಖ್ ಅವರೊಂದಿಗೆ ನಾಮ್‌ದೇವ್ ಢಸಾಳ್

ಕವಿತೆ ನಾಮ್‌ದೇವ್ ಕವಿತೆಗಳ ತುಂಬಾ ತುಂಬಿರುವುದು ಅತ್ಯಂತ ಕಲ್ಮಶವಾದ, ದರಿದ್ರವಾದ ಪ್ರಪಂಚ. ಭಾಷೆ ಕೂಡ ಅಂತದ್ದೇ. ಹೆನ್ರಿ ಮಿಲರ್ ಹೇಳಿ ದಂತೆ ನಾಮ್‌ದೇವ್ ಮೌಲ್ಯಗಳನೆಂದೂ ಪ್ರತಿಪಾದಿಸಲಿಲ್ಲ. ಹೊಲಸಿನಲ್ಲೂ ಪುಷ್ಟಿ ಪಡೆದು ಬೆಳೆದರು. ಮರಾಠಿ ಸಾಹಿತ್ಯಕ್ಕೆ ಮಣ್ಣಿನ ಪೋಷಣಾ ಶಕ್ತಿಯನ್ನು ಜ್ಞಾಪಿಸಿದರು.

ಶಾಲೆಯಲ್ಲಿ ಚುರುಕು ಬುದ್ಧಿಯವನಾಗಿದ್ದ ನಾಮ್‌ದೇವ್, ಓದುವುದರಲ್ಲಿ ಮತ್ತು ಬರೆಯುವುದರಲ್ಲಿ ಆಸಕ್ತಿ ಹೊಂದಿದ್ದ: ನಂತರದ ವರ್ಷಗಳಲ್ಲಿ ಪ್ರತಿಭಾವಂತ ಬರಹಗಾರನಾಗಿ ಹೊರ ಹೊಮ್ಮಿದ. ತನ್ನ ಕೌಮಾರ್ಯದಲ್ಲಿ ಮೇಲ್ಜಾತಿಯ ಹುಡುಗಿಯನ್ನು ಪ್ರೇಮಿಸಿ, ಅವಳೊಂದಿಗೆ ಪುಣೆಗೆ ಓಡಿ ಹೋದ. ಇದರಿಂದ ಮುಂಬೈನಲ್ಲಿ ಜಾತಿವಾರು ದೊಂಬಿಯೇ ಆಗುವುದರಲ್ಲಿತ್ತು. ಮುಂದೆ ಇಬ್ಬರು ಪ್ರೇಮಿಗಳನ್ನು ಬೇರೆ ಮಾಡಲಾಯಿತು.

ಶಾಲೆಯ ನಂತರ ನಾಮ್‌ದೇವ್ ಅಂಬೇಡ್ಕರ್ ಬರಹಗಳನ್ನು ಓದಲಾರಂಭಿಸಿದರು. ರಾಮ ಮನೋಹರ್ ಲೋಹಿಯಾ ಬರಹಗಳು ಅವರನ್ನು ಆಕರ್ಷಿಸಿದವು. ನಂತರದ ದಿನಗಳಲ್ಲಿ ಅವರು ಮಾರ್ಕ್ಸ್ ಬರಹಗಳನ್ನು ಓದಿದರು. ಶಹಿರ್ ಅಮರ್ ಶೇಖ್‌ರ ಮಗಳು ಮಲ್ಲಿಕಾರನ್ನು ಮದುವೆಯಾದ ನಂತರ ಹಿರಿಯ ಕಮ್ಯುನಿಸ್ಟ್ ಮುಂದಾಳು ಡಾಂಗೆಯವರೊಡನೆ ಸೇರಿಕೊಂಡರು. ೧೯೭೨ರಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮೇಲ್ಜಾತಿ ಹಿಡಿತದಿಂದ ಬೇಸತ್ತ ನಾಮ್‌ದೇವ್ ಮತ್ತು ಸ್ನೇಹಿತರು 'ದಲಿತ್‌ಪ್ಯಾಂಥರ್ಸ್' ಎಂಬ ಸಾಮಾಜಿಕ ಸಂಘಟನೆಯನ್ನು ಪ್ರಾರಂಭಿಸಿದರು. ಅಮೆರಿಕಾದ 'ಬ್ಲಾಕ್ ಪ್ಯಾಂಥರ್ಸ್' ಜತೆಗೆ ಕೆಲವು ಸಮಾನಾಂಶಗಳನ್ನು ಹೊಂದಿದ್ದ ಇದು ನಾಮ್‌ದೇವ್‌ನಲ್ಲಿ ಮಾಲ್ಕಮ್ ಪ್ರತಿಭೆ ಕಂಡಿತ್ತು. ನಾಮ್‌ದೇವ್‌ನಲ್ಲಿ ದಲಿತ ಯುವಕರುನ್ನು ಆಕರ್ಷಿಸುವ ಮತ್ತು ಅವರಲ್ಲಿನ ಪ್ರಜ್ಞೆಯನ್ನು ತಟ್ಟಿ, ರಾಜಕೀಯ–ಸಾಂಸ್ಕೃತಿಕ ರೂವಾರಿಗಳನಾಗಿಸಿ, ಪಟ್ಟಣದ ಗೆರಿಲ್ಲಾಗಳನ್ನಾಗಿ ಬಳಸುವ ಶಕ್ತಿ ಇತ್ತು.

'ದಲಿತ್ ಪ್ಯಾಂಥರ್ಸ್' ಎಷ್ಟು ಪ್ರಭಾವ ಶಾಲಿಯಾಯಿತೆಂದರೆ, ಮುಂಬೈ ಮತ್ತು ಮಹಾರಾಷ್ಟ್ರ ಪೊಲೀಸರಿಗೆ ಅದನ್ನು ಮುಗಿಸಲು ಕಾರ್ಯರೂಪ ಸಿದ್ಧಪಡಿಸುವಂತೆ ಆಜ್ಞೆ ಮಾಡಲಾಗಿತ್ತು. ನಂತರ ತುರ್ತು ಪರಿಸ್ಥಿತಿ ಸಮಯದಲ್ಲಿ ಪ್ಯಾಂಥರ್ಸ್ ಮೇಲೆ ೩೦೦ಕ್ಕೂ ಹೆಚ್ಚು ಮೊಕದ್ದಮೆಗಳನ್ನು ಹಾಕಲಾಯಿತು. ಶ್ರೀಮತಿ ಇಂದಿರಾಗಾಂಧಿ ನಾಮ್‌ದೇವ್‌ರನ್ನು ಮಾತುಕತೆಗೆ ಕರೆದಾಗ, ಎಷ್ಟು ಮೆಚ್ಚಿಕೊಂಡಿದ್ದರೆಂದರೆ, 'ದಲಿತ್ ಪ್ಯಾಂಥರ್ಸ್' ಮೇಲಿನ ಎಲ್ಲಾ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಲು ಹೇಳಿದರು.

ನಾಮ್‌ದೇವ್‌ರನ್ನು ಸಮಯ ಸಾಧಕ ಮತ್ತು ಸ್ವಾರ್ಥಪರ ರಾಜಕಾರಣಿ ಎಂದೆಲ್ಲಾ ಕರೆಯಲಾಗಿದೆ. ಅವರು ಶಿವ ಸೇನದಂತಹ ಪಕ್ಷದೊಂದಿಗೆ ಕೈ ಜೋಡಿಸಿರುವುದನ್ನು ಅನೇಕರು ಉದಾಹರಿಸುತ್ತಾರೆ.

ನಾಮ್‌ದೇವ್‌ರವರ ರಾಜಕೀಯ ಸಾಹಸ ಕೆಲವು ಬಾರಿ ತಪ್ಪು ದಾರಿ ಹಿಡಿದಿರಬಹುದು. ಆದರೆ ಢಸಾಳ್, ಕವಿಯಾಗಿ, ಅವರ ಯೋಚನಾ ಲಹರಿಯನ್ನು ಒಂದು ಅಚಲ ನಂಬಿಕೆಯಲ್ಲಿ ಹಿಡಿದಿಟ್ಟಿದ್ದಾರೆನಿಸುತ್ತದೆ. ಅದೇನೆಂದರೆ ಸಹಜವಾಗಿ ಬದುಕಲು ಬೇಕಾದ 'ಜೀವನ ಪ್ರೀತಿ' ತನ್ನಲ್ಲಿನ ಆತ್ಮಸ್ಥೈರ್ಯದಲ್ಲಿ ಅತೀವ ನಂಬಿಕೆ ಇಟ್ಟಿರುವ ನಾಮ್‌ದೇವ್ ದುರ್ಬಲರೆನಿಸಿಕೊಂಡವರೆಲ್ಲರಿಗೂ ಮಾದರಿ.

ಅನು: ಕೃಷ್ಣಮೂರ್ತಿ ಸೀತಾರಾಂ

ಶ್ಯಾಮಾ: ನಾಮ್‌ದೇವ್‌ರ ಪತ್ನಿ ಮುಸ್ಲಿಂ ಜನಾಂಗಕ್ಕೆ ಸೇರಿದವರು, ಹಾಗೂ ಕಮ್ಯೂನಿಸ್ಟನೋರ್ವನ ಮಗಳು..

ದಿಲಿಪ್: ಆಕೆಯ ತಂದೆ ಅಮರ್ ಶೇಖ್, ಖ್ಯಾತ ಹಾಡುಗಾರ. ಈತನ ಮಗಳು ಮಲ್ಲಿಕ್ ಅಂದರೆ ನಾಮ್‌ದೇವ್ ಪತ್ನಿ, ನಾಮ್‌ದೇವ್‌ಗಿಂತ ಸುಮಾರು ಹತ್ತು ಹದಿನೈದು ವರ್ಷ ಚಿಕ್ಕವರು. ಈಕೆ ಕೂಡ ಮರಾಠಿ ಭಾಷೆಯ ಪ್ರತಿಭಾನ್ವಿತ ಕವಯತ್ರಿ. ಇವರ ದಾಂಪತ್ಯ ಅಷ್ಟೇನೂ ಸುಖಕರವಾಗಿರಲಿಲ್ಲ; ಮಲ್ಲಿಕಾ, ತನ್ನ ದಾಂಪತ್ಯವನ್ನು ಕುರಿತು 'ಐ ವಾಂಟ್ ಟು ಸ್ಮಾಷ್ ಮೈಸೆಲ್ಫ್' ಎಂಬ ಆತ್ಮಕಥನ ಬರೆದಿದ್ದಾರೆ. ನಾಮ್‌ದೇವ್‌ರ ಪ್ಯಾಂಥರ್ಸ್ ಚಳವಳಿಗೆ ತಮ್ಮ ವಿರೋಧವನ್ನು, ಅವರ ಜತೆ ಜೀವನ ನಡೆಸುವ ದುಸ್ತರವನ್ನು, ಮಾಡದ ಅನೇಕ ಅಪರಾಧಗಳಿಗೆ ಆಪಾದಿತನಾಗಿರುವ ಹುಟ್ಟು ಹೋರಾಟಗಾರನ ಜತೆ ಬದುಕುವ ಒತ್ತಡವನ್ನು ಇದರಲ್ಲಿ ದಾಖಲಿಸಿದ್ದಾರೆ. ಇವರ ಮದುವೆಯ ಹೊಸತರಲ್ಲಿ ನಾಮ್‌ದೇವ್, ಬಹುತೇಕ ಭೂಗತರಾಗಿದ್ದರು. ಪೊಲೀಸರು ನಾಮ್‌ದೇವ್‌ರನ್ನು ಬೆನ್ನತ್ತಿ ಕಾಡುತ್ತಿದ್ದರು.

ಶ್ಯಾಮಾ: ಆಧುನಿಕ ಮರಾಠಿ ಸಾಹಿತ್ಯದಲ್ಲಿ ಅದ್ಭುತವಾದ ಸಮಕಾಲೀನ ಸಾಹಿತಿಗಳ ಸಮ್ಮಿಲನ ಕಾಣಬಹುದು; ವಿಲಾಸ್ ಸಾರಂಗ್, ಕಿರಣ್ ನಗರ್‌ಕರ್, ನಾಮ್‌ದೇವ್ ಢಸಾಳ್, ಅರುಣ್ ಕೊಲಾಟ್ಕರ್, ಮತ್ತು ನೀವು. ಈ ಗುಂಪಿನಲ್ಲಿರುವ ಎಲ್ಲರಲ್ಲಿಯೂ ಪ್ರತಿರೋಧ, ಆಕ್ರೋಶ ಮತ್ತು ನಿರಂತರತೆಯ ಸೆಲೆ ಇದೆ. ಇದರ ಮೂಲ ಯಾವುದು?

ದಿಲಿಪ್: ನಮ್ಮೆಲ್ಲರಲ್ಲೂ ಇರುವ ಸಮಾನ ಅಂಶವೆಂದರೆ, ನಾವೆಲ್ಲರೂ ಮುಂಬೈ ಮಹಾನಗರದವರು. ದಂಗುಬಡಿಸುವ ಕಾಸ್ಮೋಪಾಲಿಟನ್ ಮುಂಬೈ ನಗರದಲ್ಲಿ ಬೇರುಬಿಟ್ಟಿರುವ ಸಾಹಿತಿಗಳು. ಆದರೆ, ಕಾವ್ಯವನ್ನು ಕುರಿತು ನಮ್ಮ ಧೋರಣೆಗಳು ವಿಭಿನ್ನ. ಉದಾಹರಣೆಗೆ, ವಿಲಾಸ್‌ರಲ್ಲಿ ಕಾಮುವಿನ ಅಸ್ತಿತ್ವವಾದದ ಪರಂಪರೆಯನ್ನು ಕಾಣಬಹುದು; ಕಾಫ್ಕಾ ಕೂಡ ವಿಲಾಸ್ ಮೇಲೆ ಗಾಢ ಪ್ರಭಾವ ಬೀರಿದ್ದಾನೆ. ಆದರೆ, ಅರುಣ್ ಕೊಲಾಟ್ಕರ್ ಬಗ್ಗೆ ಈ ರೀತಿ ಹೇಳಲಾಗುವುದಿಲ್ಲ. ಕಿರಣ್ ನಗರ್‌ಕರ್‌ಗೆ ವೈವಿಧ್ಯವಾದ ಕಥನದ ದನಿಗಳಿವೆ, ವಿಶೇಷವಾಗಿ ಪಶ್ಚಿಮದ ಪ್ರಭಾವವನ್ನು ನೀವು ಕಿರಣ್‌ರಲ್ಲಿ ಕಾಣಬಹುದು. ನಾಮ್‌ದೇವ್‌ರನ್ನು ಹೊರತುಪಡಿಸಿದರೆ, ಅರುಣ್, ವಿಲಾಸ್, ಕಿರಣ್, ಮತ್ತು ನಾನು, ಎಲ್ಲರೂ ಇಂಗ್ಲಿಷ್ ಮತ್ತು ಮರಾಠಿ, ಈ ಎರಡೂ ಭಾಷೆಯಲ್ಲಿ ಬರವಣಿಗೆ ಮಾಡುತ್ತಿರುವವರು; ಅಂದರೆ ದ್ವಿಭಾಷಿಗಳು. ಆದರೆ, ನಾಮ್‌ದೇವ್ ಏಕಭಾಷಿ, ಈತ ಬರೆಯುವುದು ಮರಾಠಿಯಲ್ಲಿ, ಮಾತನಾಡುವುದೂ ಮರಾಠಿ ಯನ್ನೇ. ನಾಮ್‌ದೇವ್, ಫ್ರೆಂಚ್, ಸ್ಪಾನಿಷ್, ಜರ್ಮನ್, ಅಥವಾ ಇಂಗ್ಲಿಷ್, ಯಾವುದನ್ನೂ ಓದುವುದಿಲ್ಲ. ಹಾಗಾದರೆ, ನಾಮ್‌ದೇವ್‌ರಲ್ಲಿ ಈ 'ಅದ್ಭುತ ವಾಸ್ತವವಾದ' ಹೇಗೆ ಬಂತು? ಅಸ್ತಿತ್ವವಾದ ಎಲ್ಲಿಂದ ಬಂತು? ಇದು ಈ ಮಣ್ಣಿನದು, ಇದು ನಾಮ್‌ದೇವ್‌ರ ಅನುಭವದ ಭಾಗ. ನಾಮ್‌ದೇವ್ ಸ್ವಯಂ–

ನಾಮ್‌ದೇವ್ ಏಕಭಾಷಿ, ಈತ ಬರೆಯುವುದು ಮರಾಠಿಯಲ್ಲಿ, ಮಾತನಾಡುವುದೂ ಮರಾಠಿಯನ್ನೇ. ನಾಮ್‌ದೇವ್, ಫ್ರೆಂಚ್, ಸ್ಪಾನಿಷ್, ಜರ್ಮನ್, ಅಥವಾ ಇಂಗ್ಲಿಷ್ ಯಾವುದನ್ನೂ ಓದುವುದಿಲ್ಲ. ಹಾಗಾದರೆ, ನಾಮ್‌ದೇವ್‌ರಲ್ಲಿ ಈ 'ಅದ್ಭುತ ವಾಸ್ತವವಾದ' ಹೇಗೆ ಬಂತು? ಅಸ್ತಿತ್ವವಾದ ಎಲ್ಲಿಂದ ಬಂತು? ಇದು ಈ ಮಣ್ಣಿನದು, ಇದು ನಾಮ್‌ದೇವ್‌ರ ಅನುಭವದ ಭಾಗ. ನಾಮ್‌ದೇವ್ ಸ್ವಯಂ–ಶಿಕ್ಷಿತ. ಹಕ್ಕುಗಳಿಂದ ವಂಚಿತನಾದ ದಲಿತ. ಈ ಬೃಹತ್ ನಗರದ ಸಾಹಿತ್ಯ ಜಗತ್ತಿನಲ್ಲಿ ತನ್ನ ಶಕ್ತಿ ಮತ್ತು ಪ್ರತಿಭೆಯಿಂದಲೇ ಎತ್ತರಕ್ಕೆ ಬೆಳೆದ ವ್ಯಕ್ತಿ. ನಾಮ್‌ದೇವ್ ಓದಿರುವ ಕೃತಿಗಳೆಲ್ಲಾ ಮರಾಠಿಯ ಅನುವಾದ.

ಶಿಕ್ಷಿತ, ಹಕ್ಕುಗಳಿಂದ ವಂಚಿತನಾದ ದಲಿತ. ಈ ಬೃಹತ್ ನಗರದ ಸಾಹಿತ್ಯ ಜಗತ್ತಿನಲ್ಲಿ ತನ್ನ ಶಕ್ತಿ ಮತ್ತು ಪ್ರತಿಭೆಯಿಂದಲೇ ಎತ್ತರಕ್ಕೆ ಬೆಳೆದ ವ್ಯಕ್ತಿ. ನಾಮ್‌ದೇವ್ ಓದಿರುವ ಕೃತಿಗಳೆಲ್ಲಾ ಮರಾಠಿಯ ಅನುವಾದ. ಮರಾಠಿ ಭಾಷೆಗೆ ಅನುವಾದಗೊಳ್ಳದ ಯಾವುದಾದರೂ ಸಾಹಿತಿಯ ಕೃತಿಯಿದ್ದರೆ, "ಯಾರು ಈ ವ್ಯಕ್ತಿ, ಇವರ ಬಗ್ಗೆ ನನಗೆ ಸ್ವಲ್ಪ ಮಾಹಿತಿ ಕೊಡಿ, ನೀವು ಇವರ ಸಾಹಿತ್ಯವನ್ನು ನನಗಾಗಿ ಅನುವಾದ ಮಾಡುತ್ತೀರಾ?" ಎಂದು ನಾಮ್‌ದೇವ್ ಕೇಳಿದ್ದಿದೆ.

ಆನಂದ್: ದಿಲೀಪ್, ನಾನು ನಿಮಗೊಂದು ಪ್ರಶ್ನೆ ಕೇಳಬಯಸುತ್ತೇನೆ. ನಾಮದೇವ್ ಇತ್ತೀಚೆಗೆ ಆಸ್ಪತ್ರೆಯಲ್ಲಿದ್ದಾಗ, ಸುಮಾರು ೩೦೦ ಮಂದಿ ದಲಿತ ಪ್ಯಾಂಥರ್ಸ್‌ನ ಅನುಯಾಯಿಗಳು ಅವರ ಜತೆಗಿದ್ದರು ಎಂದು ನೀವು ಹೇಳಿದ್ದಿರಿ. ಈ ಜನ, ಇವರ ಕಾವ್ಯವನ್ನು ಓದುತ್ತಾರಾ? ಈ ಜನರಿಗೆ, ಇವರ ಕಾವ್ಯ ಅರ್ಥವಾಗುವುದೇ? ಅಥವಾ ಕವಿ ನಾಮ್‌ದೇವ್ ಹಾಗೂ ರಾಜಕಾರಣಿ ನಾಮ್‌ದೇವ್ ನಡುವೆ ಅಂತರವಿದೆಯೇ?

ದಿಲೀಪ್: ಇದು ನಾಮದೇವ್‌ರ ಸಮಸ್ಯೆಯಲ್ಲ; ಇದನ್ನು ನಾಮ್‌ದೇವ್‌ರಿಗಿರುವ ಬಹುಸ್ತರದ ಅನುಯಾಯಿಗಳ ಏಕಮುಖಿತ್ವ ಎನ್ನಬಹುದು. ಇವರ ದಲಿತ ಅನುಯಾಯಿಗಳು, ನಾಮ್‌ದೇವ್‌ರನ್ನು ಓರ್ವ ವರ್ಚಸ್ವಿ ನಾಯಕನಾಗಿ ನೋಡುತ್ತಾರೆ. ಆದರೆ ಅವರಿಗೆ ಇವರ ಕಾವ್ಯವನ್ನು ಅರ್ಥೈಸಿಕೊಳ್ಳುವ ಸಂವೇದನೆ ಇರುವುದಿಲ್ಲ. ನಾಮ್‌ದೇವ್, ಗದರ್‌ನಂತಲ್ಲ. ಗದರ್, ತೀರ ಸರಳವಾದ ಹಾಡುಗಳನ್ನು–ಇವುಗಳಲ್ಲಿ ಹಲವು ಕೆಟ್ಟ ಕವನಗಳು– ಬರೆದು ಕ್ರಾಂತಿಕಾರಿ ಭಾವನೆಗಳನ್ನು ವ್ಯಕ್ತಪಡಿಸಿ, ಆ ಮೂಲಕ ಜನರನ್ನು ಬಡಿದೆಬ್ಬಿಸಬಹುದು. ಇನ್ನೊಂದು ಪ್ರಮುಖವಾದ ಅಂಶವೇನೆಂದರೆ, ನಾಮದೇವ್‌ರ ಕಾವ್ಯಾನುಸಂಧಾನ ಮಾಡಬಯಸುವ ಓರ್ವ ಮಧ್ಯಮ ವರ್ಗದ ವ್ಯಕ್ತಿಗೆ, ದಲಿತರ ಸ್ಥಿತಿಗತಿ ಗೊತ್ತಿರುವುದಿಲ್ಲ. ಆ ವ್ಯಕ್ತಿ ಅದನ್ನು ತಿಳಿದುಕೊಳ್ಳಲೂ ಬಯಸುವುದಿಲ್ಲ. ಹೀಗಾಗಿ, ಆತ ಕಾವ್ಯದ ಮೂಲ ಆಶಯವನ್ನು ಪರಿಭಾವಿಸಿಕೊಳ್ಳಲಾಗುವುದಿಲ್ಲ.

ಆನಂದ್: ಹಾಗಾದರೆ, ನಾಮ್‌ದೇವ್ ಢಸಾಳ್‌ರ ಕಾವ್ಯಕ್ಕೆ ಒಂದು ನಿರ್ದಿಷ್ಟವಾದ ಓದುಗವರ್ಗ ಇಲ್ಲವೇ? ಅವರ ರಾಜಕೀಯ ಸಂವೇದನೆ ತಿಳಿದ ವ್ಯಕ್ತಿ, ಅವರ ಕಾವ್ಯವನ್ನು ಮೆಚ್ಚಲಾಗುವುದಿಲ್ಲವೇ?

ದಿಲೀಪ್: ಅಂಗಿಯನ್ನು ತಿರುಗಿಸಿ ನೋಡಿ. ಆಗ, ಷರ್ಟ್ ಕೇಳುತ್ತದೆ, ಓದುಗರಿಗೆ ಇದು ಸರಿಹೊಂದುವುದೇ ಎಂದು.

ಆನಂದ್: 'ಅಂಗಿಯನ್ನು ಕುರಿತ ಕಲ್ಪನೆಗಳು' ಕವನದ ಕೊನೆಯ ಮೂರು ಸಾಲುಗಳನ್ನು ನಾನಿಲ್ಲಿ ಓದಬಯಸುತ್ತೇನೆ.

ಮನುಷ್ಯ ತೀರ ಆದರ್ಶ ಪ್ರಾಯನಾಗಿರಬಾರದು.
ಅವನ ಅಂಗಿಯ ಮೇಲೆ ಕೆಲವು ಕಪ್ಪು ಚುಕ್ಕೆಗಳಿರಬೇಕು.
ಸ್ವಲ್ಪ ಪಾಪವನು ಅವನು ಕೊಂಡೊಯ್ಯಬೇಕು.

ಇನ್ನೊಂದು ಕವನದ ಆರಂಭದ ಸಾಲುಗಳನ್ನು ಗಮನಿಸಿ; "ಈವಳ ಲಿಂಗ ಬದಲಿಸಿ ನೋಡೋಣ/ ಆ್ಯಡಮನನು ಬಸಿರು ಮಾಡಿ ನೋಡೋಣ." ಹೀಗಿದ್ದರೂ, ಶಿವಸೇನಾದೊಂದಿಗೆ ನಾಮ್‌ದೇವ್ ಇರುವುದನ್ನು ಅರ್ಥೈಸಿಕೊಳ್ಳಲಾಗುವುದಿಲ್ಲ. ಬಹುಶಃ ಎಲ್ಲರನ್ನೂ ಕನ್‌ಫ್ಯೂಸ್ ಮಾಡಲು ನಾಮದೇವ್ ಯತ್ನಿಸುತ್ತಿರಬಹುದು.

ದಿಲೀಪ್: ಓದುಗ ಮತ್ತು ಅನುವಾದಕ, ಇಬ್ಬರಿಗೂ ನಾಮ್‌ದೇವ್ ಸವಾಲೊಡ್ಡುತ್ತಾರೆ. ಇವರಲ್ಲಿ ನಾವು ಕಾಣುವುದು 'ಸೌಂದರ್ಯಾನುಭವದ ವಿದ್ರೋಹ'. "ನಾಮ್‌ದೇವ್ ಬೂರ್ಜ್ವಾ ಸಂವೇದನೆಗಳನ್ನು ಬುಡಮೇಲು ಮಾಡುತ್ತಾರೆ. ಇದು ಇವರಲ್ಲಿ ನನಗೆ ಪ್ರಿಯವಾದ ಅಂಶ. ನಿಮ್ಮ ಮೌಲ್ಯಗಳು ನಿಂತಿರುವ ಒಟ್ಟಾರೆ ವ್ಯವಸ್ಥೆಯ ಅಡಿಪಾಯವನ್ನು ವಿದ್ರೋಹ ಅಲುಗಾಡಿಸಿ

ನಾಮ್‌ದೇವ್‌ರ ರಾಜಕಾರಣದಿಂದ, ಅವರ ಕಾವ್ಯವನ್ನು ಬೇರ್ಪಡಿಸಲಾಗುವುದಿಲ್ಲ. ೧೯೭೨ ರಿಂದ, ಪ್ರತಿವರ್ಷ ಏಪ್ರಿಲ್ ೧೪ರಂದು (ಅಂಬೇಡ್ಕರ್ ಜನ್ಮದಿನ) ನಾಮ್‌ದೇವ್, ಅಂಬೇಡ್ಕರರನ್ನು ಉದ್ದೇಶಿಸಿ ಒಂದು ದೀರ್ಘವಾದ ಕವನ ಬರೆಯುತ್ತಿದ್ದಾರೆ. ಇದು ಆತ್ಮವಿಮರ್ಶೆಯ ಕವನವೂ ಹೌದು. ಅಂಬೇಡ್ಕರ್ ತೋರಿದ ಉನ್ನತ ಮಾರ್ಗವನ್ನು ಅನುಸರಿಸಲು ಸಾಧ್ಯವಾಗಿದೆಯೇ ಎಂದು ನಾಮ್‌ದೇವ್, ಅಂಬೇಡ್ಕರರನ್ನು, ಸ್ವತಃ ತಮ್ಮನ್ನು ಹಾಗೂ ಎಲ್ಲ ದಲಿತರನ್ನೂ ಪ್ರಶ್ನಿಸುತ್ತಾರೆ. ಇವು ಆತ್ಮವಿಮರ್ಶೆಯ ಕವನಗಳು. ೧೯೫೬ರಲ್ಲಿ ಅಂಬೇಡ್ಕರ್ ನಿಧನಾನಂತರ ಇದುವರೆಗೆ ನಡೆದಿರುವ ಎಲ್ಲ ಘಟನೆಗಳು, ಸ್ವತಃ ಅಂಬೇಡ್ಕರ್ ಎದುರಿಸದ ಅಥವಾ ಅಂಬೇಡ್ಕರ್‌ರಿಗೇ ಗೊತ್ತಿರದ ಭಾರತ, ಈಗಿನ ದಲಿತರು ಎದುರಿಸುತ್ತಿರುವ ಸಂಕಷ್ಟಗಳು, ಎಲ್ಲವೂ ಕವನದ ಭಾಗಗಳೇ.

ಬಿಡುತ್ತದೆ. ನಾಮ್‌ದೇವ್ ಓರ್ವ ಗೆರಿಲ್ಲಾ ಕವಿ. ಒಂದೇ ಸಾಲಿನಲ್ಲಿ ಹೇಳುವುದಾದರೆ, ನಾಮ್‌ದೇವ್ ಕಾಮಾಟಿಪುರದ ಬೈಗುಳ ಮತ್ತು ಆಡುಭಾಷೆಯೊಂದಿಗೆ ಯುರೋಪ್ ಸಂವೇದನೆಯನ್ನು ಬೆರೆಸಿ ಅತ್ಯಂತ ಉತ್ಕೃಷ್ಟವಾದ ಮರಾಠಿ ಕಾವ್ಯ ರಚಿಸಬಲ್ಲರು. ಇಂತಹ ಲಕ್ಷಣ ಹೊಂದಿರುವ ಕಾವ್ಯವನ್ನು ಅನುವಾದಿಸುವುದು ಹೈರಾಣದ ಕೆಲಸ. ನಾಮ್‌ದೇವ್ ಅವರ ಕಾವ್ಯವನ್ನು ಅನುವಾದಿಸುವುದು ಒಂದು ರೀತಿಯಲ್ಲಿ 'ಮೆಥಡ್ ನಟನೆ'ಯಂತೆ– ನಿಮ್ಮೊಳಗೆ ನಾಮ್‌ದೇವ್‌ಗೆ ಒಂದು ಸ್ಥಳ ಕಲ್ಪಿಸಬೇಕು, ನಂತರ ಬರೆಯಬೇಕು.

ವಿಜು ಚಿತ್ರೆ (ದಿಲೀಪ್ ಪತ್ನಿ): ನಾಮ್‌ದೇವ್ ಕವನ ಬರೆಯಲು ಆರಂಭಿಸಿದಾಗ, ಓದುಗರು ಇವರ ಕವನಗಳನ್ನು ಓದಲು ಹಿಂಜರಿಯುತ್ತಿದ್ದರು. ಸುಶಿಕ್ಷಿತರು ಯೋಚಿಸಲೂ ಆಗದಂತಹ ಪದಗಳನ್ನು ನಾಮ್‌ದೇವ್ ಬಳಸುತ್ತಿದ್ದರು. ಆದ್ದರಿಂದ ಜನ ಈಗಲೂ ನಾಮದೇವ್‌ರ ಜತೆ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚಿಸಲು ಇಚ್ಛಿಸುತ್ತಾರೆ. ಆದರೆ ಅವರ ಕಾವ್ಯದ ಬಗ್ಗೆ ಮಾತನಾಡಲು ಹೆದರುತ್ತಾರೆ. ನಾಮ್‌ದೇವ್ ಯಾಕೆ ಪ್ರಸಿದ್ಧರಾಗಿಲ್ಲ ಎಂಬ ಪ್ರಶ್ನೆಗೆ ಇದೂ ಒಂದು ಉತ್ತರ. ವಿಜಯ್ ತೆಂಡೂಲ್ಕರ್‌ರಂತಹ ಸಾಹಿತಿಗಳ ಸಂವೇದನೆಗೂ ಹೊಂದಾಣಿಕೆಯಾಗದ, ಹಸಿಯಾದ ಕಾವ್ಯ ಸಂವೇದನೆ ನಾಮ್‌ದೇವ್ ಅವರದು. ನಾವೆಲ್ಲರೂ, ಪ್ರತಿದಿನ 'ಗೋಲಪೀಠ' ಮೂಲಕ ಹಾದು ಹೋಗುತ್ತೇವೆ, ಆದರೆ ನಾವ್ಯಾರೂ, ಅತ್ತ ಕಡೆ ಕಣ್ಣು ಹಾಯಿಸುವ ಪ್ರಯತ್ನವನ್ನೂ ಮಾಡುವುದಿಲ್ಲ. ಇನ್ನು ಅದನ್ನು ಪರಿಭಾವಿಸುವ ಪ್ರಶ್ನೆ ದೂರ.

ದಿಲೀಪ್: ಮರಾಠಿಯಲ್ಲಿ ಬರೆಯುತ್ತಿರುವ ಅನೇಕ ದಲಿತ ಕವಿಗಳಿದ್ದಾರೆ. ಆದರೆ ಅವರ್ಯಾರೂ ಈ ರೀತಿ ಬರೆಯುವುದಿಲ್ಲ. ನಾಮ್‌ದೇವ್ ಅವರೆಲ್ಲರಿಗಿಂತ ಮೇಲ್ಪಂಕ್ತಿಯಲ್ಲಿದ್ದಾರೆ. ಇದರರ್ಥ, ಅಷ್ಟೇನೂ ಮಹತ್ವಾಕಾಂಕ್ಷೆ ಹೊಂದಿಲ್ಲದ ದಲಿತ ಬರಹಗಾರರ, ದಲಿತ ಸಾಹಿತ್ಯದ ನಾಯಕತ್ವವನ್ನು ನಾಮ್‌ದೇವ್ ವಹಿಸಿದ್ದಾರೆ ಎಂದೇನೂ ಅಲ್ಲ. ಈ ಎಲ್ಲ ದಲಿತ ಸಾಹಿತಿಗಳೂ, ತಮ್ಮ ಅಸ್ಮಿತೆಯ ಬಗ್ಗೆ ಬಹಳಷ್ಟು ವಿಷಯಗಳನ್ನು ಹೇಳಿದ್ದಾರೆ.

ಶ್ಯಾಮಾ: ನೀವು ಹೇಳಲು ಪ್ರಯತ್ನಿಸುತ್ತಿರುವುದು, ಹಳೆಯದೆಲ್ಲವೂ ಅಸ್ಮಿತೆಯ ಪ್ರಶ್ನೆ ಎಂದು; ನಾನು ದಲಿತ, ಇದು ನನ್ನ ದನಿ. ನಿಮ್ಮ ಓದುಗ ಯಾರು ಎಂಬ ಪ್ರಶ್ನೆಯಿಂದ ಹೊರಬರುವ ಒಂದು ಮಾರ್ಗ ಇದಾಗಿರಬಹುದು– ನಾಮದೇವ್‌ರ ಕವನಗಳಿಗೆ ಸೂಕ್ತವಾದ ಓದುಗ ವರ್ಗ, ಅವರೆಲ್ಲರ ಸ್ಥೈರ್ಯ.

ದಿಲೀಪ್: ನನ್ನ ಅನುವಾದವನ್ನು ಆಧರಿಸಿದ ಎರಡನೆಯ ಅನುವಾದ ಮೂಲಕ ಜರ್ಮನಿಯ ಓದುಗರು ಹೇಗೆ ನಾಮ್‌ದೇವ್ ಕಾವ್ಯವನ್ನು ಸ್ವೀಕರಿಸುತ್ತಾರೆ?

ಆನಂದ್: ಅಥವಾ ಒಂದು ಚಿಕ್ಕ ತುಣುಕನ್ನು ನೋಡಿ, ರೋಮಾಂಚನಗೊಂಡು, ನಾನು ಇದನ್ನು ಪ್ರಕಟಿಸುವ ನಿರ್ಧಾರವನ್ನಾದರೂ ಹೇಗೆ ಮಾಡಿದೆ? ಪ್ರಕಟವಾದ ಕಾವ್ಯವನ್ನು ಇತರರಿಗೆ ತೋರಿಸಿದಾಗ, ಓದುಗರು ಒಂದೆರಡು ಕವನಗಳನ್ನು ಓದಿದ ಬಳಿಕ, ಇದು ಅನುವಾದವೇ ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದೂ ಇದೆ. ಇಷ್ಟು ದಿನಗಳವರೆಗೆ ಇಂತಹ ಕಾವ್ಯದ ಬಗ್ಗೆ ಗೊತ್ತೇ ಇರಲಿಲ್ಲ ಎಂದು ತಬ್ಬಿಬ್ಬಾಗಿದ್ದೂ ಇದೆ.

ದಿಲೀಪ್: ಏನೇ ಆದರೂ, ನಾಮ್‌ದೇವ್‌ರ ರಾಜಕಾರಣದಿಂದ, ಅವರ ಕಾವ್ಯವನ್ನು ಬೇರ್ಪಡಿಸಲಾಗುವುದಿಲ್ಲ. ೧೯೭೨ ರಿಂದ, ಪ್ರತಿವರ್ಷ ಏಪ್ರಿಲ್ ೧೪ರಂದು (ಅಂಬೇಡ್ಕರ್ ಜನ್ಮದಿನ) ನಾಮ್‌ದೇವ್, ಅಂಬೇಡ್ಕರರನ್ನು ಉದ್ದೇಶಿಸಿ ಒಂದು ದೀರ್ಘವಾದ ಕವನ ಬರೆಯುತ್ತಿದ್ದಾರೆ. ಇದು ಆತ್ಮವಿಮರ್ಶೆಯ ಕವನವೂ ಹೌದು. ಅಂಬೇಡ್ಕರ್ ತೋರಿದ ಉನ್ನತ ಮಾರ್ಗವನ್ನು ಅನುಸರಿಸಲು ಸಾಧ್ಯವಾಗಿದೆಯೇ ಎಂದು ನಾಮ್‌ದೇವ್, ಅಂಬೇಡ್ಕರರನ್ನು, ಸ್ವತಃ ತಮ್ಮನ್ನು ಹಾಗೂ ಎಲ್ಲ ದಲಿತರನ್ನೂ ಪ್ರಶ್ನಿಸುತ್ತಾರೆ. ಇವು ಆತ್ಮವಿಮರ್ಶೆಯ ಕವನಗಳು. ೧೯೫೬ರಲ್ಲಿ ಅಂಬೇಡ್ಕರ್ ನಿಧನಾನಂತರ ಇದುವರೆಗೆ ನಡೆದಿರುವ ಎಲ್ಲ ಘಟನೆಗಳು, ಸ್ವತಃ ಅಂಬೇಡ್ಕರ್ ಎದುರಿಸದ ಅಥವಾ ಅಂಬೇಡ್ಕರ್‌ರಿಗೇ ಗೊತ್ತಿರದ ಭಾರತ, ಈಗಿನ ದಲಿತರು ಎದುರಿಸುತ್ತಿರುವ ಸಂಕಷ್ಟಗಳು, ಎಲ್ಲವೂ ಕವನದ ಭಾಗಗಳೇ. ನಾಮ್‌ದೇವ್‌ರನ್ನು ತಿಳಿದುಕೊಳ್ಳಬಯಸುವ ಮಂದಿ, ಮೊದಲಿಗೆ ಅವರ ಕಾವ್ಯವನ್ನು ಅರ್ಥೈಸಿಕೊಂಡು, ನಂತರ ಅವರ ರಾಜಕಾರಣವನ್ನು ಅರ್ಥೈಸಿಕೊಂಡರೆ ಸೂಕ್ತ. ನಾಮ್‌ದೇವ್‌ರ ರಾಜಕಾರಣವನ್ನು ಮಾತ್ರ ಗಮನಿಸಿ, ಅವರ ಕಾವ್ಯವನ್ನು ಒಮ್ಮೆಯೂ ಓದದ ಜನರಿಗೆ, ನಾಮ್‌ದೇವ್ ಢಸಾಳ್ ಅವರ ವ್ಯಕ್ತಿತ್ವ ದಕ್ಕುವುದಿಲ್ಲ.

(ಸೌಜನ್ಯ: 'ತೆಹೆಲ್ಕಾ' ಮತ್ತು 'ನವಯಾನ')

ಕ್ರೌರ್ಯ



ಮಿಥುನದ ಮತ್ತಿನಿಂದ ತಗುಲಿದ ರೋಗ ತಂದ ನೋವು ನಾನು.
ನೂರಾರು ಸಾವಿರಾರು ದುಃಖದ, ದೈನ್ಯದ ಕಣ್ಣುಗಳನು
ಕಂಡು ನಲುಗಿದ ಚೇತನ ನಾನು.
ನನ್ನೊಳಗೆ ಸ್ಫೋಟಿಸಿದ ಕ್ರಾಂತಿಯಲಿ ತತ್ತರಿಸಿದ ತಲ್ಲಣ ನಾನು.
ಚಂದ್ರನ ಬೆಳಕು ಇಲ್ಲೆಲ್ಲೂ ಇಲ್ಲ;
ಹನಿ ನೀರಿನ ಕುರುಹೂ ಇಲ್ಲ.
ನನ್ನ ಮಾಂಸವ ಕಿತ್ತು ತಿನ್ನುತಿದೆ ಕ್ಷುದ್ರ ನರಿ;
ನನ್ನ ಮೈಮನದಿಂದಾಚೆಗೆ ಹಬ್ಬುತಿದೆ ಕ್ರೌರ್ಯದ ವಿಷ.
ನನ್ನ ಯಾತನೆಯ ಅಸ್ತಿತ್ವಕೆ ಮುಕ್ತಿ ಕೊಡು.
ನಕ್ಷತ್ರಗಳನು ಪ್ರೇಮಿಸಲು ನನ್ನ ಬಿಟ್ಟುಬಿಡು.
ದಿಗಂತದ ಕಡೆಗೆ ತೆವಳುತಿದೆ ಅರಳುತಿರುವ ಈ ಹೂವು.
ಛಿದ್ರಗೊಂಡ ಮುಖದಾಳದಿಂದ ಪುಟಿಯುತಿದೆ ಓಯಸಿಸ್ಸಿನ ಒಲವು.
ಅಂಕೆಗೆ ನಿಲುಕದ ಯೋನಿಯ ಬಾಗಿಲಲಿ ಸುತ್ತುತಿದೆ ಚಂಡಮಾರುತ.
ನೋವಿನ ಕೂದಲನು ನೇವರಿಸಲಾರಂಭಿಸಿದೆ ಬೆಕ್ಕು.
ನನ್ನೆಲ್ಲ ಆಕ್ರೋಶಕೆ ನೆರಳಾಯಿತು ರಾತ್ರಿ
ಕಿಟಕಿಯ ಕಣ್ಣಿನಾಚೆ ಕುಣಿಯಲಾರಂಭಿಸಿದೆ ಬೀದಿನಾಯಿ.
ರಾಡಿಯ ಎದೆಬಗಿಯುತಿದೆ ಆಸ್ಟ್ರಿಚ್ಚಿನ ಬಾಯಿ.
ಅನುಭವದ ಸತ್ವವನು ತಿಂದು ತೇಗುತಿದೆ ಈಜಿಪ್ಟಿನ ಕ್ಯಾರೆಟ್.
ಹೂತ ಹೆಣವೊಂದನು ಬಡಿದೆಬ್ಬಿಸುತಿದೆ ಕಾವ್ಯ.
ರಭಸವಾಗಿ ಮುಚ್ಚಿಹೋಗುತ್ತಿವೆ ನನ್ನೊಳಗಿನ ಬಾಗಿಲು.
ಅನ್ವರ್ಥಗಳ ಒಳಗೆಲ್ಲಾ ಓಕುಳಿಯ ವಿದ್ಯುತ್ ಸಂಚಾರ.
ವ್ಯಾಕರಣದ ಗೋಡೆಗಳಾಚೆ ವ್ಯಾಪಿಸುತಿದೆ ನನ್ನ ಹಗಲು.
ಸಂಸಾರದ ಮೇಲೆಲ್ಲಾ ಚೆಲ್ಲುತಿದೆ ದೇವರ ಹೇಲು.
ಒಂದೇ ಅಗ್ನಿ ಕುಂಡದಲಿ ಬೇಯುತಿದೆ ನೋವು, ಮತ್ತು ರೊಟ್ಟಿ.
ಪುರಾಣಗಳಲಿ, ಜನಪದಗಳಲಿ ಉರಿಯುತಿದೆ ನಗ್ನರ ಜ್ವಾಲೆ.
ಜೀವದ ಬೇರುಗಳೊಳಗೆ ಸೇರುತಿದೆ ಹಾದರದ ಕಲ್ಲುಬಂಡೆ.
ನಿಶ್ಯಕ್ತ ಕಾಲುಗಳ ಮೇಲೆ ನಿಂತಿದೆ ನಿಟ್ಟುಸಿರು.
ಶುರುವಾಗಿದೆ ಈಗ ಸೈತಾನನ ಶೂನ್ಯದ ಬಸಿರು.
ಬಯಕೆಯ ಹೊಸ್ತಿಲಲಿ ನಿಂತಿಹಳು ಯಾರೂ ಮುಟ್ಟದ ಹೆಣ್ಣು.
ಮರುಹುಟ್ಟು ಪಡೆಯುತಿದೆ ಹತಾಷೆಯ ಮಣ್ಣು.
ಅಮರತ್ವದ ಪ್ರತಿಮೆಯನು ದೂಡುತಿದೆ ಹುಚ್ಚು ಕ್ರೌರ್ಯ.
ಬದುಕಿನ ಕವಚವನು ತೆಗೆದೆಸೆಯುತಿದೆ ಮಣ್ಣು.
ಕಳಚಿಕೊಳ್ಳುತಿದೆ ಕತ್ತಲಿನ ಮುಂಡಾಸು.
ನೀವು, ನಿಮ್ಮ ಕಣ್ಣು ತೆರೆಯಿರಿ; ಇವೆಲ್ಲವೂ ಹಳೆಯ ಪದಗಳು.
ಪುಟಿದೇಳುತಿರುವ ಅಲೆಗಳ ಒಡಲೊಳಗೆ ಬೆರೆಯುತಿದೆ ಸಣ್ಣ ಸೆಲೆ.
ತನ್ನ ತೀರವ ಮುಟ್ಟುತಿದೆ ಪ್ರತಿಯೊಂದು ಅಲೆ.
ಆದರೂ, ನನ್ನ ಮೈಮನದಿಂದಾಚೆಗೆ ಹಬ್ಬುತಿದೆ ಕ್ರೌರ್ಯದ ವಿಷ.
ನರ್ಮದೆಯ ನೀರಿನಂತೆ: ಇದು ಶಾಂತ, ಪ್ರಶಾಂತ.

ಮರಾಠಿ ಮೂಲ: ನಾಮ್‌ದೇವ್ ಢಸಾಳ್
ಇಂಗ್ಲಿಷ್‌ಗೆ: ದಿಲಿಪ್ ಚಿತ್ರೆ
ಕನ್ನಡಕ್ಕೆ: ಸತ್ಯಪ್ರಕಾಶ್ ಎಂ. ಆರ್

ಭಯೋತ್ಪಾದನೆ ಇಡೀ ಜಗತ್ತನ್ನು ನಡುಗಿಸುತ್ತಿರುವ ಬಹು ದೊಡ್ಡ ಪಿಡುಗು. ಬಲಿಷ್ಠ ರಾಷ್ಟ್ರಗಳು ದುರ್ಬಲ ರಾಷ್ಟ್ರಗಳನ್ನು ಹದ್ದುಬಸ್ತಿನಲ್ಲಿಡಲು ಬಳಸುತ್ತಿದ್ದ ಈ ಅಸ್ತ್ರ ಈಗ ಬಹುವ್ಯಾಪಿಯಾಗಿದ್ದು, ಇಡೀ ಜಗತ್ತನ್ನೇ ನಡುಗಿಸುತ್ತಿದೆ. ಶಾಂತಿ-ಸಹಬಾಳ್ವೆ ಆಶಿಸುವ ಎಲ್ಲರ ನೆಮ್ಮದಿ ಕೆಡಿಸಿದೆ. ಇತ್ತೀಚೆ ಗಂತೂ ಅದು ಧಾರ್ಮಿಕ ನೆಲೆಗಟ್ಟಿನ ಮೇಲೆ ವಿಸ್ತರಿಸಿಕೊಳ್ಳುತ್ತ ಜನಾಂಗ- ಜನಾಂಗಗಳ ನಡುವಿನ ದ್ವೇಷಕ್ಕೆ ಕಾರಣವಾಗುತ್ತಿದೆ. ಈ ಕುರಿತು ಚರ್ಚಿಸಬೇಕೆಂದು 'ಸಂವಾದ' ಇಚ್ಛಿಸಿದೆ. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರು ಹಾಗೂ ಸಾಮಾಜಿಕ ಕಾರ್ಯಕರ್ತರಿಗೆ 'ಸಂವಾದ' ಕಳುಹಿಸಿಕೊಟ್ಟಿತ್ತು. ಬಂದ ಉತ್ತರಗಳಲ್ಲಿ ಕೆಲವನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಮುಂದಿನ ಸಂಚಿಕೆಯಲ್ಲಿ ಉಳಿದವನ್ನು ಪ್ರಕಟಿಸುತ್ತೇವೆ. ಓದುಗರೂ ಈ ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು:

೧. ಭಯೋತ್ಪಾದನೆಯನ್ನು ನೀವು ಹೇಗೆ ವ್ಯಾಖ್ಯಾನಿಸುತ್ತೀರಿ? ಭಯೋತ್ಪಾದನೆಯ ಹಿಂದೆ ಇರುವ 'ಯುದ್ಧ ಸಿದ್ಧಾಂತ'ಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

೨. ಮುಸ್ಲಿಮರೆಲ್ಲ ದುಷ್ಟರು ಮತ್ತು ಭಯೋತ್ಪಾದಕರೆಂದು ಬಿಂಬಿಸುವ ಪ್ರಯತ್ನ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿದೆ. ಒಂದು ಧರ್ಮವನ್ನು ಹಾಗೂ ಅದನ್ನು ಅವಲಂಬಿಸಿರುವವರನ್ನು ಸಾರಾ ಸಗಟು ಭಯೋತ್ಪಾದಕರೆಂದು ನಿಂದನೆಗೆ ಗುರಿ ಮಾಡುವುದು ಸರಿಯೇ? ಚರಿತ್ರೆಯ ದೀರ್ಘಕಾಲೀನ ಪರಿಣಾಮದಲ್ಲಿ ಇದು ಯಾವ ಆಯಾಮಗಳನ್ನು ಪಡೆದುಕೊಳ್ಳಬಹುದು?

೩. ಭಯೋತ್ಪಾದನೆ ಮೂಲತಃ ಅಮೆರಿಕಾದಂತಹ ಬಂಡವಾಳಶಾಹಿ ರಾಷ್ಟ್ರಗಳ ರಾಜಕೀಯ ದಾಳವಾಗಿ ಬಳಸಲ್ಪಡುತ್ತಿತ್ತಾದರೂ ಈಚೆಗೆ "ಇಸ್ಲಾಂ" ಮಾತ್ರ ಇಂಥ ಆಪಾದನೆಗೇಕೆ ಗುರಿಯಾಯಿತು? ಬೇರೆ ಧರ್ಮದ ಜನ ಭಯೋತ್ಪಾದನೆಯಲ್ಲಿ ತೊಡಗಿದ್ದರೂ ಆ ಧರ್ಮವನ್ನೇಕೆ ಭಯೋತ್ಪಾದನೆ ಜತೆ ಸಮೀಕರಿಸುತ್ತಿಲ್ಲ?

೪. ಭಯೋತ್ಪಾದನೆಯ ನಿವಾರಣೆಗೆ ನೀವು ಸೂಚಿಸುವ ಮಾರ್ಗೋಪಾಯಗಳೇನು?

ಮತಧರ್ಮದ ಪ್ರಶ್ನೆಯಲ್ಲ-ಅಧಿಕಾರ ಸಂಪತ್ತಿನ ಪ್ರಶ್ನೆ

ಡಾ॥ ಜಿ. ರಾಮಕೃಷ್ಣ
ಖ್ಯಾತ ಚಿಂತಕರು



ಭಯೋತ್ಪಾದನೆ ಚರ್ಚೆ

೧. **ಎ**ರಡಕ್ಕಿಂತಲೂ ಹೆಚ್ಚು ಭಯೋತ್ಪಾದನೆಯ ಮುಖಗಳಿವೆ. ಇಂದು ಬೇರೆ ಕೆಲವು ರಾಷ್ಟ್ರಗಳನ್ನು 'ರೋಗ್ ಸ್ಟೇಟ್' ಎಂದು ಕರೆಯುವ ಅತ್ಯಂತ ಹೀನಾಯ 'ರೋಗ್ ಸ್ಟೇಟ್' ಆದ ಅಮೆರಿಕಾ ತನ್ನ ಮಿಲಿಟರಿ ಆಕ್ರಮಣ, ಕೊಲ್ಲುವಿಕೆ ಮತ್ತು ಲೂಟಿಗಳಿಂದ ಉಂಟು ಮಾಡುವ ಭಯೋತ್ಪಾದನೆ. ಎರಡನೆಯದು ಅತ್ಯಂತ ಆಕ್ರಮಣ ಎದುರಿಸಲು ಸಾಧ್ಯವಾಗದೆ ಹತಾಶರಾದವರು ರೊಚ್ಚಿನಿಂದ ಪ್ರತೀಕಾರದ ಭಯೋತ್ಪಾದನೆ ಉಂಟು ಮಾಡುವುದು. ಮೂರನೆಯದು ನಮ್ಮ ದೇಶದಲ್ಲಿ ಕಾಣಬರುವ ಭಯೋತ್ಪಾದನೆ. ಈ ವಿಧದ ಭಯೋತ್ಪಾದನೆಗೆ ಹಲವು ಕಾರಣಗಳಿವೆ. ಅವುಗಳಲ್ಲಿ ಪ್ರಮುಖವಾದವು ಎರಡು: (ಅ) ಕೃಷಿ, ಉದ್ಯಮ ಮುಂತಾದ ಉತ್ಪಾದನಾ ಘಟಕಗಳಲ್ಲಿ ಉತ್ಪಾದನೆ ಕುಸಿಯುತ್ತಿರುವುದು, ಘಟಕಗಳು ಮುಚ್ಚಿ ಹೋಗುವುದು ಇತ್ಯಾದಿ. ಅಂದರೆ ಬೇರೆ ಉತ್ಪಾದನೆಗಳು ಸ್ಥಗಿತವಾದಾಗ ಅಥವಾ ನಾಶವಾದಾಗ ಭಯೋತ್ಪಾದನೆಯ ಉತ್ಪಾದನೆಯಾಗುತ್ತದೆ.

ಅಸಹಾಯಕತೆಯಿಂದ ಮೂಡುವ ಕ್ರಮ ಇದು. (ಆ) ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರಭುತ್ವವೆಲ್ಲಾ ಆಳುವ ವರ್ಗ ಮತ್ತು ಅದರ ತಥಾಕಥಿತ ಪ್ರತಿನಿಧಿಗಳಲ್ಲಿ ಕೇಂದ್ರೀಕೃತವಾಗಿ ಪ್ರಜೆಗಳ ಸೊಲ್ಲು ಅಡಗಿ ಹೋಗುವಂತಹ ಸನ್ನಿವೇಶ. ಪ್ರಭುತ್ವದ ಸ್ವೇಚ್ಛಾ ವೃತ್ತಿ, ಸಂವಾದದ ನಿರಾಕರಣೆ, ದಮನಿತ ಜನರ ಕೂಗಿಗೆ ಸ್ಪಂದಿಸದಿರುವುದು, ಈಗಾಗಲೇ ಅಂಚಿಗೆ ತಳ್ಳಲ್ಪಟ್ಟವರನ್ನು ಇನ್ನೂ ಹೆಚ್ಚಾಗಿ ಹಿಂಸಿಸಿ ಅವರ ಜೀವನವನ್ನು ದುರ್ಭರವಾಗಿಸುವುದು, ದೇಶದಲ್ಲಿ ಬಹು ರಾಷ್ಟ್ರಗಳಿವೆಯೆಂಬ ಸತ್ಯವನ್ನು ಅಲ್ಲಗಳೆದು ವಿವಿಧ ರಾಷ್ಟ್ರೀಯತೆಗಳನ್ನು ಬಗ್ಗುಬಡಿಯಲು ಪ್ರಭುತ್ವವು ಹವಣಿಸುವುದು, ಸಾಮಾಜಿಕ-ಆರ್ಥಿಕ ವ್ಯವಸ್ಥೆಯನ್ನು ಗುಣಾತ್ಮಕವಾಗಿ ಬದಲಾಯಿಸದೆ ತುಳಿತಕ್ಕೆ ಸಿಕ್ಕಿದವರನ್ನು ದೌರ್ಜನ್ಯಕ್ಕೆ ಗುರಿಮಾಡುವುದು ಇತ್ಯಾದಿಗಳು ಭಯೋತ್ಪಾದನೆಗೆ ಮೂಲ ಕಾರಣ.

ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಆಗದಂತಹ ಸನ್ನಿವೇಶವು ನಮ್ಮಲ್ಲಿದೆ. ಸೋತು ಕಂಗಾಲಾದವರು ಪರ್ಯಾಯವನ್ನು ಆಶಿಸುತ್ತಾ ನಾಳೆಗಳನ್ನು ಎಣಿಸಬಹುದು ಇಲ್ಲವೆ ಭಯೋತ್ಪಾದನೆಗೆ ಮುಂದಾಗಬಹುದು. ಕಾಶ್ಮೀರ, ಮಣಿಪುರ, ಅಸ್ಸಾಂ, ನಾಗಾಲ್ಯಾಂಡ್ ಇತ್ಯಾದಿಗಳನ್ನು ಗಮನಿಸಿದರೆ ಈ ವ್ಯಾಖ್ಯಾನವು ಅರ್ಥವಾಗುತ್ತದೆ. ನಿರ್ಗತಿಕರನ್ನು ಹೆಚ್ಚು ಮಾಡುವಂತಹ ಹುಚ್ಚು ಕ್ರಮಗಳು ಪ್ರಭುತ್ವದ ಬತ್ತಳಿಕೆಯಲ್ಲಿವೆ. ಭೂಮಿ ಕಿತ್ತುಕೊಳ್ಳುವುದು, ಬುಡಕಟ್ಟು ಜನರಿಗೆ ನೆಲೆಯಿಲ್ಲದಂತೆ ಮಾಡುವುದು, ಭಾರಿ ಭೂಮಾಲೀಕರ ಉಪಟಳಕ್ಕೆ ಕಡಿವಾಣ ಹಾಕದಿರುವುದು. ಇವೆಲ್ಲಾ ಈ ಮಾದರಿಯ ಕ್ರಮಗಳು. ಆಗಲೂ ರೋಸಿ ಹೋದವರು ಅಸಹನೆಯಿಂದ ಭಯೋತ್ಪಾದನೆಗೆ ಇಳಿಯುತ್ತಾರೆ. ಕಡೆಯದಾಗಿ, ಜಡ್ಡು ಹಿಡಿದ ಮತಧರ್ಮದ ಭಾವೋದ್ರೇಕಗಳು ಭಯೋತ್ಪಾದನೆಗೆ ಎಡೆ ಮಾಡಿಕೊಡುತ್ತವೆ. ಇವೆಲ್ಲಾ ಭಯೋತ್ಪಾದನೆಗೆ ಸಮರ್ಥನೆ ಒದಗಿಸದಿರಬಹುದು. ಆದರೆ ಕಾರಣಗಳಂತೂ ಆಗುತ್ತವೆ.

ಹಿಂದೆ ಆಲ್ಜೀರಿಯಾದ ಸ್ವಾತಂತ್ರ್ಯ ಹೋರಾಟಗಾರರನ್ನು ಭಯೋತ್ಪಾದಕರೆಂದು ಕರೆಯುತ್ತಿದ್ದರು. ಆಮೇಲೆ ಪ್ಯಾಲಿಸ್ಟೈನ್, ಇರಾನ್ ಎಲ್ಲಾ ಸೇರಿಕೊಂಡಿವೆ. ಗಮನಿಸಬೇಕಾದ ಒಂದು ಅಂಶವಿದೆ. ಅದೇನೆಂದರೆ, ಆ ದೇಶಗಳವರು ಮೊದಲಿಗೆ ತಮ್ಮ ದೇಶಗಳಲ್ಲಷ್ಟೇ ಆಕ್ರಮಣಕಾರರನ್ನು ಹಿಮ್ಮೆಟ್ಟಿಸಲು ತೀವ್ರಗಾಮಿತನವನ್ನು ಆತುಕೊಂಡಿದ್ದರು. ದಮನವು ಅಂತಾರಾಷ್ಟ್ರೀಯ ವ್ಯಾಪಕತೆ ಹೊಂದಿತಾದ್ದರಿಂದ ಭಯೋತ್ಪಾದನೆಯೂ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿತು. ಪ್ಯಾಲಿಸ್ಟೈನ್ ಸಂದರ್ಭದಲ್ಲಿ ತೀವ್ರಗಾಮಿಗಳು ಹೇಳುತ್ತಿದ್ದರು: "ನಮ್ಮ ದೇಶವನ್ನು ಅಮೆರಿಕಾ, ಬ್ರಿಟನ್ ಎಲ್ಲಾ ಸೇರಿ ಹೈಜಾಕ್ ಮಾಡಿ ಇಸ್ರೇಲಿಗೆ ಕೊಟ್ಟು ನಮ್ಮನ್ನು ದೇಶವಿಲ್ಲದವರನ್ನಾಗಿ ಮಾಡಿದಾಗ ಸುಮ್ಮನೆ ವೀಕ್ಷಿಸುತ್ತಿದ್ದವರು, ನಾವು ಒಂದು ವಿಮಾನವನ್ನು ಹೈಜಾಕ್ ಮಾಡಿದಾಗ ನಮ್ಮನ್ನು ಭಯೋತ್ಪಾದಕರೆಂದು ಮೂದಲಿಸುತ್ತೀರಿ. ನಮ್ಮ ದೇಶ ನಮಗೆ ಕೊಟ್ಟು ಬಿಡಿ, ಭಯೋತ್ಪಾದನೆ ನಮಗೇಕೆ ಬೇಕು?" ಇರಾಕಿನಲ್ಲಿ ಲಕ್ಷಗಟ್ಟಲೆ ಜನರನ್ನು ಕೊಂದಿರುವ ಅಮೆರಿಕಾ ಇರಾಕಿ ಹೋರಾಟಗಾರರನ್ನು "ಶತ್ರುಗಳು" ಎಂದು ಕರೆಯುತ್ತದೆ. ಮಾಧ್ಯಮಗಳು ಅದನ್ನೇ ಪ್ರಚಾರ ಮಾಡುತ್ತವೆ. ಅಂದರೆ, ಅವರ ದೇಶದಲ್ಲಿ ಅವರೇ ಶತ್ರುಗಳಾಗಿ ಕಾಣುವ ವಿಪರ್ಯಾಸ ವೇರ್ಪಟ್ಟಿದೆ. ಇರಾಕಿನ ನಿಜವಾದ ಶತ್ರುವು ಆಕ್ರಮಣಕಾರ

(೩೬ನೇ ಪುಟಕ್ಕೆ)

ಡಿ.ಎಸ್. ನಾಗಭೂಷಣ್
ಖ್ಯಾತ ಚಿಂತಕರು

ಭಯೋತ್ಪಾದನೆ ಚರ್ಚೆ

ಅವಿವೇಕದ ಪರಮಾವಧಿ

೧. ಎಲ್ಲ ಹಿಂಸೆಯೂ ಅಂತಿಮವಾಗಿ ಭಯೋತ್ಪಾದನೆ ಎನ್ನಿಸಿಕೊಳ್ಳುವುದಾದರೂ, ಭಯೋತ್ಪಾದನೆಗೆ ಇಂದಿನ ಜಾಗತಿಕ ರಾಜಕೀಯ ಸಂದರ್ಭದಲ್ಲಿ ಒಂದು ನಿರ್ದಿಷ್ಟ ಅರ್ಥ ಪ್ರಾಪ್ತಿಯಾಗಿದೆ. ಸಾಂವಿಧಾನಿಕ(ಅಂದರೆ ಜನಶಕ್ತಿಯ) ಅನುಮೋದನೆ ಇಲ್ಲದೆ ಒಂದು ರಾಷ್ಟ್ರದ ಭಿನ್ನಮತೀಯ ಗುಂಪುಗಳು ತಮ್ಮ ಅಭಿಪ್ರಾಯ ಅಥವಾ ದೃಷ್ಟಿಕೋನಗಳನ್ನು ಪ್ರಚುರಪಡಿಸಲು ಮತ್ತು ಅವುಗಳ ಪರವಾಗಿ ಬೆಂಬಲ ಸಂಘಟಿಸಿಕೊಳ್ಳಲು ತನ್ನ ಜನರ ಮೇಲೇ ಅಥವಾ ಇತರ ಸಮಾಜಗಳ ಅಥವಾ ರಾಷ್ಟ್ರಗಳ ಮೇಲೆ ನಡೆಸುವ ಹಿಂಸಾಚಾರವನ್ನು ಸ್ಥೂಲವಾಗಿ ಭಯೋತ್ಪಾದನೆ ಎಂದು ಕರೆಯಬಹುದು. ಶಬ್ದಾರ್ಥ ಹಾಗೂ ಭಾವಾರ್ಥ ಎರಡರ ನೆಲೆಯಲ್ಲೂ ಭಯೋತ್ಪಾದನೆಯ ಅರ್ಥ, ಹಿಂಸೆ-ಅಹಿಂಸೆಯ ಪರಿಕಲ್ಪನೆಗಳನ್ನು ನಾವು ಯಾವ ನೈತಿಕ ನೆಲೆಯಲ್ಲಿ ಗ್ರಹಿಸುತ್ತೇವೆ ಎಂಬುದನ್ನು ಅವಲಂಬಿಸಿದೆ. ಈ ಅರ್ಥದಲ್ಲಿ ಇದು ಧಾರ್ಮಿಕ ಪ್ರಶ್ನೆಯೂ ಹೌದು. ಹಾಗಾಗಿಯೇ ಇಂದು ಭಯೋತ್ಪಾದನೆ ಕೆಲವರಿಗೆ ಧಾರ್ಮಿಕ ಕೆಲಸವಾಗಿದ್ದರೆ, ಕೆಲವರಿಗೆ ಅಧಾರ್ಮಿಕ ಕೆಲಸವಾಗಿರುತ್ತದೆ. ಇನ್ನು ನಿಮ್ಮ 'ಯುದ್ಧ ಸಿದ್ಧಾಂತ'ದ ವಿಷಯವಾಗಿ, ಮುಂದಿನ ಪ್ರಶ್ನೆಗಳ ಉತ್ತರದಲ್ಲಿ ನನ್ನ ಪ್ರತಿಕ್ರಿಯೆಯನ್ನು ಗ್ರಹಿಸಬಹುದು.

೨. ನನಗೇನೂ ಹಾಗನ್ನಿಸುವುದಿಲ್ಲ. ಇಂದು ಜಗತ್ತಿನಲ್ಲಿ ಎದ್ದು ಕಾಣುವಂತೆ ನಿರಂತರವಾಗಿ ಭಯೋತ್ಪಾದನೆಯ ಕೃತ್ಯಗಳಲ್ಲಿ ತೊಡಗಿರುವವರು, ಅಮೆರಿಕಾದಿಂದ ಹಿಡಿದು ಇಂಡೋನೇಷ್ಯಾದವರೆಗೆ ಮುಸ್ಲಿಮರೇ ಆಗಿರುವುದರಿಂದ ಈವೊಂದು ಅಭಿಪ್ರಾಯ ಆಳವಾದ ರಾಜಕೀಯ ತಿಳವಳಿಕೆಯಿಲ್ಲದ ಜನಸಾಮಾನ್ಯರಲ್ಲಿ ಮೂಡುವುದು ಸಹಜ. ಆದರೆ ಒಂದು ಜನ ವರ್ಗದ ಇಂತಹ ಸಾರಾಸಗಟು ಅಭಿಪ್ರಾಯದ ವಿರುದ್ಧವೂ, ಅಮೆರಿಕಾ ಸೇರಿದಂತೆ ಜಗತ್ತಿನಾದ್ಯಂತ ಜನ ಜಾಗೃತಿ ಕಾರ್ಯಕ್ರಮಗಳು ನಡೆದಿವೆ. ಇತ್ತೀಚೆಗೆ ತಾನೇ ನಮ್ಮ ಬೆಂಗಳೂರಿನ ಹನೀಫ್ ವಿರುದ್ಧದ ಕಾರ್ಯಾಚರಣೆಯ ವಿರುದ್ಧವೇ ಆಸ್ಟ್ರೇಲಿಯಾದ ಹಾಗೂ ಭಾರತದ ಜನತೆ ಕೂಡಾ ಮತಭೇಧವಿಲ್ಲದೆ ಪ್ರತಿಭಟಿಸಿ ಆತನ ನೆರವಿಗೆ ಬರಲಿಲ್ಲವೇ? ಯಾವುದೇ ಒಂದು ಧರ್ಮದವರನ್ನು ಭಯೋತ್ಪಾದಕರು ಎಂದು ಸಾರಾಸಗಟಾಗಿ ಕರೆಯುವುದು ಅಥವಾ ನಿಂದಿಸುವುದು ಅವಿವೇಕದ ಪರಮಾವಧಿ ಅಷ್ಟೆ. ಆದರೆ ಅಂತಹ ನಿಂದನೆಗೆ ಗುರಿಯಾದ ಧರ್ಮದ ನಾಯಕತ್ವ-ಧಾರ್ಮಿಕ, ಸಾಮಾಜಿಕ ಸಾಂಸ್ಕೃತಿಕ ಹಾಗೂ ರಾಜಕೀಯ ಯಾವುದಾರೂ ನೆಲೆಯ-ಕೂಡಾ ಒಮ್ಮೆ ಈ ನಿಂದನೆಗೆ ಕಾರಣವಾದರೂ ಏನು ಎಂದು ಪ್ರಾಮಾಣಿಕ ಹಾಗೂ ವಸ್ತುನಿಷ್ಠವಾಗಿ ಆಲೋಚಿಸುವ ಪ್ರಯತ್ನವನ್ನೂ ಮಾಡಬೇಕು. ಅಂತಹ ಗಂಭೀರ ಪ್ರಯತ್ನ ಯಾವ ಮಟ್ಟದಲ್ಲೂ ಸಂಘಟಿತವಾಗದಿರುವುದೇ, ಎಲ್ಲ ಗೊಂದಲಗಳಿಗೆ ಕಾರಣವಾಗಿದೆ. ಈ ಗೊಂದಲಗಳೇ ಚರಿತ್ರೆಯ ಮುಂದಿನ ಆಯಾಮಗಳನ್ನು ಸೃಷ್ಟಿಸುವಂತಾದರೆ, ಅದು ದೊಡ್ಡ ದುರಂತವೇ ಸರಿ.

೩. ಭಯೋತ್ಪಾದನೆ ಮೂಲತಃ ಈ ಹಿಂದಿನ ಅಮೆರಿಕಾ-ರಷ್ಯಾಗಳ ಶೀತಲ ಸಮರದ ಅಂತ್ಯದ ಅವಶೇಷವೇ ಆಗಿದೆ. ಅಮೆರಿಕಾದ ಸಮೃದ್ಧಿಗೆ ಅಸ್ತಿವಾರ ಹಾಕಲ್ಪಟ್ಟಿದ್ದೇ ಅಲ್ಲಿನ ಮೂಲನಿವಾಸಿಗಳಾದ ರೆಡ್ ಇಂಡಿಯನ್ನರನ್ನು ಭಯೋತ್ಪಾದನೆಯ ಪ್ರಾಥಮಿಕ ಆವೃತ್ತಿಯ ಮೂಲಕ ನಾಶ ಮಾಡುವುದರೊಂದಿಗೆ. ಇದಕ್ಕೆ ಬಳಸಲಾದ ಅಸ್ತ್ರ: ಆಧುನಿಕ ತಂತ್ರಜ್ಞಾನ. ಇದರ ಸೊಕ್ಕಿನಲ್ಲೇ ಜಗತ್ತಿನ ಎರಡು ಮಹಾಯುದ್ಧಗಳು ನಡೆದದ್ದು. ಜಗತ್ತು ಎರಡು ಪಾಳೆಯಗಳಾಗಿ ಒಡೆದು, ಭಯೋತ್ಪಾದನೆಯ ವಿವಿಧ ರೂಪಗಳು ಚಿಗುರೊಡೆದದ್ದು. ಇಸ್ರೇಲ್ ಇದಕ್ಕೊಂದು ಸಾಕ್ಷಿಯಷ್ಟೆ. ರಷ್ಯಾ, ಪೂರ್ವ ಯೂರೋಪ್ ರಾಷ್ಟ್ರಗಳೆಂಬ ತನ್ನ ಇಸ್ರೇಲ್‌ಗಳು ತನ್ನ ಹಿಡಿತದಿಂದ ತಪ್ಪಿಸಿಕೊಂಡು ಹೋಗದಂತೆ ರಕ್ಷಿಸಿಕೊಳ್ಳಲು ಆಫ್ಘಾನಿಸ್ಥಾನದ ಮೇಲೆ ನಡೆಸಿದ ರಾಜಕೀಯ ಆಕ್ರಮಣವೇ ಆಧುನಿಕ ಭಯೋತ್ಪಾದನೆಗೆ ಕಾರಣವಾಯಿತು. ಒಸಮಾ ಬಿನ್ ಲಾಡೆನ್‌ನ ಸೃಷ್ಟಿಯಾಯಿತು. ಇಂದು ಇಸ್ರೇಲ್ ಹಿಂದಕ್ಕೆ ಸರಿದು, ಲಾಡೆನ್ ಜಾಗತಿಕ ಭಯೋತ್ಪಾದನೆಯ ಕೇಂದ್ರಕ್ಕೆ ಬಂದಿದ್ದರೆ, ಅದಕ್ಕೆ ಕಾರಣ, ಭಯೋತ್ಪಾದನೆ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವುದೇ ಆಗಿದೆ. ಹಾಗಾಗಿ ಭಯೋತ್ಪಾದನೆಯನ್ನು ಇಸ್ಲಾಂನೊಂದಿಗೆ ಸಮೀಕರಿಸುವ ಪ್ರವೃತ್ತಿ ಬೆಳೆಯುತ್ತಿದೆ.

ಭಾರತದಲ್ಲೂ ಇಪ್ಪತ್ತು ವರ್ಷಗಳ ಹಿಂದೆ ಪಂಜಾಬ್ ಅಶಾಂತಿಯ ಕಾಲದಲ್ಲಿ, ಸಿಖ್ ಧರ್ಮವನ್ನೂ ಹೀಗೆ ಭಯೋತ್ಪಾದನೆಯೊಂದಿಗೆ ಸಮೀಕರಿಸಲಾಗಿತ್ತು ಎಂಬುದನ್ನು ನಾವು ಮರೆಯಬಾರದು. ಜೊತೆಗೆ, ಭಾರತವನ್ನು ಅಸ್ಥಿರಗೊಳಿಸುವ(ಬಹುಶಃ ಬಂಗ್ಲಾದೇಶದ ಹುಟ್ಟಿಗೆ ಕಾರಣವಾದುದರ ವಿರುದ್ಧ ಸೇಡು ತೀರಿಸಿಕೊಳ್ಳಲು) ಪ್ರಯತ್ನಗಳು ಪಾಕಿಸ್ಥಾನದಲ್ಲಿ ನೆಲೆಗೊಂಡಿರುವ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳಿಂದ ನಡೆದಿರುವುದರಿಂದ, ಈ ಪ್ರವೃತ್ತಿಗೆ ಭಾರತದಲ್ಲಿ ಒಂದು ನೆಲೆಯಲ್ಲಿ ಮಾನ್ಯತೆ ದೊರೆಯುವಂತಾಗಿದೆ. ಬೇರೇ ಧರ್ಮದ ಜನ-ಉದಾಹರಣೆಗೆ LTTEಯ ತಮಿಳು ಉಗ್ರಗಾಮಿಗಳು-ಭಯೋತ್ಪಾದನೆಗೆ ತೊಡಗಿದ್ದರೂ, ಅದು ಮೂಲತಃ ಧಾರ್ಮಿಕ ಕಾರಣಗಳಿಂದಾಗಿ ಅಲ್ಲವಾದ್ದರಿಂದ, ಆ ಕಳಂಕ ಅವರ ಧರ್ಮಗಳಿಗೆ ತಟ್ಟಿಲ್ಲ ಅಷ್ಟೆ.

ಇಂದು ಕಾಣುತ್ತಿರುವ ಭಯೋತ್ಪಾದನೆ ತಾತ್ವಿಕವಾಗಿ, ಎರಡು ಜೀವನ ಕ್ರಮಗಳ ಹಾಗೂ ನಂಬಿಕೆಗಳ ನಡುವಣ ಘರ್ಷಣೆಯೇ ಆಗಿದ್ದು, ಆ ಅರ್ಥದಲ್ಲಿ ರಾಜಕೀಯ ಘರ್ಷಣೆಯೇ ಆಗಿದೆ. ಆದರೆ ಈ ಘರ್ಷಣೆಯನ್ನು ಸಾಂಸ್ಕೃತಿಕ ಅನುಸಂಧಾನಗಳ ಮೂಲಕ ಅಥವಾ ರಾಷ್ಟ್ರ ರಾಷ್ಟ್ರಗಳ ನಡುವಣ ಅಧಿಕೃತ ರಾಜಕೀಯ ಸಂವಾದದ(ಅವೆಷ್ಟೇ ಕಹಿಯಾಗಿದ್ದರೂ) ಮೂಲಕ ನಿವಾರಿಸಿಕೊಳ್ಳುವ ಬದಲು, ಯಾವುದೇ ರೀತಿಯ ಪ್ರಜಾಸತ್ತಾತ್ಮಕ ಮಾನ್ಯತೆ ಇಲ್ಲದ ಸಂಘಟನೆಗಳು ಅಪ್ರಜಾಸತ್ತಾತ್ಮಕ ಮಾರ್ಗಗಳಲ್ಲಿ ಇತ್ಯರ್ಥಗೊಳಿಸಲು ಹೊರಟಿರುವುದೇ ಸಮಸ್ಯೆಯ ಮೂಲವಾಗಿದೆ.

೪. ಇದು ನನ್ನಂಥವನಿಗೆ ದೊಡ್ಡ ಪ್ರಶ್ನೆ. ಹಾಗೆ ನೋಡಿದರೆ ಜಾಗತಿಕ ಶಕ್ತಿ (Global Power)ಯಾಗುವ ಪೌರುಷದ ಮಾತುಗಳ ರಾಜಕೀಯ ಪರಿಭಾಷೆಯನ್ನು ಸೃಷ್ಟಿಸಿರುವ ಶಕ್ತಿ ರಾಜಕಾರಣವೇ ಭಯೋತ್ಪಾದನೆಯ ಮೂಲವಾಗಿದೆ. ಭಾರತದ ರಾಜಕಾರಣವೂ ಈ ಪರಿಭಾಷೆಗೆ ಬಲಿಯಾಗಿ ಇಂದು ಭಯೋತ್ಪಾದನೆಗೆ ತುತ್ತಾಗಿದೆ. ಆದರೆ ಇದು ದೊಡ್ಡ ಸಮಸ್ಯೆಯೇ ಅಲ್ಲವೆಂಬಂತೆ, ಎರಡಂಕಿಯ ಪ್ರಗತಿ ದರದ ಅಭಿವೃದ್ಧಿಯ ಮಾತನ್ನಾಡುತ್ತಾ ಜನರನ್ನು ಮರುಳು ಮಾಡುವ 'ಮಾಯಾ ಬಜ಼ಾರ್' ರಾಜಕಾರಣ ಇಂದು ಜನಪ್ರಿಯವಾಗಿ, ಚಾಲ್ತಿಗೆ ಬಂದಿದೆ. ಇಂತಹ ರಾಜಕಾರಣವನ್ನೆದುರಿಸುವ ಮೂಲಕವೇ ಭಯೋತ್ಪಾದನೆಯನ್ನೂ ಎದುರಿಸಬೇಕಾಗುತ್ತದೆ. ಇದರ ಒಂದು ಭಾಗವಾಗಿಯೇ ಎಲ್ಲ ರೀತಿಯ ಭಯೋತ್ಪಾದನೆಯನ್ನೂ ಯಾವುದೇ ಬೌದ್ಧಿಕ ತಲೆ ಹರಟೆಗೆ ಎಡೆ ಕೊಡದೆ, ಸ್ಪಷ್ಟ ಶಬ್ದಗಳಲ್ಲಿ ನಿರಾಕರಿಸಿ ಖಂಡಿಸಬೇಕಿದೆ. □

ಯಾವುದೇ ರೀತಿಯ ಪ್ರಜಾಸತ್ತಾತ್ಮಕ ಮಾನ್ಯತೆ ಇಲ್ಲದ ಸಂಘಟನೆಗಳು ಅಪ್ರಜಾಸತ್ತಾತ್ಮಕ ಮಾರ್ಗಗಳಲ್ಲಿ ಇತ್ಯರ್ಥಗೊಳಿಸಲು ಹೊರಟಿರುವುದೇ ಸಮಸ್ಯೆಯ ಮೂಲವಾಗಿದೆ. ಇದು ನನ್ನಂಥವನಿಗೆ ದೊಡ್ಡ ಪ್ರಶ್ನೆ. ಹಾಗೆ ನೋಡಿದರೆ ಜಾಗತಿಕ ಶಕ್ತಿ (Global ower)ಯಾಗುವ ಪೌರುಷದ ಮಾತುಗಳ ರಾಜಕೀಯ ಪರಿಭಾಷೆಯನ್ನು ಸೃಷ್ಟಿಸಿರುವ ಶಕ್ತಿ ರಾಜಕಾರಣವೇ ಭಯೋತ್ಪಾದನೆಯ ಮೂಲವಾಗಿದೆ. ಭಾರತದ ರಾಜಕಾರಣವೂ ಈ ಪರಿಭಾಷೆಗೆ ಬಲಿಯಾಗಿ ಇಂದು ಭಯೋತ್ಪಾದನೆಗೆ ತುತ್ತಾಗಿದೆ.

ಎಚ್.ಎಸ್. ದೊರೆಸ್ವಾಮಿ

ಸ್ವಾತಂತ್ರ್ಯ ಹೋರಾಟಗಾರರು



ಭಯೋತ್ಪಾದನೆ ಚರ್ಚೆ

'ಎಲ್ಲರಲ್ಲೂ ಇದ್ದಾರೆ'

೧. **ಈ**ಗ ವಿಶ್ವದಲ್ಲಿ ಕೇಳಿ ಬರುತ್ತಿರುವುದು ಹೆಚ್ಚಾಗಿ ಜನಾಂಗ-ಜನಾಂಗಗಳ ಮಧ್ಯದ ದ್ವೇಷ. ಅಮೆರಿಕ ಇರಾಕ್ ಮೇಲೆ ಯುದ್ಧ ಸಾರಿದ್ದು, ಒಂದು ವಿಧದ ಭಯೋತ್ಪಾದಕ ಕೃತ್ಯವಾದರೆ ಮುಸ್ಲಿಮರ ವಿವಿಧ ಹೆಸರಿನ ಮುಷ್ಟಿಕೂಟ ಸಂಸ್ಥೆಗಳು ಭಾರತದ ಅನೇಕ ಆಯಕಟ್ಟು ಸ್ಥಳಗಳಲ್ಲಿ, ನಗರಗಳಲ್ಲಿ ದಾಳಿ ನಡೆಸಿರುವುದು ಇನ್ನೊಂದು ಬಗೆಯದು.

ಭಯೋತ್ಪಾದನೆಗೆ ಜನಾಂಗೀಯ ದ್ವೇಷ ಒಂದು ಕಾರಣವಾದರೆ, ಭಯೋತ್ಪಾದನೆಗೆ ಎಲ್ಲ ನೆರವು ನೀಡುತ್ತಿದ್ದ ಪಾಕಿಸ್ತಾನ, ಅಮೆರಿಕದ ಒತ್ತಡಕ್ಕೆ ಮಣಿದು ಈ ಬೆಂಬಲವನ್ನೂ ಹಿಂತೆಗೆದುಕೊಂಡುದರ ಪರಿಣಾಮವಾಗಿ ಆಲ್ಖೈದಾ ಮುಂತಾದ ಭಯೋತ್ಪಾದಕ ಸಂಘಟನೆಗಳು ಪಾಕಿಸ್ತಾನದ ಆಡಳಿತದ ವಿರುದ್ಧವೇ ಸಿಡಿದೆದ್ದಿರುವುದು ಒಂದು ಹೊಸ ಬೆಳವಣಿಗೆ.

೨. ಮುಸ್ಲಿಮರನ್ನೆಲ್ಲ ಸಾರಾಸಗಟಾಗಿ ಭಯೋತ್ಪಾದಕರೆಂದು ಬ್ರಾಂಡ್ ಮಾಡುವುದು ಬಾಲಿಶ. ಹಾಗೆ ನಾವು ಸಲ್ಲದ ಆರೋಪ ಹೊರಿಸುತ್ತಾ ಹೋದರೆ ಕೊನೆಗೆ ನಾವು ವಿಶ್ವದ ಎಲ್ಲ ಮುಸ್ಲಿಂ ಜನಾಂಗದ ದ್ವೇಷವನ್ನು ಬೆಳೆಸಲು ಶ್ರಮಿಸಿದಂತಾಗುತ್ತದೆ. ಇದು ನ್ಯಾಯ ಮಾತ್ರವಲ್ಲ, ಅಪಾಯಕಾರಿ ಕೂಡ.

ಭಾರತದ ಮುಸ್ಲಿಂ ಮುಖಂಡರೇ ಇತ್ತೀಚೆಗೆ 'ಇಸ್ಲಾಂ ಧರ್ಮ ಶಾಂತಿ, ಸೌಹಾರ್ದಗಳನ್ನು ಬೆಳೆಸಲು ಬೋಧಿಸುತ್ತದೆ. ಭಯೋತ್ಪಾದನೆಯನ್ನು ಇಸ್ಲಾಂ ಧರ್ಮ ಒಪ್ಪುವುದಿಲ್ಲ' ಎಂದು ಹೇಳಿಕೆ ನೀಡಿರುವುದಾಗಿ ವೃತ್ತಪತ್ರಿಕೆಗಳಿಂದ ತಿಳಿದು ಬರುತ್ತದೆ.

ಭಯೋತ್ಪಾದನೆಯ ವಿರುದ್ಧ ಆ ಹೆಸರಿನಲ್ಲಿ ನಡೆಯುವ ಮುಗ್ಧರ ಕಗ್ಗೊಲೆಯ ವಿರುದ್ಧ ಭಾರತದ ಮುಸ್ಲಿಂ ಬಾಂಧವರು ಇನ್ನೂ ದೊಡ್ಡ ಕೂಗನ್ನು ಹಾಕಬೇಕಾಗಿದೆ. ಭಯೋತ್ಪಾದನೆ ಅಡಗಿಸುವಲ್ಲಿ ಸಕಾರಾತ್ಮಕ ಸಹಕಾರವನ್ನೂ ಭಾರತ ಸರ್ಕಾರಕ್ಕೆ ನೀಡಬೇಕಾಗಿದೆ. ಈ ಕೂಗನ್ನು ಭಯೋತ್ಪಾದನೆ ನಡೆದ ಸಂದರ್ಭದಲ್ಲಿ ಮಾತ್ರ ಹಾಕಿದರೆ ಸಾಲದು. ಭಯೋತ್ಪಾದನೆಯ ವಿರುದ್ಧ ಸಿಡಿದೇಳುವ ಮಾತನ್ನೂ ಮುಸ್ಲಿಮರು ಆಡುವಂತಾಗಬೇಕು. ಭಾರತದ ಜಾತ್ಯತೀತ ನೀತಿಗೆ ಇಂಬು ಕೊಡುವ ಎಲ್ಲ ಕ್ರಮಗಳನ್ನೂ ಕೈಗೊಳ್ಳಲು ಮುಸ್ಲಿಂ ಬಾಂಧವರು ಮುಂದೆ ಬರಬೇಕು.

ಭಾರತ- ಪಾಕಿಸ್ತಾನ ಒಂದುಗೂಡುವುದಾದರೆ ಒಂದೇ ರಾಷ್ಟ್ರವಾಗಿ ಮತ್ತೆ ವಿಜೃಂಭಿಸುವುದಾದರೆ ಅದಕ್ಕೆ ಸದಾ ಸ್ವಾಗತ. ಆದರೆ ಈ ಪ್ರಕ್ರಿಯೆ ಉಭಯ ರಾಷ್ಟ್ರಗಳ ಸರ್ವಸಮ್ಮತಿಯಿಂದ ಆಗಬೇಕು.

ಪಾಕಿಸ್ತಾನಕ್ಕೆ ಭಾರತವನ್ನು ಆಕ್ರಮಿಸುವ ಆಸೆ ಇದ್ದಂತೆಯೇ ಆರ್ ಎಸ್ ಎಸ್, ಬಿಜೆಪಿಗಳಿಗೆ ಪಾಕಿಸ್ತಾನವನ್ನು ಯಾವುದಾದರೂ ನೆಪ ಹೂಡಿ ನುಂಗಿ ಹಾಕುವ ವಿಚಾರ ಇದೆ. ಈ ವಿಚಾರದಲ್ಲಿ ನಮ್ಮ ನಿಲುವು ಸ್ಪಷ್ಟವಾಗಿರಬೇಕು. ಆಕ್ರಮಣಕಾರಿ ನೀತಿಯನ್ನು ಪಾಕಿಸ್ತಾನವೇ ಅನುಸರಿಸಲಿ, ಭಾಜಪ ಮುಂತಾದ ಮತಾಂಧ ಸಂಸ್ಥೆಗಳು ಅನುಸರಿಸಲಿ ಅದನ್ನು ಭಾರತ ಒಪ್ಪಬಾರದು.

ಪಾಕಿಸ್ತಾನ ಭಯೋತ್ಪಾದಕರ ಮುಖಾಂತರವಾಗಿಯಾಗಲಿ, ತಾನೇ ನೇರವಾಗಿಯಾಗಲಿ ಭಾರತದಲ್ಲಿ ಅಶಾಂತಿ ಉಂಟು ಮಾಡಲು ತೊಡಗಿದಲ್ಲಿ ಭಾರತದ ಜನತೆ ತನ್ನ ತನುಮನ ಧನವನ್ನೂ ಧಾರೆಯೆರೆಯುವ ಮುಖಾಂತರ ಭಯೋತ್ಪಾದನೆಯನ್ನೂ, ಆಕ್ರಮಣವನ್ನೂ ತಡೆಗಟ್ಟುವುದೆಂದೂ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಬೇಕು.

೩. ಮುಸ್ಲಿಂ ಭಯೋತ್ಪಾದಕ ಸಂಘಟನೆಗಳು ಹೆಚ್ಚು ಸುದ್ದಿಯಲ್ಲಿದ್ದರೂ ಬೇರೆ ಧರ್ಮದವರ, ಬೇರೆ ಜನಾಂಗದವರ ಭಯೋತ್ಪಾದಕ ಸಂಘಟನೆಗಳು ಅಸ್ತಿತ್ವದಲ್ಲಿರುವುದು ಸುಳ್ಳಲ್ಲ. ಆಗಾಗ ಮುಸ್ಲಿಮರ ಮೇಲೆ ಕ್ರಿಶ್ಚಿಯನ್ನರ ಮೇಲೆ ನಡೆಯುವ ಆರ್ ಎಸ್ ಎಸ್ ದಾಳಿ ಇದೇ ಜಾಡನ್ನು ಹಿಡಿದಿದೆ. ಕಾಶ್ಮೀರ ಸಮಸ್ಯೆಯನ್ನು ಮುಂದಿಟ್ಟುಕೊಂಡು ಭಾರತದ ವಿರುದ್ಧ ಸಮರ ಸಾರುವ ಮನಸ್ಸಿರುವ ಪಾಕಿಸ್ತಾನ, ಮುಸ್ಲಿಮರ ಭಯೋತ್ಪಾದಕ ಸಂಸ್ಥೆಗಳನ್ನು ಪೋಷಿಸುತ್ತಿರುವುದನ್ನು ಅವುಗಳಿಗೆ ಪ್ರಚೋದನೆ ನೀಡುತ್ತಿರುವುದನ್ನೂ ಭಾರತದ ಆಯ್ದ ಕಡೆಗಳಲ್ಲಿ ಭಯೋತ್ಪಾದನೆಯ ಕಾರ್ಯಾಚರಣೆ ಮಾಡಲು ಬೇಕಾದ ತರಬೇತಿ, ಹಣ, ಶಸ್ತ್ರಾಸ್ತ್ರಗಳನ್ನು ಒದಗಿಸುವುದೂ ಕಾಣುತ್ತೇವೆ. ಭಾರತದ ಮೇಲೆ ಈಗಾಗಲೇ ಎರಡು ಬಾರಿ ಸಮರ ಸಾರಿರುವ ಪಾಕಿಸ್ತಾನ ಭಾರತದ ಬಗೆಗೆ ತನ್ನ ನೀತಿ ಬದಲಾಯಿಸಿಕೊಂಡಿದೆ ಎಂದು ಹೇಗೆ ಹೇಳುವುದು?

೪. ಭಯೋತ್ಪಾದನೆ ನಿವಾರಣೆಗೆ ಸಂಪೂರ್ಣವಾಗಿ ಸರ್ಕಾರವನ್ನು ಅವಲಂಬನೆ ಮಾಡಿ ಕೂಡುವುದಲ್ಲ. ಪ್ರತಿಯೊಬ್ಬ ಭಾರತೀಯನೂ ಈ ಭಯೋತ್ಪಾದನೆಯನ್ನು ತಡೆಗಟ್ಟುವ ಸಮರದಲ್ಲಿ ನೇರವಾಗಿ ಪಾಲ್ಗೊಳ್ಳಬೇಕು. ಈ ಕೆಲಸದಲ್ಲಿ ಭಾರತೀಯ ಮುಸ್ಲಿಮರು ಕ್ರಿಶ್ಚಿಯನರು ಹಿಂದೆ ಬೀಳುವುದಿಲ್ಲವೆಂದು ಆಶಿಸುತ್ತೇನೆ. □

ಎಸ್.ಜಿ. ಸಿದ್ಧರಾಮಯ್ಯ

ಅಧ್ಯಕ್ಷರು, ಪುಸ್ತಕ ಪ್ರಾಧಿಕಾರ

ಭಯೋತ್ಪಾದನೆ ಚರ್ಚೆ

ಜನಾಂಗ ದ್ವೇಷದ ಪಿತೂರಿ

೧. **ಇ**ಡೀ ಜಗತ್ತನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳಬೇಕೆಂಬ ಸಾಮ್ರಾಜ್ಯಶಾಹಿಗಳ ಕುತಂತ್ರ ರಾಜಕಾರಣದ ಫಲ ಭಯೋತ್ಪಾದನೆ. ಒಡೆದಾಳುವ ನೀತಿಯಲ್ಲಿ ಮೂಲಭೂತವಾದಿ ಮತೀಯ ಶಕ್ತಿಗಳನ್ನು ದಾಳವಾಗಿಸಿಕೊಂಡಿದ್ದರ ಪರಿಣಾಮ ಈ ಜಾಗತಿಕ ಭಯೋತ್ಪಾದನೆ.

ಜಾಗತಿಕ ಭಯೋತ್ಪಾದನೆಯ ಉಲ್ಬಣಕ್ಕೆ ಅಮೆರಿಕಾ, ಇಂಗ್ಲೆಂಡ್‌ಗಳು ಕಾರಣವಾದರೆ ಸ್ಥಳೀಯವಾಗಿ ಬಿಂದ್ರನ್‌ವಾಲೆಯಂತವನ ಹುಟ್ಟಿಗೆ ನಮ್ಮ ಶಕ್ತಿ ರಾಜಕಾರಣ, ಅಧಿಕಾರ ಲಾಲಸೆ ಕಾರಣವಾಗುತ್ತದೆ. ಸಾಮ್ರಾಜ್ಯಶಾಹಿಗಳ ಈ ಕುತಂತ್ರ ಮೂಲದ ಯುದ್ಧ ಸಿದ್ಧಾಂತ ತನ್ನ ಕಾಲ ಬುಡಕ್ಕೆ ತಾನೇ ಇಟ್ಟುಕೊಳ್ಳುವ ಸಿಡಿ ಮದ್ದಿನ ಮಾದರಿಯದು. ವರ್ಲ್ಡ್‌ಟ್ರೇಡ್ ಸೆಂಟರ್‌ನ ಪತನ ಇದನ್ನು ಈಗಾಗಲೇ ಸಾಬೀತುಪಡಿಸಿದೆ.

೨. ಮುಸ್ಲಿಮರೆಲ್ಲ ದುಷ್ಟರು, ಭಯೋತ್ಪಾದಕರು ಎಂದು ಜಾಗತಿಕವಾಗಿ ಬಿಂಬಿಸುತ್ತಿರುವುದನ್ನು ನಾನು ಖಂಡಿಸುತ್ತೇನೆ. ಇದನ್ನು ಜನಾಂಗ ದ್ವೇಷದ ಪಿತೂರಿ ಎಂದು ಕರೆಯುತ್ತೇನೆ. ಇದು ಅನ್ಯಾಯ ಮತ್ತು ಅಮಾನವೀಯ ನಡವಳಿಕೆ. ಇದರ ಹಿಂದೆ ಮೂಲಭೂತವಾದಿ ಕ್ರೈಸ್ತ ಮತಾಂಧತೆ ಮತ್ತು ಮೂಲಭೂತವಾದಿ ಹಿಂದೂ ಮತಾಂಧತೆಗಳು ಕೆಲಸ ಮಾಡುತ್ತಿವೆ. ದೀರ್ಘ ಕಾಲದಲ್ಲಿ

ಇದರ ದುಷ್ಪರಿಣಾಮವೆಂದರೆ ಮನುಷ್ಯ–ಮನುಷ್ಯರ ನಡುವೆ ಅಪನಂಬಿಕೆಯ ಉಲ್ಬಣ, ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ. ಮನುಷ್ಯ ಸಂಕುಲದ ನಿರ್ನಾಮ.

೩. ಅಮೆರಿಕಾ ತಂತ್ರಗಾರಿಕೆ ತಣ್ಣನೆಯ ಮಾತುಗಳಲ್ಲಿ ನಂಬಿಸಿ ಕತ್ತು ಕೊಯ್ಯುವ ಮಾದರಿಯದು. ಅದು ಅಹಿಂಸೆಯನ್ನು, ಶಾಂತಿಯನ್ನು ಬಾಯಿಯಲ್ಲಿ ಹೇಳುತ್ತಲೇ ಮೂರ್ತ ರೂಪದ ಹಿಂಸೆಗಿಂತ ಭಯಂಕರವಾದ ಪಾತಕವನ್ನು ಜಗತ್ತಿನ ಜೀವಜಾಲದ ಮೇಲೆ ಎಸಗುತ್ತಿದೆ. ಅದರ ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ಒಳಗೆ ಅಡಗಿರುವ ಎಲ್ಲ ಯುದ್ಧ ತಂತ್ರಗಳೂ ಮೂರನೆಯ ಜಗತ್ತನ್ನು ನಾಶ ಮಾಡುವ ಹಿಂಸೆಯನ್ನು ದ್ರವ್ಯವಾಗಿಸಿಕೊಂಡಿವೆ.

ಬೇರೆ ಧರ್ಮದವರನ್ನು ಭಯೋತ್ಪಾದನೆಯ ಜತೆ ಸಮೀಕರಿಸದಿರುವುದಕ್ಕೆ ಕಾರಣ ಜಾಗತಿಕ ಮಟ್ಟದಲ್ಲಿ ಧರ್ಮಗಳನ್ನು ವ್ಯಾಖ್ಯಾನಿಸುತ್ತಿರುವ ಹಾಗೂ ಅವುಗಳನ್ನು ಪ್ರೊಜೆಕ್ಟ್ ಮಾಡುತ್ತಿರುವ ರೀತಿ–ನೀತಿಗಳು. ಇವುಗಳ ಹಿಂದೆ ಸಾಮ್ರಾಜ್ಯ ಶಾಹಿ ಮತೀಯ ಮನಸ್ಸುಗಳ ಹಾಗೂ ಸ್ಥಳೀಯ ಮೂಲಭೂತವಾದೀ ಜಾತೀಯ ಮನಸ್ಸುಗಳ ಹುನ್ನಾರವೂ ಅಡಗಿದೆ.

೪. ಸಾಮ್ರಾಜ್ಯಶಾಹಿಗಳ ರಾಜಕೀಯ ತಂತ್ರಗಾರಿಕೆಯನ್ನು ವಿಫಲಗೊಳಿಸುವ ಸ್ಥಳೀಯ ನೆಲಮೂಲ ನಿಷ್ಠೆಯಲ್ಲಿ ಅರಳಿದ ಜೀವನ ಪದ್ಧತಿಗಳನ್ನು ಮುಂದು ಮಾಡುವುದರಿಂದ ಹಾಗೂ ಗಾಂಧೀಜಿಯವರ ಅಹಿಂಸೆ, ಸತ್ಯಾಗ್ರಹ, ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ಇಂದಿನ ಅಗತ್ಯಕ್ಕೆ ಹೊಂದುವ ಮಾದರಿಯಲ್ಲಿ ಬದುಕಿಗೆ ಅಳವಡಿಸಿಕೊಳ್ಳುವುದರಿಂದ ಭಯೋತ್ಪಾದನೆಯನ್ನು ಗೆಲ್ಲಬಹುದು. ಇದರ ಜತೆಗೆ ಅಂಬೇಡ್ಕರರ ಸಾಮಾಜಿಕ ನ್ಯಾಯ ನೀತಿಯನ್ನು ರಾಜಕೀಯ ಬದುಕಾಗಿಸುವ ಅಗತ್ಯವಿದೆ. ಬುದ್ಧನ ಜೀವನ ಸಂದೇಶ ಜಗತ್ತಿನ ಧರ್ಮವಾಗಬೇಕಾದ ತುರ್ತು ಇದೆ. ಹೀಗಾದಾಗ ಭಯೋತ್ಪಾದನೆ ಎಂಬುದು ಭೂಮಿಯಿಂದ ನಿರ್ಮೂಲನವಾಗುತ್ತದೆ. □

ಮುಸ್ಲಿಮರೆಲ್ಲ ದುಷ್ಟರು, ಭಯೋತ್ಪಾದಕರು ಎಂದು ಜಾಗತಿಕವಾಗಿ ಬಿಂಬಿಸುತ್ತಿರುವುದನ್ನು ನಾನು ಖಂಡಿಸುತ್ತೇನೆ. ಇದನ್ನು ಜನಾಂಗ ದ್ವೇಷದ ಪಿತೂರಿ ಎಂದು ಕರೆಯುತ್ತೇನೆ. ಇದು ಅನ್ಯಾಯ ಮತ್ತು ಅಮಾನವೀಯ ನಡವಳಿಕೆ. ಇದರ ಹಿಂದೆ ಮೂಲಭೂತವಾದಿ ಕ್ರೈಸ್ತ ಮತಾಂಧತೆ ಮತ್ತು ಮೂಲಭೂತವಾದಿ ಹಿಂದೂ ಮತಾಂಧತೆಗಳು ಕೆಲಸ ಮಾಡುತ್ತಿವೆ. ದೀರ್ಘ ಕಾಲದಲ್ಲಿ ಇದರ ದುಷ್ಪರಿಣಾಮವೆಂದರೆ ಮನುಷ್ಯ–ಮನುಷ್ಯರ ನಡುವೆ ಅಪನಂಬಿಕೆಯ ಉಲ್ಬಣ, ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ. ಮನುಷ್ಯ ಸಂಕುಲದ ನಿರ್ನಾಮ.

ಖಡ್ಗ-ಬಂದೂಕು ಬೇಡ; ಸಾಮರಸ್ಯಬೇಕು

ಡಾ॥ ಕಮಲಾ ಹಂಪನಾ
ಸಾಹಿತಿ, ಚಿಂತಕಿ

ಭಯೋತ್ಪಾದನೆ ಚರ್ಚೆ

೧. ಇತರರಲ್ಲಿ ಭಯವನ್ನು ಮೂಡಿಸುವುದೇ ಭಯೋತ್ಪಾದನೆಯ ಮೂಲ ಹಾಗೂ ಸಾಮಾನ್ಯ ಅರ್ಥವಾದರೂ ಅದರ ಹಿಂದಿನ ವಿವಿಧ ಆಯಾಮಗಳನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ವಿವೇಚಿಸಬೇಕಾಗುತ್ತದೆ. ಇತರರಲ್ಲಿ ಭಯವನ್ನು ಉಂಟುಮಾಡುವ ಮನೋಭಾವ ಹಾಗೂ ಅದರ ಹಿಂದಿರುವ ಕ್ರೌರ್ಯ ಮತ್ತು ಹೇಯ ಕೃತ್ಯಕ್ಕೆ ಕಾರಣಗಳು ಹಲವಾರು. ಬಲಿಷ್ಠ ರಾಷ್ಟ್ರಗಳು ಚಿಕ್ಕ ಚಿಕ್ಕ ದೇಶಗಳನ್ನು ತನ್ನ ಅಡಿಯಲ್ಲಿ ಇರಿಸುವ ಪ್ರಯತ್ನದಂಥ ದೊಡ್ಡ ಹುನ್ನಾರದಿಂದ ಹಿಡಿದು ದೇಶ–ದೇಶಗಳ ನಡುವೆ ನಾನಾ ಕಾರಣಗಳಿಗೆ ಮೂಡುವ ದ್ವೇಷ, ಇದನ್ನು ಒಂದು ರೀತಿಯ 'ದೇಶಮದ' ಎನ್ನಬಹುದು. ಹಾಗೆಯೇ ಪ್ರಾಂತಮದ, ಜಾತಿಮದ, ಜನಾಂಗೀಯ ಮದ, ಭಾಷಾಮದ, ಕೋಮು ಧರ್ಮಗಳ ಮದ– ಈ ಮದಗಳು ಅತಿಯಾಗಿ ಅತಿರೇಕಕ್ಕೆ ಹೋದಾಗ ಈ ಮದವನ್ನು ರೂಢಿಸಿಕೊಂಡಿರುವ ವ್ಯಕ್ತಿ ಅಥವಾ ಮೈಗೂಡಿಸಿಕೊಂಡಿರುವ ವ್ಯಕ್ತಿಗಳ ಸಮೂಹವೇ ಭಯೋತ್ಪಾದನೆಯ ಮೂಲವಾಗುತ್ತದೆ. ಇದರಿಂದ ಹೆಚ್ಚುವ ದ್ವೇಷ–ಅಸೂಯೆಗಳ ಮೊತ್ತವೇ ಹಿಂಸೆಗೆ ತಿರುಗಿ ಭಯೋತ್ಪಾದನೆ ಸ್ಫೋಟಕ್ಕೆ ಕಾರಣವಾಗುತ್ತದೆ.

ಭಯೋತ್ಪಾದನೆಯ ಮತ್ತೊಂದು ಹೆಸರು ಕ್ರೌರ್ಯ, ಹಿಂಸೆ. ಅದೇ ಅದರ ಯುದ್ಧ ಸಿದ್ಧಾಂತ. ಆದುದರಿಂದ ಅದಕ್ಕೆ ನನ್ನ ಸಹಮತ ಇಲ್ಲ.

೨. ಇದು ತುಂಬಾ ಅಪಾಯಕಾರಿಯಾದ ಬೆಳವಣಿಗೆ. ಇಡೀ ಒಂದು ಧರ್ಮ ಸಮುದಾಯವನ್ನು ಆ ರೀತಿ ಬಿಂಬಿಸುವುದು ಅಮಾನವೀಯ ಹಾಗೂ ಅನಾರೋಗ್ಯಕರ ನಿಲುವು. ಇತ್ತೀಚಿನ ವರುಷಗಳಲ್ಲಿ ಭಯೋತ್ಪಾದಕರು ಎಲ್ಲ ವರ್ಗ, ಜನಾಂಗ, ಪ್ರದೇಶ, ಧರ್ಮದವರಲ್ಲಿಯೂ ಢಾಳಾಗಿ ಕಾಣುವಷ್ಟು ವಿಜೃಂಭಿಸುತ್ತಿದ್ದಾರೆ. ಇದಕ್ಕೆ ಯಾವುದೇ ಎಲ್ಲೆ –ಸೀಮೆ, ಗಡಿ ಪ್ರದೇಶ ಸೀಮಿತವಾಗಿಲ್ಲ. ಜಾತಿ ಮತ, ಮಠ, ಮಂದಿರ, ಮಸೀದಿ, ಚರ್ಚು, ಗುಡಿ, ಗೋಪುರಗಳು ಅವುಗಳ ಪಾಡಿಗೆ ಅವು ಇರಲಿ. ಧರ್ಮಗಳೂ, ಧರ್ಮ ಗುರುಗಳೂ, ಮಠಾಧೀಶರೂ ಸಮಾಜದ ಹಿತ ಚಿಂತಕರಾಗಿರಬೇಕು. ಧರ್ಮದಿಂದ, ಧರ್ಮ ಸಂಸ್ಥೆಗಳಿಂದ ಅಶಾಂತಿ ಮೂಡಬಾರದು.

ಆದರೆ ಇಂದು ಪೂಜಾಗೃಹಗಳು, ಪ್ರಾರ್ಥನಾ ಮಂದಿರಗಳು ಭಯೋತ್ಪಾದಕರ ನೆಲೆವಿಡಾಗಿ ಮದ್ದು–ಗುಂಡು, ಕತ್ತಿ ಕಠಾರಿಗಳ ಆಗರವಾಗುತ್ತವೆ. ಧರ್ಮಾಂಧರಾದ ಮೂಲಭೂತವಾದಿ ರಕ್ಕಸರಿಂದ ರಕ್ತಪಾತಗಳಾಗುತ್ತಿವೆ. ಮತಗಳಿಂದ ಅಪಾಯವಾಗಲಿಲ್ಲ, ಮತಾಂಧರಿಂದ ಗಂಡಾಂತರ ಬಂದಿದೆ. ಇದು ಎಲ್ಲ ಧರ್ಮ–ಕೋಮಿನವರಿಗೂ ಅನ್ವಯವಾಗುತ್ತದೆ. ಕೇವಲ ಇಸ್ಲಾಂ ಧರ್ಮೀಯರಿಗೆ ಮಾತ್ರಾ ಸೀಮಿತವಾಗಿಲ್ಲ.

೩. ಅಮೆರಿಕೆ ಈಗ ಸಾಕಷ್ಟು ಪಾಠ ಕಲಿತಿದೆ. ಆದರೂ ಮಧ್ಯ ಪ್ರಾಚ್ಯ ದೇಶಗಳಲ್ಲಿ ಕೆಲವನ್ನು ಮತ್ತು ಭಾರತವನ್ನು ಕಬಳಿಸುವ ಹುನ್ನಾರ ಈಗಲೂ ನಡೆಯುತ್ತಿದೆ. ಆದರೆ ಜನ ಹಾಗೂ ಸರ್ಕಾರ ಎಚ್ಚೆತ್ತಿದೆ. ಅದರ ಆಟ ಭಾವಿಸಿದಷ್ಟು ಈಗ ಸುಲಭವಲ್ಲ. ಇಸ್ಲಾಂ ಧರ್ಮೀಯರನ್ನು ಮಾತ್ರಾ ಆಪಾದನೆಗೆ ಗುರಿ ಮಾಡುವುದು ಸರಿಯಲ್ಲ. ಎಲ್ಲೋ ಬೆರಳೆಣಿಕೆಯ ಧರ್ಮಾಂಧರು ಭಯೋತ್ಪಾದಕರಾದರೆ ಇಡೀ ಜನಾಂಗವನ್ನು ದೂಷಿಸುವುದು ತಪ್ಪು. ಇದು ದುರದೃಷ್ಟಕರ ಬೆಳವಣಿಗೆ. ಕೆಲವು ವೈದಿಕ, ವೀರಶೈವ ಉಗ್ರಗಾಮಿಗಳು ಅಷ್ಟೇ ಭೀಕರ, ಭಯಂಕರ ಭಯೋತ್ಪಾದಕರಾಗಿದ್ದಾರೆ.

೪. ಮತ–ಧರ್ಮಗಳಲ್ಲಿ ಗುರುಪೀಠಗಳಲ್ಲಿ ಜನಮುಖಿ ಹಾಗೂ ಸಹಿಷ್ಣುತೆ–ಸಹಕಾರ–ಸಮನ್ವಯಗಳ ಧೋರಣೆ ಕಾಣಿಸದಿದ್ದಾಗ ಮುಖ–ಮೋರೆ ನೋಡದೆ ಸಮಾಜ ಮತ್ತು ಸರ್ಕಾರ ತನ್ನ ಗದಾ ಪ್ರಹಾರ ಮಾಡುವುದು ತಪ್ಪಲ್ಲ. ಪೂಜಾ ಸ್ಥಳಗಳೂ, ಪ್ರಾರ್ಥನಾ ಮಂದಿರಗಳೂ ಸಿಡಿಮದ್ದು, ಬಂದೂಕು ತುಂಬಿದ ಆಯುಧಾಗಾರ ಆಗಬಾರದು. ನಮಗೆ ಇಂದು ತ್ರಿಶೂಲಗಳು ಬೇಕಿಲ್ಲ. ಖಡ್ಗ, ಕಠಾರಿ, ಬಂದೂಕು, ಪಿಸ್ತೂಲುಗಳು ಬೇಕಿಲ್ಲ. ಜನ ನೆಮ್ಮದಿಯಿಂದ ಬದುಕುವ ಶಾಂತಿ ಸೌಹಾರ್ದತೆ ಸಾಮರಸ್ಯ, ಸಹಬಾಳ್ವೆ ಬೇಕಾಗಿದೆ. □

ಬುದ್ಧನೆಂದರೆ ಯಾವ ಬುದ್ಧ?

ಬುದ್ಧನ ಕಾಲದ ಅಜಿತ ಕೇಸಕಂಬಲಿ ಮತ್ತು ಮಕ್ಖಲಿ ಗೋಸಾಲ ಮುಂತಾದವರು ನಾಸ್ತಿಕರೂ ಲೋಕಾಯತ ಮತದವರು ಆಗಿದ್ದರೆಂದು ಕೆಲವು ವಿದ್ವಾಂಸರ ಅಭಿಮತ. ಸ್ವತಃ ಬುದ್ಧನ ಪಂಥಕ್ಕೆ ಸೇರಿದವರಲ್ಲಿ ಆಗಿನ ಎಲ್ಲ ಮತದವರೂ ಇದ್ದರು, ಎಲ್ಲ ವರ್ಗಗಳವರೂ ಇದ್ದರು. ಅಜಿತ ಕೇಸಕಂಬಲಿಯವನಂತಹ ಪಂಥದಲ್ಲಿ ಯಾರಿದ್ದರೆಂಬುದಕ್ಕೆ ಮಾಹಿತಿ ಲಭ್ಯವಿಲ್ಲ. ವರ್ಣ ಅಥವಾ ಜಾತಿಯನ್ನು ವಿರೋಧಿಸಿ ಎಲ್ಲರನ್ನು ಸಮಾನವಾಗಿಸಿದ್ದು ಬೌದ್ಧ ಸಂಘದ ಹಿರಿಮೆ. ಗಂಗಾ, ಯಮುನಾ, ಅಚಿರವತಿ, ಸರಭೂ ಮುಂತಾದ ನದಿಗಳು ಸಮುದ್ರವನ್ನು ಸೇರಿದಾಗ ತಮ್ಮ ಪ್ರತ್ಯೇಕತೆಯನ್ನು ಕಳೆದುಕೊಳ್ಳುವಂತೆ ಬೌದ್ಧ ಧರ್ಮಕ್ಕೆ ಸೇರಿ 'ಅನಾಗರಿಕ' (ಅಂದರೆ, ಮನೆ ತೊರೆದು ಬಂದವನು) ಆದನೆಂದರೆ ಆತನು ವರ್ಣ ವಿಭಜನೆಯ ಸಮಾಜವನ್ನು ಮೀರಿ ಏಕತೆಯ ಸಮಾಜವನ್ನು ಪ್ರವೇಶಿಸಿದ್ದಾನೆ ಎಂದರ್ಥ.

ಡಾ|| ಜಿ. ರಾಮಕೃಷ್ಣ



ಮತಧರ್ಮಗಳು ಸಮಾಜದ ಬೇರೆ ಸಂಗತಿಗಳಂತೆ ಬದಲಾವಣೆಗಳಿಗೆ ಗುರಿಯಾಗುವುದು ಅಸಹಜವಲ್ಲ. ಚರಿತ್ರೆಯಲ್ಲಿ ಇದು ಎಲ್ಲಾ ಧರ್ಮಗಳ ಸಂದರ್ಭದಲ್ಲೂ ಕಾಣಬರುತ್ತದೆ. ಹಳೆಯ ಒಡಂಬಡಿಕೆಯಲ್ಲಿ ಮೋಸಸ್ ಒಬ್ಬ ಘನವಾದ ಉದ್ಧಾರಕ. ಮರ್ದಿತ ಜನರನ್ನು ಅವನು ಪಾರುಮಾಡುವಾಗ ಸಾಗರವೇ ಸೀಳಿಕೊಂಡು ಹಾದಿ ಮಾಡಿಕೊಡುತ್ತದೆ. ಭಗವಂತ ಆ ಮರ್ದಿತ ಜನರಿಗೆ ಈಜಿಪ್ಟಿನಿಂದ ಹೊರಹೋಗಿ, ಅವರಿಗೆಂದೇ ನಿಗದಿಗೊಳಿಸಲ್ಪಟ್ಟ ನಾಡಿನಲ್ಲಿ ನೆಲೆಸಲು ಅವಕಾಶ ಕಲ್ಪಿಸಿಕೊಡುತ್ತಾನೆ. ಆ ಹೊಸನಾಡನ್ನು ಇಸ್ರೇಲ್ ಎಂದು ಕರೆಯಲಾಗಿದೆ. ಅಂದಿನ ಮರ್ದಿತ ಜನರ ಸಂಕಷ್ಟಗಳನ್ನು ನೀಗಿಸಲು ಮೋಸಸ್‌ಗೆ ಸ್ವತಃ ಭಗವಂತನೇ ಹತ್ತು ಕಟ್ಟುನಿಟ್ಟಾದ ಸೂತ್ರಗಳನ್ನು ಸೂಚಿಸಿದ್ದನೆಂಬ ಐತಿಹ್ಯವಿದೆ. ಆ ಜನರು ಯಹೂದಿಗಳೆಂದು ಕರೆಯಲ್ಪಟ್ಟಿದ್ದಾರೆ. ಇದು ಸುಮಾರು ಮೂರುಸಾವಿರ ವರ್ಷಗಳ ಹಿಂದಿನ ಕತೆ. ಇಂದು ವಿಶ್ವದಲ್ಲಿ ಯಹೂದಿಗಳು ಅನೇಕ ರಾಷ್ಟ್ರಗಳಲ್ಲಿ ಚದುರಿ ಹೋಗಿದ್ದಾರೆ. ಆದರೆ ಅವರೆಲ್ಲಾ ತಮ್ಮ 'ನಿಗದಿತ ನಾಡಿಗೆ' ತೆರಳಲು ಅಡ್ಡಿಯಿಲ್ಲ. ಇಸ್ರೇಲ್ ಸರ್ಕಾರವು ಅವರನ್ನೆಲ್ಲಾ ಸ್ವಾಗತಿಸುವುದಾಗಿ ಹೇಳುತ್ತದೆ. ಹಾಗೆ ಬೇರೆಬೇರೆ ದೇಶಗಳಿಂದ ವಲಸೆ ಬರುವವರಿಗೆ ಮನೆ-ಮಠ-ಭೂಮಿ ಎಲ್ಲಾ ಸಿಗುವಂತೆ ಮಾಡಬೇಕಾದರೆ ಇಸ್ರೇಲ್ ತನ್ನ ಎಲ್ಲೆಗಳನ್ನು ಸದಾ ವಿಸ್ತರಿಸಿಕೊಳ್ಳುತ್ತಿರಬೇಕು. ಇಲ್ಲವಾದಲ್ಲಿ ಸ್ಥಳ ಸಂಕೋಚ ಅನಿವಾರ್ಯ.

ಹಿಂದೊಮ್ಮೆ ಮರ್ದಿತರಾಗಿದ್ದ ಜನರು ಈಗ ಸ್ವತಃ ಇತರರನ್ನು ಮರ್ದಿಸಿ ತಮ್ಮ ದೇಶವನ್ನು ವಿಸ್ತರಿಸಿಕೊಳ್ಳುವ ಹಾದಿ ಹಿಡಿದಿದ್ದಾರೆ. ಹಲವು ಶತಮಾನಗಳ ಕಾಲ ಇಂದಿನ ಇಸ್ರೇಲಿನ ಭೌಗೋಳಿಕ ಪ್ರದೇಶದಲ್ಲಿ ಅರಬ್ಬರು ವಾಸಿಸುತ್ತಿದ್ದರು. ಅವರ ದೇಶವನ್ನು ಪ್ಯಾಲಿಸ್ಟೈನ್ ಎಂದು ಕರೆಯಲಾಗುತ್ತಿತ್ತು. ಆ ಹೆಸರು ಸಹ ಒಡಂಬಡಿಕೆಗಳಲ್ಲಿ ದಾಖಲಾಗಿದೆ. ಮೋಸಸ್ ನೇತೃತ್ವದಲ್ಲಿ ಮರ್ದಿತ ಜನರಿಗೆ ದಕ್ಕಿದ ಮತಧರ್ಮವು ಯಹೂದಿ ಮತ; ಆದರೆ ಇಂದಿನ ಸ್ವರೂಪದಲ್ಲಿ ಅದು ಯಹೂದಿಯರಲ್ಲದವರನ್ನು ಮರ್ದಿಸಲು, ಹಿಂಸಿಸಲು ಮತ್ತು ಕೊಲ್ಲಲು ಬಳಕೆಯಾಗುತ್ತಿದೆ. ತಮ್ಮ ದೇವಾಲಯವಾದ ಸಿನಗಾಗ್‌ಗೆ ಹೋದಾಗ ಯಹೂದಿಗಳು ಈಗಲೂ ಮೋಸಸ್ ಕಾಲದ 'ಟೋರಾ'ವನ್ನು ಶ್ಲಾಘಿಸುತ್ತಾರೆ ಮತ್ತು ಪೂಜಿಸುತ್ತಾರೆ. ಧರ್ಮದ ಮೂಲಸ್ವರೂಪವು ಹಿಂದಿನಂತೆಯೇ ಉಳಿದಿದೆಯೆಂದು ಹೇಳಲಾಗುತ್ತದೆ. ಆದರೆ ಆಚರಣೆಯಲ್ಲಿ ಅದು ಬದಲಾವಣೆಗಳಿಗೆ ತುತ್ತಾಗದೆ ಉಳಿದಿಲ್ಲ.

ಯಹೂದಿಗಳ ನಂತರ ಪಶ್ಚಿಮ ಏಷ್ಯಾ ಭೌಗೋಳಿಕ ಪ್ರದೇಶದಲ್ಲಿ ಜನ್ಮತಾಳಿದ್ದು ಕ್ರೈಸ್ತ ಧರ್ಮ, ಹಾಗೆ ನೋಡಿದರೆ ಜೀಸಸ್ ಕ್ರೈಸ್ಟ್ ಹುಟ್ಟಿನಿಂದ ಒಬ್ಬ ಯಹೂದಿಯೇ- ಆತನ ಕಾಲಕ್ಕಾಗಲೆ ಯಹೂದಿ ಜನಾಂಗದಲ್ಲಿ ಮೇಲು-ಕೀಳು ಎಂಬ ವಿಭಜನೆ ವಿಪರೀತವಾಗಿ ಬೆಳೆದಿತ್ತು. ಯಜಮಾನ ಮತ್ತು ದಾಸ, ಜಮೀನುದಾರ ಮತ್ತು ಕೂಲಿಯಾಳು, ಶ್ರೀಮಂತ ಆಡಳಿತಗಾರ ಮತ್ತು ಬಡ ನಾಗರಿಕ ಎಂಬ ವರ್ಗ ವಿಗಂಡಣೆ ಆಳವಾಗಿ ಬೇರೂರಿತ್ತು. ಜೀಸಸ್ ಕೈಗೊಂಡದ್ದು ಮರ್ದಿತ ಮತ್ತು ಶೋಷಿತ ಜನರ ಬಿಡುಗಡೆಯ ಹೋರಾಟ. ಅವನನ್ನು ಆಳುವ ವರ್ಗ ಶಿಲುಬೆಗೇರಿಸಿ ಕೊಂದಿತು. ಶತಮಾನಗಳು ಉರುಳಿದಂತೆ ಕ್ರೈಸ್ತಧರ್ಮದ ಬೆಳಕು ಕ್ಷೀಣಿಸುತ್ತಾ ಬಂದಿದೆ. ಅದು ಬಿಂದು ಆಯುಧವಾಗಿ ಮಾರ್ಪಟ್ಟು, ಹಿಂದಿನ ವರ್ಗ ವಿಭಜನೆಯ ಆಧುನಿಕ ಸ್ವರೂಪದಲ್ಲಿ ಯಜಮಾನರು ಯಾರಿದ್ದಾರೋ ಅವರ ರಕ್ಷಣೆಗೆ ನಿಂತಿದೆ. ಜಾನ್ ಮಿಲ್ಟನ್ ಎಂಬ ಇಂಗ್ಲಿಷ್ ಕವಿ ಹದಿನೇಳನೆಯ ಶತಮಾನದಲ್ಲಿ ಕ್ರೈಸ್ತ ಮತದ ಪೂಜಾರಿಗಳನ್ನು ಕೊಬ್ಬಿದ ಹಂದಿಗಳು ಎಂಬರ್ಥ ಸೂಚಿಸುವ ರೀತಿಯಲ್ಲಿ ಟೀಕಿಸಿದ್ದಾನೆ. ಜನರ ಬಿಡುಗಡೆಯಲ್ಲಿ ಶ್ರದ್ಧೆಯನ್ನು ಕಳೆದುಕೊಂಡ ಕ್ರೈಸ್ತ ಧರ್ಮವು ಕ್ರಮೇಣ ಅವರ ಬಂಧನಕ್ಕೆ ಸಾಧನವಾಗಿರುವ ವಿಪರ್ಯಾಸವನ್ನು ಮಿಲ್ಟನ್, ಟಾಲ್‌ಸ್ಟಾಯ್ ಮುಂತಾದವರೆಲ್ಲಾ ವಿಮರ್ಶಿಸಿದ್ದಾರೆ. ಧರ್ಮ ಗ್ರಂಥದ ಬೋಧನೆ ಮತ್ತು ವ್ಯವಹಾರದಲ್ಲಿ ಆಚರಣೆ, ಇವು ವಿರುದ್ಧ ದಿಕ್ಕುಗಳತ್ತ ಚಲಿಸಿವೆ. ಈ ರೀತಿಯ ವಿಕಾಸವು ಬಹುತೇಕ ಎಲ್ಲ ಧರ್ಮಗಳಲ್ಲೂ ಕಾಣಸಿಗುತ್ತದೆ. ಭಾರತದಲ್ಲಿ ಬೌದ್ಧಮತವು ಅದಕ್ಕೊಂದು ನಿದರ್ಶನ. ಹಿಂದು ಮತ್ತು

ಜೈನ ಮತಗಳಾಗಲಿ, ಬಸವಣ್ಣನವರ ಮತವಾಗಲಿ, ಇಂಥದೇ ಪರಿಣಾಮವನ್ನು ತಪ್ಪಿಸಿಕೊಂಡಿಲ್ಲ. ಈ ಹಿನ್ನೆಲೆಯಲ್ಲಿ ಬುದ್ಧನೆಂದರೆ ಯಾವ ಬುದ್ಧ? ಬಸವಣ್ಣನೆಂದರೆ ಯಾವ ಬಸವಣ್ಣ, ಎಂಬ ಪ್ರಶ್ನೆಗಳು ಅಪ್ರಕೃತವಾಗುವುದಿಲ್ಲ.

ಬುದ್ಧನ ಕಾಲದ ಅಜಿತ ಕೇಸಕಂಬಲಿ ಮತ್ತು ಮಕ್ಖಲಿ ಗೋಸಾಲ ಮುಂತಾದವರು ನಾಸ್ತಿಕರೂ ಲೋಕಾಯತ ಮತದವರು ಆಗಿದ್ದರೆಂದು ಕೆಲವು ವಿದ್ವಾಂಸರ ಅಭಿಮತ. ಸ್ವತಃ ಬುದ್ಧನ ಪಂಥಕ್ಕೆ ಸೇರಿದವರಲ್ಲಿ ಆಗಿನ ಎಲ್ಲ ಮತದವರೂ ಇದ್ದರು, ಎಲ್ಲ ವರ್ಗಗಳವರೂ ಇದ್ದರು. ಅಜಿತ ಕೇಸಕಂಬಲಿಯವನಂತಹ ಪಂಥದಲ್ಲಿ ಯಾರಿದ್ದರೆಂಬುದಕ್ಕೆ ಮಾಹಿತಿ ಲಭ್ಯವಿಲ್ಲ. ವರ್ಣ ಅಥವಾ ಜಾತಿಯನ್ನು ವಿರೋಧಿಸಿ ಎಲ್ಲರನ್ನು ಸಮಾನವಾಗಿಸಿದ್ದು ಬೌದ್ಧ ಸಂಘದ ಹಿರಿಮೆ. ಗಂಗಾ, ಯಮುನಾ, ಅಚಿರವತಿ, ಸರಭೂ ಮುಂತಾದ ನದಿಗಳು ಸಮುದ್ರವನ್ನು ಸೇರಿದಾಗ ತಮ್ಮ ಪ್ರತ್ಯೇಕತೆಯನ್ನು ಕಳೆದುಕೊಳ್ಳುವಂತೆ ಬೌದ್ಧ ಧರ್ಮಕ್ಕೆ ಸೇರಿ 'ಅನಗಾರಿಕ' (ಅಂದರೆ, ಮನೆ ತೊರೆದು ಬಂದವನು) ಆದನೆಂದರೆ ಆತನು ವರ್ಣ ವಿಭಜನೆಯ ಸಮಾಜವನ್ನು ಮೀರಿ ಏಕತೆಯ ಸಮಾಜವನ್ನು ಪ್ರವೇಶಿಸಿದ್ದಾನೆ ಎಂದರ್ಥ, ಎಂಬ ಮಾತುಗಳು ಆಗಾಗ್ಗೆ ತ್ರಿಪಿಟಕಗಳಲ್ಲಿ ಬರುವುದುಂಟು.

ಹುಟ್ಟು ಮತ್ತು ಕುಟುಂಬಗಳ ಬಗ್ಗೆ ಗರ್ವವನ್ನು ತಾಳುವವನು ಎಂದಿಗೂ ಮುಕ್ತನಾಗಲಾರನೆಂಬ ಭಾವನೆಯೂ ಅಲ್ಲಿ ವ್ಯಕ್ತವಾಗಿದೆ. ರಾಜನ ಭಂಟನೊಬ್ಬನು ತನ್ನ ದಾಸ್ಯವನ್ನು ತೊರೆದು ಬೌದ್ಧ ಸಂಘವನ್ನು ಒಮ್ಮೆ ಪ್ರವೇಶಿಸಿದನೆಂದರೆ ಅವನು ಮತ್ತೆ ದಾಸ್ಯಕ್ಕೆ ಹಿಂದಿರುಗಲಾರನೆಂದು ಬುದ್ಧ ಮತ್ತು ಅಜಾತಸತ್ತು ನಡುವಿನ ಒಂದು ಸಂವಾದದಲ್ಲಿ ದಾಖಲಾಗಿದೆ. ಸಂಘದೊಳಗೆ ಇಂತಹ ನಿಯಮ ಮತ್ತು ನೈತಿಕತೆಯ ಉದಾತ್ತ ಸ್ಥಾನದಲ್ಲಿದ್ದಿತೆಂದರೆ ಹೊರಗಣ ಸಮಾಜದಲ್ಲಿ ಅಂತಹುದೇ ಸಂಹಿತೆಯು ಜಾರಿಯಲ್ಲಿತ್ತೆಂದು ಭಾವಿಸಲಾಗದು. ಅಲ್ಲಿ ತಾರತಮ್ಯಗಳ ತೊಡಕು ಇದ್ದುದರಿಂದಲೇ ಮತ್ತು ಅದನ್ನು ನಿವಾರಿಸಿಕೊಳ್ಳುವ ಆಶಯದಿಂದಲೇ ಎಷ್ಟೋ ಮಂದಿ ಬೌದ್ಧ ಸಂಘವನ್ನು ಪ್ರವೇಶಿಸಿದ್ದು. ಅದನ್ನು ಆಮೂಲಾಗ್ರವಾಗಿ ಬದಲಿಸಲು ಹಾಗೂ ಪ್ರಭುತ್ವದ ಸ್ವರೂಪವನ್ನು ಜನಪರವನ್ನಾಗಿಸಲು ಬುದ್ಧನು ಯತ್ನಿಸಿದ್ದನೇ ಎಂಬುದು ಸಂದೇಹಾಸ್ಪದವಾಗಿದೆ. ಬೌದ್ಧ ಸಂಘವು ಸೀಮಿತಾರ್ಥದಲ್ಲಿ ಹೊರಗಣ ಉಚ್ಚ-ನೀಚವೆಂಬ ಶ್ರೇಣೀಕೃತ ಸಮಾಜಕ್ಕೆ ಪರ್ಯಾಯವಾಯಿತೇ ಹೊರತು ಆ ಸಮಾಜವನ್ನು ಇಡಿಯಾಗಿ ಬದಲಿಸಲು ತವಕಿಸಲಿಲ್ಲವೆಂಬ ಒಂದು ಅಭಿಪ್ರಾಯವಿದೆ.

ಸಾರಿಪುತ್ತ, ಮೊಗ್ಗಲ್ಲಾನ, ಕಚ್ಚನ, ಆನಂದ, ಅನುರುದ್ಧ, ಮುಂತಾದ ಬೌದ್ಧ ಸಂಘದ ಸದಸ್ಯರು ಬ್ರಾಹ್ಮಣ ವರ್ಣದಿಂದ ಇಲ್ಲವೇ ವರ್ತಕ ಕುಟುಂಬಗಳಿಂದ ಬಂದವರು. ರಾಜರು ಮತ್ತು ವರ್ತಕರು ಬುದ್ಧನಿಗೆ ಅಪಾರವಾದ ಬೆಂಬಲ ನೀಡಿದ್ದರು. ಅನೇಕ 'ಆರಾಮ'ಗಳು ಇಂಥವರಿಂದ ದೊರಕಿದ್ದುವು. ರಾಜ ಬಿಂಬಿಸಾರನು 'ಮೇಳುವನು'ವನ್ನು ಬುದ್ಧನಿಗೆ ನೀಡಿದ ನಂತರ ಬೌದ್ಧ ಭಿಕ್ಖುಗಳು ಹೀಗೆ 'ಆರಾಮ'ಗಳನ್ನು ಸ್ವೀಕರಿಸಬಹುದೆಂಬ ನೀತಿಯು ಜಾರಿಗೆ ಬಂದಿತು. ರಾಜನ ಸೈನ್ಯದಲ್ಲಿದ್ದವರನ್ನು ಬೌದ್ಧ ಸಂಘಕ್ಕೆ ಸೇರಿಸಿಕೊಳ್ಳಬಾರದೆಂಬ ನಿಯಮವೂ ಇದ್ದಿತು; ಏಕೆಂದರೆ, ಅವರ ಕಷ್ಟ ಜೀವನವನ್ನು ತ್ಯಜಿಸಿ ಪರಿವ್ರಾಜಕ ಜೀವನದ ಸೌಖ್ಯವನ್ನು ಅನುಭವಿಸಲು ಸೈನಿಕರು ತುದಿಗಾಲಲ್ಲಿ ನಿಂತಿದ್ದಿರಬೇಕು. ಅಂತಹ ಕೆಲವು ಪ್ರಕರಣಗಳು ದಾಖಲಾಗಿವೆ ಕೂಡ.

ಬುಡಕಟ್ಟುಗಳಿಗೆ ವಿಶಿಷ್ಟವಾಗಿದ್ದ ಗಣಗಳು ಕ್ರಮೇಣ ಶಿಥಿಲವಾಗಿ, ಹೊಸದೊಂದು ಸಾಮಾಜಿಕ ಸಂರಚನೆಯು ಅಸ್ತಿತ್ವಕ್ಕೆ ಬರುತ್ತಿದ್ದ ಕಾಲವು ಬುದ್ಧನ ಕಾಲಕ್ಕೆ ಸ್ವಲ್ಪ ಮುಂಚಿನದು. ಗಣಗಳ ಸಂಘಜೀವನವು ನಶಿಸುತ್ತಿದ್ದಾಗ ಅದನ್ನು ಬೇರೊಂದು ರೂಪದಲ್ಲಿ ಉಳಿಸಿಕೊಳ್ಳಲು ಮುಂದಾದದ್ದು ಬೌದ್ಧ ಸಂಘ. ಮಗಧರು, ಅಂಗರು, ವಜ್ಜಿಗಳು, ಮಲ್ಲರು, ಕೋಸಲರು, ಶಾಕ್ಯರು, ಕೋಲಿಯರು, ಇವರೆಲ್ಲಾ ಮೊದಲಿಗೆ ಬೇರೆಬೇರೆ ಬುಡಕಟ್ಟುಗಳಿಗೆ ಸೇರಿದ್ದವರು. ಅವರ ಸ್ವತಂತ್ರ, ಪ್ರತ್ಯೇಕ, ಬುಡಕಟ್ಟುಗಳು ಅವಸಾನದ ಕಾಲ ಸಮೀಪಿಸಿದ್ದು, ಇತರ ಬುಡಕಟ್ಟುಗಳೊಡನೆ ಲೀನವಾಗುವ ಪರ್ವಕಾಲವು ಬುದ್ಧನ ಕಾಲಕ್ಕಾಗಲೆ ಕೂಡಿ ಬಂದಿತ್ತು. ಬುಡಕಟ್ಟು ಜೀವನದ ನೀತಿಸಂಹಿತೆಯನ್ನು ಮುರಿದು ಶ್ರೀಮಂತಿಕೆ, ಅಧಿಕಾರ ಮತ್ತು ನಾಯಕತ್ವಗಳಿಗಾಗಿ ಆಂತರಿಕ ಕಲಹಗಳು ತೋರಿಬಂದವು. ಇಂತಹ ಸಂಧಿಕಾಲದಲ್ಲಿ ಬುದ್ಧನು, ಕರಗಿ ಹೋಗುತ್ತಿದ್ದ ಹಿಂದಿನ ಸಾಮರಸ್ಯದ ಗಣಗಳ ಕನಸನ್ನು ಬೌದ್ಧ ಸಂಘಗಳ ಮೂಲಕ ನನಸು ಮಾಡಲು ಮುಂದಾದ. ತ್ರಿಪಿಟಕಗಳಲ್ಲಿ ಅತಿ ಮಹತ್ವ ಪಡೆದಿರುವ ಮಹಾ ಪರಿನಿಬ್ಬಾನ ಸುತ್ತದಲ್ಲಿ ಬುಡಕಟ್ಟುಗಳನ್ನು (ಅಥವಾ, ಗಣಗಳನ್ನು) ಕುರಿತಂತೆ ಬುದ್ಧನ ಭಾವನಾತ್ಮಕ ಸಂಬಂಧ ಹೇಗಿದ್ದಿತೆಂಬುದು ಪ್ರತಿಫಲಿತವಾಗಿದೆ.

ರಾಜ ಅಜಾತಸತ್ತು ವಜ್ಜಿಗಳ ಬುಡಕಟ್ಟನ್ನು ಸದೆಬಡೆಯಲು ಸಿದ್ಧನಾಗಿದ್ದು, ಆಶೀರ್ವಚನ ಪಡೆಯಲು ತನ್ನ ಮಂತ್ರಿ ವಸ್ಸಕರನನ್ನು ಬುದ್ಧನ ಬಳಿಗೆ ಕಳಿಸುತ್ತಾನೆ. ಬುದ್ಧನು ನೇರವಾಗಿ ವಸ್ಸಕನನಿಗೆ ಏನನ್ನು ಹೇಳದೆ, ಆನಂದನನ್ನು ಕುರಿತು ಹೇಳುತ್ತಾನೆ: ವಜ್ಜಿಗಳು ಒಂದು ಗಣವಾಗಿ ಒಗ್ಗೂಡಿ ನಿಂತರೆ ಅವರನ್ನು ಜಯಿಸಲಾಗುವುದಿಲ್ಲ. ಅವರು ಒಟ್ಟಾಗಿ ನಿಲ್ಲಲು ಬೇರಾವ ಲಕ್ಷಣಗಳನ್ನು ಮೈಗೂಡಿಸಿಕೊಳ್ಳಬೇಕೆಂಬುದನ್ನು ಬುದ್ಧನು ಹೇಳಿದ. ಆದರೆ ಅಜಾತ ಸತ್ತುವಿನ ಪ್ರಹಾರದಿಂದ ವಜ್ಜಿಗಳು ತಪ್ಪಿಸಿಕೊಳ್ಳಲಾಗಲಿಲ್ಲ. ಬೌದ್ಧಧರ್ಮದ ಉಗಮದ ಹಿನ್ನೆಲೆಯಲ್ಲಿ ಈ ಅಂಶಗಳನ್ನೆಲ್ಲಾ ಗಮನಿಸುವುದು ಅವಶ್ಯಕ.

ದುಃಖ, ಅದರ ಕಾರಣ, ಮತ್ತು ಅದನ್ನು ನಿರ್ಮೂಲ ಮಾಡುವ ವಿಧಾನವನ್ನು ಕುರಿತು ಬುದ್ಧನು ಬೋಧಿಸುವಾಗ ಕೇವಲ ವೈಯಕ್ತಿಕ ನೆಲೆಯ ದುಃಖವನ್ನು ತನ್ನ ದೃಷ್ಟಿಯಲ್ಲಿರಿಸಿಕೊಂಡಿರಲಿಲ್ಲವೆಂಬುದನ್ನು ಒತ್ತುಕೊಟ್ಟು ನಿರೂಪಿಸಲು ಈ ಹಿನ್ನೆಲೆಯು ಉಪಯುಕ್ತವಾಗಿದೆ. ಆದಾಗ್ಯೂ ದುಃಖದ ಅಂತ್ಯವನ್ನು ವೈಯಕ್ತಿಕವಾಗಿ ಕಂಡುಕೊಳ್ಳಬೇಕು ಹಾಗೂ ಅದನ್ನು ಆ ನೆಲೆಯಲ್ಲಿ ಅನುಭವಿಸಬಹುದು ಎಂಬುದನ್ನು ಬುದ್ಧನ ಮಾತುಗಳಲ್ಲಿ ಗ್ರಹಿಸಬಹುದು. ಬುಡಕಟ್ಟು ಸಮೂಹವು ಛಿದ್ರವಾಗುತ್ತಿರುವಾಗ ಅದನ್ನು ತಪ್ಪಿಸುವುದು ಬುದ್ಧನ ಕೈಯಲ್ಲಿಲ್ಲ; ಸ್ವತಃ ಸಮೂಹವು ಸಹ ಅದನ್ನು ತಡೆಯಲಾರದು. ಹೀಗಿರುವಾಗ ವೈಯಕ್ತಿಕ ನೆಲೆಯಲ್ಲಾದರೂ ಗಂಡಾಂತರದ ನಿವಾರಣೆ ಮಾಡಿಕೊಳ್ಳಬಹುದೇ ಎಂಬುದು ಬುದ್ಧನ ಮುಂದಿನ ಪ್ರಶ್ನೆಯಾಗಿತ್ತೆಂದು ಕಾಣುತ್ತದೆ. ಆದರೆ ಇಂತಹ ನಿವಾರಣೆಗೆ ಆತ್ಮ, ಪರಮಾತ್ಮ ಮುಂತಾದ ಕಲ್ಪನೆಗಳು ಬುದ್ಧನಿಗೆ ಅಸಂಗತವೆಂದು ಕಂಡಿರಬೇಕು.

ದೇವರು ಮತ್ತು ಪರಲೋಕದ ಪ್ರಶ್ನೆಗಳು ಅವನಿಗೆ ಪ್ರಮುಖವೆನಿಸಲಿಲ್ಲ. ಆ ಬಗ್ಗೆ ಪ್ರಶ್ನಿಸಿದಾಗೆಲ್ಲಾ ಬುದ್ಧನು ಮೌನದಿಂದಲೇ ಇರುತ್ತಿದ್ದನೆಂಬುದಕ್ಕೆ ತ್ರಿಪಿಟಕಗಳಲ್ಲಿ ಸಾಕಷ್ಟು ನಿದರ್ಶನಗಳಿವೆ. ಬುದ್ಧನ ಕಾಲದಿಂದ ಐನೂರು ವರ್ಷದ ನಂತರದಲ್ಲಿ ಬಂದ ಅಶ್ವಘೋಷನು ತನ್ನ 'ಬುದ್ಧ ಚರಿತ' ಎಂಬ ಕಾವ್ಯದಲ್ಲಿ ಬುದ್ಧನು ಅಂಗೀಕರಿಸಿದ್ದನೆನ್ನಲಾದ ನಿರೀಶ್ವರವಾದದ ಬಗ್ಗೆ ಪ್ರಸ್ತಾಪಿಸಿದ್ದಾನೆ; ಅದಕ್ಕೆ ಮುಂಚೆ ಯಾವ ಗ್ರಂಥದಲ್ಲೂ ಇದನ್ನು ಚರ್ಚಿಸಿಲ್ಲ. 'ಇಹ'ವನ್ನು ಅರ್ಥೈಸಿಕೊಳ್ಳಲು ಮತ್ತು ಎದುರಿಸಲು 'ಪರ'ದ ಅವಶ್ಯಕತೆಯು ಬುದ್ಧನನ್ನು ಕಾಡಲಿಲ್ಲ. ಕಾಣದ್ದೋ, ಇಲ್ಲದ್ದೋ, ಆಗಿರುವುದರ ಬಗ್ಗೆ ಊಹಾಪೋಹಗಳು ಜ್ಞಾನವೆನಿಸಿಕೊಳ್ಳುವುದಿಲ್ಲವೆಂಬುದು ಬುದ್ಧನ ಸ್ಪಷ್ಟ ಗ್ರಹಿಕೆ.

ಇಹದ ಬಗ್ಗೆ ಚಿಂತಿಸುವುದನ್ನು ಬಿಟ್ಟು ಊಹಾಲೋಕಕ್ಕೆ ಗಂಟು ಬೀಳುವುದು ಅವನಿಗೆ ಸರಿಕಾಣಲಿಲ್ಲ. ನಿಜ ಜೀವನಕ್ಕೆ ಆ ರೀತಿಯ ಊಹೆಗಳು ಅಪ್ರಯೋಜಕವೆಂದು ಆತನ ತೀರ್ಮಾನವಾಗಿತ್ತು. ಅಂದರೆ, ಈ ಪ್ರಶ್ನೆಗಳು ಅವನನ್ನು ಬಾಧಿಸಲಿಲ್ಲವೆಂದಾಗಲಿ, ಅವುಗಳಿಗೆ ಆತನದೊಂದು ಉತ್ತರವಿರಲಿಲ್ಲವೆಂದಾಗಲಿ ಅರ್ಥವಲ್ಲ. ಏಕೆಂದರೆ, ಅವನು ತಥಾಗತ ಮತ್ತು ಬುದ್ಧ, ಅಂದರೆ, ಜ್ಞಾನಿಯಾಗಿದ್ದವನು, ಬೋಧೆಯನ್ನು ಪಡೆದಿದ್ದಂತಹವನು. ನಿರೀಶ್ವರವಾದವು ಅವನಿಗೆ ಸಮ್ಮತವಾಗಿತ್ತು; ಆದರೆ ಅದು ಮಹತ್ವದ ವಿಷಯವೆಂದು ಬಗೆದು ಅದನ್ನು ಬೋಧಿಸಲು ಬುದ್ಧನು ಮುಂದಾಗಲಿಲ್ಲ. ಹೀಗಿದ್ದಾಗ ಆ ಬಗ್ಗೆ ತರ್ಕ ಬೆಳೆಸುವುದು ಅವನಿಗೆ ಅಗತ್ಯವೆನಿಸಲಿಲ್ಲ. ಅಶ್ವಘೋಷನಾಗಲಿ ಅವನ ನಂತರದವರಾಗಲಿ ದೀರ್ಘವಾದ ಮತ್ತು ನವಿರಾದ ತರ್ಕವನ್ನು ಬೆಳೆಸಿದ್ದು ತಮ್ಮ ಸ್ವಂತದ ವಿಚಕ್ಷಣೆಯಿಂದ. ಬುದ್ಧನೇನಾದರೂ ಅದನ್ನೆಲ್ಲಾ ನೋಡಿದ್ದರೆ ಬಹಳ ವಿಚಲಿತನಾಗುತ್ತಿದ್ದ, ಬಹುಶಃ ವಿಹ್ವಲನೂ ಆಗುತ್ತಿದ್ದ. ನ್ಯಾಯ ದರ್ಶನವು ಒಂದು ಪ್ರಮುಖವಾದ ಶಾಸ್ತ್ರವಾಗಿ ಬೆಳೆಯುವ ಮುನ್ನ ಈ ರೀತಿಯ ತರ್ಕವು ಅನೂ

ರಾಜ ಅಜಾತಸತ್ತು ವಜ್ಜಿಗಳ ಬುಡಕಟ್ಟನ್ನು ಸದೆಬಡೆಯಲು ಸಿದ್ಧನಾಗಿದ್ದು, ಆಶೀರ್ವಚನ ಪಡೆಯಲು ತನ್ನ ಮಂತ್ರಿ ವಸ್ಸಕರನನ್ನು ಬುದ್ಧನ ಬಳಿಗೆ ಕಳಿಸುತ್ತಾನೆ. ಬುದ್ಧನು ನೇರವಾಗಿ ವಸ್ಸಕರನಿಗೆ ಏನನ್ನು ಹೇಳದೆ, ಆನಂದನನ್ನು ಕುರಿತು ಹೇಳುತ್ತಾನೆ: ವಜ್ಜಿಗಳು ಒಂದು ಗಣವಾಗಿ ಒಗ್ಗೂಡಿ ನಿಂತರೆ ಅವರನ್ನು ಜಯಿಸಲಾಗುವುದಿಲ್ಲ. ಅವರು ಒಟ್ಟಾಗಿ ನಿಲ್ಲಲು ಬೇರಾವ ಲಕ್ಷಣಗಳನ್ನು ಮೈಗೂಡಿಸಿಕೊಳ್ಳಬೇಕೆಂಬುದನ್ನು ಬುದ್ಧನು ಹೇಳಿದ. ಆದರೆ ಅಜಾತ ಸತ್ತುವಿನ ಪ್ರಹಾರದಿಂದ ವಜ್ಜಿಗಳು ತಪ್ಪಿಸಿಕೊಳ್ಳಲಾಗಲಿಲ್ಲ. ಬೌದ್ಧ ಧರ್ಮದ ಉಗಮದ ಹಿನ್ನೆಲೆಯಲ್ಲಿ ಈ ಅಂಶಗಳನ್ನೆಲ್ಲಾ ಗಮನಿಸುವುದು ಅವಶ್ಯಕ.

ಹ್ಯವಾಗಿದ್ದಿತು. ಉದಾಹರಣೆಗೆ, ಅಶ್ವಘೋಷನು ದೇವರ ಅಸ್ತಿತ್ವವನ್ನು ನಿರಾಕರಿಸಲು ಹೂಡುವ ತರ್ಕ ಭಾಗಶಃ ಹೀಗಿದೆ:

ಜಗತ್ತನ್ನು ದೇವರು ನಿರ್ಮಿಸಿದ್ದರೆ ಅದಕ್ಕೆ ಬದಲಾವಣೆ ಮತ್ತು ವಿನಾಶ ಸಾಧ್ಯವಾಗದಿರಬೇಕಿತ್ತು, ದುಃಖ ಅಥವಾ ವಿಪತ್ತು ಇರಬಾರದಿತ್ತು, ಸರಿ–ತಪ್ಪುಗಳು, ಶುದ್ಧ–ಅಶುದ್ಧಗಳು ಇರಬಾರದಿತ್ತು. ಸುಖ–ದುಃಖಗಳು, ಪ್ರೀತಿ–ದ್ವೇಷಗಳು ದೇವರ ಕೃತ್ಯವೆನ್ನುವದಾದರೆ ಸ್ವತಃ ಅವನೂ ಅವನ್ನು ಹೊಂದಿರಬೇಕಾಗುತ್ತದೆ; ಹೊಂದಿದ್ದರೆ ಅವನು ಹೇಗೆ ತಾನೆ ಪರಿಪೂರ್ಣನೆನಿಸುತ್ತಾನೆ? ದೇವರು ಸೃಷ್ಟಿಕರ್ತನಾಗಿದ್ದು, ಎಲ್ಲರೂ ಅವನ ಆಣತಿಯಂತೆ ಫಲ ಅನುಭವಿಸಬೇಕಾಗುತ್ತದೆ ಎನ್ನುವುದಾದರೆ, ಇನ್ನು ಒಳಿತನ್ನು ಆಚರಿಸುವ ಅಗತ್ಯವೇನು? ಆಗ ಒಳಿತು–ಕೆಡುಕು ಎಲ್ಲವೂ ಸಮಾನವೇ ಆಗಿರುತ್ತವಲ್ಲ; ಏಕೆಂದರೆ, ಎಲ್ಲವನ್ನು ಸೃಷ್ಟಿಸಿರುವುದೇ ಅವನು! ದುಃಖ–ದುಮ್ಮಾನಗಳನ್ನು ಸೃಷ್ಟಿಸಿದವನು ಅವನಲ್ಲ ಎನ್ನುವುದಾದರೆ, ದೇವರಲ್ಲದೆ ಬೇರೊಬ್ಬರು ಸಹ ಸೃಷ್ಟಿಕರ್ತರೆಂದು ಒಪ್ಪಿದಂತಾಗುತ್ತದೆ. ಹಾಗಿದ್ದರೆ ಎಲ್ಲವೂ ಕಾರಣರಹಿತವಾಗಿಯೂ ಅಸ್ತಿತ್ವಕ್ಕೆ ಬಂದಿರಬಹುದಲ್ಲವೆ? ದೇವರು ಸೃಷ್ಟಿಕರ್ತನಾದರೆ, ಅದಕ್ಕೆ ಅವನದೊಂದು ಉದ್ದೇಶವಿರಬೇಕು ಅಥವಾ ಇಲ್ಲದಿರಬೇಕು, ಉದ್ದೇಶವಿದ್ದರೆ ಪರಿಪೂರ್ಣನಲ್ಲ; ಏಕೆಂದರೆ ಉದ್ದೇಶವು ಏನೋ ಒಂದು ಇಲ್ಲದಿದ್ದುದರ (ಅಥವಾ ಕೊರತೆಯ) ಸೂಚನೆ. ಉದ್ದೇಶವಿಲ್ಲದೆ ಕ್ರಿಯೆ ನಡೆದಿದೆಯೆಂದರೆ ಅವನೊಬ್ಬ ಮೊಲೆ ಚೀಪುವ ಮಗುವಿರಬೇಕು ಅಥವಾ ಹುಚ್ಚನಿರಬೇಕು. ದೇವರು ಸೃಷ್ಟಿಕರ್ತನಾದರೆ, ಯಾರು ಅಂಗಲಾಚದೆ ತಮಗೆ ಬೇಕಾದ್ದನ್ನು ಪಡೆಯುವಂತಿರಬೇಕಾಗಿತ್ತು. ಅಲ್ಲದೆ, ಅನೇಕ ದೇವರುಗಳ ಬಳಿ ಅಂಗಲಾಚಬೇಕಾಗಿತ್ತೇಕೆ?

ಹೀಗೆ ವೈವಿಧ್ಯಮಯವಾದ ತರ್ಕವು ಆತ್ಮ, ಬ್ರಹ್ಮವಸ್ತು, ಮುಂತಾದ ವಿಷಯಗಳ ಬಗೆಗೆಲ್ಲಾ ಬೆಳೆದಿದೆ. ಬುದ್ಧನು ಪ್ರಸ್ತಾಪಿಸಿದ್ದ ಸರಳತರ್ಕವು 'ಪ್ರತೀತ್ಯ ಸಮುತ್ಪಾದ' ಎಂದು ಪ್ರಸಿದ್ಧವಾಗಿದೆ. ಅವನು ಮೂಲತಃ ನಾಲ್ಕು 'ಆರ್ಯ ಸತ್ಯ'ಗಳನ್ನು ಪ್ರತಿಬೋಧವಾಗಿ ಕಂಡುಕೊಂಡ. ಅದು ದುಃಖದ ಸಂದರ್ಭದಲ್ಲಿ ಬೋಧೆಯಾದದ್ದು.

ಕಾರ್ಯ–ಕಾರಣಗಳ ಸರಣಿಯನ್ನು ವ್ಯಾಖ್ಯಾನಿಸಲು ಪ್ರತೀತ್ಯ ಸಮುತ್ಪಾದವು ಕಲ್ಪಿತವಾಗಿದೆ ಮತ್ತು 'ಕೆಡುಕು' ಎಂಬುದರ ಮೂಲದ ಶೋಧನೆಗೆ ಸಾಧನವಾಗಿದೆ. ಇಲ್ಲಿ ಒಂದು ಸ್ವಾರಸ್ಯವನ್ನು ಗಮನಿಸಬೇಕು; ದುಃಖವಿರುವುದು ನಿಜ ಜೀವನದ ಪ್ರಪಂಚದಲ್ಲಿ; ಆದ್ದರಿಂದ ಕಾರಣ ಮತ್ತು ಪರಿಹಾರಗಳನ್ನು ಜೀವನದ ಸಂದರ್ಭದಲ್ಲಿ ಕಂಡುಕೊಳ್ಳಬೇಕು, ಆದರೆ ಬುದ್ಧನಿಗೆ ಬೋಧೆ ಉಂಟಾದದ್ದು ಪ್ರಪಂಚದಿಂದ ಕಳಚಿಕೊಂಡು ಅಂತರ್ಮುಖಿಯಾದಾಗ. 'ಧಮ್ಮ ಚಕ್ಕ ಪವತ್ತನ ಸುತ್ತ'ದಲ್ಲಿ ಹೇಳಿರುವಂತೆ, ಬುದ್ಧನಿಗೆ ಉಂಟಾದ ಬೋಧೆಯು ಹಿಂದಿನಿಂದ ಪ್ರಚಲಿತವಾಗಿದ್ದ ಯಾವುದೇ ಜ್ಞಾನದ ಶಿಸ್ತಿನಿಂದ ಉಂಟಾದುದಲ್ಲ; ದುಃಖದ ಬಗೆಗಿನ ಸಾರಸರ್ವಸ್ವವು ಅವನಿಗೆ ಅಂತರ್ಬೋಧೆಯಿಂದ ದೊರೆಯಿತು. ಯಾವುದು ದುಃಖ, ದುಃಖದ ಮೂಲ ಎಲ್ಲಿದೆ, ದುಃಖದ ನಿರ್ಮೂಲನೆ ಸಾಧ್ಯವೆ ಮತ್ತು ನಿರ್ಮೂಲನೆಯಾಗುವುದು ಹೇಗೆ?–ಇವು ಬುದ್ಧನ ನಾಲ್ಕು ಆರ್ಯ ಸತ್ಯಗಳು. ದುಃಖದ ಮೂಲಕಾರಣವು ವಿಶ್ವದ ಹೊರಗೆಲ್ಲೋ ಇದೆಯೆಂಬಂತೆ ಚಿತ್ರಿಸುವ ವ್ಯಾಖ್ಯಾನವು ಪ್ರತೀತ್ಯ ಸಮುತ್ಪಾದದ ಸಾರಾಂಶವಾಗಿದೆ. ಇಲ್ಲಿ ದುಃಖದ ಕಾರಣಗಳೆಂದು ಹನ್ನೆರಡು ಅಂಶಗಳನ್ನು ಗುರುತಿಸಲಾಗಿದೆ. ಅದನ್ನು 'ದ್ವಾದಶ ನಿದಾನ'ವೆಂದು ಕರೆಯಲಾಗಿದೆ. ಅವಿದ್ಯಾ, ಸಂಸ್ಕಾರ, ವಿಜ್ಞಾನ (ಪ್ರಜ್ಞೆ) ನಾಮ–ರೂಪ, ಆಯತನ (ಇಂದ್ರಿಯಗಳು), ಸ್ಪರ್ಶ, ವೇದನಾ, ತೃಷ್ಣಾ ಉಪಾದನ (ಅನುರಾಗ ಅಥವಾ ವ್ಯಾಮೋಹ), ಭವ, ಜಾತಿ, (ಆಯುಸ್ಸು) ಮರಣ, ಇವೇ ಆ ಹನ್ನೆರಡು ಅಂಶಗಳು. ಇವುಗಳಲ್ಲಿ ಪ್ರತಿಯೊಂದು ಮುಂದಿನದಕ್ಕೆ ಆಶ್ರಯ; ಅಥವಾ, ಅದರಿಂದ ಅದರ ಮುಂದಿನದು ಘಟಿಸುತ್ತದೆ. ಇದೊಂದು ಸರಣಿ. ಅದರಲ್ಲಿ ಮುಂದಿನದರ ಉತ್ಪನ್ನವಾಗಬೇಕಾದರೆ ಹಿಂದಿನದು ಇರಲೇಬೇಕು. ಸರಳವಾಗಿ ಹೇಳುವುದಾದರೆ ಇದು ಪ್ರತೀತ್ಯ ಸಮುತ್ಪಾದ ಕಲ್ಪನೆಯ ತತ್ತ್ವ "ಅದಿದ್ದಾಗ ಇದು ಪರಿಣಮಿಸುತ್ತದೆ; ಅದಿಲ್ಲದಿದ್ದಾಗ ಇದು ಇಲ್ಲವಾಗುತ್ತದೆ" (ಯದ್ಭಾವೇ ಯದ್ಭಾವಃ ಯದಭಾವೇ ಯದಭಾವಃ) ಎಂದು ಇದನ್ನು ವಿವರಿಸುವುದುಂಟು.

ಬುದ್ಧನು ತನ್ನ ಎಂಭತ್ತನೆಯ ವಯಸ್ಸಿನಲ್ಲಿ ಸುಮಾರು ಕ್ರಿಸ್ತಪೂರ್ವ ೪೮೩ರಲ್ಲಿ (ಅಂದರೆ, ೨೫೦೦ ವರ್ಷಗಳ ಹಿಂದೆ) ಗತಿಸಿದನೆಂದು ಲೆಕ್ಕ ಮಾಡಲಾಗಿದೆ. ನಮಗೆ ಲಭ್ಯವಿರುವ ಪ್ರಾಚೀನ ಬೌದ್ಧ ಸಾಹಿತ್ಯದ ರಚನೆಯಾದದ್ದು ಬಹುಮಟ್ಟಿಗೆ ಅವನು ಗತಿಸಿದ ನಂತರ. ಅದನ್ನು "ಮೂರು ಬುಟ್ಟಿಗಳು" (ತ್ರಿಪಿಟಕ) ಎಂದು ಹೆಸರಿಸಿದ್ದಾರೆ. ವಿನಯ, ಸುತ್ತ ಮತ್ತು ಅಭಿಧಮ್ಮ ಎಂಬುವು ಆ ಮೂರು 'ಪಿಟಕ'ಗಳು. ಸಮಾರು ಕ್ರಿಸ್ತಶಕ ಎರಡನೆಯ ಶತಮಾನದ ತರುವಾಯದಲ್ಲಿ ಬೌದ್ಧಮತದ ವ್ಯಾಪ್ತಿಯಲ್ಲಿ ಆವಿಷ್ಕಾರಗೊಂಡ ದಾರ್ಶನಿಕ ಪ್ರಮೇಯಗಳು ಪ್ರಾಚೀನವಾದ ಸುತ್ತ ಮತ್ತು ಅಭಿಧಮ್ಮ ಪಿಟಕಗಳಲ್ಲಿ ಕಾಣಬರುವುದಿಲ್ಲ. ಬುದ್ಧನ ಜೀವಿತಾವಧಿಯಲ್ಲಿ ಆತನ ತತ್ತ್ವಗಳು ಬೌದ್ಧ ಸಂಘಗಳ ಮೂಲಕ ಹೇಗೆ, ಎಷ್ಟು ಮತ್ತು ಎಲ್ಲಿ ಪ್ರಚುರಗೊಂಡುವೆಂಬುದನ್ನು ಅವನ ನಂತರದ ಕಾಲದಲ್ಲಿ ರಚನೆಗೊಂಡ ತ್ರಿಪಿಟಕಗಳಿಂದ ತಿಳಿಯಬಹುದು. ಆದರೆ ಅಶೋಕನ ಕಾಲದವರೆಗೆ, ಅಂದರೆ ಬುದ್ಧನ ನಂತರದ ಸುಮಾರು ಇನ್ನೂರು ವರ್ಷಗಳಲ್ಲಿ, ಬೌದ್ಧಧರ್ಮ ಮತ್ತು ಬೌದ್ಧ ಸಂಘಗಳು ಎಷ್ಟು ಪ್ರಾಬಲ್ಯ ಪಡೆದಿದ್ದುವೆಂಬುದು ತಿಳಿಯುವುದಿಲ್ಲ.

ಬುದ್ಧನು ತನ್ನ ಎಂಭತ್ತನೆಯ ವಯಸ್ಸಿನಲ್ಲಿ ಸುಮಾರು ಕ್ರಿಸ್ತಪೂರ್ವ ೪೮೩ರಲ್ಲಿ (ಅಂದರೆ, ೨೫೦೦ ವರ್ಷಗಳ ಹಿಂದೆ) ಗತಿಸಿದನೆಂದು ಲೆಕ್ಕ ಮಾಡಲಾಗಿದೆ. ನಮಗೆ ಲಭ್ಯವಿರುವ ಪ್ರಾಚೀನ ಬೌದ್ಧ ಸಾಹಿತ್ಯದ ರಚನೆಯಾದದ್ದು ಬಹುಮಟ್ಟಿಗೆ ಅವನು ಗತಿಸಿದ ನಂತರ. ಅದನ್ನು "ಮೂರು ಬುಟ್ಟಿಗಳು" (ತ್ರಿಪಿಟಕ) ಎಂದು ಹೆಸರಿಸಿದ್ದಾರೆ. ವಿನಯ, ಸುತ್ತ ಮತ್ತು ಅಭಿಧಮ್ಮ ಎಂಬುವು ಆ ಮೂರು 'ಪಿಟಕ'ಗಳು. ಸಮಾರು ಕ್ರಿಸ್ತಶಕ ಎರಡನೆಯ ಶತಮಾನದ ತರುವಾಯದಲ್ಲಿ ಬೌದ್ಧಮತದ ವ್ಯಾಪ್ತಿಯಲ್ಲಿ ಆವಿಷ್ಕಾರಗೊಂಡ ದಾರ್ಶನಿಕ ಪ್ರಮೇಯಗಳು ಪ್ರಾಚೀನವಾದ ಸುತ್ತ ಮತ್ತು ಅಭಿಧಮ್ಮ ಪಿಟಕಗಳಲ್ಲಿ ಕಾಣಬರುವುದಿಲ್ಲ.

ಅಶೋಕ, ಕಾನಿಷ್ಕ, ಹರ್ಷವರ್ಧನ, ಮುಂತಾದ ರಾಜರ ಆಶ್ರಯದಲ್ಲಿ ಪ್ರವರ್ಧಮಾನಕ್ಕೆ ಬಂದ ಬೌದ್ಧ ಧರ್ಮವು ಬುದ್ಧನ ಕಾಲದ ತಾತ್ವಿಕ ಪ್ರಮೇಯಗಳನ್ನು ದಾಟಿ ಬೇರೊಂದು ಸ್ತರವನ್ನು ತಲುಪಿದ್ದವು. ದೇವರು ಮತ್ತು ಆತ್ಮದ ಬಗ್ಗೆ ಏನೂ ಹೇಳದಿದ್ದ ಬುದ್ಧನು ಮುಂದೊಮ್ಮೆ ತಾನೇ ದೇವರ ಸ್ಥಾನಕ್ಕೇರಿಸಲ್ಪಟ್ಟ ಮತ್ತು ಆತ್ಮ ಮುಂತಾದ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಬೌದ್ಧ ದರ್ಶನಗಳಲ್ಲಿ ಪುಂಖಾನುಪುಂಖವಾದ ಚರ್ಚೆ ನಡೆಯಿತು, ಸೂಕ್ಷ್ಮ ಮಟ್ಟದ ತರ್ಕವು ವಿಪುಲವಾಗಿ ಬಳಸಲ್ಪಟ್ಟಿತು; ಪ್ರತೀತ್ಯ ಸಮುತ್ಪಾದದ ಬಗೆಗಿನ ವ್ಯಾಖ್ಯಾನವು ಸಹ ಹೊಸ ಹೊಸ ಆಯಾಮಗಳನ್ನು ಪಡೆದುಕೊಂಡಿತು.

ಬುದ್ಧನ ಕಾಲದ ತಾತ್ವಿಕ ಪ್ರಮೇಯಗಳಲ್ಲಿ ಆರ್ಯ ಸತ್ಯಗಳು ಮತ್ತು ಪ್ರತೀತ್ಯ ಸಮುತ್ಪಾದ ಪ್ರಮುಖವಾದುವು. ಯಾವುದು ಹುಟ್ಟುತ್ತದೋ ಅದು ನಾಶವಾಗುತ್ತದೆ. ಎಂಬುದೊಂದು ನ್ಯಾಯಾ ದರ್ಶನದ ತಿಳಿವಳಿಕೆ (ಜನಯತ್ವಾತ್ ಅನಿತ್ಯಂ). ಇದನ್ನು ಬುದ್ಧನೂ ಮಾನ್ಯ ಮಾಡಿದ್ದನು. ಆದ್ದರಿಂದ ಕಾರಣವೊಂದರಿಂದ ಉತ್ಪನ್ನವಾದ ಕಾರ್ಯವು ಯಾವಾಗಾದರೂ ಒಮ್ಮೆ ನಾಶವಾಗಲೇಬೇಕೆಂಬುದು ಅವನ ಬೋಧನೆಯ ಒಂದು ಭಾಗವಾಗಿದ್ದಿತು. ಅನಿತ್ಯತಾ ವಾದ ಮತ್ತು ಅನಾತ್ಮ ವಾದಗಳು ಪ್ರತೀತ್ಯ ಸಮುತ್ಪಾದದ ತರ್ಕದ ಫಲವಾಗಿ ಅನಿವಾರ್ಯವಾಗಿದ್ದವು. ವಿಶ್ವವು ಸದಾ ಬದಲಾಗುತ್ತಿರುವ ಲಕ್ಷಣ ಉಳ್ಳದ್ದು ಎಂಬುದು ಇದರಿಂದ ಖಚಿತಗೊಂಡಿತು. ಇದನ್ನು ಬುದ್ಧನ ಪರಿಭಾಷೆಯಲ್ಲಿ 'ಸಂತಾನ' ಎಂದು ಹೆಸರಿಸಲಾಗಿದೆ.

ವಿಶ್ವವು ಇದೆ, ಮತ್ತು ಅದಿಲ್ಲ, ಎಂಬ ನೆಲೆಗಳಲ್ಲಿ ಅಸ್ತಿತ್ವದ ನಿರೂಪಣೆಯಾಯಿತು. ಅಂದರೆ, ಈಗಿರುವುದು ನಿಜ; ಆದರೆ ಅದು ಬದಲಾಗುತ್ತಿರುತ್ತದೆಯಾದ್ದರಿಂದ ಮುಂದೆ ಇರುವಿಕೆಯನ್ನು ಹೊಂದುವುದು ಹಿಂದಿನದೇ ಅಲ್ಲ, ಒಂದೇ ಹೊಳೆಯಲ್ಲಿ ಎರಡು ಬಾರಿ ಸ್ನಾನ ಮಾಡಲಾಗುವುದಿಲ್ಲ ಮತ್ತು ಎರಡು ಬಾರಿ ಸ್ನಾನ ಮಾಡುವವನು ಒಬ್ಬನೇ ವ್ಯಕ್ತಿಯಲ್ಲ, ಎಂಬ ಹೇಳಿಕೆಗಳು ಬೌದ್ಧ ದರ್ಶನದ 'ಸಂತಾನ'ದ ತತ್ವವನ್ನು ಕ್ರೋಢೀಕರಿಸಿ ತಿಳಿಸುತ್ತವೆ. ನಂತರದ ಶತಮಾನಗಳಲ್ಲಿ ಇದನ್ನು ಅತಿಯಾಗಿ ಹಿಗ್ಗಿಸಿ ತನ್ನ ಬೇರಾದ ಪ್ರಾಚೀನ ಬೌದ್ಧ ತತ್ತ್ವಗಳಿಂದ ಬಹುದೂರ ಕೊಂಡೊಯ್ಯಲಾಯಿತು. ಯಾವ ಆಧ್ಯಾತ್ಮದ ಬಗ್ಗೆ ಬುದ್ಧನು ಮೌನಿಯಾಗಿದ್ದನೋ ಅದನ್ನು ಪ್ರಕರ್ಷವಾಗಿ ಬೆಳೆಸಿ ಬುದ್ಧನನ್ನು ಚಮತ್ಕಾರದ ತರ್ಕಪಟುವನ್ನಾಗಿ ಪರಿವರ್ತಿಸಲಾಯಿತು. 'ಸಂತಾನ' ರೂಪದಲ್ಲಿಯೇ ಆದರೂ ವಿಶ್ವವು ಅಸ್ತಿತ್ವವನ್ನು ಹೊಂದಿದೆ ಮತ್ತು ದುಃಖವು ಮೂರ್ತಸ್ವರೂಪದ್ದು, ಎನ್ನುವುದು ಬುದ್ಧನ ಗ್ರಹಿಕೆ, ಒಬ್ಬ ವೈದ್ಯನೋಪಾದಿಯಲ್ಲಿ ಬುದ್ಧನು ದುಃಖದ ಕಾರಣಗಳನ್ನು ಅರಸಿ, ಅದರ ನಿರ್ಮೂಲನೆಗೆ ಔಷಧಿ ಅಥವಾ ಮಾರ್ಗವನ್ನು ಸೂಚಿಸಿದ್ದ. ನಂತರದ ಹಲವು ಬೌದ್ಧ ದಾರ್ಶನಿಕರು ದುಃಖದ ನಿರ್ಮೂಲನವನ್ನು ಗೌಣವಾಗಿಸಿ, ಅಸ್ತಿತ್ವದ ಪ್ರಶ್ನೆಯನ್ನು ಸಂಕೀರ್ಣವಾದ ತರ್ಕದಿಂದ ವಿಶ್ಲೇಷಿ

ಸಲು ಮುಂತಾದರು. ಸಮಾಜ ಮುಖಿಯಾಗಿದ್ದ ದರ್ಶನವು ಪಾಂಡಿತ್ಯಮುಖಿ ದರ್ಶನವಾಗಿ ವಿಕಾಸಗೊಂಡಿತೆಂದು ಹೇಳುವುದು ಅನಾದರದ ಮಾತಾಗಿ ಕಾಣಬೇಕಾಗಿಲ್ಲ.

ಬುದ್ಧನ ಕಾಲಾನಂತರ ಮೊಟ್ಟಮೊದಲ ಬೌದ್ಧ ಸಮಾವೇಶವು ರಾಜಗೃಹದಲ್ಲಿ ನಡೆಯಿತು. ಆಗ್ಗೆ ಅಭಿಧಮ್ಮದ ಚರ್ಚೆ ನಡೆದಿರಲಿಲ್ಲ. ಅಂದರೆ, ಆಧ್ಯಾತ್ಮದ ಸೂಕ್ಷ್ಮ ವಿಚಾರಗಳು ಇನ್ನೂ ಪ್ರಮುಖವಾಗಿ ಕಾಣಿಸಿರಲಿಲ್ಲ. ಅಲ್ಲಿ ವಿಶೇಷವಾಗಿ ಚರ್ಚೆಗೆ ಬಂದಿದ್ದು 'ವಿನಯ' ಅಥವಾ ಬೌದ್ಧ ಸಂಘಗಳ ಸ್ವರೂಪ, ನಡತೆ, ನೀತಿ ಸಂಹಿತೆ, ಇತ್ಯಾದಿಗಳು. ತಾತ್ವಿಕ ವಿಷಯಗಳನ್ನು ಸಂಕೀರ್ಣಗೊಳಿಸಿ, ಅಮೂರ್ತ ನೆಲೆಯಲ್ಲಿ ವಿಶ್ಲೇಷಿಸುವ ಪದ್ಧತಿ ಇನ್ನೂ ರೂಢಿಗೆ ಬಂದಿರಲಿಲ್ಲ. ಬೌದ್ಧ ಸಂಘದ ಎರಡನೆಯ ಸಮಾವೇಶವು ವೈಶಾಲಿಯಲ್ಲಿ ಜರುಗಿತು. ಆಗ್ಗೆ ಬೌದ್ಧ ಸಂಘಗಳ ಅನುಭವಗಳನ್ನು ಪರಾಮರ್ಶೆ ಮಾಡಿ ಹೊಸ ನಿಲುವೊಂದನ್ನು ರೂಪಿಸಲಾಯಿತು. ಹಿಂದಿನ 'ವಿನಯ' ಅಥವಾ ಸಂಘದ ನಿಯಮಗಳು ಬಹಳ ಗಡುಸಾಗಿದ್ದು, ಅವನ್ನು ಸಡಿಲಗೊಳಿಸಬೇಕೆಂಬ ತಗಾದೆಯನ್ನು ಈ ಸಮಾವೇಶದಲ್ಲಿ ಮಂಡಿಸಲಾಯಿತು. ಇದಕ್ಕೆ ಒಪ್ಪಿಗೆ ದೊರೆಯದಿದ್ದ ಕಾರಣ ಸಡಿಲಗೊಳಿಸುವಿಕೆಯ ಪರವಾಗಿದ್ದ ಸಾವಿರಾರು ಭಿಕ್ಷುಗಳನ್ನು ಸಂಘದಿಂದ ಹೊರಹಾಕಲಾಯಿತು. ಹೀಗೆ ಹೊರಹಾಕಲ್ಪಟ್ಟವರು ತಮ್ಮನ್ನು ತಾವು "ಮಹಾಸಾಂಘಿಕರು" ಎಂದು ಕರೆದುಕೊಂಡರು– ಅವರ ಸಮೂಹಕ್ಕೆ 'ಮಹಾ ಸಂಗೀತಿ' ಎಂಬ ಹೆಸರು ಬಂದಿತು. ಹೊರಹಾಕಿದವರು ಎಂದಿನಂತೆ 'ಸ್ಥವಿರವಾದಿಗಳು' ಅಥವಾ 'ಥೇರಾವಾದಿಗಳು' ಎಂಬ ಹೆಸರಿನಲ್ಲಿ ಮುಂದುವರಿದರು. ಇವರ ಸಂಖ್ಯೆಯು ಮಹಾಸಾಂಘಿಕರ ಸಂಖ್ಯೆಗಿಂತಲೂ ಹೆಚ್ಚಾಗಿದ್ದಿತಾದರೂ ತತ್ವಶಾಸ್ತ್ರದ ಕ್ಷೇತ್ರದಲ್ಲಿ ಅವರ ದನಿಯು ಸೊರಗಿ ಮಹಾಸಾಂಘಿಕರ ಧ್ವನಿಯು ಎತ್ತರಕ್ಕೇರಿತು. ಅವರೇ ನಿಜವಾಗಿ ಬೌದ್ಧ ದಾರ್ಶನಿಕರು ಎಂಬ ರೀತಿಯಲ್ಲಿ ಅವರು ಮುಂದಿನ ಶತಮಾನಗಳಲ್ಲಿ ಬೆಳೆದರೆಂಬುದು ಇತಿಹಾಸದ ಒಂದು ಸಂಗತಿ– ಇತಿಹಾಸದ ವಿಪರ್ಯಾಸವೆಂದರೂ ನಡೆದೀತು. "ಲೋಕೋತ್ತರ ಬುದ್ಧ"ನನ್ನು ಹುಟ್ಟಿಹಾಕಿದವರು ಇದೇ ಮಹಾಸಾಂಘಿಕರು; ನಂತರದ ಮಹಾಯಾನ ಪಂಥವು ಬುದ್ಧನನ್ನು ದೇವರ ಪಟ್ಟಕ್ಕೇರಿಸಿತು!



ಬೌದ್ಧ ಸಂಘದ ಮೂರನೆಯ ಸಮಾವೇಶವು ಅಶೋಕನ ಕಾಲದಲ್ಲಿ ಜರುಗಿತು. ರಾಜಾಶ್ರಯ ಪಡೆದಿದ್ದುದರಿಂದ ಸಮಾವೇಶವು ಮಹತ್ವದ್ದಾಗಿದ್ದಿರಬೇಕು. ಆದರೆ ಹಿಂದಿಗಿಂತಲೂ ಹೆಚ್ಚಿನ ಒಡಕು ಕಂಡುಬಂದು ಬೌದ್ಧ ತತ್ವಗಳ ಜಿಜ್ಞಾಸೆಯಲ್ಲಿ ಅಗಾಧವಾದ ಭಿನ್ನಾಭಿಪ್ರಾಯಗಳು ವ್ಯಕ್ತವಾದುವು. ಹೀಗೆ ವಿವಿಧ ಅಭಿಪ್ರಾಯಗಳನ್ನು ಪ್ರತಿನಿಧಿಸಿದ್ದ ಹನ್ನೊಂದು ಗುಂಪುಗಳು ಅಥವಾ ನಿಕಾಯಗಳು ಹೊರಹಾಕಲ್ಪಟ್ಟುವು. ವಾತ್ಸೀಪುತ್ರೀಯರು ಎಂದು ಪ್ರಸಿದ್ಧವಾದ ಬಣವೂ ಇದರಲ್ಲಿ ಸೇರಿತ್ತು. ಹೊರಹಾಕಲ್ಪಟ್ಟವರಲ್ಲಿ ಅನೇಕರು ನಾಲಂದಾಕ್ಕೆ ತೆರಳಿರೆಂದು ಪ್ರತೀತಿ ಇದೆ. ತಮ್ಮ ವಿದ್ವತ್ತನ್ನು ಹೆಚ್ಚಿಸಿಕೊಳ್ಳಲು, ಪ್ರದರ್ಶಿಸಲು ಮತ್ತು ಹೊಸ ಪಂಥಗಳನ್ನು ಪೋಷಿಸಲು ಇವರಿಗೆ ಸಾಧ್ಯವಾಯಿತು. ಇವರನ್ನು ಸರ್ವಾಸ್ತಿವಾದಿಗಳು ಎನ್ನುತ್ತಾರೆ. ನಂತರದ ಕಾಲದಲ್ಲಿ ಇವರು ಕಾಶ್ಮೀರದಲ್ಲಿ ನೆಲೆಸಿದರು, ಗಾಂಧಾರ (ಇಂದಿನ ಆಫ್ಘಾನಿಸ್ತಾನ) ಪ್ರದೇಶಕ್ಕೆ ವಿಸ್ತರಿಸಿಕೊಂಡರು ಮತ್ತು ಕಾನಿಷ್ಕನ ಪೋಷಣೆ ಪಡೆದು ಬೆಳೆದರು. ಇದೇ ಕಾನಿಷ್ಕನ ಕಾಲದಲ್ಲಿ ಬೌದ್ಧ ಸಂಘದ ನಾಲ್ಕನೆಯ ಸಮಾವೇಶ ನಡೆಯಿತು, ಸುಮಾರು ಕ್ರಿಸ್ತಶಕ ೧೦೦ರಲ್ಲಿ ಇದು ಬೌದ್ಧ ತತ್ವಗಳಿಗೆ ಮಹತ್ತರವಾದ ತಿರುವನ್ನು ನೀಡಿದ ಸಮಾ ವೇಶವಾಯಿತು.

ತ್ರಿಪಿಟಕಗಳ ಮೇಲೆ ದಾರ್ಶನಿಕ ದೃಷ್ಟಿಕೋನದ ಆಧಾರದ ಮೇಲೆ ಭಾಷ್ಯಗಳನ್ನು ಬರೆಯಲಾಯಿತು. ಅದನ್ನು 'ಮಹಾವಿಭಾಷಾ' ಎಂದು ಕರೆಯಲಾಗಿತ್ತು ಮತ್ತು ಈ ಸಂಘದವರು ವೈಭಾಷಿಕರೆಂದೂ ಕರೆಯಲ್ಪಟ್ಟರು. ಸರ್ವಾಸ್ತಿವಾದಿಗಳಿಗೆ ಇದು ಇನ್ನೊಂದು ಹೆಸರು, ಅಷ್ಟೆ. ಇದಕ್ಕಿಂತಲೂ ಸ್ವಲ್ಪ ಭಿನ್ನವಾದ ನಿಟ್ಟಿನಿಂದ ವಸುಬಂಧುವು 'ಅಭಿಧರ್ಮಕೋಶ'ವೆಂಬ ಗ್ರಂಥ ರಚಿಸಿದನು. ಅವನ ಪಂಥದವರು ಸೌತ್ರಾಂತಿಕರು ಎನಿಸಿಕೊಂಡರು. ವಸ್ತುವಿನ ಸದ್ಯದ ಅಸ್ತಿತ್ವವನ್ನು ಮಾನ್ಯಮಾಡುವುದು ಇದರ ಲಕ್ಷಣ. ಅದನ್ನು ಪದಾರ್ಥದ 'ಸ್ವಲಕ್ಷಣ' ಎನ್ನಲಾಯಿತು. ಸರ್ವಾಸ್ತಿವಾದಿಗಳು ಕಾಲಕ್ಕೆ ಮಹತ್ವ ನೀಡಿ ಅನಿತ್ಯತೆಯ ತತ್ವವನ್ನು ಇನ್ನೂ ಆಳವಾಗಿ ವಿವೇಚಿಸಿದರು. 'ಸರ್ವಾಸ್ತಿ' ಎಂದರೆ 'ಎಲ್ಲವೂ ಇದೆ' ಎಂಬ ಅರ್ಥವಲ್ಲ; ಮೂರು ಕಾಲಗಳಲ್ಲಿ ಪದಾರ್ಥವಿರುತ್ತದೆಂದು ಸೂಚಿಸುವ ಪದ ಅದು. ಶಂಕರಾಚಾರ್ಯರು ಬ್ರಹ್ಮಸೂತ್ರ ಭಾಷ್ಯದಲ್ಲಿ ಪದಾರ್ಥದ ಅಸ್ತಿತ್ವವನ್ನು ವ್ಯಾಖ್ಯಾನಿಸುವ ರೀತಿಯಲ್ಲಿಯೇ ಇಲ್ಲೂ ವ್ಯಾಖ್ಯಾನಿಸಲಾಗುತ್ತದೆ. ಆ ದೃಷ್ಟಿಯಿಂದ ಇದು ತತ್ವಶಾಸ್ತ್ರ ಪ್ರಣಾಲಿಕೆಯಲ್ಲಿ ಭಾವನಾವಾದದ ಶಾಖೆಯಾಗುತ್ತದೆ. ಮಾಧ್ಯಮಿಕ ಮತ್ತು ಯೋಗಾಚಾರ ಎನ್ನುವ ಇನ್ನೆರಡು ಶಾಖೆಗಳು ಸಹ ಇದೇ ಮಾದರಿಯವು. ಈ ನಾಲ್ಕು ಪಂಥಗಳನ್ನು ಒಟ್ಟಾಗಿ ಮಹಾಯಾನವೆಂದು ಕರೆಯುವುದು ವಾಡಿಕೆ. ಪ್ರಾಚೀನ ಬೌದ್ಧ ಪರಂಪರೆಯನ್ನು ಹೀನಯಾನವೆಂದು ಕರೆದು, ಅದರಿಂದ ಭಿನ್ನೈಸಲು ಇದನ್ನು ಮಹಾಯಾನವೆನ್ನುತ್ತಾರೆ.

ಶೂನ್ಯವಾದವನ್ನು ಪ್ರತಿಪಾದಿಸುವ ನಾಗಾರ್ಜುನನು ಈ ಪದವನ್ನು ತನ್ನ ಶಾಖೆಯನ್ನು ಸೂಚಿಸಲು ಪ್ರಯೋಗಿಸಿಲ್ಲವಾದರೂ ಸಾಮಾನ್ಯ ತಿಳಿವಳಿಕೆಯು ಹಾಗೆ ಭಿನ್ನೈಸುವ ಪರವಾಗಿತ್ತು. ಹೀನಯಾನವು ವೈಯಕ್ತಿಕ ನಿರ್ವಾಣವನ್ನು ಬೋಧಿಸುತ್ತದೆಂದೂ, ಮಹಾಯಾನವು ಸಾಮೂಹಿಕ ನಿರ್ವಾಣವನ್ನು ಬೋಧಿಸುತ್ತದೆಂದೂ ಗುರುತಿಸುವುದುಂಟು. ಆದಿ ಬೌದ್ಧರ ಚಿಂತನೆಯು 'ಸಾಮಾನ್ಯ ವಾಹನ'ವಾದರೆ, ನಿರ್ವಾಣವನ್ನು ಗಳಿಸಲು ನಂತರದ ನಾಲ್ಕು ಬೌದ್ಧ ಶಾಖೆಗಳು 'ಮಹಾವಾಹನ'ಗಳು. ಹಾಗೆಂದು ಹೇಳಿಕೊಂಡದ್ದು ಸ್ವತಃ ಮಹಾಯಾನಿಗಳೇ. ಆದಿ ಬೌದ್ಧ ಮುಂಡಕ ಉಪನಿಷತ್ತಿನಲ್ಲಿ ಆಗಲೆ ವಿದ್ಯೆಯನ್ನು ಅಪರಾ ಮತ್ತು ಪರಾ ಎಂದು ವಿಂಗಡಿಸಿ ಬ್ರಹ್ಮಜ್ಞಾನದ ಗಳಿಕೆಯು 'ಪರಾ ವಿದ್ಯಾ' ಎಂದು ಪರಿಗಣಿಸಲಾಗಿತ್ತು. ಅಂದರೆ ಅದು ಅಂತಿಮ ಹಂತದ ಉತ್ಕೃಷ್ಟ ವಿದ್ಯೆ; ಬೇರೆ ವಿದ್ಯೆಗಳು (ಕಸುಬುಗಳ ಕೌಶಲ್ಯ, ಇತ್ಯಾದಿ) ಕೆಳ ಹಂತದ ಸಾಮಾನ್ಯ ವಿದ್ಯೆ. ಇಂತಹ ವಿಭಜನೆಯ ಛಾಯೆಯೆಂಬಂತೆ ಹೀನಯಾನ ಮತ್ತು ಮಹಾಯಾನ ಪಂಥಗಳು ಪ್ರತ್ಯೇಕ ಘಟಕಗಳಾಗಿ ಬೆಳೆದವು.

ಬೌದ್ಧ ಸಂಘಗಳ ನಿಯತಿಯ ಸ್ಥಾನದಲ್ಲಿ ಈಗ ವೈಯಕ್ತಿಕ ತರ್ಕಶಾಸ್ತ್ರದ ಪ್ರತಿಪಾದನೆಯು ವಿಜೃಂಭಿಸಿತು. ಮೊದಲಿನ ನಾಸ್ತಿಕ, ಅನಾತ್ಮ ದರ್ಶನವು ಬೇರೆ ಸಾಂಸ್ಥಿಕ ಸ್ವರೂಪವನ್ನು ಪಡೆಯಿತು. ಮೊದಲಿಗೆ ಬೌದ್ಧ ಧರ್ಮದ ಸ್ಥಾಪಕನಾದ ಬುದ್ಧನ ಬಗ್ಗೆ ಸಾಮಾನ್ಯವಾದ ಆದರವಿತ್ತು ಮತ್ತು ವೈಯಕ್ತಿಕ ನಿರ್ವಾಣಕ್ಕೆ ಅವನು ಹಾಕಿಕೊಟ್ಟಿದ್ದ ಎಂಟು ಹಾದಿಗಳು (ಅಟ್ಠ ಮಗ್ಗ) ಪ್ರಚಲಿತವಾಗಿದ್ದವು. ಮಹಾಯಾನ ಪಂಥವು ಹೆಚ್ಚು ಸಾಂಸ್ಥಿಕ ಸ್ವರೂಪವನ್ನು ಪಡೆದು ಬುದ್ಧನನ್ನು ಭಗವಂತನನ್ನಾಗಿಸಿತು, ಪೂಜಾವಿಧಾನಗಳನ್ನು ನಿರೂಪಿಸಿತು. ಭಕ್ತಿ ಪಂಥದತ್ತ ವಾಲುತ್ತಿದೆಯೆಂಬಂತೆ ವ್ಯವಹರಿಸಿತು ಮತ್ತು ಸಾರ್ವತ್ರಿಕ ನಿರ್ವಾಣವನ್ನು ಬೋಧಿಸಿತು. ಇದು ಬುದ್ಧ ಮತ್ತು ಬೋಧಿಸತ್ವರ ದಿವ್ಯದಾನವಾಗಿ ಲಭ್ಯವಾಗುತ್ತದೆಂದು ಸಹ ಸೂಚಿಸಲಾಯಿತು.

ಹಿಂದಿನ ಹಂತದಿಂದ ಅದೆಷ್ಟು ದೂರ ಕ್ರಮಿಸಿಬಿಟ್ಟಿದೆಯೆಂದು ವಿಸ್ಮಯವನ್ನು ಪ್ರಕಟಿಸುವವರಿಗೆ ಮಹಾಯಾನದ್ದು ಒಂದು ಸಿದ್ಧ ಉತ್ತರವಿತ್ತು: "ಇದು ಕ್ಲಿಷ್ಟವಾದ ತರ್ಕದಿಂದ ಕೂಡಿದೆ, ನಿಜ; ಆದರೆ ಇದು ಸಹ ಬುದ್ಧನ ಬೋಧನೆಯೇ ಆಗಿದೆ. ಅವನು ತನ್ನ ಸಾಮಾನ್ಯ ಬೋಧನೆಗಳಲ್ಲಿ ಇದನ್ನು ಸೇರಿಸಿರಲಿಲ್ಲ. ಅಷ್ಟೆ" ಕೆಲ ಆಯ್ದವುಂದಿಗೆ ಬುದ್ಧ ಇದನ್ನು ಬೋಧಿಸಿದ್ದನೆಂದೂ, ಐದು ಶತಮಾನಗಳ ನಂತರ ಅದು ಪ್ರಕಾಶಗೊಳ್ಳುವುದೆಂದು ಅವನೇ ನುಡಿದಿದ್ದನೆಂದು ಒಂದು ಐತಿಹ್ಯವನ್ನು ಹರಿಬಿಡಲಾಯಿತು:

"ಶೂನ್ಯತೆಯ ಅರಿವನ್ನು ಸ್ವಯಂವಾಗಿಸಿಕೊಳ್ಳುವ
ಕಷ್ಟವನ್ನರಿತ ಬುದ್ಧನು ಅದನ್ನು ಸಾಮಾನ್ಯರಿಗೆ
ಉಪದೇಶಿಸಲು ಹಿಂಜರಿದನು"

(೩೭ನೇ ಪುಟಕ್ಕೆ)

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಯು.ಪಿ.ಎ. ಸಮ್ಮಿಶ್ರ ಸರ್ಕಾರವು ಸದ್ಯದಲ್ಲಿ ಪತನವಾಗುವುದರಿಂದ ತಪ್ಪಿಸಿಕೊಂಡಿದೆ ಎಂದೇ ಹೇಳಬಹುದು. ಕಳೆದ ಎರಡು ತಿಂಗಳಿನಿಂದ ಕಾಂಗ್ರೆಸ್ ಮತ್ತು ಎಡ ಪಕ್ಷಗಳ ನಡುವಿನ ಭಿನ್ನಾಭಿಪ್ರಾಯಗಳಿಗೆ ತೆರೆ ಎಳೆಯಲು, ಭಾರತ ಅಮೆರಿಕಾ ನಡುವಿನ ೧೨೩ ಅಣು ಒಪ್ಪಂದದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ದೇಶದ ಹಿತಾಸಕ್ತಿಗಳನ್ನು ಕಾಪಾಡುವ ನಿಟ್ಟಿನಲ್ಲಿ ತೀರ್ಮಾನ ಕೈಗೊಳ್ಳಲು ಜಂಟಿ ಸಮಿತಿಯನ್ನು ರಚಿಸಿರುವುದು, ಎಡ ಪಕ್ಷಗಳ ಬೆಂಬಲವನ್ನು ಉಳಿಸಿಕೊಂಡಂತಾಗಿದೆ. ೧೨೩ ಒಪ್ಪಂದದಿಂದ ದೇಶಕ್ಕೆ ಜಾಗತಿಕ ಮಟ್ಟದಲ್ಲಿ ಹೊಸ ಅವಕಾಶಗಳು ಲಭ್ಯವಾಗುತ್ತದೆ ಮತ್ತು ಭಾರತವು ಜಾಗತಿಕ ಮಟ್ಟದಲ್ಲಿ ಪರಮಾಣು ಶಕ್ತಿಯಾಗಿ ಹೊರಹೊಮ್ಮಲು ಈ ಒಪ್ಪಂದ ಪೂರಕವಾಗಿದೆ ಎಂಬ ಪ್ರಧಾನಿ ಮನನೋಹನ ಸಿಂಗ್‌ರವರ ಪ್ರತಿಪಾದನೆಯನ್ನು ಎಲ್ಲ ರಾಜಕೀಯ ಪಕ್ಷಗಳೂ ಒಪ್ಪುತ್ತಿಲ್ಲ.

ಈ ಒಪ್ಪಂದದ ಪೂರ್ವಭಾವಿ ಸಿದ್ಧತೆಯಾಗಿ ಅಮೆರಿಕಾ ದೊಡನೆ ಭಾಂದವ್ಯ ಬೆಳೆಸಿ, CTBTಗೆ ಸಹಿ ಮಾಡಿದ ಭಾರತೀಯ ಜನತಾ ಪಕ್ಷವೂ ಒಪ್ಪಂದವನ್ನು ವಿರೋಧಿಸುತ್ತಿದ್ದು ಯು.ಪಿ.ಎ ಸರ್ಕಾರದ ಮಿತ್ರ ಪಕ್ಷಗಳೂ ತಮ್ಮ ತೀವ್ರ ವಿರೋಧ ವ್ಯಕ್ತಪಡಿಸುತ್ತಿವೆ. ಈ ಒಪ್ಪಂದದ ಮೂಲಕ ಭಾರತವು ಅಮೆರಿಕಾದ ರಣತಂತ್ರಗಾರಿಕೆಗೆ ಬಲಿಯಾಗುತ್ತದೆ ಎಂಬ ಅಭಿಪ್ರಾಯ ಸಾಮಾನ್ಯವಾಗಿ ಕೇಳಿಬರುತ್ತಿದೆ. ಸೆಪ್ಟೆಂಬರ್ ೧೭ರಂದು ವಿಯೆನ್ನಾದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (IAEA)ಯ ೫೧ನೆಯ ವಾರ್ಷಿಕ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸುವ, ಭಾರತೀಯ ಪರಮಾಣು ಶಕ್ತಿ ಸಮಿತಿಯ ಅಧ್ಯಕ್ಷ ಅನಿಲ್ ಕಾಕೋಡ್ಕರ್‌ರವರು ಈ ಸಮಾವೇಶದಲ್ಲಿ IAEAದೊಡನೆ ಸುರಕ್ಷತಾ ಒಪ್ಪಂದಗಳಿಗೆ ಸಹಿ ಹಾಕುವ ಸಾಧ್ಯತೆಗಳಿರುವುದು, ಎಡ ಪಕ್ಷಗಳ ವಿರೋಧಕ್ಕೆ ಮುಖ್ಯ ಕಾರಣವಾಗಿದೆ. (ಈ ಲೇಖನ ಪ್ರಕಟವಾಗುವ ವೇಳೆಗೆ ಸಮ್ಮೇಳನ ಮುಗಿದಿದ್ದು, ಭಾರತ ಒಪ್ಪಂದಕ್ಕೆ ಸಹಿ ಹಾಕಿಲ್ಲ) ಹಾಗಾಗಿ ಎಡ ಪಕ್ಷಗಳು, ಸಂಸತ್ತಿನಲ್ಲಿ ಒಪ್ಪಿಗೆಯಾಗುವವರೆಗೂ, ಸರ್ಕಾರವೂ ಈ ನಿಟ್ಟಿನಲ್ಲಿ ಯಾವುದೇ ತೀರ್ಮಾನಕ್ಕೆ ಬರಬಾರದೆಂದು ಷರತ್ತು ವಿಧಿಸಿದೆ.

ಇಡೀ ದೇಶದ ಗಮನ ಸೆಳೆದಿರುವ ಈ ಬಿಕ್ಕಟ್ಟಿಗೆ ಮೂಲ ಕಾರಣವಾಗಿರುವ ಅಣು ಒಪ್ಪಂದದ ಬಗ್ಗೆ ತಾಂತ್ರಿಕವಾಗಿ ಜನಸಾಮಾನ್ಯರಿಗೆ ಯಾವುದೇ ಮಾಹಿತಿ ಒದಗಿಸುವುದರಲ್ಲಿ ಆಳುವ ವರ್ಗಗಳು ವಿಫಲವಾಗಿರುವುದು ಸ್ಪಷ್ಟವಾಗಿದೆ. ದೆಹಲಿಯಲ್ಲಿ ಕುಳಿತು ತಮ್ಮ ಬಹುಮತವನ್ನೇ ಬಂಡವಾಳ ಮಾಡಿಕೊಂಡು, ತಾವು ಕೈಗೊಳ್ಳುವ ನಿರ್ಧಾರಗಳು ಇಡೀ ದೇಶದ ಜನತೆಯ ಹಿತಾಸಕ್ತಿಗಳನ್ನು ಕಾಪಾಡುತ್ತದೆ ಎಂಬ ಭ್ರಮೆಗೊಳಗಾಗಿರುವ ಆಡಳಿತಾರೂಢ ಪಕ್ಷಗಳು, ಸಾಮಾನ್ಯ ಜನತೆಯನ್ನೂ ಅದೇ ಭ್ರಮಾ ಲೋಕಕ್ಕೆ ತಳ್ಳುತ್ತಿರುವುದು ಸ್ಪಷ್ಟವಾಗಿದೆ. ಈ ನಿಟ್ಟಿನಲ್ಲಿ ೧೨೩ ಒಪ್ಪಂದ ಮತ್ತು ಅದರ ಹಿಂದಿನ ರಾಜಕೀಯ ಹುನ್ನಾರಗಳನ್ನು ಗ್ರಹಿಸುವುದು ಅವಶ್ಯವಾಗಿದೆ.

ಅಣು ಒಪ್ಪಂದದ ಇತಿಹಾಸ

ಭಾರತ ಮತ್ತು ಅಮೆರಿಕಾ ದೇಶಗಳ ನಡುವೆ ನಾಗರಿಕ ಪರಮಾಣು ಸಹಕಾರ ಮತ್ತು ವಾಣಿಜ್ಯಕ್ಕೆ ಅನುಕೂಲವಾಗುವ ಒಡಂಬಡಿಕೆಯ ಬಗ್ಗೆ ಪ್ರಧಾನಿ ಮನಮೋಹನ ಸಿಂಗ್ ಮತ್ತು ಅಮೆರಿಕಾ ಅಧ್ಯಕ್ಷ ಜಾರ್ಜ್‌ಬುಷ್ ಜಂಟಿ ಹೇಳಿಕೆ ನೀಡಿದ ಎರಡು ವರ್ಷಗಳ ನಂತರ ಇದೀಗ ಅಂತಿಮ ಸ್ವರೂಪ ಪಡೆದುಕೊಳ್ಳುತ್ತಿದೆ. ನಾಗರಿಕ ಪರಮಾಣು ಒಪ್ಪಂದದ ಬಗ್ಗೆ ದೇಶಾದ್ಯಂತ ಗಂಭೀರ ಚರ್ಚೆಗಳು ನಡೆಯುತ್ತಿವೆ. ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳು ಒಪ್ಪಂದಕ್ಕೆ



ಪ್ರಕಾಶ್ ಕಾರಟ್



ಸೀತಾರಾಮ್ ಯೆಚೂರಿ

೧೨೩ ಪರಮಾಣು ಒಪ್ಪಂದದ ಒಳಮರ್ಮ

ಭಾರತ ಮತ್ತು ಅಮೆರಿಕಾ ದೇಶಗಳ ನಡುವೆ ನಾಗರಿಕ ಪರಮಾಣು ಸಹಕಾರ ಮತ್ತು ವಾಣಿಜ್ಯಕ್ಕೆ ಅನುಕೂಲವಾಗುವ ಒಡಂಬಡಿಕೆಯ ಬಗ್ಗೆ ಪ್ರಧಾನಿ ಮನಮೋಹನ ಸಿಂಗ್ ಮತ್ತು ಅಮೆರಿಕಾ ಅಧ್ಯಕ್ಷ ಜಾರ್ಜ್‌ಬುಷ್ ಜಂಟಿ ಹೇಳಿಕೆ ನೀಡಿದ ಎರಡು ವರ್ಷಗಳ ನಂತರ ಇದೀಗ ಅಂತಿಮ ಸ್ವರೂಪ ಪಡೆದುಕೊಳ್ಳುತ್ತಿದೆ. ನಾಗರಿಕ ಪರಮಾಣು ಒಪ್ಪಂದ ಬಗ್ಗೆ ದೇಶಾದ್ಯಂತ ಗಂಭೀರ ಚರ್ಚೆಗಳು ನಡೆಯುತ್ತಿವೆ. ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳು ಒಪ್ಪಂದಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದು, ಇದರಿಂದ ಭಾರತದ ಹಿತಾಸಕ್ತಿಗಳಿಗೆ ಧಕ್ಕೆ ಬರುವುದಿಲ್ಲ ಎಂದು ಪ್ರತಿಪಾದಿಸಿದರೆ, ಭಾ.ಜ.ಪ ತನ್ನದೇ ಆದ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದೆ. ಎಡ ಪಕ್ಷಗಳೂ ಒಪ್ಪಂದದಲ್ಲಿನ ಅನೇಕ ವಿವಾದಾತ್ಮಕ ಅಂಶಗಳ ಮರುಪರಿಶೀಲನೆಗೆ ಒತ್ತಾಯಿಸುತ್ತಿವೆ.

ನಾ. ದಿವಾಕರ

ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದು, ಇದರಿಂದ ಭಾರತದ ಹಿತಾಸಕ್ತಿಗಳಿಗೆ ಧಕ್ಕೆ ಬರುವುದಿಲ್ಲ ಎಂದು ಪ್ರತಿಪಾದಿಸಿದರೆ, ಭಾ.ಜ.ಪ ತನ್ನದೇ ಆದ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದೆ. ಎಡ ಪಕ್ಷಗಳೂ ಒಪ್ಪಂದದಲ್ಲಿನ ಅನೇಕ ವಿವಾದಾತ್ಮಕ ಅಂಶಗಳ ಮರುಪರಿಶೀಲನೆಗೆ ಒತ್ತಾಯಿಸುತ್ತಿವೆ. ಭಾರತದಲ್ಲೇ ಅಲ್ಲದೆ ಅಮೆರಿಕಾದಲ್ಲೂ ಸಹ ಈ ಒಪ್ಪಂದ ವಿವಾದಾಸ್ಪದವಾಗಿದೆ. ಜುಲೈ ೧೭ರಿಂದ ೨೦ರವರೆಗೆ ವಾಷಿಂಗ್ಟನ್‌ನಲ್ಲಿ ನಡೆದ ದ್ವಿಪಕ್ಷೀಯ ಸಭೆಯಲ್ಲಿ ಅಂತಿಮ ಸ್ವರೂಪ ಪಡೆದ ೨೨ ಪುಟಗಳ, ೧೭ ಪರಿಚ್ಛೇದಗಳ ಈ ಒಪ್ಪಂದವನ್ನು ಇದೇ ಜುಲೈ ೨೨ ರಂದು ಬಿಡುಗಡೆ ಮಾಡಲಾಗಿದೆ. ಅಮೆರಿಕಾದ ಪರಮಾಣು ಶಕ್ತಿ ಕಾಯ್ದೆಯ ಸೆಕ್ಷನ್ ೧೨೩ರ ಪರಿಧಿಯಲ್ಲಿ ಈ ಒಪ್ಪಂದ ಏರ್ಪಟ್ಟಿರುವುದರಿಂದ, ಪ್ರಸ್ತುತ ಒಪ್ಪಂದವನ್ನು ೧೨೩ ಪರಮಾಣು ಒಪ್ಪಂದ ಎಂದು ಕರೆಯಲಾಗುತ್ತದೆ.

ಎರಡೂ ರಾಷ್ಟ್ರಗಳು ಈ ಒಪ್ಪಂದವನ್ನು ಸಾಧಿಸಲು ಹಲವೆಡೆ ರಾಜಿಯಾಗಿದ್ದರೆ ಕೆಲವೆಡೆ ಸಹಮತಕ್ಕೆ ಬಂದಿರುವುದು ಕಂಡುಬರುತ್ತದೆ. ಪರಮಾಣು ಸಾಮಗ್ರಿ ಪೂರೈಕೆದಾರರ ಕೂಟವು (ಎನ್.ಎಸ್.ಜಿ) ಒಂದು ವೇಳೆ ತಮ್ಮ ಭಾರತದೊಡಗಿನ ಪರಮಾಣು ವ್ಯಾಪಾರದ ನಿಯಮಗಳನ್ನು ಬದಲಿಸಿದಲ್ಲಿ, ಈ ೧೨೩ ಒಪ್ಪಂದವು ಆ ಗುಂಪಿಗೆ ಒಂದು ಚೌಕಾಸಿಯ ವೇದಿಕೆಯಾಗದಿದ್ದರೆ ಭಾರತಕ್ಕೆ ಇದರಿಂದ ಲಾಭವಿದೆ ಎಂದು ಪರಮಾಣು ಶಕ್ತಿ ವಿಭಾಗದ ಅಧಿಕಾರಿಗಳು ಅಭಿಪ್ರಾಯಪಡುತ್ತಾರೆ. ಒಂದು ವೇಳೆ ಭಾರತ ಮುಂಬರುವ ದಿನಗಳಲ್ಲಿ ಅಣ್ವಸ್ತ್ರ ಪರೀಕ್ಷೆ ಮಾಡಲಿಚ್ಛಿಸಿದಲ್ಲಿ, ಈ ಒಕ್ಕೂಟವು ಭಾರತಕ್ಕೆ ಪರಮಾಣು ಇಂಧನ ಮತ್ತು ಸಲಕರಣೆಗಳನ್ನು ಸರಬರಾಜು ಮಾಡಲು ನಿರಾಕರಿಸಲು ಈ ಒಪ್ಪಂದ ಸಹಕಾರಿಯಾಗುವ ಸಾಧ್ಯತೆಗಳಿವೆ. ಈ ಸಂಬಂಧದಲ್ಲಿ ಅಮೆರಿಕಾದಲ್ಲಿ ಈ ಅಂಶವನ್ನು ಕುರಿತ ಹೈಡ್ ಕಾಯ್ದೆಯನ್ನು ತಿದ್ದುಪಡಿ ಮಾಡುವ ಬುಷ್ ಸರ್ಕಾರದ ಯೋಜನೆಗೆ ಅಲ್ಲಿನ ಸಂಸತ್ತಿನಲ್ಲಿ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಅಮೆರಿಕಾ ಸರ್ಕಾರದೊಂದಿಗೆ ಮಾಡಿಕೊಂಡಿರುವ ೧೨೩ ಒಪ್ಪಂದದ ಸ್ಥೂಲ ಪರಿಚಯ ಅವಶ್ಯವೆನಿಸುತ್ತದೆ.

ಈ ಒಪ್ಪಂದವು ೪೦ ವರ್ಷಗಳ ಕಾಲ ಚಾಲನೆಯಲ್ಲಿರುತ್ತದೆ. ಆದರೆ ವಿಧಿ ೧೪.೧ರ ಪ್ರಕಾರ ಈ ಒಪ್ಪಂದವನ್ನು ಅಮೆರಿಕಾ ಸರ್ಕಾರವು ಸಕಾರಣಗಳನ್ನು ನೀಡಿ ಒಂದು ವರ್ಷದ ಲಿಖಿತ ನೋಟೀಸ್ ಕೊಟ್ಟು ರದ್ದುಪಡಿಸಬಹುದು. ಒಂದು ವೇಳೆ ಭಾರತವು ಒಪ್ಪಂದದ ನಿಯಮಗಳನ್ನು ಉಲ್ಲಂಘಿಸಿದಲ್ಲಿ, ಉಲ್ಲಂಘನೆಯನ್ನು ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯು ನಿರೂಪಿಸಿದಲ್ಲಿ, ವಿಧಿ ೧೪.೩ರ ಪ್ರಕಾರ ಅಮೆರಿಕಾ ಈ ಒಪ್ಪಂದವನ್ನು ರದ್ದುಪಡಿಸಬಹುದು. ಯಾವುದೇ ಪರಮಾಣು ಅಸ್ತ್ರ ರಹಿತ ರಾಷ್ಟ್ರದೊಡನೆ ಈ ಒಪ್ಪಂದ ಮಾಡಿಕೊಂಡಿದ್ದಲ್ಲಿ, ಅಂತಹ ರಾಷ್ಟ್ರಗಳು ಒಂದು ವೇಳೆ ಪರಮಾಣು ಪರೀಕ್ಷೆ ನಡೆಸಿದರೆ ಅಥವಾ ಒಪ್ಪಂದವನ್ನು ಉಲ್ಲಂಘಿಸಿದರೆ, ಇಡೀ ಒಪ್ಪಂದವನ್ನು ರದ್ದುಪಡಿಸುವ ಹಕ್ಕು ಅಮೆರಿಕಾಗೆ ಇರುತ್ತದೆ.

ಸೆಕ್ಷನ್ ೧೪.೨ರ ಅನ್ವಯ ಈ ಒಪ್ಪಂದವನ್ನು ರದ್ದುಪಡಿಸುವ ಮುನ್ನ ಭಾರತ ಮತ್ತು ಅಮೆರಿಕಾ ಸರ್ಕಾರಗಳು ಪರಸ್ಪರ ಚರ್ಚೆ ನಡೆಸಬೇಕಾಗುತ್ತದೆ. ಎರಡೂ ರಾಷ್ಟ್ರಗಳು ಮುಂದುವರೆದ ಪರಮಾಣು ತಂತ್ರಜ್ಞಾನವನ್ನು ಹೊಂದಿರುವುದರಿಂದ ಮುಂದುವರೆದ ತಂತ್ರಜ್ಞಾನವನ್ನು ಪಡೆದಿರುವ ಇತರ ರಾಷ್ಟ್ರಗಳಿಗೆ ಸಮನಾಗಿ ಎರಡೂ ರಾಷ್ಟ್ರಗಳು ಹೊಣೆಗಾರಿಕೆಯನ್ನು ಹೊರಬೇಕಾಗುವುದಲ್ಲದೆ. ಈ ಒಪ್ಪಂದದಿಂದ ಒದಗುವ ಲಾಭ ಮತ್ತು ಅನುಕೂಲಗಳನ್ನು ಇತರ ರಾಷ್ಟ್ರಗಳಂತೆಯೇ ಪಡೆಯಬೇಕಾಗುತ್ತದೆ. ಈ ಎಲ್ಲಾ ಮಾತುಕತೆಗಳನ್ನು ಇದೇ ಉದ್ದೇಶಕ್ಕಾಗಿ ನೇಮಿಸಲಾಗುವ ಜಂಟಿ ಸಮಿತಿಯಲ್ಲಿ ನಡೆಸಬೇಕಾಗುತ್ತದೆ. ಒಪ್ಪಂದದ ರದ್ದತಿಗೆ ನೋಟೀಸು ನೀಡಿದ ಒಂದು ವರ್ಷದೊಳಗಾಗಿ ಈ ಸಮಿತಿ ತನ್ನ ತೀರ್ಮಾನವನ್ನು ನೀಡಬೇಕಾಗುತ್ತದೆ. ಇಲ್ಲಿ ಉಲ್ಲೇಖಿಸಲಾಗಿರುವ ಮುಂದುವರೆದ ತಂತ್ರಜ್ಞಾನದ ರಾಷ್ಟ್ರ ಎಂದರೆ ಪರಮಾಣು ಅಸ್ತ್ರ ಹೊಂದಿರುವ ರಾಷ್ಟ್ರವೆಂದೇ ಅರ್ಥೈಸಬಹುದೆಂದು ಭಾರತ ಸರ್ಕಾರ ಪ್ರತಿಪಾದಿಸಿದರೆ, ಅಮೆರಿಕಾ ಸರ್ಕಾರ ಭಿನ್ನ ನಿಲುವು ತಾಳುತ್ತದೆ ಮತ್ತು ಭಾರತವನ್ನು ಅಣ್ವಸ್ತ್ರ ರಾಷ್ಟ್ರಗಳ ಗುಂಪಿಗೆ ಅಮೆರಿಕಾ ಸೇರಿಸುವುದಿಲ್ಲ.

ಎರಡೂ ರಾಷ್ಟ್ರಗಳು ಈ ಒಪ್ಪಂದವನ್ನು ಸಾಧಿಸಲು ಹಲವೆಡೆ ರಾಜಿಯಾಗಿದ್ದರೆ ಕೆಲವೆಡೆ ಸಹಮತಕ್ಕೆ ಬಂದಿರುವುದು ಕಂಡುಬರುತ್ತದೆ. ಪರಮಾಣು ಸಾಮಗ್ರಿ ಪೂರೈಕೆದಾರರ ಕೂಟ– ಎನ್.ಎಸ್.ಜಿ ಒಂದು ವೇಳೆ ತಮ್ಮ ಭಾರತದೊಡಗಿನ ಪರಮಾಣು ವ್ಯಾಪಾರದ ನಿಯಮಗಳನ್ನು ಬದಲಿಸಿದಲ್ಲಿ, ಈ ೧೨೩ ಒಪ್ಪಂದವು ಆ ಗುಂಪಿಗೆ ಒಂದು ಚೌಕಾಸಿಯ ವೇದಿಕೆಯಾಗದಿದ್ದರೆ ಭಾರತಕ್ಕೆ ಇದರಿಂದ ಲಾಭವಿದೆ ಎಂದು ಪರಮಾಣು ಶಕ್ತಿ ವಿಭಾಗದ ಅಧಿಕಾರಿಗಳು ಅಭಿಪ್ರಾಯಪಡುತ್ತಾರೆ. ಒಂದು ವೇಳೆ ಭಾರತ ಮುಂಬರುವ ದಿನಗಳಲ್ಲಿ ಅಣ್ವಸ್ತ್ರ ಪರೀಕ್ಷೆ ಮಾಡಲಿಚ್ಛಿಸಿದಲ್ಲಿ, ಈ ಒಕ್ಕೂಟವು ಭಾರತಕ್ಕೆ ಪರಮಾಣು ಇಂಧನ ಮತ್ತು ಸಲಕರಣೆಗಳನ್ನು ಸರಬರಾಜು ಮಾಡಲು ನಿರಾಕರಿಸಲು ಈ ಒಪ್ಪಂದ ಸಹಕಾರಿಯಾಗುವ ಸಾಧ್ಯತೆಗಳಿವೆ.

ಒಂದು ವೇಳೆ ಭಾರತ ಪರಮಾಣು ಪರೀಕ್ಷೆ ನಡೆಸಿದಲ್ಲಿ ಸೆಕ್ಷನ್ ೧೪.೨ರ ಪರಿಧಿಯಲ್ಲಿ ಕ್ರಮ ಕೈಗೊಳ್ಳಲು ಅಮೆರಿಕಾ ಸರ್ಕಾರಕ್ಕೆ ಅಧಿಕಾರವಿರುತ್ತದೆ. "ಭಾರತ ಸರ್ಕಾರವು ಬದಲಾದ ಪರಿಸ್ಥಿತಿಗನುಗುಣವಾಗಿ ಪರಮಾಣು ಪರೀಕ್ಷೆ ನಡೆಸಿದೆಯೋ ಅಥವಾ ಇತರ ರಾಷ್ಟ್ರಗಳ ಪರಮಾಣು ಪರೀಕ್ಷೆಗೆ ಪ್ರತಿಕ್ರಿಯೆಯಾಗಿ ನಡೆಸಿದೆಯೋ ಎಂಬ ಅಂಶವನ್ನು ಆಧರಿಸಿ ಅಮೆರಿಕಾ ಒಪ್ಪಂದವನ್ನು ರದ್ದುಪಡಿಸುವ ಆಲೋಚನೆ ಮಾಡುತ್ತದೆ" ಎಂದು ಅಮೆರಿಕಾ ಸರ್ಕಾರ ಹೇಳುತ್ತದೆ. ಆದರೆ ಭಾರತ ನಡೆಸಬಹುದಾದ ಪರಮಾಣು ಪರೀಕ್ಷೆಯನ್ನು ಅಮೆರಿಕಾ ಕರುಣೆಯಿಂದ ಪರಿಶಿಲಿಸುತ್ತದೆ ಎಂದು ಅರ್ಥೈಸಲಾಗುವುದಿಲ್ಲ. ಇಲ್ಲಿ ಪ್ರತಿಕ್ರಿಯಾ ಪರಮಾಣು ಪರೀಕ್ಷೆಯ ಅಂಶ ಎದುರಾದಾಗ ಪಾಕಿಸ್ತಾನ ಮತ್ತು ಚೀನಾಗಳನ್ನು ಉದ್ದೇಶಿಸಲಾಗಿರುವುದೇ ಹೊರತು, ಮುಂದಿನ ಒಂದು ದಶಕದಲ್ಲಿ ಪರಮಾಣು ಪರೀಕ್ಷೆ ನಡೆಸಲು ಸಿದ್ಧತೆ ನಡೆಸಿರುವ ಏಕೈಕ ರಾಷ್ಟ್ರವಾದ ಅಮೆರಿಕಾವನ್ನು ಉದ್ದೇಶಿಸಲಾಗಿಲ್ಲ. ಅರ್ಥಾತ್ ಒಂದು ವೇಳೆ ಅಮೆರಿಕಾ ಪರಮಾಣು ಪರೀಕ್ಷೆ ನಡೆಸಿದರೂ, ಅದರಿಂದ ಭಾರತಕ್ಕೆ ಅಪಾಯವಿದ್ದಾಗ್ಯೂ, ಭಾರತ ಪ್ರತಿಕ್ರಿಯೆಯಾಗಿ ಪರಮಾಣು ಪರೀಕ್ಷೆ ನಡೆಸುವಂತಿಲ್ಲ. ಇದು ಸೆಕ್ಷನ್ ೧೪.೨ರ ಸ್ಥೂಲ ವಾಸ್ತವಾಂಶ.

ಸೆಕ್ಷನ್ ೧೪.೪ರ ಪ್ರಕಾರ "ಒಂದು ವೇಳೆ ಒಪ್ಪಂದವನ್ನು ರದ್ದುಪಡಿಸಲು ಅಮೆರಿಕಾ ನಿರ್ಧರಿಸಿದಲ್ಲಿ, ಈ ಒಪ್ಪಂದದಡಿಯಲ್ಲಿ ಭಾರತಕ್ಕೆ ಪೂರೈಸಲಾದ ಯಾವುದೇ ಪರಮಾಣು ವಸ್ತುಗಳು, ಸಲಕರಣೆಗಳು ಅಥವಾ ಇತರ ಬಿಡಿ ಭಾಗಗಳನ್ನು ಮತ್ತು ಈ ವಸ್ತುಗಳನ್ನು ಉಪಯೋಗಿಸಿ ತಯಾರಿಸಲಾದ ಯಾವುದೇ ವಿದಳನಗೊಳ್ಳುವ (fissionary) ಉತ್ಪನ್ನಗಳನ್ನು ಹಿಂದಕ್ಕೆ ಪಡೆಯುವ ಹಕ್ಕು ಅಮೆರಿಕಾಗೆ ಇರುತ್ತದೆ. ಈ ಪದಾರ್ಥಗಳಲ್ಲಿ ಪರಮಾಣು ಇಂಧನ ಮತ್ತು ಅಮೆರಿಕಾದಿಂದ ಆದಿಮದ ಪಡೆಯುವ ಬದಲಿ ಇಂಧನವನ್ನು ಪರಿಷ್ಕರಿಸಿ ತಯಾರಿಸಲಾಗುವ ಪ್ಲುಟೋನಿಯಮ್‌ಗಳೂ ಸೇರಿರುತ್ತವೆ". ಅಮೆರಿಕಾ ಈ ಹಕ್ಕನ್ನು ಒಪ್ಪಂದದ ಅವಧಿ ಮುಗಿಯುವ ಮುನ್ನ ಯಾವುದೇ ಹಂತದಲ್ಲಾದರೂ ಪ್ರಯೋಗಿಸಬಹುದಾಗಿದ್ದು, ಒಪ್ಪಂದವನ್ನು ರದ್ದು ಪಡಿಸುವ ನೋಟೀಸಿನೊಂದಿಗೇ ಉತ್ಪನ್ನಗಳನ್ನು ಹಿಂದಿರುಗಿಸಲೂ ನೋಟೀಸು ಜಾರಿ ಮಾಡುವ ಹಕ್ಕನ್ನು ಪಡೆದಿರುತ್ತದೆ.

ಸೆಕ್ಷನ್ ೧೪.೪ರ ಪ್ರಕಾರ ಪದಾರ್ಥಗಳನ್ನು ಹಿಂಪಡೆಯುವ ಹಕ್ಕನ್ನು ಅಮೆರಿಕಾ ಚಲಾಯಿಸಿದಲ್ಲಿ ಎರಡೂ ರಾಷ್ಟ್ರಗಳ ನಡುವಿನ ಸಂಬಂಧಗಳಿಗೆ ತೊಡಕುಂಟಾಗುವ ಸಂಭವಗಳು ಹೆಚ್ಚಾಗುತ್ತದೆ ಎಂಬ ಅಂಶವನ್ನು ಸೆಕ್ಷನ್ ೧೪.೫ರಲ್ಲಿ ಹೇಳಲಾಗಿದೆ. ಹಾಗಾಗಿ ಈ ಹಿಂದೆಗೆಯುವ ಹಕ್ಕಿಗೆ ಒಳಪಡುವ ಉತ್ಪನ್ನಗಳನ್ನು, ವಸ್ತುಗಳನ್ನು ಮರುಪರಿಶೀಲಿಸಲು ಕೆಲವು ನಿಬಂಧನೆಗಳನ್ನೂ ಈ ಭಾಗದಲ್ಲಿ ಉಲ್ಲೇಖಿಸಲಾಗಿದೆ. ಉದಾಹರಣಗೆ:

೧. ಅಮೆರಿಕಾ ಸರ್ಕಾರ ಭಾರತದೊಡನೆ ಈ ವಿಷಯವನ್ನು ಕುರಿತು ಸಂಧಾನ ನಡೆಸಬೇಕಾಗುತ್ತದೆ. ಈ ಸಂಧಾನವು ಸೆಕ್ಷನ್ ೧೪.೨ರ ಒಪ್ಪಂದವನ್ನು ರದ್ದುಪಡಿಸುವ ಸಂಧಾನಕ್ಕೆ ಸಂಬಂಧಿಸಿರುವುದಿಲ್ಲ.

೨. ಈ ಸಂಧಾನಗಳ ವಿಷಯಗಳೇನೇ ಇದ್ದರೂ, ಪರಮಾಣು ರಿಯಾಕ್ಟರ್‌ಗಳ ಕಾರ್ಯ ನಿರ್ವಹಣೆಗೆ ಯಾವುದೇ ಅಡ್ಡಿ ಮಾಡದ ರೀತಿಯಲ್ಲಿ ಸಂಧಾನ ನಡೆಸಬೇಕಾಗುತ್ತದೆ.

೩. ಸೆಕ್ಷನ್ ೧೪.೬ ಅನ್ವಯ ಸೂಕ್ತವಾದ ಮಾರುಕಟ್ಟೆ ಮೌಲ್ಯದ ಪರಿಹಾರವನ್ನು ಎರಡೂ ರಾಷ್ಟ್ರಗಳು ನಿರ್ಧರಿಸಬೇಕಾಗುತ್ತದೆ. ಯಾವುದೇ ವಸ್ತುಗಳನ್ನು ಹಿಂಪಡೆಯುವ ಮುನ್ನ ಈ ಪರಿಹಾರ ಧನವನ್ನು ಅಮೆರಿಕಾ ನೀಡಬೇಕಾಗುತ್ತದೆ.

೪. ಸೆಕ್ಷನ್ ೧೪.೭ ಅನ್ವಯ ಈ ವಸ್ತುಗಳನ್ನು ಹಿಂದಿರುಗಿಸುವ ಮುನ್ನ ಭಾರತ ಸರ್ಕಾರವು ತನ್ನ ರಾಷ್ಟ್ರೀಯ ಭದ್ರತಾ ನಿಯಮಗಳಿಗನುಸಾರವಾಗಿ ಸಂಪೂರ್ಣ ಸುರಕ್ಷತೆ, ವಿಕಿರಣೀಯ (Radiological)

ಮತ್ತು ಭೌತಿಕ ರಕ್ಷಣೆಯನ್ನು ಹೊಂದಿರುವುದನ್ನು ದೃಢ ಪಡಿಸಿಕೊಳ್ಳಬೇಕಾಗುತ್ತದೆ.

೫. ಪರಮಾಣು ರಿಯಾಕ್ಟರುಗಳ ಅನಿರ್ಬಂಧಿತ ಕಾರ್ಯನಿರ್ವಹಣೆಗೆ ಅನುಕೂಲವಾಗುವಂತೆ ಸೆಕ್ಷನ್ ೧೪.೮ರ ಅನ್ವಯ, ಎರಡೂ ರಾಷ್ಟ್ರಗಳು ಒಪ್ಪಂದದ ಸೆಕ್ಷನ್ ೫.೬ರ ಪ್ರಕಾರ ಒಪ್ಪಿಕೊಂಡಿರುವ ಇಂಧನ ಪೂರೈಕೆಗೆ ಯಾವುದೇ ಅಡ್ಡಿ ಬರದ ರೀತಿಯಲ್ಲಿ ಸಂಧಾನ ನಡೆಸಿ, ಪರಸ್ಪರ ಹೊಣೆಗಾರಿಕೆಯನ್ನು ಚರ್ಚೆ ಮಾಡಲು ಅವಕಾಶ ನೀಡಲಾಗಿದೆ.

೬. ಕೊನೆಯದಾಗಿ ಸೆಕ್ಷನ್ ೫.೬(ಸಿ) ಅನ್ವಯ ಒಂದು ವೇಳೆ ಅಮೆರಿಕಾದ ನಿರ್ಧಾರಗಳಿಂದ ಇಂಧನ ಪೂರೈಕೆಯಲ್ಲಿ ಏರುಪೇರು ಆಗುವ ಸಂದರ್ಭ ಒದಗಿ ಬಂದರೆ ಭದ್ರತಾ ಕಾರ್ಯ ಕೈಗೊಳ್ಳುವ ಹಕ್ಕನ್ನು ಭಾರತ ಪಡೆದಿರುತ್ತದೆ.

ಪ್ರಧಾನಿ ಮನಮೋಹನ ಸಿಂಗ್‌ರವರು ಸಂಸತ್ತಿನಲ್ಲಿ ನೀಡಿದ್ದ ಆಶ್ವಾಸನೆಯನ್ನು ಗಣನೆಗೆ ತೆಗೆದುಕೊಳ್ಳುವುದಾದಲ್ಲಿ ಪ್ರಸ್ತುತ ಒಪ್ಪಂದಕ್ಕೆ ಮುನ್ನ ನಡೆದ ಮಾತುಕತೆಗಳಲ್ಲಿ ಕೆಲವು ಸಮಸ್ಯೆಗಳ ಪರಿಹಾರವನ್ನು ಅಪೇಕ್ಷಿಸಬಹುದಾಗಿತ್ತು. ಮೊದಲನೆಯದಾಗಿ ಸಂಪೂರ್ಣ ನಾಗರಿಕ ಪರಮಾಣು ಸಹಕಾರ ಅಂದರೆ ಅಣು ಇಂಧನ ಪೂರೈಕೆಯ ಎಲ್ಲಾ ಅಂಶಗಳನ್ನೊಳಗೊಂಡಂತಹ ಸಹಕಾರ, ಎರಡನೆಯದಾಗಿ ಅಮೆರಿಕಾದಿಂದ ಆಮದು ಮಾಡಿಕೊಳ್ಳುವ ಬದಲಿ ಇಂಧನ ಪುನಸ್ಸಂಸ್ಕರಣದ ಹಕ್ಕು, ಮೂರನೆಯದಾಗಿ IAEA ರಕ್ಷಣಾ ವ್ಯವಸ್ಥೆಯ ಅನುಷ್ಠಾನದಲ್ಲಿ ಕೊರತೆ ಕಂಡುಬಂದಲ್ಲಿ ಅದನ್ನು ನೀಗಿಸುವ ದ್ವಿಪಕ್ಷೀಯ ಒಪ್ಪಂದಗಳು, ನಾಲ್ಕನೆಯದಾಗಿ ಅಣ್ವಸ್ತ್ರ ಪರೀಕ್ಷೆಯ ಬಗ್ಗೆ ಭಾರತ ವಿಧಿಸಿಕೊಂಡಿರುವ ಏಕಪಕ್ಷೀಯ ನಿರ್ಬಂಧಕ್ಕೆ ಮಾನ್ಯತೆ, ಐದನೆಯದಾಗಿ ಒಂದು ವೇಳೆ ಒಪ್ಪಂದ ಮುರಿದು ಬಿದ್ದಲ್ಲಿ ತಾನು ಪೂರೈಸಿರುವ ಪದಾರ್ಥ ಮತ್ತು ಉತ್ಪನ್ನಗಳನ್ನು ಹಿಂಪಡೆಯಲು ಅಮೆರಿಕಾಗೆ ಇರುವ ಹಕ್ಕುಗಳು, ಆರನೆಯದಾಗಿ ಮಾರ್ಚ್ ೨-೨೦೦೬ರಂದು ಜಾರ್ಜ್ ಬುಷ್ ನೀಡಿದ ಆಶ್ವಾಸನೆಯಂತೆ ಸುರಕ್ಷಿತ ರಿಯಾಕ್ಟರುಗಳಿಗೆ ಅನಿರ್ಬಂಧಿತ ಇಂಧನ ಪೂರೈಕೆ ಮತ್ತು ಭಾರತದ ನಾಗರಿಕ ಅಣು ಸೌಲಭ್ಯಗಳ ನಿರಂತರ ಸುರಕ್ಷತೆಯನ್ನು ಕಾಪಾಡುವ ಒಪ್ಪಂದಕ್ಕೆ ಮಾನ್ಯತೆ.

ಪ್ರಸ್ತುತ ೧೨೩ ಒಪ್ಪಂದದಲ್ಲಿ ಈ ಎಲ್ಲಾ ಅಂಶಗಳಲ್ಲೂ ಭಾರತ ಸರ್ಕಾರ ಮೇಲುಗೈ ಸಾಧಿಸಿದೆ ಎಂದು ಹೇಳಲಾಗುವುದಿಲ್ಲ. ೨೦೦೬ರಲ್ಲಿ ನಡೆದ ದ್ವಿಪಕ್ಷೀಯ ಮಾತುಕತೆಗಳಲ್ಲಿಯೇ ಭಾರತ ಸರ್ಕಾರವು ಅನೇಕ ಪರತ್ತುಗಳನ್ನು ಸಡಿಲಗೊಳಿಸಿದ್ದುದನ್ನು ಇಲ್ಲಿ ಸ್ಮರಿಸಬಹುದು. ಯಾವುದೇ ಒಂದು ರಾಷ್ಟ್ರಕ್ಕೆ ಸಮ್ಮತವಾದ ಒಪ್ಪಂದ ಎನ್ನುವುದಕ್ಕಿಂತಲೂ ಎರಡೂ ರಾಷ್ಟ್ರಗಳಿಗೆ ಸಮ್ಮತಿಯಾಗುವಂತಹ ಒಪ್ಪಂದವೆಂದೂ ಇದನ್ನು ಗ್ರಹಿಸಬಹುದಾಗಿದೆ. ಪ್ರಸ್ತುತ ಒಪ್ಪಂದವು ಅಮೆರಿಕಾದ ಕೆಲವು ಕಾನೂನುಗಳ ಪರಿಧಿಗೆ ಒಳಪಟ್ಟಿರುವುದರಿಂದ ಇದಕ್ಕಿಂತಲೂ ಉತ್ತಮ ಒಪ್ಪಂದ ಸಾಧ್ಯವಿಲ್ಲವೆಂದು ಭಾರತ ಸರ್ಕಾರದ ವಕ್ತಾರರ ಅಭಿಪ್ರಾಯವಾಗಿದೆ. ಪರಮಾಣು ಸಾಮಗ್ರಿ ಪೂರೈಕೆ ಗುಂಪಿನ (Nuclear Supply Group) ರಾಷ್ಟ್ರಗಳಿಂದ ಪರಮಾಣು ವಸ್ತುಗಳನ್ನು ಪಡೆಯಬೇಕಾದರೆ, ಅಂತಾರಾಷ್ಟ್ರೀಯ ಪರಮಾಣು ವ್ಯಾಪಾರದಲ್ಲಿ ಭಾರತ ತನ್ನ ದಿಟ್ಟ ಹೆಜ್ಜೆ ಇಡಬೇಕಾದರೆ, ಎಷ್ಟೇ ನ್ಯೂನತೆಗಳಿದ್ದರೂ, ಈ ಒಪ್ಪಂದ ಅನಿವಾರ್ಯ ಎಂದು ಸರ್ಕಾರ ತನ್ನ ನಿಲುವನ್ನು ಸಮರ್ಥಿಸಿಕೊಳ್ಳುತ್ತಿದೆ. ಆದರೆ ಎಡ ಪಕ್ಷಗಳು ಈ ಒಪ್ಪಂದ ಅವಶ್ಯಕತೆ ಇದೆಯೇ ಎಂಬ ಮೂಲಭೂತ ಪ್ರಶ್ನೆಯನ್ನೇ ಮುಂದಿಟ್ಟಿರುವುದು ಸರ್ಕಾರಕ್ಕೆ ಮುಜುಗರ ಉಂಟು ಮಾಡಿದೆ.

ಭಾರತ ಸರ್ಕಾರದ ದೃಷ್ಟಿಯಲ್ಲಿ ಈ ಒಪ್ಪಂದದಿಂದ ಹಲವು ಅನುಕೂಲಗಳಿವೆ. ತಾತ್ವಿಕವಾಗಿ ಬದಲಿ ಇಂಧನವನ್ನು ಪುನಸ್ಸಂಸ್ಕರಿಸಲು ಅವಕಾಶವಿರುವುದೇ ಅಲ್ಲದೆ, ಒಂದು ವೇಳೆ ಭಾರತ ಅಣ್ವಸ್ತ್ರ ಪರೀಕ್ಷೆ ಮಾಡಿದರೂ ಸಹ ಒಪ್ಪಂದದ ರದ್ದತಿಗೆ ಮುನ್ನ ಮಾತುಕತೆಗಳಿಗೆ ಸಂಪೂರ್ಣ ಅವಕಾಶವಿರುತ್ತದೆ. ಸುರಕ್ಷಿತ ಬದಲಿ ಇಂಧನದ ಪುನಸ್ಸಂಸ್ಕರಣೆಗಾಗಿಯೇ ಒಂದು ಪ್ರತ್ಯೇಕ ಸೌಕರ್ಯವನ್ನು ಅಳವಡಿಸುವ ಭಾರತ ಸರ್ಕಾರದ ಒಪ್ಪಂದದ ಮೇರೆಗೇ ಬದಲಿ ಇಂಧನದ ಪುನಸ್ಸಂಸ್ಕರಣಕ್ಕೆ ಅವಕಾಶ ನೀಡಲಾಗಿದೆ.

ಆದಾಗ್ಯೂ ಈ ಒಪ್ಪಂದದಲ್ಲಿ ಹಲವಾರು ನ್ಯೂನತೆಗಳಿರುವುದನ್ನು ತಳ್ಳಿಹಾಕಲಾಗುವುದಿಲ್ಲ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಇನ್ನೊಂದೆಡೆ ೧೨೩ ಒಪ್ಪಂದದಲ್ಲಿ ಬಳಸಲಾಗಿರುವ ಕೆಲವು ಪದಗಳನ್ನು ಭಾರತ ಅರ್ಥೈಸಿರುವಂತೆ ಅಮೆರಿಕಾ ಸರ್ಕಾರ ಪರಿಗಣಿಸುದಿರುವುದೂ ಆತಂಕಕಾರಿ ಅಂಶವಾಗಿದೆ. ಉದಾಹರಣೆಗೆ "ಸಂಪೂರ್ಣ ನಾಗರಿಕ ಪರಮಾಣು ಒಪ್ಪಂದ" ಎಂದು ಹೇಳುವಲ್ಲಿ ಭಾರತ ಸರ್ಕಾರವು ಸಂಪೂರ್ಣ ಎಂದರೆ "ಅಣು ಇಂಧನ ವ್ಯೂಹದ ಎಲ್ಲಾ ಅಂಶಗಳೆಂದು" ಅರ್ಥೈಸಿದರೆ, ಅಮೆರಿಕಾ ಸರ್ಕಾರವು ಕೆಲವು ಅಂಶಗಳನ್ನು ಮಾತ್ರ ಪರಿಗಣಿಸುತ್ತದೆ. ಅಂದರೆ ಪುನಸ್ಸಂಸ್ಕರಣ ಮತ್ತು ಸಂಪದ್ಯುಕ್ತಗೊಳಿಸುವ ತಂತ್ರಜ್ಞಾನವನ್ನಾಗಲೀ, ವಸ್ತುಗಳನ್ನಾಗಲೀ ಪೂರೈಸುವುದಿಲ್ಲ ಎಂದೂ ಅರ್ಥೈಸಬಹುದಾಗಿದೆ.

ಪರಮಾಣು ತಂತ್ರಜ್ಞಾನ ಪ್ರಸರಣ ಒಪ್ಪಂದಕ್ಕೆ ಸಹಿ ಹಾಕದಿರುವುದರಿಂದ ಅಮೆರಿಕಾದ ಕಾನೂನಿನಡಿಯಲ್ಲಿ ಭಾರತವನ್ನು ಅಣ್ವಸ್ತ್ರ ರಹಿತ ರಾಷ್ಟ್ರ ಎಂದು ಪರಿಗಣಿಸುತ್ತದೆ. ಹಾಗಾಗಿ ಭಾರತ ಸರ್ಕಾರ ಎಣಿಸಿದಂತೆ ಅಣ್ವಸ್ತ್ರ ಸಂಬಂಧಿತ ವಸ್ತುಗಳ ಆಮದಿನ ಮೇಲೆ ಅಮೆರಿಕಾ ವಿಧಿಸಿರುವ ನಿರ್ಬಂಧಗಳನ್ನು ಸಡಿಲಿಸಲಾಗುವುದಿಲ್ಲ. ಪರಮಾಣು ಇಂಧನ ಪ್ರಕ್ರಿಯೆಯಲ್ಲಿ, ಅಣು ಸರಬರಾಜು ಗುಂಪಿನ ಮತ್ತು ಅಮೆರಿಕಾದ ಆಂತರಿಕ ಕಾಯ್ದೆಗಳು ಅನ್ವಯಿಸುವುದರಿಂದ, ಈ ಒಪ್ಪಂದದ ವಿಧಿ ೪.೨ರ ಪ್ರಕಾರ ಅಮೆರಿಕಾದ ಪರಮಾಣು ನಿಯಂತ್ರಣಾ ಸಮಿತಿಯು, ಒಪ್ಪಂದವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ ರಾಷ್ಟ್ರಗಳಿಗೆ ಈ ರಫ್ತು ಪರವಾನಗಿಯನ್ನು ನೀಡುವ ಅಧಿಕಾರ ಹೊಂದಿರುತ್ತದೆ. ಹಾಗಾಗಿ ಅಣು ಸರಬರಾಜು ಗುಂಪಿನ ರಾಷ್ಟ್ರಗಳು ತಮ್ಮ ಕಾನೂನಿನಲ್ಲಿ ಬದಲಾವಣೆಗಳನ್ನು ಮಾಡಿದಲ್ಲಿ ಮಾತ್ರ, ಭಾರತಕ್ಕೆ ಪರಮಾಣು ವಸ್ತುಗಳ ಆಮದು-ರಫ್ತಿಗೆ ಅವಕಾಶ ಒದಗುತ್ತದೆ. ಪುನಸ್ಸಂಸ್ಕರಣ, ಸಂಪದ್ಯುಕ್ತತೆ ಮತ್ತು ಭಾರ ಜಲ ಉತ್ಪನ್ನಗಳಿಗೆ ಅಗತ್ಯವಾದ ವಸ್ತುಗಳ ಸರಬರಾಜನ್ನು ನಿಯಂತ್ರಿಸಲು ವಿಧಿ ೫.೨ ರಲ್ಲಿ ಅನೇಕ ನಿರ್ಬಂಧಗಳನ್ನು ಹೇರಲಾಗಿದೆ.

ಪರಮಾಣು ರಿಯಾಕ್ಟರುಗಳ ಅನಿರ್ಬಂಧಿತ ಕಾರ್ಯನಿರ್ವಹಣೆಗೆ ಅನುಕೂಲವಾಗುವಂತೆ ಸೆಕ್ಷನ್ ೧೪.೮ರ ಅನ್ವಯ, ಎರಡೂ ರಾಷ್ಟ್ರಗಳು ಒಪ್ಪಂದದ ಸೆಕ್ಷನ್ ೫.೬ರ ಪ್ರಕಾರ ಒಪ್ಪಿಕೊಂಡಿರುವ ಇಂಧನ ಪೂರೈಕೆಗೆ ಯಾವುದೇ ಅಡ್ಡಿ ಬರದ ರೀತಿಯಲ್ಲಿ ಸಂಧಾನ ನಡಸಿ, ಪರಸ್ಪರ ಹೊಣೆಗಾರಿಕೆಯನ್ನು ಚರ್ಚೆ ಮಾಡಲು ಅವಕಾಶ ನೀಡಲಾಗಿದೆ.

ಅಮೆರಿಕಾದಲ್ಲಿ ಈ ವಸ್ತುಗಳನ್ನು ಸೂಕ್ಷ್ಮ ಪರಮಾಣು ತಂತ್ರಜ್ಞಾನಗಳೆಂದು ಪರಿಗಣಿಸಲಾಗುತ್ತದೆ. ಆದರೆ ೧೨೩ ಒಪ್ಪಂದದಲ್ಲಿ ಭಾರ ಜಲ ತಂತ್ರಜ್ಞಾನ ಮತ್ತು ಸಲಕರಣೆಗಳನ್ನು ಈ ಸೂಕ್ಷ್ಮ ತಂತ್ರಜ್ಞಾನದಿಂದ ಬೇರ್ಪಡಿಸಲಾಗಿದ್ದು, ಭಾರ ಜಲ ಉತ್ಪನ್ನದಲ್ಲಿ ಭಾರತಕ್ಕೆ ಇರುವ ಪರಿಣಿತಿಯನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗದೆ ಎಂದು ಹೇಳಲಾಗುತ್ತದೆ. ಆದಾಗ್ಯೂ ಭಾರತವು ಈ ತಂತ್ರಜ್ಞಾನ ಮತ್ತು ಸಲಕರಣೆಗಳನ್ನು ಪಡೆಯಬೇಕಾದಲ್ಲಿ ಒಪ್ಪಂದಕ್ಕೆ ತಿದ್ದುಪಡಿ ತರುವ ಮೂಲಕ ಮಾತ್ರ ಸಾಧ್ಯವಾಗುತ್ತದೆ. ಅರ್ಥಾತ್ ಅಮೆರಿಕಾದ ಸಂಸತ್ತಿನ ಒಪ್ಪಿಗೆಯ ನಂತರವೇ ಇದು ಸಾಧ್ಯವಾಗುತ್ತದೆ. ಒಂದು ವೇಳೆ ಪರಮಾಣು ಸರಬರಾಜು ಗುಂಪಿನ ತಿದ್ದುಪಡಿಗಳೂ ೧೨೩ ಒಪ್ಪಂದದಂತೆಯೇ ಇದ್ದಲ್ಲಿ ಅನ್ಯ ರಾಷ್ಟ್ರಗಳಿಂದಲೂ ಈ ತಂತ್ರಜ್ಞಾನವನ್ನು ಪಡೆಯುವುದದು ದುಸ್ಸಾಧ್ಯವಾಗುತ್ತದೆ.

ಎಡ ಪಕ್ಷಗಳು ವ್ಯಕ್ತಪಡಿಸುತ್ತಿರುವ ಆಕ್ಷೇಪಗಳಲ್ಲಿ ಒಂದು ಅಂಶ, ಪರಮಾಣು ಸಂಬಂಧಿತ ದ್ವಿವಿಧ ಬಳಕೆಯ ವಸ್ತುಗಳ ಮೇಲಿರುವ ನಿರ್ಬಂಧಗಳನ್ನು ಕುರಿತದ್ದಾಗಿದೆ. ಈ ದ್ವಿವಿಧ ಬಳಕೆಯ ವಸ್ತುಗಳ ಸರಬರಾಜು ಪರಮಾಣು ಸರಬರಾಜು ಗುಂಪಿನ ನಿಯಮಗಳಿಗೆ ಒಳಪಟ್ಟಿರುತ್ತದೆ. ಅಮೆರಿಕಾದಲ್ಲಿ ಇದನ್ನು ವಾಣಿಜ್ಯ ವಿಭಾಗವು ನಿರ್ವಹಿಸುತ್ತದೆ. ಈ ನಿಟ್ಟಿನಲ್ಲಿ ದ್ವಿವಿಧ ಬಳಕೆಯ ವಸ್ತುಗಳ ಆಮದಿಗಾಗಿ ಭಾರತವು ಆಯಾ ರಾಷ್ಟ್ರಗಳ ಕಾನೂನಿನಡಿಯಲ್ಲೇ ವ್ಯವಹರಿಸಬೇಕಾಗುತ್ತದೆ. ೧೨೩ ಒಪ್ಪಂದದ ವಿಧಿ ೫.೨ರ ಪ್ರಕಾರ "ಸಂಪದ್ಯುಕ್ತತೆ, ಪುನಸ್ಸಂಸ್ಕರಣ ಮತ್ತು ಭಾರ ಜಲ ಉತ್ಪಾದನೆಯಲ್ಲಿ ಉಪಯೋಗಿಸಲ್ಪಡುವ ದ್ವಿವಿಧ ಬಳಕೆಯ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಆಯಾ ದೇಶಗಳಲ್ಲಿನ ಕಾನೂನು, ನಿಯಮಗಳನ್ನು ಪಾಲಿಸತಕ್ಕದ್ದು" ಎಂದು ಹೇಳಲಾಗಿದೆ. ಹಾಗಾಗಿ ಈ ನಿಯಮಗಳ ಸಡಿಲಿಕೆಗಾಗಿ ಭಾರತ ಸರ್ಕಾರವು ಅಮೆರಿಕಾದ ವಾಣಿಜ್ಯ ಇಲಾಖೆಯೊಡನೆ ವ್ಯವಹರಿಸುವುದು ಅಗತ್ಯವಾಗುತ್ತದೆ. ಈ ವ್ಯವಹಾರವು ೧೨೩ ಒಪ್ಪಂದದ ವ್ಯಾಪ್ತಿಯ ಹೊರಗೆ ನಡೆಯುವುದರಿಂದ ಭಾರತ ಅಮೆರಿಕಾ ತಂತ್ರಜ್ಞಾನ ಸಹಕಾರ ಗುಂಪಿನ ನೇತೃತ್ವದಲ್ಲಿ ನಡೆಯಬೇಕಾಗುತ್ತದೆ. ಹಾಗಾದಲ್ಲಿ ಭಾರತವು ದ್ವಿವಿಧ ಬಳಕೆಯ ವಸ್ತುಗಳನ್ನು ಭಾರ ಜಲ ಉತ್ಪಾನದೆಗಾಗಿ ಪಡೆಯಬಹುದೇ ಹೊರತು, ಈ ಒಪ್ಪಂದದ ನಂತರದಲ್ಲಿ ಭಾರತ ನಿರ್ಮಿಸಲು ಯೋಜಿಸಿರುವ ಸುರಕ್ಷಿತ ಪುನಸ್ಸಂಸ್ಕರಣ ಘಟಕಗಳಿಗಾಗಿ ಪಡೆಯಲಾಗುವುದಿಲ್ಲ.

ಈ ಒಪ್ಪಂದದ ಮೂಲಕ ಬಗೆಹರಿಯಬೇಕಾಗಿದ್ದ ಒಂದು ಪ್ರಮುಖ ಅಂಶವೆಂದರೆ, ಸುರಕ್ಷಿತ ಫಾಸ್ಟ್ ಬ್ರೀಡರ್ ರಿಯಾಕ್ಟರುಗಳಲ್ಲಿ ಪ್ಲುಟೋನಿಯಮ್ ಸಂಗ್ರಹಿಸಲು ಅಮೆರಿಕಾದಿಂದ ಸರಬರಾಜಾಗುವ ಬದಲಿ ಇಂಧ

ನವನ್ನು ಬಳಸುವುದು. ಈ ನಿಟ್ಟಿನಲ್ಲಿ ಭಾರತ ಸರ್ಕಾರವು, ನಿರಂತರ ಸುರಕ್ಷತೆಯಲ್ಲಿರುವ ರಾಷ್ಟ್ರೀಯ ಪುನಸ್ಸಂಸ್ಕರಣ ಸೌಕರ್ಯವನ್ನು ಹೊಸದಾಗಿ ಪ್ರಾರಂಭಿಸುವುದಾಗಿ ಮುಚ್ಚಳಿಕೆ ನೀಡಿದ್ದು ಈ ಒಪ್ಪಂದ ಏರ್ಪಡಲು ಅನುಕೂಲವಾಗಿದೆ. ಭಾರತ ಅಮೆರಿಕಾ ಒಪ್ಪಂದದ ವಿಧಿ 6(iii) ಅನ್ವಯ ೧೨೩ ಒಪ್ಪಂದದಡಿಯಲ್ಲಿ ಭಾರತಕ್ಕೆ ಸರಬರಾಜು ಮಾಡಲಾದ ಪದಾರ್ಥಗಳನ್ನು ಪುನಸ್ಸಂಸ್ಕರಿಸಲು ಅಮೆರಿಕಾ ತನ್ನ ಸಮ್ಮತಿ ವ್ಯಕ್ತಪಡಿಸುತ್ತದೆ. ಈ ಹಕ್ಕುಗಳನ್ನು ಜಾರಿಗೊಳಿಸಲು ಭಾರತವು ಹೊಸದಾಗಿ ರಾಷ್ಟ್ರೀಯ ಪುನಸ್ಸಂಸ್ಕರಣಾ ಘಟಕಗಳನ್ನು ಪ್ರಾರಂಭಿಸಿ, ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ (IAEA) ಭದ್ರತಾ ನಿಯಮಗಳಡಿಯಲ್ಲಿ ರಕ್ಷಿಸಲ್ಪಟ್ಟ ಪರಮಾಣು ವಸ್ತುಗಳನ್ನು ಪುನಸ್ಸಂಸ್ಕರಿಸುತ್ತದೆ. ಎರಡೂ ರಾಷ್ಟ್ರಗಳು ಈ ಹೊಸ ಸೌಕರ್ಯದಡಿಯಲ್ಲಿ ಪುನಸ್ಸಂಸ್ಕರಿಸಲು ಅಗತ್ಯವಾದ ನಿಯಮಗಳನ್ನು, ಒಪ್ಪಂದಗಳನ್ನೂ ಜಾರಿಗೊಳಿಸಲು ಪರಸ್ಪರ ಸಮ್ಮತಿ ಸೂಚಿಸಬೇಕಾಗುತ್ತದೆ. IAEA ಕಾಯ್ದೆಯನುಸಾರ ಪರಮಾಣು ವಸ್ತುಗಳ ರಕ್ಷಣೆ, ದಾಸ್ತಾನು ಕ್ರಮ ಮತ್ತು ಪರಿಸರ ರಕ್ಷಣೆಯ ಬಗ್ಗೆ ಎರಡೂ ರಾಷ್ಟ್ರಗಳು ಸಮ್ಮತಿ ಸೂಚಿಸಬೇಕಾಗುತ್ತದೆ.

ಯಾವುದೇ ರಾಷ್ಟ್ರವು ಈ ನಿಟ್ಟಿನಲ್ಲಿ ಆಗ್ರಹಪಡಿಸಿದ ಆರು ತಿಂಗಳೊಳಗಾಗಿ ಈ ಮಾತುಕತೆಗಳು ಪ್ರಾರಂಭಗೊಂಡು, ಒಂದು ವರ್ಷದೊಳಗಾಗಿ ಪೂರ್ಣಗೊಳ್ಳಬೇಕಾಗುತ್ತದೆ. ಅರ್ಥಾತ್ ಈ ಕಾಯ್ದೆಯ ಪ್ರಕಾರ ಪುನಸ್ಸಂಸ್ಕರಣೆಗೆ ಒಪ್ಪಿಗೆ ದೊರೆಯುವುದೇ ಹೊರತು, ನಿಯಮಾವಳಿಗಳ ಒಪ್ಪಂದಕ್ಕೆ ಮುನ್ನ ಕಾರ್ಯಗತಗೊಳಿಸಲಾಗುವುದಿಲ್ಲ. ಒಂದು ವೇಳೆ ಅಮೆರಿಕಾದ ಸಂಸತ್ತು ಈ ನಿಯಮಾವಳಿಗಳಿಗೆ ಒಪ್ಪಿಗೆ ಸೂಚಿಸಿದರೂ, ಅಮೆರಿಕಾದ ಸರ್ಕಾರದ ಅಂತಿಮ ಒಪ್ಪಿಗೆ ಇಲ್ಲದೆ ಪುನಸ್ಸಂಸ್ಕರಣದ ಹಕ್ಕು ಭಾರತಕ್ಕೆ ದೊರೆಯುವುದಿಲ್ಲವೆಂದೇ ಹೇಳಬಹುದು. ಆದರೆ ಭಾರತ ಸರ್ಕಾರವು ಈ ವ್ಯಾಖ್ಯಾನವನ್ನು ಒಪ್ಪುವುದಿಲ್ಲ. ಈ ನಿಟ್ಟಿನಲ್ಲಿ ಉಂಟಾಗಿರುವ ಅಸ್ಪಷ್ಟತೆಯನ್ನು ನಿವಾರಿಸಬೇಕಾಗಿದೆ.

IAEA ಭದ್ರತಾ ವ್ಯವಸ್ಥೆಯಲ್ಲಿ ಕಂಡು ಬರುವ ಪ್ರಮುಖ ಅಂಶವೆಂದರೆ, ಭಾರತ ಅಥವಾ ಇತರ ಯಾವುದೇ ರಾಷ್ಟ್ರಗಳು ಒಂದು ವೇಳೆ IAEA ಭದ್ರತಾ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ವಿಫಲವಾದಲ್ಲಿ, ಅಮೆರಿಕದ ಪರಿವೀಕ್ಷಣಾ ಅಧಿಕಾರಿಗಳು ಪರೀಕ್ಷಿಸುವ ಹಕ್ಕನ್ನು ಹೊಂದಿರುತ್ತಾರೆ. ೧೨೩ ಒಪ್ಪಂದದ ಪ್ರಕಾರ ಉಭಯ ರಾಷ್ಟ್ರಗಳಲ್ಲಿ ಯಾರೇ ಭದ್ರತಾ ನ್ಯೂನತೆಯ ಬಗ್ಗೆ ದೂರು ನೀಡಿದರೂ ಈ ರೀತಿಯ ಪರಿವೀಕ್ಷಣೆಯ ಅಧಿಕಾರವನ್ನು ಅಮೆರಿಕಾದ ಅಧಿಕಾರಿಗಳಿಗೆ ನೀಡಲಾಗಿದೆ. ಹಾಗಾಗಿ ಅಮೆರಿಕಾದ ಪರೀಕ್ಷಕರು ಪದೇ ಪದೇ ಭಾರತದ ಸ್ಥಾವರಗಳನ್ನು ಪರೀಕ್ಷಿಸುವ ಸಂದರ್ಭಗಳನ್ನು ತಳ್ಳಿ ಹಾಕುವಂತಿಲ್ಲ. ೧೨೩ ಒಪ್ಪಂದದ ವಿಧಿ ೧೦.೪ ಅನ್ವಯ, IAEA ಭದ್ರತಾ ನಿಯಮಗಳನ್ನು ಸೂಕ್ತವಾಗಿ ಅಳವಡಿಸಲು ಸಾಧ್ಯವಿಲ್ಲವೆಂದು ಸಂಸ್ಥೆ ಭಾವಿಸಿದಲ್ಲಿ ಪೂರೈಕೆದಾರರು ಮತ್ತು ಖರೀದಿಸುವ ರಾಷ್ಟ್ರಗಳು ಪರಸ್ಪರ ಮಾತುಕತೆಯ ಮೂಲಕ ಸರಿಯಾದ ಕ್ರಮ ಕೈಗೊಳ್ಳಬೇಕಾಗುತ್ತದೆ. ವಿಧಿ ೧೨(೩)ರ ಅನ್ವಯ ಈ ಒಪ್ಪಂದದ ಅನುಷ್ಠಾನ ಮತ್ತು ತದನಂತರದ ಕಾರ್ಯಾಚರಣೆಯ ಸಂದರ್ಭದಲ್ಲಿ ಅವಶ್ಯಕತೆ ಇದ್ದಲ್ಲಿ ತಜ್ಞರು ಭಾರತದ ಪರಮಾಣು ಘಟಕಗಳ ಪರಿವೀಕ್ಷಣೆ ಮಾಡಲು ಅವಕಾಶವಿರುತ್ತದೆ. ಅನ್ಯರಾಷ್ಟ್ರಗಳೊಡಗಿನ ೧೨೩ ಒಪ್ಪಂದದಲ್ಲಿ ಈ ಅಂಶ ಇರುವುದಿಲ್ಲ.

ಯಾವುದೇ ರಾಷ್ಟ್ರವು ಈ ನಿಟ್ಟಿನಲ್ಲಿ ಆಗ್ರಹಪಡಿಸಿದ ಆರು ತಿಂಗಳೊಳಗಾಗಿ ಈ ಮಾತುಕತೆಗಳು ಪ್ರಾರಂಭ ಗೊಂಡು, ಒಂದು ವರ್ಷದೊಳಗಾಗಿ ಪೂರ್ಣಗೊಳ್ಳಬೇಕಾಗುತ್ತದೆ. ಅರ್ಥಾತ್ ಈ ಕಾಯ್ದೆಯ ಪ್ರಕಾರ ಪುನಸ್ಸಂಸ್ಕರಣೆಗೆ ಒಪ್ಪಿಗೆ ದೊರೆಯುವುದೇ ಹೊರತು, ನಿಯಮಾವಳಿಗಳ ಒಪ್ಪಂದಕ್ಕೆ ಮುನ್ನ ಕಾರ್ಯಗತಗೊಳಿಸಲಾಗುವುದಿಲ್ಲ. ಒಂದು ವೇಳೆ ಅಮೆರಿಕಾದ ಸಂಸತ್ತು ಈ ನಿಯಮಾವಳಿಗಳಿಗೆ ಒಪ್ಪಿಗೆ ಸೂಚಿಸಿದರೂ, ಅಮೆರಿಕಾದ ಸರ್ಕಾರದ ಅಂತಿಮ ಒಪ್ಪಿಗೆ ಇಲ್ಲದೆ ಪುನಸ್ಸಂಸ್ಕರಣದ ಹಕ್ಕು ಭಾರತಕ್ಕೆ ದೊರೆಯುವುದಿಲ್ಲವೆಂದೇ ಹೇಳಬಹುದು. ಆದರೆ ಭಾರತ ಸರ್ಕಾರವು ಈ ವ್ಯಾಖ್ಯಾನವನ್ನು ಒಪ್ಪುವುದಿಲ್ಲ.

ಎಡ ಪಕ್ಷಗಳ ಆತಂಕಗಳು

ಪರಮಾಣು ಒಪ್ಪಂದಕ್ಕೆ ಭಾರತದಲ್ಲಿ ಮಾತ್ರವಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲೂ ಸಾಕಷ್ಟು ವಿರೋಧ ವ್ಯಕ್ತವಾಗಿದ್ದು, ಅಮೆರಿಕಾದ ಸಂಸತ್ತಿನಲ್ಲೂ ಜಾರ್ಜ್‌ಬುಷ್‌ರವರು ವಿರೋಧ ಎದುರಿಸುತ್ತಿದ್ದಾರೆ. ಡಿಸೆಂಬರ್ ೨೦೦೭ರೊಳಗಾಗಿ ಅಮೆರಿಕಾದ ಸಂಸತ್ತಿನಲ್ಲಿ ಈ ಒಪ್ಪಂದಕ್ಕೆ ಸಮ್ಮತಿ ವ್ಯಕ್ತವಾಗದಿದ್ದಲ್ಲಿ ಇದು ಊರ್ಜಿತವಾಗುವುದೂ ಕಷ್ಟವೆಂಬ ಅಭಿಪ್ರಾಯಗಳೂ ಕೇಳಿಬರುತ್ತಿವೆ. ಭಾರತದಲ್ಲಿ ಈ ಒಪ್ಪಂದದ ವಿರುದ್ಧ ಎಡ ಪಕ್ಷಗಳು ಪ್ರಾರಂಭದಿಂದಲೂ ವಿರೋಧ ವ್ಯಕ್ತಪಡಿಸುತ್ತಲೇ ಬಂದಿವೆ. ಆಗಸ್ಟ್ ೭ರಂದು ಎಡ ಪಕ್ಷಗಳು ನೀಡಿದ ಹೇಳಿಕೆಯಲ್ಲಿ "ಈ ಅಣು ಒಪ್ಪಂದವನ್ನು ಅಮೆರಿಕಾದೊಡಗಿನ ಸಮಗ್ರ ರಣತಾಂತ್ರಿಕ ಸಂಬಂಧಗಳಿಂದ ಭಿನ್ನವಾಗಿ ನೋಡಲಾಗುವುದಿಲ್ಲ" ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಇಡೀ ಒಪ್ಪಂದವು ೨೦೦೫ರ ಜುಲೈನಲ್ಲಿ ಪ್ರಕಟವಾದ ಭಾರತ ಅಮೆರಿಕಾ ಜಂಟಿ ಹೇಳಿಕೆಯ ಒಂದು ಭಾಗವಾಗಿದ್ದು ಇದರೊಂದಿಗೆ ರಾಜಕೀಯ, ಆರ್ಥಿಕ ಮತ್ತು ರಣತಾಂತ್ರಿಕ ಸಂಬಂಧಗಳು ಕೂಡಿಕೊಂಡಿವೆ ಎಂದು ಹೇಳಲಾಗಿದೆ. ಅಮೆರಿಕಾದ ಎಲ್ಲಾ ಆಡಳಿತ ವರ್ಗಗಳನ್ನೂ ನಿರ್ಬಂಧಕ್ಕೊಳಪಡಿಸುವ ಹೈಡ್ ಕಾಯ್ದೆಯಡಿಯಲ್ಲೇ ಈ ಒಪ್ಪಂದವನ್ನು ಪರಿಶೀಲಿಸಬೇಕಾಗಿರುವುದರಿಂದ, ಈ ದ್ವಿಪಕ್ಷೀಯ ಒಪ್ಪಂದವು ಹೈಡ್ ಕಾಯ್ದೆಯ ವ್ಯಾಪಕ ನಿಯಮಗಳಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ ಎಂದು ಸಿ.ಪಿ.ಎಂ. ನಾಯಕರು ಹೇಳುತ್ತಾರೆ. ಒಂದು ರೀತಿಯಲ್ಲಿ ಅಮೆರಿಕಾದ ವಿದೇಶೀ ನೀತಿಗಳಿಗೆ ಮತ್ತು ಸಾಮ್ರಾಜ್ಯಶಾಹಿ ಧ್ಯೇಯಗಳಿಗೆ ಈ ಕಾಯ್ದೆಯನ್ನು ಉಪಯೋಗಿಸಿಕೊಂಡು, ಭಾರತವನ್ನು ತನ್ನೆಡೆಗೆ ಸೆಳೆಯುವ ಅಮೆರಿಕಾದ ತಂತ್ರದ ಬಗ್ಗೆ ಎಡ ಪಕ್ಷಗಳಲ್ಲಿ ತೀವ್ರ ಗುಮಾನಿ ಇರುವುದು ಅಸಹಜವೇನಲ್ಲ.

೨೦೦೫ರ ಜುಲೈ ೧೮ರ ಇಂಧನ ಪೂರೈಕೆಯನ್ನು ಕುರಿತ ಜಂಟಿ ಹೇಳಿಕೆ ಮತ್ತು ೨೦೦೬ರ ಮಾರ್ಚ್ ೨ರ ಮಾತುಕತೆಗಳಲ್ಲಿ ನೀಡಿದ್ದ ಆಶ್ವಾಸನೆಗಳಿಗೆ ವಿರುದ್ಧವಾಗಿ ಕಳೆದ ಡಿಸೆಂಬರ್‌ನಲ್ಲಿ ಅಮೆರಿಕಾದ ಸಂಸತ್ತು ಹೈಡ್ ಕಾಯ್ದೆಯನ್ನು ಜಾರಿಗೊಳಿಸಿದೆ. ೧೨೩ ಒಪ್ಪಂದವು ಸುಸೂತ್ರವಾಗಿ ಮುಂದುವರೆಯುವುದರಲ್ಲಿ ಪರಮಾಣು ಸರಬರಾಜು ಗುಂಪಿನ ಪಾತ್ರ ಮಹತ್ವದ್ದಾಗಿರುತ್ತದೆ. ೨೦೦೫ರ ಜಂಟಿ ಹೇಳಿಕೆಯಲ್ಲಿ ಅಮೆರಿಕಾ ಸರ್ಕಾರವು "ಭಾರತದೊಡನೆ ಅಣು ಸಹಕಾರ ಮತ್ತು ವ್ಯಾಪಾರವನ್ನು ವೃದ್ಧಿಸಲು ಎಲ್ಲಾ ಮಿತ್ರ ರಾಷ್ಟ್ರಗಳೊಡನೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು" ಎಂದು ಹೇಳಿತ್ತು. ಪರಮಾಣು ವ್ಯಾಪಾರವನ್ನು ನಡೆಸಲು ಪರಮಾಣು ಸರಬರಾಜು ಗುಂಪಿನಿಂದ ರಿಯಾಯಿತಿ ಪಡೆಯುವುದು ಸ್ಪಷ್ಟವಾಗಿತ್ತು. ಆದರೆ ಹೈಡ್ ಕಾಯ್ದೆಯ ಪ್ರಕಾರ, ಅಮೆರಿಕಾದ ಅಧ್ಯಕ್ಷರು ತಮ್ಮ ಸರ್ಕಾರದ ವಿದೇಶೀ ನೀತಿ ಮತ್ತು ಧ್ಯೇಯಗಳ ಬಗ್ಗೆ ಪ್ರತಿ ವರ್ಷವೂ ಅಲ್ಲಿನ ಸಂಸತ್ತಿಗೆ ವರದಿ ಮತ್ತು ಪ್ರಮಾಣ ಸಲ್ಲಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಪ್ರತಿ ವರ್ಷವೂ ಭಾರತದ ವಿದೇಶೀ ನೀತಿಯು ಅಮೆರಿಕಾದ ನೀತಿಗಳಿಗೆ ಅನುಗುಣವಾಗಿದೆ ಎಂದು ಪ್ರಮಾಣೀಕರಿಸಬೇಕಾಗುತ್ತದೆ. ಅಣು ಸರಬರಾಜು ಗುಂಪಿನಲ್ಲಿ ಭಾರತಕ್ಕೆ ಫ್ರಾನ್ಸ್ ಮತ್ತು ರಷ್ಯಾದ ಬೆಂಬಲ ಎಷ್ಟೇ ಇದ್ದರೂ, ಅಮೆರಿಕಾ ತನ್ನ ರಾಜತಾಂತ್ರಿಕ ಸಂಬಂಧಗಳನ್ನು ಉಪಯೋಗಿಸಿಕೊಂಡ ಈ ರಾಷ್ಟ್ರಗಳನ್ನು ತನ್ನೆಡೆಗೆ ಸೆಳೆಯುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಇತ್ತೀಚಿನ ದಿನಗಳಲ್ಲಿ ಇರಾನ್ ವಿರುದ್ಧದ ತನ್ನ ಕಾರ್ಯಾಚರಣೆಯಲ್ಲಿ ಅಮೆರಿಕಾ ಸರ್ಕಾರವು ಭಾರತದ ಬೆಂಬಲವನ್ನು ನಿರೀಕ್ಷಿಸುತ್ತಿರುವುದೇ ಅಲ್ಲದೇ, ಭಾರತ-ಇರಾನ್ ಸಂಬಂಧಗಳ ಬಗ್ಗೆಯೂ ಹಸ್ತಕ್ಷೇಪ ಮಾಡುತ್ತಿರುವುದು ಸ್ಪಷ್ಟವಾಗುತ್ತಿದೆ. ೧೨೩ ಒಪ್ಪಂದದ ಮಾತುಕತೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಬುಷ್‌ನ ಆಪ್ತ ಕಾರ್ಯದರ್ಶಿ ನಿಕೋಲಾಸ್ ಬರ್ನ್ಸ್‌ರವರು, ಭಾರತವು ಒಪ್ಪಂದಕ್ಕೆ ಒಪ್ಪಿಗೆ ಸೂಚಿಸದ ನಂತರದಲ್ಲಿ "ಅಮೆರಿಕಾ ಇಂದು ಎದುರಿಸುತ್ತಿರುವ ಗಂಭೀರ ಸ್ವರೂಪದ ರಕ್ಷಣಾ ಸಮಸ್ಯೆಗಳನ್ನು ಸೂಕ್ತವಾಗಿ ಎದುರಿಸಲು, ಭಾರತ ಸರ್ಕಾರವು ಅಂತಾರಾಷ್ಟ್ರೀಯ ಮುಖ್ಯವಾಹಿನಿಯ ಪ್ರಮುಖೀ ಅಂಗವಾಗಬೇಕು" ಎಂದು ಹೇಳಿರುವುದು, ಇರಾನ್ ಮತ್ತು ಅಮೆರಿಕಾ ನಡುವಣ ಸಂಬಂಧಗಳಲ್ಲಿ ಸೂಕ್ಷ್ಮವಾಗಿ ಭಾರತವನ್ನು ಸೆಳೆಯುವ ತಂತ್ರಗಾರಿಕೆಯನ್ನು ಕಾಣಬಹುದು. ಇದೇ ಸಂದರ್ಭದಲ್ಲಿ ಬರ್ನ್ಸ್‌ರವರು ಇರಾನ್ ನೊಡನೆ ವ್ಯಾಪಾರ ವಹಿವಾಟು ಕಡಿತಗೊಳಿಸುವಂತೆ ಭಾರತಕ್ಕೆ ಕರೆ ನೀಡಿರುವುದನ್ನೂ ಇಲ್ಲಿ ಗಮನಿಸಬಹುದು. ಇವರ ಮೇಲಧಿಕಾರಿಣಿಯಾದ ರೈಸ್‌ರವರೂ ಭಾರತವನ್ನು ಅಲಿಪ್ತ ಚಳವಳಿ (Non Alligned Movement)ಯಿಂದ ದೂರ ಸರಿಯಲು ಆಗ್ರಹಿಸುವುದೇ ಅಲ್ಲದೆ, ಭಾರತ-ಇರಾನ್ ನಡುವಿನ ಗ್ಯಾಸ್ ಪೈಪ್ ಲೈನ್ ಯೋಜನೆಯನ್ನು ಕೈಬಿಡುವಂತೆಯೂ ಸೂಚಿಸಿರುವುದು ಅಮೆರಿಕಾದ ರಾಜತಾಂತ್ರಿಕ ಹುನ್ನಾರಗಳನ್ನು ಸ್ಪಷ್ಟಪಡಿಸುತ್ತದೆ.

(ಮುಂದುವರೆಯುವುದು)

ಕರಡಿಯಾಡಿಸುವ ಖಲಂದರರು

ಕೊಪ್ಪಳ ಜಿಲ್ಲೆಯ ಮಂಗಳಾಪುರದಲ್ಲಿ ಖಲಂದರರು ಎಂದು ಕರೆಯಲಾಗುವ ಕರಡಿಯಾಡಿಸುವವರ ಒಂದು ಸಮುದಾಯವಿದೆ. ಇಲ್ಲಿ ಕರಡಿ ಆಡಿಸುವುದನ್ನು ಅವಲಂಬಿಸಿದ ೨೯ ಕುಟುಂಬಗಳ ೧೩೦ ಮಂದಿಗೆ ಕರಡಿಯಾಟವೇ ಜೀವನಾಧಾರ. ಪ್ರತಿದಿನ ಒಬ್ಬ ಆಟಗಾರ ೨೦೦ ರಿಂದ ೩೦೦ ರೂ. ದುಡಿಮೆ ಮಾಡುತ್ತಾನೆ. ಹೀಗೆ ಬದುಕಿನ ಬಂಡಿ ಸಾಗಿಸುತ್ತಿದ್ದ ಇವರ ಜೀವನದ ಹಳಿ ತಪ್ಪಿದೆ. ಹೈದರಾಬಾದಿನ ನಿಜಾಮರು, ಮೈಸೂರಿನ ಅರಸರು, ನಂತರ ಬಂದ ಸರ್ಕಾರಗಳಿಂದ ಇವರಿಗೆ ತೊಂದರೆಯಾಗಿರಲಿಲ್ಲ. ಇತ್ತೀಚೆಗೆ ಪ್ರಾಣಿ ರಕ್ಷಣಾ ಸಂಘದವರು ಇವರ ಕರಡಿಗಳನ್ನು ಕಿತ್ತುಕೊಂಡು ಅರಣ್ಯ ಇಲಾಖೆಗೆ ಒಪ್ಪಿಸಿದ್ದರು. ಇದರಿಂದ ಅನಕ್ಷರಸ್ಥ ಖಲಂದರರ ಬದುಕು ಅತಂತ್ರವಾಗಿದೆ. ಕರಡಿಗಳನ್ನು ಕಳೆದುಕೊಂಡ ಇವರು ತಮ್ಮ ಮಕ್ಕಳೊಂದಿಗೆ ಅರಣ್ಯ ಇಲಾಖೆ ಎದುರು ಧರಣಿ ಕೂತಿದ್ದಾರೆ. ನೊಂದ ಖಲಂದರರಿಗೆ ನ್ಯಾಯ ದೊರಕುವುದೇ?

ಮಂಗಳಾಪುರಕ್ಕೆ ಹೋಗಬೇಕೆಂದು ಬಹುದಿನಗಳಿಂದ ತವಕಿಸಿದ್ದೆ. ಈಚೆಗದು ಸಾಧ್ಯವಾಯಿತು. ಅಲ್ಲಿಗೆ ಹೋಗಲು ೨ ಕಾರಣಗಳಿದ್ದವು. ೧. ಅಲ್ಲಿ ಖಲಂದರರು ಎಂದು ಕರೆಯಲಾಗುವ ಕರಡಿ ಆಟಗಾರರ ಒಂದು ಸಮುದಾಯವಿದ್ದು, ಈಚೆಗೆ ಪ್ರಾಣಿ ರಕ್ಷಣಾ ಸಂಘದವರು ಅವರ ಕರಡಿಗಳನ್ನು ಕಿತ್ತುಕೊಂಡು, ಅರಣ್ಯ ಇಲಾಖೆಗೆ ಒಪ್ಪಿಸುತ್ತ ಹೊಸ ಕಷ್ಟ ಸೃಷ್ಟಿಸಿದ್ದರು. ತಾವು ಮಕ್ಕಳಂತೆ ಸಾಕಿದ ಕರಡಿಗಳನ್ನು ಕಳೆದುಕೊಂಡು ಅನಾಥರಾಗಿ ದು:ಖ ಪಡುವ, ಕರಡಿ ಆಡಿಸುವದಂಥೆ ಬಿಟ್ಟು ಬೇರೇನೂ ಗೊತ್ತಿಲ್ಲದ ಇವರು, ಪರ್ಯಾಯ ಜೀವನಕ್ಕಾಗಿ ಜಮೀನಾದರೂ ಕೊಡಿ ಎಂದು ಈ ಧರಣಿ ಮಾಡುತ್ತಿದ್ದರು. ಕರಡಿಗೂ ಇವರ ಬದುಕಿಗೂ ಇರುವ ಸಂಬಂಧಗಳನ್ನು ಹಾಗೂ ಕರಡಿ ಕಳೆದುಕೊಂಡ ಬಳಿಕ ಅವರ ಬದುಕಿನಲ್ಲಿ ಆಗಿರುವ ಬಿಕ್ಕಟ್ಟುಗಳನ್ನು ತಿಳಿಯಬೇಕಿತ್ತು. ೨. ಖಲಂದರರು ಎಂಬ ಇವರ ಹೆಸರು ಸೂಫಿಗಳಲ್ಲಿ ಒಂದು ಪಂಥದ ಹೆಸರಾಗಿದ್ದು, ಈ ಹೆಸರು ಅವರಿಗೆ ಹೇಗೆ ಬಂದಿತು? ಮುಸ್ಲಿಮರಾದ ಈ ಕರಡಿ ಆಟಗಾರರು ಕರಡಿ ಆಡಿಸುವ ಕಸುಬನ್ನು ಚರಿತ್ರೆಯ ಯಾವ ಸಂದರ್ಭದಲ್ಲಿ ಮತ್ತು ಯಾಕಾಗಿ ಅವಲಂಬಿಸಿದರು? ಇದನ್ನು ತಿಳಿಯಬೇಕಿತ್ತು.

ಮಂಗಳಾಪುರವು ಕೊಪ್ಪಳದಿಂದ ೩ ಕಿ. ಮೀ ದೂರದಲ್ಲಿ ಕಲ್ಲುಗುಡ್ಡ ಸಂದಿಯೊಳಗೆ ಬಚ್ಚಿಟ್ಟುಕೊಂಡಂತಿರುವ ಊರು. ಊರ ಸುತ್ತ ಕೆಂಪುಕಾರುವ ಮಸಾರಿ ಹೊಲಗಳು. ಅವುಗಳಲ್ಲಿ ಸೊಕ್ಕಿ ಬೆಳೆದು ನಿಂತ ಶೇಂಗಾ, ಗೋವಿನ ಜೋಳ, ಸುರೇಪಾನ. ಪೂರ್ವಕ್ಕೆ ಅಣೆಕಟ್ಟುಕಟ್ಟಿದಂತೆ ಕಲ್ಲಿನ ಬೆಟ್ಟಗಳು. ದಕ್ಷಿಣ ಮತ್ತು ಪಶ್ಚಿಮಕ್ಕೆ ಬಟಾಬಯಲು. ಉತ್ತರಕ್ಕೆ ಇರುವ ಕಲ್ಲುಗುಡ್ಡದಲ್ಲಿ ಅಶೋಕನ ಶಾಸನವಿದೆ. ಬುದ್ಧನ ಅವತಾರವಾದ ಅವಲೋಕಿತನ ಯಕ್ಷಿ ತಾರಾಭಗವತಿಗೆ ಮಂಗಳೆ ಎಂಬ ಹೆಸರಿದೆ. ಇಲ್ಲಿಗೆ ಸಮೀಪದ ಲಕ್ಕುಂದ ಮತ್ತು ಡಂಬಳಗಳು ತಾರೆಯ ಆರಾಧನೆಯಿದ್ದ ಊರುಗಳು. ಇಲ್ಲೇ ಸಮೀಪದಲ್ಲಿ ಮಂಗಳೂರು ಕೂಡ ಇದೆ. ಈ ಲೆಕ್ಕದಲ್ಲಿ ಮಂಗಳಾಪುರ ಕೂಡ ತಾರೆಯ ಹೆಸರಿನ ಊರಿದ್ದಂತೆ ಕಾಣುತ್ತದೆ. ಪ್ರಾಚೀನ ಊರಂತೂ ಹೌದು. ಚಕ್ರವ್ಯೂಹದಂತಹ ಗಲ್ಲಿಗಳ ಈ ಊರಲ್ಲಿ ಮುಸ್ಲಿಮರು ಲಿಂಗಾಯತರು ಕುರುಬರು, ದಲಿತರು ಹಾಗೂ ಬ್ರಾಹ್ಮಣರು ವಾಸವಾಗಿದ್ದಾರೆ. ಬ್ರಾಹ್ಮಣರದು ಒಂದೇ ಮನೆ. ಊರ ಒಂದು ಕಡೆ ಖಲಂದರರು ಇದ್ದಾರೆ. ಊರಲ್ಲಿ ಗವಿಸಿದ್ಧೇಶ್ವರನ ಗುಡಿಯಿದೆ. ಖಲಂದರರ ಕೇರಿಯಲ್ಲಿ ಮಹಬೂಬ ಸುಭಾನಿಯ ದರ್ಗಾಯಿದೆ. ಅದರ ಪಕ್ಕ ಚೌಡಮ್ಮನ ಸಣ್ಣ ಗುಡಿ, ಸುಭಾನಿ ಕಟ್ಟೆಗೆ ದೀಪ ಹಚ್ಚುವಾಗ ಅದಕ್ಕೂ ಮುಡಿಸುವುದುಂಟು. ಆಕೆ ಇವರು ಕರಡಿಯಾಡಿಸಲು ಹೋದಾಗ ಜತೆಯಲ್ಲಿ ಬಂದವಳಂತೆ.

ಕರ್ನಾಟಕದಲ್ಲಿ ಕರಡಿ, ಹಾವು, ಆನೆ ಮುಂತಾದ ಪ್ರಾಣಿಗಳನ್ನು ಪಳಗಿಸುವ ಮತ್ತು ಆಡಿಸುವವರು ಸಾಮಾನ್ಯವಾಗಿ ಮುಸ್ಲಿಮರು. ಕರ್ನಾಟಕದ ಬಹುತೇಕ ಮಾವುತರು ಮುಸ್ಲಿಮರು. ಆನೆಗಳಿಗೆ ಕಲಿಸಿರುವ ಭಾಷೆಯೂ ಉರ್ದು. ಈ ಖಲಂದರರು ಕರಡಿಯಾಡಿಸುವ ಆಟಕ್ಕೆ ಯಾವಾಗ ಇಳಿದರೊ ಅಥವಾ ಆ ವೃತ್ತಿಯಲ್ಲಿದ್ದವರು ಯಾವಾಗ ಮುಸ್ಲಿಮರಾದರೊ ಗೊತ್ತಿಲ್ಲ. ಕೊಪ್ಪಳದ ಮಾಜಿ ಶಾಸಕರ ಹೆಸರು ಕರಡಿ ಸಂಗಣ್ಣ ಎಂದಿದ್ದು, ಅವರ ವಂಶಕ್ಕೆ ಇದು ಹೇಗೆ ಬಂತೆಂಬುದು ತಿಳಿಯುವುದಿಲ್ಲ. ಆದರೆ ಖಲಂದರರ ಹೆಸರ ತುದಿಗೆ ಕರಡಿ ಎಂಬ ವಿಶೇಷಣ ಕಡ್ಡಾಯವಾಗಿ ಇರುತ್ತದೆ. ಇವರು ವಾಸಿಸುವ ಊರುಗಳಿಗೆ ಕೂಡ ಕರಡಿ ಹೆಸರು ಇರುವುದುಂಟು. ಹಡಗಲಿ ತಾಲೂಕಿನಲ್ಲಿ ಕರಡಿ ಐನಹಳ್ಳಿಯಿದ್ದು, ಅಲ್ಲಿನವರು ಈಗ ಕರಡಿ ಆಡಿಸುವುದಿಲ್ಲ. ಆದರೂ ಕರಡಿ ಹೆಸರು ಹೋಗಿಲ್ಲ. ಇಲ್ಲಿನ ಖಲಂದರರು ಕಬ್ಬಿಣದ ಬಳೆಗಳನ್ನು ಕೈಗೆ ಹಾಕಿಕೊಂಡು ಗಲಗಲ ಶಬ್ದಮಾಡುತ್ತ ಊರಾಡುತ್ತಿದ್ದರಂತೆ. ಕೆಲವು ಖಲಂದರರಿಗೆ ಬಳಿಗಾರ ಎಂಬ ಅಡ್ಡಹೆಸರಿದ್ದು, ಇದು ಈ ಕೈಬಳೆಯಿಂದ ಬಂದಿರಬಹುದು. "ಕಬ್ಬಿಣ ಕೈಕಡಗ ಕುಣಗೋಲು ಕೂದಲು ಕಂಬಳಿ ಹೊದ್ದಾಂವ ಬಂದಾನ" ಎಂದು ಆರಂಭವಾಗುವ ಬೇಂದ್ರೆಯವರ ಪದ್ಯವು ಇವರ ವೇಷಗಳನ್ನು ವರ್ಣಿಸುತ್ತದೆ. ಕರಡಿ ಆಡಿಸುವ ಆಟವು ಬಹಳ ಪ್ರಾಚೀನವೆಂದು ತೋರುತ್ತದೆ. ಗಂಗಾವತಿ ತಾಲೂಕು ಹುಲಿಹೈದರದ ಕರಡಿ ಆಟಗಾರರಲ್ಲಿ ಬಹುಶಃ ೧೯ನೇ ಶತಮಾನದ ಒಂದು ತಾಮ್ರಶಾಸನವಿದೆ. ಅದರ ನೆರಳಚ್ಚು ಸಿಕ್ಕಿತು. ಓದಲು ಸಿಗಲಿಲ್ಲ.

ಹೊಸಪೇಟೆಯ ಸುತ್ತಮುತ್ತ ಕರಡಿ ಆಡಿಸುವವರು ಇದ್ದಾರೆ. ಇದಕ್ಕೆ ಕಾರಣ ಈ ಭಾಗದಲ್ಲಿ ಕರಡಿಗಳೂ ಹೆಚ್ಚಿರುವುದೂ ಒಂದು. ಹಂಪಿಯ ಪಕ್ಕ ಕರ್ನಾಟಕದ ದರೋಜಿ ಕರಡಿಧಾಮ ಇದೆ. ಈ ಭಾಗದ ಪತ್ರಿಕೆಗಳನ್ನು ನೋಡಿದರೆ, ದಕ್ಷಿಣ ಕರ್ನಾಟಕದಲ್ಲಿ ಚಿರತೆ, ಆನೆಗಳ ಕಾಟದ ಹಾಗೆ ಇಲ್ಲಿ ಕರಡಿಕಾಟದ ಸುದ್ದಿ ಪ್ರಕಟವಾಗುತ್ತಿರು

ಮಾತಿನ ಹಂಗು

ರಹಮತ್ ತರೀಕೆರೆ

ತ್ತವೆ. ಸದ್ಯಕ್ಕೆ ಮಂಗಳಾಪುರ (ಕೊಪ್ಪಳ) ಹಂಪಿನಕಟ್ಟಿ ವೆಂಕಟಾಪುರ (ಹೊಸಪೇಟೆ), ಹುಲಿಹೈದರ (ಗಂಗಾವತಿ) ಗಳಲ್ಲಿ ಕರಡಿ ಆಡಿಸುವವರು ಇದ್ದಾರೆ. ಕರ್ನಾಟಕದ ಕೋಲಾರ, ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲೂ ಅವರು ಇದ್ದಾರಂತೆ. ಕರ್ನಾಟಕದಲ್ಲಿ ಇವರ ಜನಸಂಖ್ಯೆಯ ಎಣಿಕೆ ಆಗಿಲ್ಲ. ಮೂಲತಃ ಸಂಚಾರಿ ಆಟಗಾರರಾದ ಇವರು ವರುಷಕ್ಕೆ ಒಂದೊ ಎರಡೊ ಬಾರಿ ಊರಿಗೆ ಬರುತ್ತಿದ್ದವರು, ಅಲೆಮಾರಿತನದ ಒಂದು ಲಕ್ಷಣವೆಂದರೆ ಜಮೀನು ಇರದಿರುವುದು ಮತ್ತು ಊರಿಗೆ ಅಂಟಿಕೊಂಡು ಇರದಿರುವುದು. ಇವರ ಚರಿತ್ರೆ ೧೩ನೇ ಶತಮಾನದಿಂದ ಆರಂಭವಾಗುತ್ತದೆ ಎಂದು ಹೇಳಲಾಗುತ್ತದೆ.

ಖಲಂದರರ ಪೂರ್ವಜರು ಹಿಂದೆ ನಿಜಾಮ ಸೈನ್ಯದಲ್ಲಿ ಸೇವೆ ಮಾಡುವಾಗ ಏನೋ ಶೌರ್ಯ ತೋರಿದರಂತೆ. ಅದಕ್ಕೆ ಬಹುಮಾನವಾಗಿ ನಿಜಾಮರು ಏನು ಬೇಕೆಂದು ಕೇಳಲು ಅವರ ಭೂಮಿಕಾಣಿ ಕೇಳಲಿಲ್ಲ. ಬದಲಿಗೆ ಕರಡಿ ಆಡಿಸಿದರೆ, ಪ್ರತಿಮನೆಗೆ ಒಂದು ಆಣೆಕೊಡುವಂತೆ ಫರ್ಮಾನು ಹೊರಡಿಸಬೇಕು ಎಂದು ಕೇಳಿದರಂತೆ. ನಮ್ಮ ಪೂರ್ವಜರು ಭೂಮಿಯನ್ನಾದರೂ ಕೇಳಲಿಲ್ಲವಲ್ಲ ಎಂಬ ಪರಿತಾಪದಲ್ಲಿ ಇದನ್ನು ಕರಡಿಯಾಟಗಾರರ ಸಂಘದ ಅಧ್ಯಕ್ಷರಾದ ಮಂಗಳಾಪುರದ ರಾಜಾಸಾಬ್ ಹುಸೇನ ಕರಡಿಯವರು ಹೇಳಿದರು. ಈಗ ಬಂದಿರುವ ಕಷ್ಟವೆಂದರೆ, ಊರಾಡಲು ಇದ್ದ ಕರಡಿಯನ್ನು ಕಿತ್ತುಕೊಳ್ಳಲಾಗಿದೆ. ಊರಲ್ಲಿದ್ದೇ ಬದುಕಬಹುದೆಂದರೆ ಜಮೀನಿಲ್ಲ. ಕರಡಿಯವರ ಹೆಣ್ಣುಮಕ್ಕಳು ಹೊಲಗದ್ದೆಗಳಿಗೆ ಕೂಲಿ ಹೋಗುತ್ತಿದ್ದಾರೆ. ಬೆಂಗಳೂರಿನ ಐಟಿ ಹುಡುಗರು ಬಿದ್ದು ಬಿದ್ದೂ ನಗಬಹುದು-ಮಂಗಳಾಪುರದಲ್ಲಿ ಒಬ್ಬ ಹೆಣ್ಣುಕೂಲಿಗೆ ದಿನಕ್ಕೆ ೨೦ರಿಂದ ೨೫ ರೂಪಾಯಿ.

ಖಲಂದರರನ್ನು ಉಳಿದ ಮುಸ್ಲಿಮರು ಗುರುವಂಶದವರು ಎಂದು ಗೌರವದಿಂದ ನೋಡುತ್ತಾರೆ. ಅವರ ಮನೆಯಿಂದ ಹೆಣ್ಣುಕೊಡುವುದು ತರುವುದು ಕಡಿಮೆ ಎನ್ನಲಾಗುತ್ತದೆ. ಈಗೀಗ ಕೊಡುಕೊಳು ಶುರುವಾಗಿದೆ. ಆದರೂ ಉಳಿದ ಮುಸ್ಲಿಮರು ಇವರನ್ನು ದಲಿತರಂತೆ ಕೆಳಸ್ತರದಲ್ಲಿಟ್ಟು ನೋಡುತ್ತಾರೆ ಎಂದು ನನಗನಿಸಿತು. ಮುಸ್ಲಿಮರನ್ನು ಏಕರೂಪಿಯಾಗಿ ಗ್ರಹಿಸುವ ಸಾಮಾನ್ಯ ತಿಳಿವಳಿಕೆಯು ಅವರ ಸಾಂಸ್ಕೃತಿಕ ಬಹುತ್ವವನ್ನಾಗಲಿ, ಸಾಮಾಜಿಕ ಶ್ರೇಣೀಕರಣವನ್ನಾಗಲಿ ಗಮನಿಸುವುದಿಲ್ಲ. ಅವರಲ್ಲಿ ಕೆಲವರ ಹೆಸರುಗಳು ಹೀಗಿವೆ:

ಚಿಲುಮೆ ಮಾಬುಸಾಬ್, ಮೀಸೆ ಹುಸೇನ್‌ಸಾಬ್, ಮೂಲಿಮನಿ ಖಾಸಿಂಸಾಬ್, ಜಂಗ್ಲಿಸಾಬ್, ದೊಡ್ಡಬಡೇಸಾಬ್, ಬ್ರಾಂಡಿ ಹುಸೇನ್‌ಸಾಬ್, ಬಳಿಗಾರ ಸಾಮಿದ್‌ಸಾಬ್, ವಕೀಲ ಕಾಸಿಂಸಾಬ್. ಫಕೀರ್‌ಸಾಬ್, ಗೂಡುಸಾಬ್, ಸಣ್ಣಬಡೇಸಾಬ್, ಮುಂಗ್ಲಿ ಮಹಮ್ಮದ್‌ಸಾಬ್, ಕೆಂಪು ಇಮಾಂಸಾಬ್, ಕನಕ ಇಮಾಂಸಾಬ್, ಹೊನ್ನೂರ್‌ಸಾಬ್, ಆಂಧ್ರ ಕಾಸಿಂಸಾಬ್, ರೊಡ್ಡ ಶಾಮಿದ್‌ಸಾಬ್, ಪಠಾನ್‌ಸಾಬ್, ಪೀಲೂ ಖಾಸಿಂಸಾಬ್, ಗಿಡ್ಡಶಾಮೀದ್, ಮುದುಗಲ್ ಹುಸೇನಸಾಬ್, ಲಾಲ್‌ಮುಖ ಕಾಸಿಂಸಾಬ್. ರಾಜಾ ಹುಸೇನ್‌ಸಾಬ್, ಕಲ್ಯಾಸಾಬ್, ಮದಾರಸಾಬ್, ಮಾಬೂಸಾಬ್- ಇತ್ಯಾದಿ.

ಇವುಗಳಲ್ಲಿ ಹೊನ್ನೂರು, ಫಕೀರ್, ದಾದಾಪೀರ್, ರಾಜಾಸಾಬ್, ಮಾಬೂಸಾಬ್- ಇವು ಈ ಭಾಗದ ಸೂಫಿ ಸಂಪ್ರದಾಯದ ಹೆಸರುಗಳು. ಇದಕ್ಕೆ ತಕ್ಕಂತೆ ಮಂಗಳಾಪುರದ ಖಲಂದರರ ಕೇರಿಯಲ್ಲಿ ಮಹಬೂಬ ಸುಬಾನಿ ದರ್ಗಾ ಇದೆ. ಇನ್ನು ಖಾಸಿಂ, ಹುಸೇನ್, ಹಸನ, ಫಾತಿಮಾ, ಮುದುಗಲ್-ಇವು ಮೊಹರಂ ಸಂಪ್ರದಾಯಕ್ಕೆ ಸೇರಿದ ಹೆಸರುಗಳು. ಇದಕ್ಕೆ ತಕ್ಕಂತೆ ಮಂಗಳಾಪುರದಲ್ಲಿ ಮೊಹರಂ ಹಬ್ಬವನ್ನು ದೊಡ್ಡದಾಗಿ ಆಚರಿಸಲಾಗುತ್ತದೆ. ಅಲ್ಲಿ ಮೊಹರಂ ಪದಗಳನ್ನು ಅದ್ಭುತವಾಗಿ ಹಾಡುವ ಕಲಾವಿದರೂ ಇದ್ದಾರೆ. ಸ್ವತಃ ಕರಡಿ ಆಟಗಾರರ ಸಂಘದ ಅಧ್ಯಕ್ಷರಾದ ರಾಜಹುಸೇನ ಒಳ್ಳೆಯ ಹಾಡುಗಾರರು. ಇವರ ಹೆಸರಲ್ಲಿರುವ ಕೆಂಪು, ಸಣ್ಣ, ದೊಡ್ಡ, ರೊಡ್ಡ, ಚಿಲುಮಿ, ಮೂಲಿಮನಿ, ಬಳಿಗಾರ, ಮುಂಗ್ಲಿ-ಇವು ಕನ್ನಡ ಶಬ್ದಗಳು. ಭಾರತದಲ್ಲಿ ಅರಬ್ ಇಸ್ಲಾಮಿನ ಚೌಕಟ್ಟಿನೊಳಗೆ ಸಲೀಸಾಗಿ ಹೋಗದ ಎಷ್ಟೋ ಮುಸ್ಲಿಂ ಸಮುದಾಯಗಳಿವೆ. ಅವರದೊಂದು ಸಂಕರ ಸಂಸ್ಕೃತಿ. ತಿರುಗಾಟಗಾರ ಸಮುದಾಯಗಳಿಗೆ ಕ್ಲಾಸಿಕಲ್ ಧರ್ಮದ ಲಕ್ಷಣಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಖಲಂದರರ ಕರಡಿಯಾಟ, ತಿರುಗಾಟ, ಜಾಂಬವಂತನ ಕಲ್ಪನೆ ಎಲ್ಲವೂ ಅವರನ್ನು ಜಾತ್ಯತೀತ ಪರಂಪರೆಯ ಮುಸ್ಲಿಮರನ್ನಾಗಿಸಿದೆ. ಮಂಗಳಾಪುರದಲ್ಲಿ ಕರಡಿಗಳ ಮೇಲೆ ಜೀವನ ಅವಲಂಬಿತ ಆಗಿರುವ ೨೯ ಕುಟುಂಬಗಳಿದ್ದು, ಒಟ್ಟು ಜನಸಂಖ್ಯೆ ೧೩೦. ಇವರಲ್ಲಿ ೮೦ ಹೆಣ್ಣು. ೫೦ ಗಂಡು. ಊರಲ್ಲಿ ಈಗ ಉರ್ದುಶಾಲೆ ಆರಂಭವಾಗಿದೆ.

ಮಂಗಳಾಪುರದ ಖಲಂದರರ ಕೇರಿಯಲ್ಲಿ ಮಹಬೂಬ ಸುಬಾನಿ ದರ್ಗಾ ಇದೆ. ಇನ್ನು ಖಾಸಿಂ, ಹುಸೇನ್, ಹಸನ, ಫಾತಿಮಾ, ಮುದುಗಲ್-ಇವು ಮೊಹರಂ ಸಂಪ್ರದಾಯಕ್ಕೆ ಸೇರಿದ ಹೆಸರುಗಳು. ಇದಕ್ಕೆ ತಕ್ಕಂತೆ ಮಂಗಳಾಪುರದಲ್ಲಿ ಮೊಹರಂ ಹಬ್ಬವನ್ನು ದೊಡ್ಡದಾಗಿ ಆಚರಿಸಲಾಗುತ್ತದೆ. ಅಲ್ಲಿ ಮೊಹರಂ ಪದಗಳನ್ನು ಅದ್ಭುತವಾಗಿ ಹಾಡುವ ಕಲಾವಿದರೂ ಇದ್ದಾರೆ. ಸ್ವತಃ ಕರಡಿ ಆಟಗಾರರ ಸಂಘದ ಅಧ್ಯಕ್ಷರಾದ ರಾಜಹುಸೇನ ಒಳ್ಳೆಯ ಹಾಡುಗಾರರು. ಇವರ ಹೆಸರಲ್ಲಿರುವ ಕೆಂಪು, ಸಣ್ಣ, ದೊಡ್ಡ, ರೊಡ್ಡ, ಚಿಲುಮಿ, ಮೂಲಿಮನಿ, ಬಳಿಗಾರ, ಮುಂಗ್ಲಿ-ಇವು ಕನ್ನಡ ಶಬ್ದಗಳು. ಭಾರತದಲ್ಲಿ ಅರಬ್ ಇಸ್ಲಾಮಿನ ಚೌಕಟ್ಟಿನೊಳಗೆ ಸಲೀಸಾಗಿ ಹೋಗದ ಎಷ್ಟೋ ಮುಸ್ಲಿಂ ಸಮುದಾಯಗಳಿವೆ. ಅವರದೊಂದು ಸಂಕರ ಸಂಸ್ಕೃತಿ. ತಿರುಗಾಟಗಾರ ಸಮುದಾಯಗಳಿಗೆ ಕ್ಲಾಸಿಕಲ್ ಧರ್ಮದ ಲಕ್ಷಣಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಖಲಂದರರ ಕರಡಿಯಾಟ, ತಿರುಗಾಟ, ಜಾಂಬವಂತನ ಕಲ್ಪನೆ ಎಲ್ಲವೂ ಅವರನ್ನು ಜಾತ್ಯತೀತ ಪರಂಪರೆಯ ಮುಸ್ಲಿಮರನ್ನಾಗಿಸಿದೆ. ಆರಂಭವಾಗಿದೆ.

ಕರಡಿ ಆಟಗಾರರು ಸಹಜವಾಗಿ ಮಹಾ ತಿರುಗಾಟಗಾರರು. ಅವರು ಮಹಾರಾಷ್ಟ್ರ, ತಮಿಳುನಾಡು, ಆಂಧ್ರ ಹಾಗೂ ಕೇರಳದ ತನಕ ಹೋಗುತ್ತಾರೆ. ತಮಿಳುನಾಡು, ಆಂಧ್ರ, ಕರ್ನಾಟಕದಲ್ಲಿ ಕರಡಿಯನ್ನು ಜಾಂಬವಂತನೆಂದು ಹೆಚ್ಚು ಭಕ್ತಿ ತೋರುತ್ತಾರಂತೆ. ಸಾಮಾನ್ಯವಾಗಿ ಇಬ್ಬರು ಮೂವರು ಆಟಗಾರರು ಒಂದು ಊರಿಗೆ ಹೋಗಿ ಊರ ಹೊರಗೆ ಒಂದು ಗುಡಾರ ಹಾಕಿ ವಸತಿ ಮಾಡುತ್ತಾರೆ. ಗುಡಾರದಲ್ಲಿ ಹೆಂಡಿರು ಮಕ್ಕಳನ್ನು ಬಿಟ್ಟು ಊರಾಡಲು ಹೋಗುತ್ತಾರೆ. ಊರಿಂದೂರಿಗೆ ಕಾಲುನಡಿಗೆಯಲ್ಲಿ ಹೋಗುತ್ತಾರೆ. ಹೀಗಾಗಿ ಖಲಂದರರಿಗೆ ಕರ್ನಾಟಕದ ಭೂಪಟವು ಬೀದಿಗಲ್ಲಿಗಳ ಸಮೇತ ಪರಿಚಯವಿದೆ. ಅವರು ಹಲವು ಭಾಷೆಗಳನ್ನು ಆಡುತ್ತಾರೆ. ಪ್ರತಿದಿನ ಕಾಲು ಸುಸ್ತಾಗುವಷ್ಟು ತಿರುಗಾಟ ಮಾಡುತ್ತಾರೆ. ತೀರ ದೂರದ ಊರಾದರೆ ಲಾರಿಯಲ್ಲಿ ಕರಡಿ ಏರಿಸಿಕೊಂಡು ಹೋಗುತ್ತಾರೆ. ಎಳೆ ಕರಡಿಗೆ ಆಟ ಕಲಿಸಲು ತುಂಬಾ ಹಿಂಸೆ ಕೊಡಲಾಗುತ್ತದೆ. ಅದರ ಮುಸುಡಿಗೆ ಕಬ್ಬಿಣದ ನತ್ತನ್ನು ಹಾಕುವಾಗ ಹಿಂಸೆಯಾಗುತ್ತದೆ ಎಂಬುದು ಪರಿಸರವಾದಿಗಳ ಆರೋಪ.

ಕರಡಿಗೆ ರಾಜು ಅರ್ಜುನ ಬಾಬು ಎಂಬ ಹೆಸರುಗಳನ್ನು ಇಡುತ್ತಾರೆ. ಅವಕ್ಕೆ ಆಹಾರ ಹಾಲು ಮತ್ತು ಮುದ್ದೆ. ಅದು ಆಟಗಾರರ ಜತೆ ಗುಡಾರದಲ್ಲಿ ಮಲಗುತ್ತದೆ. ರಾತ್ರಿ ಮಕ್ಕಳಂತೆ ತನ್ನ ಕೈಕಾಲು ಇವರ ಮೇಲೆ ಹಾಕುತ್ತದೆಯಂತೆ. ಪ್ರತಿದಿನ ಒಬ್ಬ ಕರಡಿಯಾಟಗಾರ ೨೦೦ರಿಂದ ೫೦೦ ರವರೆಗೆ ದುಡಿಮೆ ಮಾಡುತ್ತಾನೆ. ಆಟದಿಂದ ಮತ್ತು ಮಕ್ಕಳನ್ನು ಕರಡಿ ಸವಾರಿ ಮಾಡಿಸುವುದರಿಂದ ಇನಾಮು ಸಿಗುತ್ತದೆ. ಅದರ ಕೂದಲನ್ನು ತಾಯಿತದಲ್ಲಿ ಕಟ್ಟಮಾರುವುದರಿಂದ ಸಿಗುವ ಆದಾಯ ಮುಖ್ಯವಾದುದು. ನಾನು ಮಂಗಳಾಪುರದಲ್ಲಿ ಉಳಿದುಕೊಂಡಿದ್ದ ಒಂದು ಮನೆ ಇದ್ದು ಇಟ್ಟಿಗೆ ಸೀಮೆಂಟು ಕಡಪ ಕಲ್ಲಿನ ಛಾವಣಿಯಿಂದ ಕೂಡಿದ್ದು ಇದ್ದುದರಲ್ಲಿ ವ್ಯವಸ್ಥಿತವಾಗಿತ್ತು. ಅದರ ಮಾಲೀಕರು ಭಾವುಕವಾಗಿ ಹೇಳಿದರು: "ಸಾರ್, ಈ ಮನೆಯನ್ನು ಕರಡಿಯ

ಕೂದಲಿನಿಂದ ಕಟ್ಟಿದ್ದು."

ಹೀಗೆ ಬದುಕುತ್ತಿದ್ದ ಜೀವನದ ಲಯ ಇದ್ದಕ್ಕಿದ್ದಂತೆ ಭಗ್ನಗೊಂಡಿತು. ಅವರಿಗೆ ಹೈದರಾಬಾದಿನ ನಿಜಾಮರು, ಮೈಸೂರು ಅರಸರು, ಬ್ರಿಟಿಶರು, ನಂತರ ಬಂದ ಸ್ವತಂತ್ರ ಸರ್ಕಾರಗಳು ಅಡ್ಡಿಯನ್ನೂ ಮಾಡಿರಲಿಲ್ಲ. ಆದರೆ ಈಚಿನ ದಿನಗಳಲ್ಲಿ ಆರಂಭವಾದ ಪರಿಸರವಾದಿಗಳೂ, ವನ್ಯಜೀವಿ ಸಂರಕ್ಷಕ ಕಾಯ್ದೆಯೂ ಕಷ್ಟಕೊಡಲು ಶುರು ಮಾಡಿದವು. ೧೯೮೦ರ ದಶಕದಲ್ಲಿ ಅರಣ್ಯ ಇಲಾಖೆ ಆಟಗಾರರಿಗೆ ಕರಡಿಯಾಡಿಸಲು ಲಿಖಿತ ಪರವಾನಗಿ ಕೊಟ್ಟಿತ್ತು. ಆದರೆ ೧೯೯೭ರಲ್ಲಿ ಅದು ರದ್ದಾಯಿತು. ಅದಾದ ಬಳಿಕವೂ ಅರಣ್ಯ ಇಲಾಖೆ ತಮಗೆ ಹೆಚ್ಚು ತೊಂದರೆ ಕೊಡಲಿಲ್ಲ ಎಂದು ಆಟಗಾರರು ಹೇಳುತ್ತಾರೆ. ಇದಕ್ಕೆ ಒಂದು ಕಾರಣ ಆಟಗಾರರು ಕರಡಿಯನ್ನು ಕಾಡಿನಿಂದ ಕರಡಿ ಹಿಡಿದು ತರುತ್ತಿರಲಿಲ್ಲ. ನಾಯಿ ಹಸು ಮುಂತಾದ ಸಾಕು ಪ್ರಾಣಿಗಳ ಹಾಗೆ ತಮ್ಮಲ್ಲಿರುವ ಕರಡಿಗಳ ಮೂಲಕವೇ ಅವುಗಳ ಸಂತಾನವನ್ನು ಬೆಳೆಸಿಕೊಳ್ಳುತ್ತ ಬಂದಿದ್ದು ಇರಬಹುದು. ಆದರೆ ಪ್ರಾಣಿ ರಕ್ಷಕ ಎನ್‌ಜಿಒಗಳ ಕಾರ್ಯಾಚರಣೆಯಿಂದ ಅವರು ಕಂಗಾಲಾದರು. ಮೇನಕಾಗಾಂಧಿ ತರಹದವರಿಂದ ಈ ಪ್ರಾಣಿಪ್ರಿಯರು ಹೆಚ್ಚಾದರು. ಮಲೆನಾಡಿನಲ್ಲಿ ಆಗಿರುವಂತೆ ಇಲ್ಲಿ ಕೂಡ ಪರಿಸರವಾದಿಗಳು ಜನರ ಕಷ್ಟವನ್ನು ಆಲೋಚಿಸುವುದಿಲ್ಲ. ಕೋಮುವಾದಿಗಳು ಅಮೆರಿಕದ ಸಾಮ್ರಾಜ್ಯಶಾಹಿ ಯುದ್ಧಗಳು ಜನರನು ಕೊಲ್ಲುವಾಗ ನಿರ್ಲಿಪ್ತವಾಗಿರುವ ಇವರು, ನಾಯಿ, ಮಂಗ, ಕತ್ತೆ ಕುದುರೆಗಳಿಗಾಗಿ ಕರುಣೆ ತೋರುವುದು ಒಂದು ವ್ಯಂಗ್ಯ. ಯೂರೋಪಿನ ಅನೇಕ ಪರಿಸರವಾದಿಗಳು ಹಾಗೆಯೇ. ಆಫ್ರಿಕದ ಸಿಂಹ, ಆನೆ, ಮೊಸಳೆಗಳಿಗಾಗಿ ಅವರು ಮಾಡುವ ಕಳವಳ, ಆಫ್ರಿಕನ್ನರ ದಾರುಣ ಬದುಕಿನ ಬಗ್ಗೆ ತೋರುವುದಿಲ್ಲ. ಖಲಂದರರು ಕೇಳುತ್ತಾರೆ: 'ಸಾರ್, ದೇವಸ್ಥಾನಗಳಲ್ಲಿ ಆನೆ ಸಾಕಲಾಗಿದೆ. ಅದನ್ನು ಇಟ್ಟುಕೊಂಡು ಮಠಗಳು ಊರೂರು ತಿರುಗಿ ಕಾಣಿಕೆ ಸಂಗ್ರಹಿಸುತ್ತವೆ. ಜೂಗಳಲ್ಲಿ ಪ್ರಾಣಿಗಳನ್ನು ಬಳಸುತ್ತಾರೆ. ಅದು ಪ್ರಾಣಿಹಿಂಸೆ ಅಲ್ಲವಾದರೆ ತಮ್ಮದು ಹೇಗೆ?'

ಖಲಂದರರ ಪ್ರಕಾರ ಪ್ರಾಣಿಪ್ರಿಯ ಪರಿಸರವಾದಿ ಎನ್‌ಜಿಓಗಳು ಅವರ ಮೊದಲ ಶತ್ರುಗಳು. ಅವು ಮೊದಲು ಕರಡಿಗಳ ಮಾಹಿತಿ ಸಂಗ್ರಹಿಸಿದವು. ಅವಕ್ಕೆ ಮೈಕ್ರೊಚಿಪ್ಸ್‌ಗಳನ್ನು ಅಳವಡಿಸಿದವು. ನಂತರ ಅವರಿಗೆ ಕೊಂಚ ಪರಿಹಾರ ಕೊಟ್ಟವು. ನಂತರ ಇವರ ಮೇಲೆ ಆಕ್ರಮಣ ಮಾಡಿ ಕರಡಿ ಹಿಡಿದು ಅರಣ್ಯ ಇಲಾಖೆಗೆ ಕೊಡಲು ಶುರುಮಾಡಿದವು. ಖಲಂದರರು ಹೇಳುವ ಪ್ರಕಾರ ಇವರು ಇದಕ್ಕಾಗಿ ದೊಡ್ಡದೇಶಗಳಿಂದ ಅಪಾರ ಹಣ ತರುತ್ತಾರೆ. ಅದು ತಮಗೆ ತಲುಪುತ್ತಿಲ್ಲ. ಈ ಪ್ರಾಣಿರಕ್ಷಕರಿಂದ ಮೊದಮೊದಲು ಅರಣ್ಯ ಇಲಾಖೆಗೆ ಕೊಂಚ ಕಷ್ಟವೇ ಆಯಿತು. ವನ್ಯಮೃಗ ಕಾಯಿದೆ ಪ್ರಕಾರ ಪ್ರಾಣಿಗಳನ್ನು ವಶಪಡಿಸಿಕೊಳ್ಳಬೇಕು. ಆದರೆ ಅವನ್ನು ಇಟ್ಟುಕೊಳ್ಳಲು ಪರ್ಯಾಯ ವ್ಯವಸ್ಥೆಯಾಗಿಲ್ಲ.

ಕಾಡಿಗೆ ಬಿಡೋಣವೆಂದರೆ ಮನುಷ್ಯರ ಸಂಗದಲ್ಲಿ ಬೆಳೆದ ಕರಡಿಗಳು ಕಾಡುಕರಡಿಗಳ ಜತೆ ಸೇರುವುದಿಲ್ಲ. ಕಾಡುಕರಡಿಗಳೂ ಇವನ್ನು ಸೇರಿಸಿಕೊಳ್ಳುವುದಿಲ್ಲ. ಮೃಗಾಲಯಗಳಲ್ಲಿ ಜಾಗವಿಲ್ಲ. ಒಮ್ಮೆ ಆಟಗಾರರಿಂದ ಸೀಜ್ ಮಾಡಿದ ಕರಡಿಗಳನ್ನು ಬನ್ನೇರುಘಟ್ಟದ ಅಭಯಾರಣ್ಯಕ್ಕೆ ಬಿಡಬೇಕೆಂದು ಕಳಿಸಲಾಯಿತು. ಅಲ್ಲಿ ಅವಕ್ಕೆ ವ್ಯವಸ್ಥೆಯಾಗಲಿಲ್ಲ. ನಂತರ ಕರಡಿಗಳನ್ನು ಶಿವಮೊಗ್ಗೆಯ ತ್ಯಾವರೆಕೊಪ್ಪಕ್ಕೆ ಒಯ್ಯಲಾಯಿತು. ಆದರೆ ಕರಡಿಗಳನ್ನು ಹಾಗೆಯೇ ಬಿಟ್ಟುಬರುವಂತಿಲ್ಲ. ಅವು ಸಾಕಿದವರ ಕೈಬಾಯಿ ನೋಡುತ್ತವೆ. ಅವರೇ ಆಹಾರ ಕೊಡಬೇಕು. ಹೀಗಾಗಿ ಕರಡಿ ಆಡಿಸುವವರನ್ನೂ ಮೃಗಾಲಯಗಳಲ್ಲಿ ಇಟ್ಟುಕೊಳ್ಳಲಾಯಿತು. ನಾನು ಮಂಗಳಾಪುರದಲ್ಲಿದ್ದ ದಿನ ಮೃಗಾಲಯದಲ್ಲಿದ್ದ ಕರಡಿಯಾಡಿಸುವ ಹುಡುಗರು ತಮಗೆ ಇಲ್ಲಿ ಕೇಳುವವರೇ ಇಲ್ಲವೆಂದೂ ಇಲ್ಲಿನ ಊಟ ಹಿಡಿಸುತ್ತಿಲ್ಲವೆಂದೂ, ತಮಗೆ ಊರಿಗೆ ಬರಲು ಮನಸ್ಸಾಗಿದೆಯೆಂದೂ ಆದರೆ ಅಧಿಕಾರಿಗಳು ಬರಲು ಕೊಡುತ್ತಿಲ್ಲವೆಂದೂ ಫೋನು ಮಾಡಿದ್ದರು. ನಾಳೆ ಹೋಗಿ ಡಿಎಫ್‌ಓಗೆ ಇದನ್ನು ಹೇಳಿ ಸರಿಪಡಿಸಬೇಕು ಎಂದು ಖಲಂದರರು ಹೇಳುತ್ತಿದ್ದರು. ಇದೆಲ್ಲ ವಿಚಿತ್ರ ರಗಳೆಗಿಟ್ಟುಕೊಂಡಿದೆ.

"ಮಾನ್ಯರೆ, ಕರ್ನಾಟಕ ರಾಜ್ಯದಲ್ಲಿ ಕರಡಿಗಳ ಆಡಿಸುವವರನ್ನು ಅನೇಕ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಯವರು ಕಿರುಕುಳ, ದೌರ್ಜನ್ಯ ಮಾಡುತ್ತ ಕರಡಿಗಳನ್ನು ಕಿತ್ತಿಕೊಳ್ಳುತ್ತ ನಮ್ಮ ಮತ್ತು ನಮ್ಮ ಹೆಂಡತಿ ಮಕ್ಕಳ ಭವಿಷ್ಯವನ್ನು ಹಾಳುಮಾಡುತ್ತಿವೆ. ಮಾನವ ದಯವಿಲ್ಲದ ಅಮಾನವರು ಪ್ರಾಣಿ ದಯಾಸಂಘ ಅಂತ ಹೇಳಿಕೊಂಡು ಬರುವ ಸ್ವಯಂಸೇವಾ ಸಂಸ್ಥೆಯವರು ಕರಡಿ ಆಡಿಸುವ ಮಾನವರ ಹೊಟ್ಟೆ ಮೇಲೆ ಕಲ್ಲುಬಂಡೆ ಎಳೆಯುತ್ತಿದ್ದಾರೆ. ಮಾನವರ ಬಗ್ಗೆ ಸರಿಯಾದ ಜ್ಞಾನವಿಲ್ಲದ ವ್ಯಕ್ತಿಗಳು ಪ್ರಾಣಿಗಳ ಬಗ್ಗೆ ಸಂಸ್ಥೆಗಳನ್ನು ಕಟ್ಟಿಕೊಂಡು ಪ್ರಾಣಿಹಿಂಸೆಯ ನೆಪವೊಡ್ಡಿ ಮಾನವರಿಗೆ ಹಿಂಸೆ ನೀಡುವುದಲ್ಲದೇ ಅವರ ಕುಟುಂಬಗಳ ಕಣ್ಣೀರು ಸುರಿಸುತ್ತ ಆತ್ಯಹತ್ಯೆ ದಾರಿ ಹಿಡಿಯಬೇಕಾಗಿದೆ.

ಕರಡಿ ಆಟಗಾರರು ಮೊದಮೊದಲು ಎನ್‌ಜಿಒಗಳಿಂದ ಪೆಟ್ಟು ತಿಂದರು. ಕೋರ್ಟು, ಅರಣ್ಯ ಇಲಾಖೆಗೆ ಎಡತಾಕಿದರು. ಕೊನೆಗೆ ಸಾಕಾಗಿ ಕರಡಿ ಆಟಗಾರರ ಸಂಘಟನೆ ಮಾಡಿಕೊಂಡರು. ಮಂಗಳಾಪುರದ ಕರಡಿ ಆಟಗಾರರಿಗೆ ಐಟಕ್(ಸಿಪಿಐ) ಸಂಘಟನೆ ಬೆಂಬಲಕ್ಕೆ ನಿಂತಿದೆ. ಅವರು ಎರಡು ವರ್ಷಗಳಿಂದ ನಿರಂತರ ಸಂಘರ್ಷ ಮಾಡುತ್ತಿದ್ದಾರೆ. ಮೇನಕಾ ಗಾಂಧಿಗೆ ಫ್ಯಾಕ್ಸ್ ಕಳಿಸಿದ್ದಾರೆ. ದೆಹಲಿಗೆ ಹೋಗಿ ಧರಣಿ ಮಾಡಿದ್ದಾರೆ. ಗ್ರಾಮವಾಸ್ತವ್ಯಕ್ಕೆ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಬಂದಾಗ ಮನವಿ ಅರ್ಪಿಸಿದ್ದಾರೆ. ಅರಣ್ಯಮಂತ್ರಿ ಚೆನ್ನಿಗಪ್ಪ ಅವರನ್ನು ಕಂಡು ಮನವಿ ಅರ್ಪಿಸಿದ್ದಾರೆ. ಅಹೋರಾತ್ರಿ ಧರಣಿ ಮಾಡಿದ್ದಾರೆ. ಅವರಿಗೆ ತಾವು ಕರಡಿಯ ವಿರೋಧಿಗಳಲ್ಲ, ಅದನ್ನು ಮಗುವಿನಂತೆ ಸಾಕಿದ್ದೇವೆ, ತಮ್ಮ ಆಟ ಪರಂಪರಾಗತವಾಗಿ ಬಂದದ್ದು ಎಂದು ಸಾಬೀತು ಪಡಿಸುವುದು ಕಷ್ಟದ ಕೆಲಸವಾಗಿದೆ. ಸಾಹಿತ್ಯದ ವಿದ್ಯಾರ್ಥಿಯಾದ ನನಗೆ ವಿಶೇಷ ಅನಿಸಿದ್ದು ಅವರು ತಮ್ಮ ಕೇಸನ್ನು ಸಾಬೀತು ಪಡಿಸಲು ಬೇಂದ್ರೆಯವರ ಪದ್ಯವನ್ನು ಬಳಸುವುದು. ಅವರು ಸಲ್ಲಿಸಿರುವ ಒಂದು ಮನವಿ ಪತ್ರ ಹೀಗಿದೆ:

"ಮಾನ್ಯರೆ, ಕರ್ನಾಟಕ ರಾಜ್ಯದಲ್ಲಿ ಕರಡಿಗಳ ಆಡಿಸುವವರನ್ನು ಅನೇಕ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಯವರು ಕಿರುಕುಳ, ದೌರ್ಜನ್ಯ ಮಾಡುತ್ತ ಕರಡಿಗಳನ್ನು ಕಿತ್ತುಕೊಳ್ಳುತ್ತ ನಮ್ಮ ಮತ್ತು ನಮ್ಮ ಹೆಂಡತಿ ಮಕ್ಕಳ ಭವಿಷ್ಯ ವನ್ನು ಹಾಳುಮಾಡುತ್ತಿವೆ. ಮಾನವ ದಯವಿಲ್ಲದ ಅಮಾನವರು ಪ್ರಾಣಿ ದಯಾಸಂಘ ಅಂತ ಹೇಳಿಕೊಂಡು ಬರುವ ಸ್ವಯಂಸೇವಾ ಸಂಸ್ಥೆಯವರು ಕರಡಿ ಆಡಿಸುವ ಮಾನವರ ಹೊಟ್ಟೆ ಮೇಲೆ ಕಲ್ಲುಬಂಡೆ ಎಳೆಯುತ್ತಿದ್ದಾರೆ. ಮಾನವರ ಬಗ್ಗೆ ಸರಿಯಾದ ಜ್ಞಾನವಿಲ್ಲದ ವ್ಯಕ್ತಿಗಳು ಪ್ರಾಣಿಗಳ ಬಗ್ಗೆ ಸಂಸ್ಥೆಗಳನ್ನು ಕಟ್ಟಿಕೊಂಡು ಪ್ರಾಣಿಹಿಂಸೆಯ ನೆಪವೊಡ್ಡಿ ಮಾನವರಿಗೆ ಹಿಂಸೆ ನೀಡುವುದಲ್ಲದೇ ಅವರ ಕುಟುಂಬಗಳ ಕಣ್ಣೀರು ಸುರಿಸುತ್ತ ಆತ್ಮಹತ್ಯೆ ದಾರಿ ಹಿಡಿಯಬೇಕಾಗಿದೆ. ಜನರ ಮಧ್ಯ ಮನೋರಂಜನೆ ನೀಡುತ್ತಿದ್ದಾಗ ಕೈಯಲ್ಲಿಯ ಕರಡಿ ಕಿತ್ತುಕೊಂಡಿದ್ದರಿಂದ ಯಾವ ವೃತ್ತಿಯೂ ಬಲ್ಲದ ಅವಿದ್ಯಾವಂತ ಜನರು ಒಂದು ಹೊತ್ತಿನ ಊಟಕ್ಕೆ ಗತಿ ಇಲ್ಲದೇ ಪರದಾಡುತ್ತಾ ಸರ್ಕಾರಿ ಅಧಿಕಾರಿಗಳಿಗೆ ಎಷ್ಟು ಬಾರಿ ಅಲೆದರೂ ಪ್ರಯೋಜನವಾಗಿಲ್ಲ.

ಕರಡಿ ಆಟ ಆಡಿಸುವವರ ಮೇಲೆ ಸ್ವಯಂಸೇವಾ ಸಂಸ್ಥೆಗಳ ದಾಳಿ ನಿಲ್ಲುತ್ತಿಲ್ಲ. ಕರಡಿ ಆಟಗಾರರ ಕುಟುಂಬಗಳು ಬೀದಿಪಾಲು ಆಗುತ್ತಿವೆ. ಅನ್ನಕ್ಕೆ ಗತಿ ಇಲ್ಲದೇ ಕುಟುಂಬಗಳು ಆತ್ಮಹತ್ಯೆ ಮಾಡಿಕೊಳ್ಳುವ ಮುಂಚೆ ಸರ್ಕಾರ ಎಚ್ಚರಗೊಂಡು ಮಾನವರ ಬಗ್ಗೆ ದಯವಿಲ್ಲದ ಸ್ವಯಂ ಸೇವಾ ಸಂಸ್ಥೆಗಳಿಗೆ ನಿಯಂತ್ರಣಕ್ಕೆ ತರಬೇಕು. ನಾವು ಕರಡಿ ಬಿಡಲು ಸಿದ್ಧ ಪುನರ್ವಸತಿ ಕಲ್ಪಿಸಿ. ನಾವು ನಮ್ಮ ಕರಡಿಗಳನ್ನು ಸರ್ಕಾರಕ್ಕೆ ಮಾತ್ರ ನೀಡಲು ಸಿದ್ಧ, ಆದರೆ ಯಾವುದೇ ಸ್ವಯಂಸೇವಾ ಸಂಸ್ಥೆಗಳಿಗೆ ಒಪ್ಪಿಸಲು ಸಿದ್ಧರಿಲ್ಲ. ಸರ್ಕಾರ ನಮಗೆ ಪುನರ್ವಸತಿ ಕಲ್ಪಿಸಿ ಗೌರವ ಪೂರ್ವಕವಾಗಿ ಒಂದು ಕಾರ್ಯಕ್ರಮ ಹಮ್ಮಿಕೊಂಡು ಕರಡಿಗಳನ್ನು ಸರ್ಕಾರಕ್ಕೆ ಒಪ್ಪಿಸುತ್ತೇವೆ. ಯಾವುದೇ ಸಾಲ ಭ್ಯಗಳಿದ್ದರೂ ಅದು ಸರ್ಕಾರದ ಮೂಲಕವೇ ನಮಗೆ ಬೇಕು. ತಾವು ತೀವ್ರದಲ್ಲಿ ನಮ್ಮ ಸಮಸ್ಯೆ ಅರ್ಥ ಮಾಡಿಕೊಂಡು ಆತ್ಮಹತ್ಯೆಗೆ ಅವಕಾಶ ಕೊಡದೆ ಹೊಸ ಬದುಕನ್ನು ಒದಗಿಸುತ್ತೀರೆಂದು ನಂಬಿದ್ದೇವೆ.

ಜನಪರ ಆಟವಾಗಿರುವ ಕರಡಿ ಆಟ ನಮ್ಮ ಬದುಕಿ ಅವಿಭಾಜ್ಯ ಅಂಗವಾಗಿದೆ. ವಂಶ ಪರಂಪರೆಯಾಗಿ ನೂರಾರು ವರ್ಷಗಳಿಂದ ನಮ್ಮ ಹಿರಿಯರು ಉದ್ಯೋಗವಾಗಿರಿಸಿಕೊಂಡಿದ್ದ ಕರಡಿ ಆಟವನ್ನು ನಾವುಗಳು ಮುಂದುವರೆಸಿಕೊಂಡು ಬಂದಿದ್ದೇವೆ. ಈ ಉದ್ಯೋಗದ ಮೇಲೆ ರಾಜ್ಯದ ಸಾವಿರಾರು ಕುಟುಂಬಗಳು ಅವಲಂಬಿತವಾಗಿದ್ದ ಈ ಉದ್ಯೋಗ ಬಿಟ್ಟರೆ ನಮ್ಮ ಕುಟುಂಬಗಳಿಗೆ ಅನ್ಯಮಾರ್ಗವೇ ಇಲ್ಲ. ಬದುಕು ಬೇರೆ ದಾರಿ ಗೊತ್ತಿರದ ನಮ್ಮಗಳ ಜೀವನ ಆಧಾರಿತ ಉದ್ಯೋಗಗಳನ್ನು ಸರ್ಕಾರ ಕಾನೂನು ವ್ಯಾಪ್ತಿಯಲ್ಲಿ ತಡೆದಲ್ಲಿ ನಮ್ಮ ಬದುಕು ದುಸ್ತರವಾಗುತ್ತದೆ.

ನಮ್ಮ ಬೇಡಿಕೆಗಳಿವು: ೧.ಕುಟುಂಬವೊಂದಕ್ಕೆ ವಾಸ

ಸ್ಥಳಕ್ಕೆ ಹತ್ತಿರವಿರುವ ಉಳಿಮೆಗೆ ಯೋಗ್ಯವಾದ ಕನಿಷ್ಠ ೫ ಎಕರೆ ಭೂಮಿ ಒದಗಿಸಬೇಕು. ೨.ಸರ್ಕಾರ ಕರಡಿಗಳನ್ನು ತನ್ನ ವಶಕ್ಕೆ ತೆಗೆದುಕೊಂಡಲ್ಲಿ ಒಂದು ಲಕ್ಷ ರೂಪಾಯಿಗಳವರೆಗೆ ಪರಿಹಾರ ಧನ ನೀಡಬೇಕು. ೩.ಕರಡಿ ಆಟಗಾರರ ಮಕ್ಕಳಿಗೆ ಉಚಿತವಾಗಿ ಪ್ರಾಥಮಿಕ ಹಂತದ ಶಿಕ್ಷಣ ಮತ್ತು ಇತರೆ ಸೌಲಭ್ಯಗಳನ್ನು ಒಗಿಸಬೇಕು. ೪. ಅರ್ಹ ಫಲಾನುಭವಿಗಳಿಗೆ ಅಂತ್ಯೋದಯ ಪಡಿತರ ಚೀಟಿ ಪೂರೈಸಬೇಕು."

ಈ ಮನವಿ ಪತ್ರದ ಬೇಡಿಕೆಗಳು ಸರಳವಾಗಿವೆ– ಭೂಮಿ, ಶಿಕ್ಷಣ, ಪಡಿತರ. ಬಹುಶಃ ಎಲ್ಲ ಖಲಂದರ್ ಕುಟುಂಬಗಳಿಗೆ ತಲಾ ೫ ಎಕರೆ ಭೂಮಿ ನೀಡಿದರೆ ಒಟ್ಟು ೧೦೦೦೦ ಎಕರೆ ಸಾಕಾಗುವುದು. ಎಲ್ಲರಿಗೂ ಪರಿಹಾರ ನೀಡಿದರೆ ಮೂರು ಎರಡು ಮೂರು ಕೋಟಿ ಆಗಬಹುದು. ನಮ್ಮ ರಾಜಕಾರಣಿಗಳು ಉದ್ಯಮಿಗಳು ಸರ್ಕಾರಿ ಅಧಿಕಾರಿಗಳು ರಾಶಿ ಹಾಕಿಕೊಂಡಿರುವ ಸಂಪತ್ತಿನಿಂದ ಒಂದು ಚಿಟಿಕೆಯಿದು. ಆದರೆ ಇದು ಸುಲಭವಾಗಿ ಸಾಧ್ಯವಾಗುವುದಿಲ್ಲ. ಮಾನವೀಯ ಕಾಳಜಿಯ ಪತ್ರಕರ್ತ ಪಿ.ಸಾಯಿನಾಥ್ ಹೇಳುವಂತೆ, ಎಸ್‌ಇಜೆಡ್‌ಗೆ ಬೇಕಾದ ಭೂಮಿಯನ್ನು ರೈತರಿಂದ ಕೊಡಿಸಲು ಸರ್ಕಾರಗಳಿಗೆ ೬ ತಿಂಗಳು ಸಾಕು. ಬೇರೆಬೇರೆ ಯೋಜನೆಗಳಿಂದ ನಿರ್ವಸಿತರಾಗಿರುವವರಿಗೆ ಪರಿಹಾರ ಕೊಡಲು ೬೦ ವರ್ಷ ಬೇಕಾಗುತ್ತದೆ.

ನಮ್ಮ ಸುತ್ತಮುತ್ತ ಜರುಗುತ್ತಿರುವ ವಿದ್ಯಮಾನಗಳನ್ನು ನೋಡಿದರೆ ಒಂದು ವೈರುಧ್ಯ ಎದ್ದು ಕಾಣುತ್ತದೆ. ಲೋಕಾಯುಕ್ತವು ಅಧಿಕಾರಿಗಳು ಅಕ್ರಮವಾಗಿ ರಾಶಿಹಾಕಿಕೊಂಡಿರುವ ಸಂಪತ್ತನ್ನು ವಶಪಡಿಸಿಕೊಳ್ಳುತ್ತಿದೆ; ಮಂತ್ರಿಗಳು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು ರಿಯಲ್ ಎಸ್ಟೇಟ್ ದಂಧೆ ಮಾಡುತ್ತಿರುವ ಬಗ್ಗೆ ಸದನ ಸಮಿತಿ ವರದಿ ಮಾಡುತ್ತಿದೆ; ರಾಜಕಾರಣಿಗಳು ಅಕ್ರಮ ಗಣಿಗಾರಿಕೆಯ ಮೂಲಕ ಕೋಟಿಕೋಟಿ ಹಣವನ್ನು ದೋಚುತ್ತಿರುವುದನ್ನು ಟಿವಿಗಳು ತೋರಿಸುತ್ತಿವೆ. ಸ್ವತಃ ರಾಜಕಾರಣಿಗಳೇ ಘೋಷಿಸಿಕೊಂಡಿರುವ ಆಸ್ತಿವಿವರ ನಂಬುವುದಾದರೂ ಅದು ನೂರಾರು ಕೋಟಿಗಳ ಲೆಕ್ಕದಲ್ಲಿದೆ. ಇನ್ಫೋಸಿಸ್, ಬಯೋಕಾನ್, ವಿಪ್ರೊ ಕಂಪನಿಗಳು ತಮ್ಮ ಲಾಭವನ್ನು ಮೂರು ತಿಂಗಳಿಗೊಮ್ಮೆ ಘೋಷಿಸಿಕೊಳ್ಳುತ್ತಿವೆ. ಜನರ ತೆರಿಗೆಯ ಹಣದಿಂದ ಮಂತ್ರಿಗಳು ತಂತಮ್ಮ ಜಾತಿಯ ಪಕ್ಷಕ್ಕೆ ಬೆಂಬಲವಾಗಿರುವ ಮಠಗಳಿಗೆ ಹಣವನ್ನು ಹರಿಸುತ್ತಿದ್ದಾರೆ. ರಾಮಚಂದ್ರಾಪುರ, ಆದಿಚುಂಚನಗಿರಿ ಮಠಗಳು ಭೂಒತ್ತುವರಿ ಮಾಡಿಕೊಂಡ ವರದಿ ಬಂದಾಗ, ಅವುಗಳ ರಕ್ಷಣೆಗೆ ಸ್ವತಃ ಮಂತ್ರಿಗಳೇ ಹೋಗಿ ಕ್ಷಮಾಪಣೆ ಕೇಳುವಂತೆ ಸಮಾಧಾನ ಮಾಡಿಬಂದರು. ಆದರೆ ಇದೇ ಹೊತ್ತಲ್ಲಿ ಕರ್ನಾಟಕದ ರೈತರು ತಮ್ಮ ಭೂಮಿ ಕಿತ್ತುಕೊಳ್ಳಬೇಡಿ ಎನ್ನುತ್ತಿದ್ದಾರೆ.

ಅಲೆಮಾರಿಗಳು ನಮಗೆ ಕೊಂಚ ಭೂಮಿ ಕೊಡಿ ಎಂದು ಬೇಡುತ್ತಿದ್ದಾರೆ. ಮಾಡಿದ ಸಾಲ ತೀರಿಸಲಾಗದೆ ನೇಕಾರರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಮಲೆನಾಡಿನಲ್ಲಿ ಆದಿವಾಸಿಗಳು ಎಲ್ಲ ಬಗೆಯ ಧರಣಿ ಮಾಡಿ ದಣಿದು ಅರ್ಜಿಸಿ ಸಾಕಾಗಿ ಕೊನೆಗೆ ಕೋವಿ ಹಿಡಿಯುತ್ತಿದ್ದಾರೆ. ಈ ವಿದ್ಯಮಾನಗಳು ಏನು ಹೇಳುತ್ತಿವೆ? ಜನರೇ ಆರಿಸಿದ ಪ್ರಭುತ್ವಗಳು ಜನರ ನೋವಿಗೆ ಮಿಡಿಯುವಲ್ಲಿ ಪ್ರಾಮಾಣಿಕವಾಗಿಲ್ಲ ಎನ್ನುವುದನ್ನು ತಾನೇ? ಅವು ಬೇಜವಾಬ್ದಾರಿಯಾಗಿರುವುದರ ಬಗ್ಗೆ ನಾಗರಿಕ ಸಮಾಜ ನಿರ್ಲಿಪ್ತವಾಗಿದೆ ಎಂದು ತಾನೇ? ರೋಗಗ್ರಸ್ತ ಸಮಾಜದ ಲಕ್ಷಣ ಎಂದರೆ ಇದುವೇ.

ಬ್ರಿಟಿಷರು ತಮ್ಮ ಫ್ಯಾಕ್ಟರಿಗಳಲ್ಲಿ ತಯಾರಾದ ಬಟ್ಟೆಯನ್ನು ತಂದು ಸುರಿದಾಗ ಇದ್ದಕ್ಕಿದ್ದಂತೆ ಅತಂತ್ರರಾದ ಭಾರತದ ನೇಕಾರರು ಹೇಗೆ ತಮ್ಮ ಬದುಕನ್ನು ಸಂಭಾಳಿಸಿದರು? ಡ್ಯಾಮು ಕಾರಿಡಾರ್ ರಸ್ತೆ, ಎಸ್‌ಇಜೆಡ್‌ಗಳಿಗೆ ತಮ್ಮ ಊರುಹೊಲ ಮನೆಗಳನ್ನು ಬಿಟ್ಟುಕೊಟ್ಟವರು ಪರಿಹಾರ ಪಡೆದು ಏನಾಗುತ್ತಾರೆ? ತಮ್ಮ ಕಾಡಿನಿಂದ ಎತ್ತಂಗಡಿ ಆಗುವ ಆದಿವಾಸಿಗಳು ಏನಾಗುತ್ತಾರೆ? ಇದನ್ನೆಲ್ಲ ಲೆಕ್ಕವಿಡಲು ಯಾರೂ ಸಿದ್ಧರಿಲ್ಲ. ಅದೇ ರೀತಿಯಲ್ಲಿ ಭಾರತದ ಅಲೆಮಾರಿ ಸಮುದಾಯಗಳಾದ ಡೊಂಬರು, ಹಾವು ಕರಡಿ ಆಡಿಸುವವರು, ಹಕ್ಕಿಪಿಕ್ಕಿಗಳು, ವೇಷಗಾರರು, ಗೋಸಾವಿಗಳು ತಮ್ಮ ಪಾರಂಪರಿಕ ಕಸುಬನ್ನು ಹೊಸಕಾಯಿದೆಗೆ ಬಲಿಯಾಗಿ ಕಳೆದುಕೊಂಡ ಬಳಿಕ ಏನಾಗುತ್ತಾರೆ? ಇದು ತಲೆಕೆಡಿಸಿಕೊಳ್ಳ ಬೇಕಾದ ಪ್ರಶ್ನೆಯೇ ಆಗಿಲ್ಲ. ಹಾಗೆಂದು ಖಲಂದರರು ಕರಡಿ ಆಡಿಸಿಕೊಂಡೇ ಬದುಕಬೇಕೆಂದು ಬಯಸುವುದು ಕ್ರೌರ್ಯವಾಗುತ್ತದೆ.

ಅವರೂ ಕೂಡ ಇದನ್ನು ಬಯಸುತ್ತಿಲ್ಲ. ಕರಡಿ ಬಿಡಲು ಸಿದ್ಧ. ಆದರೆ ಜಮೀನು ಕೊಡಿ ಎಂದು ಕೇಳುತ್ತಿದ್ದಾರೆ. ಅದು ಸಿಗುವ ತನಕ ಉಣ್ಣುವ ತಟ್ಟೆಯನ್ನು ಎಳೆದುಕೊಂಡಂತೆ ತಮ್ಮ ಕರಡಿಗಳನ್ನು ಕಿತ್ತುಕೊಳ್ಳಬೇಡಿ ಎನ್ನುತ್ತಿದ್ದಾರೆ. ಬಸವಣ್ಣನ ವಚನದಲ್ಲಿ ಜಂಗಮ ಸ್ಥಿತಿಯು ಇತ್ಯಾತ್ಮಕ. ಸ್ಥಾವರಸ್ಥಿತಿ ನೇತ್ಯಾತ್ಮಕ. ಆದರೆ ನಾಡಿನ ಅಲೆಮಾರಿಗಳಿಗೆ ತಿರುಗಾಟದ ಜಂಗಮಸ್ಥಿತಿ ಸಾಕಾಗಿದೆ.

ನಮ್ಮ ಸುತ್ತಮುತ್ತ ಜರುಗುತ್ತಿರುವ ವಿದ್ಯಮಾನಗಳನ್ನು ನೋಡಿದರೆ ಒಂದು ವೈರುಧ್ಯ ಎದ್ದು ಕಾಣುತ್ತದೆ. ಲೋಕಾಯುಕ್ತವು ಅಧಿಕಾರಿಗಳು ಅಕ್ರಮವಾಗಿ ರಾಶಿ ಹಾಕಿ ಕೊಂಡಿರುವ ಸಂಪತ್ತನ್ನು ವಶಪಡಿಸಿಕೊಳ್ಳುತ್ತಿದೆ; ಮಂತ್ರಿಗಳು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು ರಿಯಲ್ ಎಸ್ಟೇಟ್ ದಂಧೆ ಮಾಡುತ್ತಿರುವ ಬಗ್ಗೆ ಸದನ ಸಮಿತಿ ವರದಿ ಮಾಡುತ್ತಿದೆ; ರಾಜಕಾರಣಿಗಳು ಅಕ್ರಮ ಗಣಿಗಾರಿಕೆಯ ಮೂಲಕ ಕೋಟಿ ಕೋಟಿ ಹಣ ವನ್ನು ದೋಚುತ್ತಿರುವುದನ್ನು ಟಿವಿಗಳು ತೋರಿಸುತ್ತಿವೆ. ಸ್ವತಃ ರಾಜಕಾರಣಿಗಳೇ ಘೋಷಿಸಿಕೊಂಡಿರುವ ಆಸ್ತಿವಿವರ ನಂಬುವುದಾದರೂ ಅದು ನೂರಾರು ಕೋಟಿಗಳ ಲೆಕ್ಕದಲ್ಲಿದೆ. ಇನ್ಫೋಸಿಸ್, ಬಯೋಕಾನ್, ವಿಪ್ರೊ ಕಂಪನಿಗಳು ತಮ್ಮ ಲಾಭವನ್ನು ಮೂರು ತಿಂಗಳಿಗೊಮ್ಮೆ ಘೋಷಿಸಿಕೊಳ್ಳುತ್ತಿವೆ.

ಒಂದೆಡೆ ನೆಲೆನಿಂತು ಭಾರತದ ಗೌರವಾನ್ವಿತ ನಾಗರಿಕರಾಗಬೇಕು ಅನಿಸಿದೆ. ತಮ್ಮ ಅಲೆಮಾರಿತನದಿಂದ ಅವರಿಗೆ ತಮ್ಮ ಮಕ್ಕಳನ್ನು ಓದಿಸಲು ಸಾಧ್ಯವಾಗಿಲ್ಲ, ನೌಕರಿ ಕೊಡಿಸಲು ಸಾಧ್ಯವಾಗಿಲ್ಲ. ಗೌರವಯುತವಾಗಿ ಬದುಕಲು ಸಾಧ್ಯವಾಗಿಲ್ಲ ಎಂದು ಗೊತ್ತಾಗಿದೆ. ಶಿವಮೊಗ್ಗೆಯಲ್ಲಿ ಹಕ್ಕಿಪಿಕ್ಕಿಗಳು ಹಾಗೆ ನೆಲೆನಿಲ್ಲಲು ಬಯಸಿದರು. ಅದಕ್ಕಾಗಿ ಅವರು ಬಗೈರ್‌ಹುಕುಂ ಜಮೀನು ಸಾಗುವಳಿ ಮಾಡಿದರು. ರೆವಿನ್ಯೂ ಇಲಾಖೆಗೂ ಅವರಿಗೂ ಕದನವೇ ನಡೆಯಿತು. ಕದನದಲ್ಲಿ ಹಕ್ಕಿಪಿಕ್ಕಿಯವರು ಗೆದ್ದರು. ಅಲೆಮಾರಿಗಳು ನೆಲೆನಿಂತರೆ ಎಷ್ಟು ಸುಖವಾಗಿ ಬದುಕಬಲ್ಲರು ಎಂಬುದಕ್ಕೆ ಕೂಡ್ಲಿಗಿ ತಾಲೂಕಿನ ಬಿಷ್ಟುಹಳ್ಳಿಯೇ ಸಾಕ್ಷಿ. ಕಿನ್ನರಿ ಹಿಡಿದು ಊರೂರು ಸುತ್ತುತ್ತಿದ್ದ ಜೋಗಿಗಳು ಒಮ್ಮೆ ನೆಲೆ ನಿಲ್ಲಲು ನಿರ್ಧರಿಸಿದರು. ಅಲ್ಲೀಗ ಕಾಲೇಜು ಹುಡುಗರಿದ್ದಾರೆ. ಸರ್ಕಾರಿ ನೌಕರರಿದ್ದಾರೆ. ರೈತರಿದ್ದಾರೆ. ಈಚೆಗೆ ಮರಿಯಮ್ಮನಹಳ್ಳಿಯ ಬಳಿ ಗೋಸಾವಿಗಳೂ ಹಾಗೆ ನೆಲೆನಿಂತರು. ಹಂಪಿಯ ಬಳಿ ಹಗಲುವೇಷಗಾರರು ಹಾಗೆ ನೆಲೆನಿಂತರು. ಈಗ ಮಂಗಳಾಪುರ ಮತ್ತು ಹಂಪಿನಾಳದ ಖಲಂದರರ ಸರದಿ ಬಂದಿದೆ.

ನನಗೆ ತಿಳಿದಂತೆ ಖಲಂದರರಲ್ಲಿ ಒಬ್ಬನೇ ಒಬ್ಬ ಪದವೀಧರನಿಲ್ಲ. ಒಬ್ಬನೇ ಒಬ್ಬ ಸರ್ಕಾರಿ ನೌಕರನಿಲ್ಲ. ಒಬ್ಬರಿಗೂ ಭೂಮಿಯಿಲ್ಲ. ಅವರಿಗೆ ಅಲೆಮಾರಿತನ ಸಾಕಾಗಿ ಒಂದೆಡೆ ನೆಲೆನಿಲ್ಲಬೇಕೆನಿಸಿದೆ. ಅದಕ್ಕಾಗಿ ಅವರು ಭೂಮಿ ಕೇಳುತಿದ್ದಾರೆ. ಹಣಸಿಕ್ಕರೆ ಕುಡಿದು ತಿಂದು ಹಾಳುಮಾಡುತ್ತೇವೆ ಎನ್ನುತ್ತಿದ್ದಾರೆ. ಸರ್ಕಾರ ಅವರ ಬೇಡಿಕೆಗೆ ಸ್ಪಂದಿಸಬೇಕು. ಹಿಂದುಳಿದ ಸಮುದಾಯಗಳ ಕಷ್ಟಗಳನ್ನು ಅರಿತಿರುವ ಅವಕ್ಕೆ ಸ್ಪಂದಿಸಬಲ್ಲ ಡಾ. ದ್ವಾರಕನಾಥ ಅವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದಾರೆ. ಅವರು ಈ ಅಲೆಮಾರಿ ಜನರ ಗಣತಿ ಮತ್ತು ಅಧ್ಯಯನ ಮಾಡಿಸಿ, ಅವರನ್ನು ಸೂಕ್ತ ಪ್ರವರ್ಗ ಗಳಲ್ಲಿ ಸೇರಿಸಲು ಕ್ರಮ ಕೈಗೊಳ್ಳಬಹುದು.

ನಾನು ಒಬ್ಬ ಸಾಂಸ್ಕೃತಿಕ ಅಧ್ಯಯನಕಾರನಾಗಿ ಮಂಗಳಾಪುರಕ್ಕೆ ಹೋದಾಗ ಇವನಿಂದ ನಮಗೆ ಏನಾದರೂ ಪ್ರಯೋಜನ ಅಥವಾ ಕೆಡುಕು ಆಗುವುದೇ ಎಂದು ಕುತೂಹಲಗೊಂಡು ಖಲಂದರರ ಕುಟುಂಬದ ಜನರು ನನ್ನ ಸುತ್ತ ನೆರೆದರು. ನನಗೆ ಚಹ ತರಿಸಿಕೊಟ್ಟರು. ನಾಗರಿಕ ಸಮಾಜದ ಪ್ರತಿನಿಧಿಯಂತಿರುವ ನಾನು ವಿಚಿತ್ರವಾದ ಲಜ್ಜೆ ಮತ್ತು ಅಸಹಾಯಕತೆಯಿಂದ ಮುಜುಗರ ಪಡುತ್ತಿದ್ದೆ. ನನ್ನ ಅಧ್ಯಯನದ ಪರಿಮಿತಿಯನ್ನು ಮತ್ತಷ್ಟು ಬಹಿರಂಗಗೊಳಿಸುವಂತೆ, ಈ ಲೇಖನ ಬರೆಯುವಾಗ ಒಂದು ಫೋನು ಬಂತು. "ಸಾರ್, ಮರಿಯಮ್ಮನಹಳ್ಳಿಯಲ್ಲಿ ನಮ್ಮ ಕರಡಿಗಳನ್ನು ಹಿಡಿದಿದ್ದಾರೆ. ದಯವಿಟ್ಟು ಬರ್ತೀರಾ?". ನಾನು ಹೇಳಿದೆ. "ಈಗ ನಾನು ವಿಶ್ವವಿದ್ಯಾಲಯದಲ್ಲಿದ್ದೇನೆ. ನನಗೆ ನಿಮ್ಮ ಜತೆ ಬರುವುದು ಆಗುತ್ತಿಲ್ಲ. ನೀವು ಹೋಗಿಬನ್ನಿ. ಬಂದ ನಂತರ ನನಗೆ ವರದಿ ಕೊಡಿ"; ಅವರು ವರದಿ ಮಾಡಲಿಲ್ಲ. ಬೆಳಿಗ್ಗೆ ಎದ್ದಾಗ ಪ್ರಜಾವಾಣಿಯಲ್ಲಿ ಅದರ ವರದಿ ತಾನಾಗಿಯೇ ಬಂದಿತ್ತು. ಖಲಂದರರ ಕರಡಿಗಳನ್ನು ಅರಣ್ಯ ಇಲಾಖೆಯವರು ಹಿಡಿದು ತೆಗೆದುಕೊಂಡು ಹೋಗಿದ್ದಾರೆ ಎಂದು. ಮತ್ತೂ ಮಾರನೆಯ ದಿನ ಇಡೀ ಖಲಂದರರು ಹೊಸಪೇಟೆಯ ಅರಣ್ಯ ಇಲಾಖೆಯ ಎದುರು ತಮ್ಮ ಮಕ್ಕಳುಮರಿ ಎಲ್ಲವನ್ನು ಕರೆದುಕೊಂಡು ಬಂದು ಧರಣಿ ಕೂತಿದ್ದಾರೆ. ಅವರು ಕೂತು ನಾಲ್ಕು ದಿನವಾಯಿತು. □

ಸ್ವಾಭಿಮಾನಿಗಳಾಗಿ ಬದುಕಲು ಧಮ್ಮ ಸ್ವೀಕಾರವೇ ದಾರಿ

ಅಂಬೇಡ್ಕರ್‌ರವರು ಅಕ್ಟೋಬರ್ ೧೪, ೧೯೫೬ ರಂದು ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ಧಮ್ಮದೀಕ್ಷೆ ಸ್ವೀಕರಿಸಿದ ನಂತರ ಇಡೀ ವಿಶ್ವದಾದ್ಯಂತ ಧಮ್ಮ ತತ್ವಗಳಿಂದ ಆಕರ್ಷಿತರಾದ ಜನ ಬೌದ್ಧ ಧರ್ಮಸ್ವೀಕರಿಸುತ್ತಿದ್ದಾರೆ.ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ದಲಿತ ಸಂಘರ್ಷ ಸಮಿತಿ ಬೌದ್ಧ ಧರ್ಮ ಸ್ವೀಕಾರ ಕಾರ್ಯಕ್ರಮವನ್ನು ಕಳೆದ ತಿಂಗಳು ಜೂನ್-೯ರ ಶನಿವಾರ ಬೆಂಗಳೂರಿನ ಡಾ॥ ಅಂಬೇಡ್ಕರ್ ಭವನದಲ್ಲಿ ಸಂಘಟಿಸಿತ್ತು. ಹಿಂದೂಧರ್ಮ ತೊರೆದು 'ಬುದ್ಧನೆಡೆಗೆ ಮರಳಿ ಮನೆಗೆ' ಹೋಗುವ ಧ್ಯೇಯ ವಾಕ್ಯದ ಘೋಷಣೆಯೊಂದಿಗೆ ಮೂರು ಸಾವಿರಕ್ಕೂ ಅಧಿಕ ಜನ ಬೌದ್ಧ ಧರ್ಮ ಸ್ವೀಕರಿಸಿದರು. ಕರ್ನಾ ಟಕದ ಮಟ್ಟಿಗಷ್ಟೇ ಅಲ್ಲದೆ ಇಡೀ ರಾಷ್ಟ್ರದಲ್ಲೇ ಒಂದು ಐತಿಹಾಸಿಕ ಘಟನೆ ಇದು. ಕಾರ್ಯಕ್ರಮದಲ್ಲಿ ಭಾಗ ವಹಿಸಿದ್ದ ಗಣ್ಯರು ಮಾಡಿದ ಭಾಷಣಗಳ ಆಯ್ದ ಭಾಗಗಳನ್ನು ಸಂವಾದ ಓದುಗರಿಗಾಗಿ ಇಲ್ಲಿ ನೀಡುತ್ತಿದ್ದೇವೆ.

ಡಾ॥ ಎಲ್. ಹನುಮಂತಯ್ಯ

ಕರ್ನಾಟಕ ದಲಿತ ಸಂಘರ್ಷ ಸಮಿತಿ ಆಯೋಜನೆ ಮಾಡಿರುವ ಧರ್ಮದೀಕ್ಷಾ ಬೋಧನೆಯನ್ನು ನಮಗೆಲ್ಲಾ ಮಾಡಿದಂತಹ ಪರಮ ಪೂಜ್ಯ ಭಂತೇಜಿಯವರೇ, ವಿಶೇಷ ಆಹ್ವಾನಿತರಾಗಿ ಈವರೆಗೆ ತಮ್ಮನ್ನು ಉದ್ದೇಶಿಸಿ ಮಾತನಾಡಿದಂತಹ ಎಲ್ಲಾ ಉಪಾಸಕರೇ...

ಭಾರತ ದೇಶದಲ್ಲಿ ಇಂತಹ ಆತಂಕದ ಕ್ಷಣಗಳು ಅನೇಕ ವರ್ಷಗಳಿಂದ ವಿಶೇಷವಾಗಿ ಕೆಳವರ್ಗದ ಜನರನ್ನು ಕಾಡುತ್ತಾ ಬಂದಿವೆ. ಇವೊತ್ತು ಏನು ಧಮ್ಮ ದೀಕ್ಷೆಯನ್ನು ಪಡೆದುಕೊಂಡ ಕ್ಷಣವಿದೆ. ಅದನ್ನು ಅತ್ಯಂತ ಸಂತೋಷದ ಕ್ಷಣ ಅಂತ ನಾನೇನು ಅಂದುಕೊಳ್ಳಲಿಲ್ಲ. ತುಂಬಾ ದುಃಖದ ಮತ್ತು ವಿಷಾದದ ಕ್ಷಣ ಇದು. ಯಾಕೆ ಅಂತಾಂದ್ರೆ ಪ್ರಪಂಚದ ಯಾವ ಸಮುದಾಯಗಳಿಗೂ ಇಂಥ ಸ್ಥಿತಿ ಬರಬಾರದು. ತಮ್ಮದಲ್ಲದ ಹುಟ್ಟಿನಿಂದ ಹುಟ್ಟನ್ನು ಹೊರತುಪಡಿಸಿ ತನ್ನ ಬಂಧು ಬಳಗವನ್ನೆಲ್ಲ ಬಿಟ್ಟು ತಾವು ಹೊಸ ದಾರಿಯನ್ನು ಹುಡುಕಿಕೊಳ್ಳಬೇಕಾದಂತಹ ಸ್ಥಿತಿ ಪ್ರಪಂಚದ ಯಾವ ಸಮುದಾಯಗಳಿಗೂ ಬರಬಾರದು. ಆದರೆ ಭಾರತದ ಹಿಂದೂಧರ್ಮದ ನೆಲೆಗಳು ನಮ್ಮನ್ನು ಎಂಥ ದುಃಖದ ಮತ್ತು ಹತಾಶೆಯ ಕ್ಷಣಗಳಿಗೆ ದೂಡಿವೆ ಎಂದರೆ, ವರ್ಣಭೇದವನ್ನು ಬಣ್ಣದ ಆಧಾರದಲ್ಲಿ ಮಾಡಿದ ದೇಶಗಳು ಬೇರೆ. ಅದಕ್ಕೊಂದು ಆಧಾರವಿತ್ತು. ನೀವು, ನೋಡಿದ ತಕ್ಷಣ ಕಪ್ಪಗೆ ಕಂಡರೆ ನೀನು ನನ್ನವನಲ್ಲ ಅಂತಾ ಹೇಳ್ತಾ ಇದ್ರು, ಅಂಥದೊಂದು ಮಾನಸಿಕ ಸ್ಥಿತಿಯನ್ನು ಕೇವಲ ಮುನ್ನೂರು ವರ್ಷಗಳಲ್ಲಿ ಬಗೆಹರಿಸಿಕೊಳ್ಳುವುದು ಅವರಿಗೆ ಸಾಧ್ಯವಾಯಿತು.

ಧರ್ಮದಲ್ಲಿ ಬೇರೆ ಮಾಡಲಾಗದ, ಬಣ್ಣದಲ್ಲಿ ಬೇರೆ ಮಾಡಲಾಗದ, ನಡವಳಿಕೆಯಲ್ಲಿ ಬೇರೆ ಮಾಡಲಾಗದ ಸಮುದಾಯವನ್ನು ಹುಟ್ಟಿನಿಂದ ಬೇರೆ ಮಾಡಿ "ನೀನು ನನ್ನವನಲ್ಲ" ಎಂದು ಹೇಳಿ ಮೂರು ಸಾವಿರ ವರ್ಷಗಳಿಂದ ಅದೇ ಯಮ ಯಾತನೆಯಲ್ಲಿರಿಸಿಕೊಂಡಿರುವ ಸಾಮಾಜಿಕ ಪರಿಸ್ಥಿತಿ ಬಹುಶಃ ಪ್ರಪಂಚದ ಯಾವ ದೇಶದಲ್ಲಿಯೂ ಇರಲಾರದು. ಆದುದರಿಂದಲೇ ವರ್ಣದ ಆಧಾರದಲ್ಲಿ ಹುಟ್ಟಿಕೊಂಡ ಹಿಂದೂಧರ್ಮ ಮೂರು ಸಾವಿರ ವರ್ಷಗಳ ನಂತರದಲ್ಲೂ ಕೂಡ ನಮ್ಮನ್ನು ನಿರಂತರವಾಗಿ ಕಾಡುತ್ತಾ ಇದೆ. ನನಗೆ ತಿಳಿವಳಿಕೆ ಬಂದಿರಬಹುದು. ನನಗೆ ಜ್ಞಾನ ಲಭ್ಯವಾಗಿರಬಹುದು. ನಾನು ಪ್ರಜಾಪ್ರಭುತ್ವದ ಎಲ್ಲ ಮುಖಗಳನ್ನು ಅಧ್ಯಯನ ಮಾಡಿರಬಹುದು. ಎಲ್ಲಾ ಧರ್ಮಗಳನ್ನು ನಾನು ಕೂಲಂಕಷವಾಗಿ ತಿಳಿದುಕೊಂಡಿರಬಹುದು. ಆದರೆ, ನನ್ನನ್ನು ಈ ಸಮಾಜ ಅರ್ಥ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ. ಯಾಕೆಂದರೆ ನನ್ನನ್ನು ನೋಡುವ ಕಣ್ಣು ಹಳದಿ ಬಣ್ಣದ ಕಣ್ಣಿನಿಂದ ಕೂಡಿತ್ತು. ನನ್ನನ್ನು ನೋಡುವ ಮನಸ್ಸು ವಿಕಾರಗಳ ಮನಸ್ಸಾಗಿದೆ. ಒಟ್ಟು ಸಮಾಜ ದಲಿತ ಸಮಾಜವನ್ನು ಅಸ್ಪೃಶ್ಯ ಸಮುದಾಯವನ್ನು ನೋಡುವ ಮನಸ್ಥಿತಿಯೇ ವಿಕಾರಿಗಳ ಮನಸ್ಥಿತಿಯಲ್ಲಿ. ಇಂತಹ ವಿಕಾರವನ್ನು ಹೊರತು ಪಡಿಸಲು ಮೂರು ಸಾವಿರ ವರ್ಷಗಳ ಧರ್ಮಕ್ಕೆ ಸಾಧ್ಯವಾಗದೇ ಇರತಕ್ಕಂಥ ಅಂಶವು "ಈ ಧರ್ಮದಲ್ಲಿ ನಾವು ಇನ್ನೆಷ್ಟು ವರ್ಷಗಳ ಕಾಲ ಹೀಗೆ ಇರಬೇಕೆಂದು" ಯೋಚಿಸುವಂತೆ ಮಾಡಿದೆ. ಇನ್ನೆಷ್ಟು ವರ್ಷಗಳ ಕಾಲ ಈ ವಿಕಾರವನ್ನು ನೋಡಬೇಕು? ಇನ್ನೆಷ್ಟು ವರ್ಷಗಳ ಕಾಲ ಈ ವಿಕಾರದಿಂದ ನಾವು ಮನುಷ್ಯರಾಗದೆ ಬದುಕತಕ್ಕಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಳ್ಳಬೇಕು? ಎನ್ನುವಂತಹ ಪ್ರಶ್ನೆಗಳು ನಮ್ಮನ್ನು ಇಂದಿನ ಈ ರೀತಿಯ ತೀರ್ಮಾನಕ್ಕೆ ದೂಡಿವೆ ಎನ್ನುವುದನ್ನು ಬಹು ಸಂಖ್ಯಾತ ಸಮುದಾಯಕ್ಕೆ ನಾವು ಈ ಮೂಲಕ ಹೇಳಬೇಕಾಗಿದೆ.

ಬಹು ಸಂಖ್ಯಾತ ಸಮುದಾಯಗಳು ಉದಾತ್ತ ಘೋಷಣೆಗಳನ್ನು ಮಾಡುತ್ತಾ ಬಂದಿವೆ. ಹಿಂದೂಧರ್ಮ ಅನೇಕ ಉದಾತ್ತ ಧ್ಯೇಯಗಳನ್ನೊಳಗೊಂಡ ಧರ್ಮವೆಂದು ಪ್ರಚಾರ ಮಾಡಲಾಗಿದೆ. ಆದರೆ ಘೋಷಣೆಗಳು ಮತ್ತು ಉದಾತ್ತ ಆಶಯಗಳು ಮಾತ್ರ ಧರ್ಮವಾಗುವುದಿಲ್ಲ. ಧರ್ಮ ಆಗಬೇಕಾದರೆ ಅವು ಆಚರಣೆಯಲ್ಲಿರುವುದೂ ಕೂಡ ಬಹಳ ಮುಖ್ಯ. ಯಾವ ಧರ್ಮ ಘೋಷಣೆಯನ್ನು ಮಾಡಿದೆ, ಉದಾತ್ತ ಆಶಯಗಳನ್ನು ಬೋಧಿಸಿದೆ ಅದು ಮೂರು ಸಾವಿರ ವರ್ಷಗಳ ಕಾಲ ಪ್ರಯತ್ನಿಸಿದರೂ ಆಚರಣೆಗೆ ತರಲಾಗದ ಈ ಘೋಷಣೆಗಳು ಮತ್ತು ಧ್ಯೇಯಗಳು ಧರ್ಮಾಚರಣೆಗಳಾಗುವುದಿಲ್ಲ. ಆದುದರಿಂದಲೇ 'ಧರ್ಮರಕ್ಷಿಪನ ಧರ್ಮ ರಕ್ಷಿಪುದು' ಎನ್ನುವ ಮಾತು ಇವೊತ್ತಿನವರೆಗೆ, ಈ ಕ್ಷಣದವರೆಗೆ ಕೇವಲ ಘೋಷಣೆಯಾಗಿ ನಮ್ಮ ಮುಂದೆ ಇದೆ. ಬಹುಶಃ ಈ ದೇಶದ ಕೆಳ ಜಾತಿಗಳು ಅಸ್ಪೃಶ್ಯರು ಮಾತ್ರವೇ ಅಲ್ಲದೆ ಅಸ್ಪೃಶ್ಯರಂತೆಯೇ ಬದುಕುತ್ತಿರುವ ಸಾವಿರಾರು ಕೆಳ ಜಾತಿಗಳು ಧರ್ಮರಕ್ಷಣೆಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಿವೆ. ಧರ್ಮಕ್ಕೆ ಅವರು ತಲೆ ಬಾಗಿದಷ್ಟು, ಅವರು ಕೊಟ್ಟಷ್ಟು ಗೌರವ, ಅವರು ಪಟ್ಟಷ್ಟು ಪಡಿಪಾಟಲುಗಳನ್ನು ಬಹುಶಃ ಆ ಧರ್ಮವನ್ನು ಘೋಷಣೆ ಮಾಡಿದ ಬೇರ್‍ಯಾರೂ ಕೊಟ್ಟಿರಲು ಅಥವಾ ಪಟ್ಟಿರಲು ಸಾಧ್ಯವಿಲ್ಲ. ಆದರೆ ಆ ಧರ್ಮ ಅವರನ್ನು ಯಾವೊತ್ತೂ ರಕ್ಷಣೆ ಮಾಡಲಿಲ್ಲ "ಧರ್ಮ ರಕ್ಷಿಪನ" ಧರ್ಮ ರಕ್ಷಿಪುದು ಎನ್ನುವ ಮಾತು ದಲಿತರ, ಹಿಂದುಳಿದವರ ಪಾಲಿಗೆ ಕೇವಲ ಕರ್ಕಶವಾದ ಶಬ್ದವಾಗಿ ಕೇಳಿಸುತ್ತದೆಯೇ ಹೊರತು ಆಪ್ಯಾಯಮಾನವಾಗಿ ಅದು ಅವರಿಗೆ ಯಾವೊತ್ತೂ ಕೇಳಿಸಿಲ್ಲ.

ನಾವು ಈ ಪ್ರಪಂಚವನ್ನು ಈ ಸಮಾಜವನ್ನು ಮನುಕುಲವನ್ನು ಅರ್ಥ ಮಾಡಿಕೊಳ್ಳುವ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಇತಿಹಾಸವನ್ನು, ಅರ್ಥಶಾಸ್ತ್ರವನ್ನು, ಮಾನವ ಶಾಸ್ತ್ರವನ್ನು ಹೀಗೆ ಎಲ್ಲವನ್ನೂ ಅಧ್ಯಯನ ಮಾಡಿದರು. ಎಲ್ಲಾ ಅಧ್ಯಯನಗಳ ಮೂಲಕವೂ ಈ ಸಮಾಜವನ್ನು ನೋಡುವ ಪ್ರಯತ್ನ ಮಾಡಿದಾಗ್ಯೂ ಬಾಬಾ ಸಾಹೇಬರನ್ನು "ನೀನು ಅಸ್ಪೃಶ್ಯ" ಎಂದು ಹೇಳುವ ಕಾರ್ಯವನ್ನು ನಿರಂತರವಾಗಿ ಈ ಸಮಾಜ ಮಾಡಿತು. ಸ್ವಲ್ಪ ಸುಧಾರಣೆ ಮಾಡಬಹುದೇ ಅಂತಾ ಪ್ರಯತ್ನಗಳು ನಡೆದವು. ಒಂದಿಂಚು ಕೂಡ ಈ ಧರ್ಮದ ಕೇಡುಗಳು ತಮ್ಮ ಪರಿಧಿಯನ್ನು ಬಿಟ್ಟು ಮುಂದೆ ಹೋಗುವ ಪ್ರಯತ್ನವನ್ನು ಮಾಡಲಿಲ್ಲ. ಬಹಳ ಜನ ಸ್ವಾಮೀಜಿಗಳು, ಧರ್ಮಪಾಲಕರು ಮಾತಾಡುತ್ತಾರೆ– "ಹಿಂದೂಧರ್ಮ ಬಹಳ ಉದಾತ್ತವಾಗಿದೆ" ಎಂದು. ನಾನು ಸುಮಾರು ವರ್ಷಗಳಿಂದ ಇದನ್ನು ಹತ್ತಿರದಿಂದ ನೋಡುತ್ತಿದ್ದೇನೆ. ಎಲ್ಲಿ ಹಿಂದೂಧರ್ಮ ಉದಾತ್ತವಾಗಿ ಕೆಲಸ ಮಾಡುತ್ತಿದೆ? ಯಾವ ಯಾವ ಕ್ಷೇತ್ರಗಳಲ್ಲಿ ಹಿಂದೂಧರ್ಮ ಉದಾತ್ತವಾಗಿದೆ? ಹಿಂದೂ ಸಮಾಜೋತ್ಸವಗಳು ನಡೆಯುತ್ತಿವೆಯೇ ಹೊರತು ಹಿಂದೂ ಸಮಾನೋತ್ಸವಗಳು ನಡೆಯುತ್ತಿಲ್ಲ! ಎಲ್ಲಿಯೂ ಹಿಂದೂಗಳು ಸಮಾನರು ಎನ್ನುವ ಭಾವನೆ ಅಥವಾ ಘೋಷಣೆಯನ್ನು ಈವರೆಗೆ ಯಾರೂ ಕೂಡ ಮಾಡಿಲ್ಲ. "ನೀವು ಕೆಳಜಾತಿಗಳ

ವರು, ನೀವು ಹೊಲೆಯರು, ಮಾದಿಗರು, ಕುಂಬಾರರು, ಕುರುಬರು, ಉಪ್ಪಾರರು ಅಶಿತಾ ಹೇಳುತ್ತಲೇ ನೀವೆಲ್ಲ ಹಿಂದುಗಳು" ಎಂದು ಹೇಳುವ ಪರಿಪಾಠವನ್ನು ಬೆಳೆಸಿಕೊಂಡಿದ್ದಾರೆ. ಅಲ್ಲಿ ಹಿಂದೂಧರ್ಮ ಉದಾತ್ತವಾಗಿದೆ. ಈ ಉದಾತ್ತತೆ ಕಪಟ ಮೋಸ ಮತ್ತು ದ್ವೇಷದಿಂದ ಕೂಡಿದ್ದುದ್ದು. ಈ ಉದಾತ್ತತೆ ನಿಮ್ಮನ್ನು ಗೌರವಿಸುವ ಉದಾತ್ತತೆಯಲ್ಲ.

ಸರ್ವೋಜನ ಸುಖಿನೋ ಭವಂತು ಎಂದು ಪ್ರತಿಯೊಂದು ಮಠಗಳಲ್ಲಿ ಊಟ ಹಾಕುವ ಮೊದಲು ಮಾಡುವ ಘೋಷಣೆ ಸರ್ವರೂ ಸಮಾನರು. ಎಲ್ಲ ಜನರೂ ಸುಖವಾಗಿರಲಿ ಎಂದು ಹೇಳುತ್ತಾರೆ. ಆದರೆ ಎಲ್ಲ ಜನರೂ ಸಮಾನರಲ್ಲ ಎಂಬುದನ್ನು ನಮ್ಮ ದೇಶದ ಪ್ರತಿಯೊಂದು ಹಳ್ಳಿಗಳು ಪಾಲಿಸಿಕೊಂಡು ಬರುತ್ತಿವೆ. ಶೇಕಡಾ ಎಪ್ಪತ್ತು ಭಾಗ ಹಳ್ಳಿಗಳೆ ಇರುವ ಈ ದೇಶದಲ್ಲಿ ನೀವು ಹಳ್ಳಿಗಳ ದರ್ಶನ ಪಡೆದುಕೊಂಡರೆ ಮಾತ್ರ ಗೊತ್ತಾಗುತ್ತದೆ. ನಾವು ಇಲ್ಲಿ ಯಾರೂ ಸಮಾನರಲ್ಲ ಎಂಬುದನ್ನು ಪ್ರತಿ ಕ್ಷಣ ಪ್ರತಿ ನಿಮಿಷ ಸಾಬೀತಾಗುತ್ತಾ ಹೋಗುತ್ತಿದೆ.

ಬಾಬಾ ಸಾಹೇಬರ ಸಂವಿಧಾನ ಒಂದು ಕಡೆ; ಈ ಸಂವಿಧಾನವನ್ನು ಪರಿಪಾಲನೆ ಮಾಡಬೇಕಾದ ಅಧಿಕಾರ ಒಂದು ಕಡೆ, ಸಂವಿಧಾನವನ್ನು ಹೊರತು ಪಡಿಸಿದ ಅಧಿಕಾರ ಇನ್ನೊಂದು ಕಡೆ. ಈ ದೇಶದಲ್ಲಿ Written Constitution ಒಂದು ಕಡೆ ಇದ್ದರೆ, Unwritten constitutoon ಇನ್ನೊಂದು ಕಡೆ ಇದೆ. ನಮ್ಮ ಜನರು unwritten constitution ಅನ್ನು ಬಹಳ ಬಲವಾಗಿ ಪ್ರೀತಿಯಿಂದ ಪಾಲನೆ ಮಾಡುತ್ತಿದ್ದಾರೆ. ಆದರೆ Written Constitution ಬಗ್ಗೆ ಕಿಂಚಿತ್ತು ಗೌರವವನ್ನು ಕೊಡದೆ ಇರುವಂಥ ಸ್ಥಿತಿಯಲ್ಲಿ ಈ ದೇಶ ಇದೆ. Unwritten Constitution is more powerful than the written constitution. ಯಾವುದರ ಮೇಲೆ ಪ್ರಮಾಣ ಮಾಡಿ ಅಧಿಕಾರ ಸ್ವೀಕಾರ ಮಾಡುತ್ತೇವೋ, ಪ್ರಮಾಣ ಮಾಡಿ ಮಂತ್ರಿ ಇತ್ಯಾದಿಗಳು ಆಗುತ್ತೇವೋ ಅಂಥಾ ಈ ಇಡೀ ಅಧಿಕಾರ ಅನ್ನೋದು written Constitutionನಲ್ಲಿರುವ ಸ್ವಾತಂತ್ರ್ಯವನ್ನು ಸಮಾನತೆಯನ್ನು ಭ್ರಾತೃತ್ವವನ್ನು ಯಾವೊತ್ತೂ ಗೌರವಿಸದ ರೀತಿಯಲ್ಲಿ ಅಸಮಾನತೆಯನ್ನು ದ್ವೇಷವನ್ನು ನಿರಂತರವಾಗಿ ಪ್ರೀತಿ ಮಾಡುತ್ತಾ ಬರುತ್ತಿದೆ. ಇದನ್ನು ಯಾರಿಗೆ ಹೇಳಬೇಕು?

ಬುದ್ಧನ ಸಮಾನತೆಯನ್ನು ತರಬೇಕಾದರೆ ಸಮಾನತೆಯ ತತ್ವವನ್ನು ಹೇಳಬೇಕಾದರೆ ಈ ತಳಸಮುದಾಯಗಳು, ಎಲ್ಲಾ ಕುಲಕಸುಬುಗಳಿಂದ ಬದುಕುತ್ತಿರುವ ಸಮುದಾಯಗಳೆಲ್ಲವೂ ಈ ಸಮಾಜವನ್ನು ಸಾಕಿದ ಪಾಲಕರೂ ಪೋಷಕರೂ ಆಗಿದ್ದಾರೆ. ಯಾರು ಈ ಸಮಾಜದಲ್ಲಿ ಕುಳಿತು ಉಣ್ಣುವವರಿದ್ದರು, ಶ್ರಮವಹಿಸದೆ ಉಣ್ಣುವವರಿದ್ದರು, ಇನ್ನೊಬ್ಬರ ಬೆವರಿನ ಮೇಲೆ ತಮ್ಮ ಸುಖವನ್ನು ಲೋಲುಪತೆಯನ್ನು ಆಚರಣೆ ಮಾಡುವವರಿದ್ದರು ಅವರು ಮಾತ್ರ ಹಿಂದೂ ಧರ್ಮವನ್ನು ಪರಿಪಾಲನೆ ಮಾಡಿಕೊಂಡು ಬಂದಿದ್ದಾರೆ. ಆದರೆ ಈ ತಳ ಸಮುದಾಯದ ಜನಗಳು, ಶೋಷಿತ ಸಮುದಾಯದ ಜನಗಳು ಯಾವೊತ್ತು ಕೂಡ ಇನ್ನೊಬ್ಬರ ಮೇಲೆ ಬದುಕಿದವರಲ್ಲ. ಇನ್ನೊಬ್ಬರ ಮುಲಾಜಿಗೆ ಬದುಕಿದವರಲ್ಲ. ಆದರೆ ಅಂತಹ ಸಮುದಾಯಗಳನ್ನು ಬಹು ಸಂಖ್ಯಾತ ಸಮುದಾಯಗಳನ್ನು ಯಾವ ಹಂತಕ್ಕೆ ತೆಗೆದುಕೊಂಡು ಹೋಗಿ ತುಳಿದಿದ್ದಾರೆಂದರೆ ಒಂದು ಹೊತ್ತಿನ ಊಟಕ್ಕಾಗಿ ಇನ್ನೊಬ್ಬರ ಮನೆಯ ಬಚ್ಚಲು ಬಳಿಯುವ ಕೆಲಸವನ್ನು ಅವರಿಂದ ಮಾಡಿಸಿದ್ದಾರೆ. ಅಲ್ಲಿ ಮನುಷ್ಯನ ಸ್ವಾಭಿಮಾನವನ್ನು ಸ್ವಾವಲಂಬನೆಯನ್ನೂ ಏಕಕಾಲಕ್ಕೆ ನುಚ್ಚು ನೂರು ಮಾಡಿದಂತಹ ಧಾರ್ಮಿಕ ಭಾವನೆಗಳಿವೆ. ನಾವು ಇಂತಹ ಧಾರ್ಮಿಕ ಭಾವನೆಗಳಿಂದ ಹೊರಗೆ ಬಂದು, ಮೊದಲಿಗೆ ಸ್ವಾಭಿಮಾನಿಯಾದರೆ ಮನುಷ್ಯ ಧರ್ಮಾವಲಂಬಿಯಾಗುತ್ತಾನೆ.

ಡಾ॥ ಅಂಬೇಡ್ಕರ್ ಅವರು ಇತಿಹಾಸವನ್ನು, ಅರ್ಥಶಾಸ್ತ್ರ, ಮಾನವ ಶಾಸ್ತ್ರ ಎಲ್ಲವನ್ನೂ ಅಧ್ಯಯನ ಮಾಡಿದರು. ಎಲ್ಲಾ ಅಧ್ಯಯನಗಳ ಮೂಲಕವೂ ಈ ಸಮಾಜವನ್ನು ನೋಡುವ ಪ್ರಯತ್ನ ಮಾಡಿದಾಗ್ಯೂ ಬಾಬಾ ಸಾಹೇಬರನ್ನು "ನೀನು ಅಸ್ಪೃಶ್ಯ" ಎಂದು ಹೇಳುವ ಕಾರ್ಯವನ್ನು ನಿರಂತರವಾಗಿ ಈ ಸಮಾಜ ಮಾಡಿತು. ಸ್ವಲ್ಪ ಸುಧಾರಣೆ ಮಾಡಬಹುದೇ ಅಂತಾ ಪ್ರಯತ್ನಗಳು ನಡೆದವು. ಒಂದಿಂಚು ಕೂಡ ಈ ಧರ್ಮದ ಕೇಡುಗಳು ತಮ್ಮ ಪರಿಧಿಯನ್ನು ಬಿಟ್ಟು ಮುಂದೆ ಹೋಗುವ ಪ್ರಯತ್ನವನ್ನು ಮಾಡಲಿಲ್ಲ.

ಇವೊತ್ತಿನ ಪರಿಸ್ಥಿತಿ ಸ್ವಲ್ಪ ತಿರುಗುಮುರುಗಾಗಿದೆ. ನಮಗೆ ಸ್ವಾಭಿಮಾನದಿಂದ ಬದುಕುವ ಎಲ್ಲಾ ಸವಲತ್ತುಗಳಿದ್ದರೂ ಕೂಡ, ಸ್ವಲ್ಪ ಮಟ್ಟಿಗೆ ನಾವು ಅವಲಂಬಿತರಾಗಿದ್ದರೂ ಕೂಡ ಈ ಸಮಾಜ 'ನೀನು ಸ್ವಾಭಿಮಾನಿಯಲ್ಲ' ಅಂತಾ ನಿರಂತರವಾಗಿ ಹೇಳುವ ಕೆಲಸವನ್ನು ಮಾಡುತ್ತಾ ಬಂದಿದೆ. ಇವೊತ್ತಿಗೂ ಕೂಡ ನಮ್ಮ ಹಳ್ಳಿಗಳ ಕಡೆ ಹೋದರೆ ನೀನು ಎಷ್ಟೇ ದೊಡ್ಡ ಪಂಡಿತನಾಗಿದ್ದರೂ ಕೂಡ ಊರಾಚೆ ನಿಲ್ಲಬೇಕು. ದೇವಸ್ಥಾನದ ಹೊರಗೆ ನಿಲ್ಲಬೇಕು; ನಿನ್ನ ಜಾಗ ಅದು ಕೆರೆಯ ನೀರನ್ನು ಮುಟ್ಟುವಂತಿಲ್ಲ; ಅದು ನಿನ್ನ ಪರಿಸ್ಥಿತಿ ಕುಡಿಯುವ ನೀರಿಗೆ ಕೂಡ ನೀನು ಅವಲಂಬಿತನಾಗಿರಬೇಕು ಇಂಥ ಕಾಲದಲ್ಲಿಯೂ.



ಈಗ ಮನುಷ್ಯನ ಪ್ರಶ್ನೆ ಏನೆಂದರೆ "ನಾನು ಇನ್ನೆಷ್ಟು ವರ್ಷಗಳ ಕಾಲ ಹೀಗೆ ಪರಾವಲಂಬಿಯಾಗಿ ಬದುಕಬೇಕು? ಎಷ್ಟು ವರ್ಷಗಳ ಕಾಲ ಹೀಗೆ ಸ್ವಾಭಿಮಾನರಹಿತನಾಗಿ ಬದುಕಬೇಕು? ಎಷ್ಟು ವರ್ಷಗಳ ಕಾಲ ಪ್ರಾಣಿಯ ರೀತಿಯಲ್ಲಿ ಬದುಕಬೇಕು? ಮನುಷ್ಯರನ್ನು ಪ್ರಾಣಿಗಳನ್ನಾಗಿ ಮೂರು ಸಾವಿರ ವರ್ಷಗಳ ಕಾಲ ಬದುಕಿಸಿದ್ದು ಇದೆಯಲ್ಲ ಈ ಬದುಕಿನಿಂದ ಹೊರಗೆ ಬರಲು ಧಾರ್ಮಿಕಾಚರಣೆಗಳು ನಮ್ಮನ್ನು ಕಾಪಾಡಲಿಲ್ಲವೆನ್ನುವುದು ನಾವು ಕಲಿತುಕೊಳ್ಳಬೇಕಾದ ಪಾಠವೆಂದು ನಾನು ಭಾವಿಸಿದ್ದೇನೆ. ಆದುದರಿಂದಲೇ ಬಾಬಾ ಸಾಹೇಬರ ಆ ತುಡಿತ ಭ್ರಾತೃತ್ವಕ್ಕಾಗಿ ಇದ್ದದ್ದು. ನಮ್ಮ ಜನರನ್ನು ಸ್ವಾವಲಂಬಿಗಳನ್ನಾಗಿಯೂ ಸ್ವಾಭಿಮಾನಿಗಳಾಗಿಯೂ ಮಾಡಬೇಕೆನ್ನುವ ತುಡಿತ ಅವರದು. ಸ್ವಾವಲಂಬಿಗಳನ್ನಾಗಿ ಮಾಡಲಿಕ್ಕೆ ಸಂವಿಧಾನದಲ್ಲಿ ಚೂರುಪಾರು ಅವಕಾಶಗಳನ್ನು ಕಲ್ಪಿಸಿಕೊಡಲಾಯಿತು.

ಸ್ವಾಭಿಮಾನಿಗಳನ್ನಾಗಿ ಮಾಡಲಿಕ್ಕೆ ಶಿಕ್ಷಣವನ್ನುಕೊಡಲಾಯಿತು. ಆದರೆ ಶಿಕ್ಷಣಕ್ಕೆ ಕೂಡ ನಮ್ಮ ಜನರನ್ನು ಸ್ವಾಭಿಮಾನಿಗಳನ್ನಾಗಿ ಮಾಡಲು ಸಾಧ್ಯವಾಗಲಿಲ್ಲ. ಎಲ್ಲಿಯವರೆಗೆ ಈ ಶಿಕ್ಷಣದಿಂದ ನಾವು ಸ್ವಾಭಿಮಾನಿಗಳಾಗುವುದಿಲ್ಲವೋ ಅಲ್ಲಿಯವರೆಗೂ ನಮ್ಮ ಯಾವ ಪದವಿಗಳೂ ನಿಷ್ಪ್ರಯೋಜಕವಾದವುಗಳೇ; ಅವು ಪ್ರಯೋಜನಕಾರಿಯಲ್ಲ. ಅಂತಹ ಪರಿಸ್ಥಿತಿಯಲ್ಲಿ ಬಾಬಾ ಸಾಹೇಬರು ಕಂಡುಕೊಂಡ ಈ ದಾರಿ ಇದೆಯಲ್ಲ ಅದು ನಾನು ಈ ಮೊದಲೇ ಹೇಳಿದಂತೆ ಇದು ಅತ್ಯಂತ ನೋವಿನ ದಾರಿ ನೋವಿನ ದಾರಿಯಲ್ಲಿ ನಾವು ಹೆಜ್ಜೆಗಳನ್ನು ಇಡುತ್ತಿದ್ದೇವೆ. ಆದರೆ ಅನಿವಾರ್ಯವಾದ ದಾರಿ. ನಿಮಗೆ ಅನ್ಯ ಮಾರ್ಗಗಳಿಲ್ಲ. ಅನ್ಯ ಬಾಗಿಲುಗಳೆಲ್ಲವೂ ಮುಚ್ಚಿ ಹೋಗಿವೆ. ಆದುದರಿಂದ ಈ ಮಾರ್ಗವನ್ನು ತುಳಿಯದೆ ಬೇರೆ ದಾರಿ ಇಲ್ಲ.

ಬುದ್ಧ ಬೋಧನೆಗಳೆಲ್ಲವೂ ಬಸವಣ್ಣನ ವಚನಗಳಲ್ಲಿ ಯಥಾವತ್ತಾಗಿವೆ. 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ' ಎಂಬ ಪದಗಳು ಬುದ್ಧನ ಬೋಧನೆಯ ಅರ್ಥಗಳಲ್ಲೇ ಇವೆ. ಬಹುಶಃ ಬಸವಣ್ಣ ಬುದ್ಧನ ಎಲ್ಲಾ

ತತ್ವಗಳನ್ನು ಬಲ್ಲವನಾಗಿದ್ದನೆಂದು ನನಗೆ ಅನ್ನಿಸುತ್ತದೆ. ಆದರೆ ಇವೊತ್ತಿನ ಪರಿಸ್ಥಿತಿ ಹೇಗಿದೆ? ಬಸವಣ್ಣನನ್ನು ಬ್ರಾಹ್ಮಣ ಜಾತಿಯಿಂದ ಬಂದವನೆಂದರೆ ಬಹಳ ಸಂತೋಷಗೊಳ್ಳುತ್ತಾರೆ. ಪ್ರಫುಲ್ಲಿತರಾಗುತ್ತಾರೆ. ಆದರೆ ಬಸವಣ್ಣ ಮಾದಿಗರವನೆಂದರೆ ಕಸಿವಿಸಿಯಾಗುತ್ತಾರೆ. ತಡೆದುಕೊಳ್ಳಲಾಗುವುದಿಲ್ಲ (ಅನುದೇವಾ ಹೊರಗಣವನು) ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳಿರಿ ಎನ್ನುತ್ತಾರೆ. ಅಂದರೆ ಈ ಮನಸ್ಥಿತಿ ಹೇಗಿರುತ್ತದೆ ಎಂದರೆ ಶೋಷಕ ಮನಸ್ಥಿತಿ ಯಾವಾಗಲೂ ಪ್ರಫುಲ್ಲಿತವಾದ ಮನಸ್ಥಿತಿ. ಶೋಷಿತರ ಮನಸ್ಥಿತಿ ಯಾವಾಗಲೂ ಆತಂಕದ ವಿಷಾದದ ನೋವಿನ ನಡಿಗೆಯಲ್ಲಿ ಹೋಗುತ್ತಿರುತ್ತದೆ. ಈ ಎರಡೂ ಮನಸ್ಥಿತಿಗಳನ್ನು ಅರ್ಥಮಾಡಿಕೊಂಡರೆ ಬಹುಶಃ ಇವೊತ್ತಿನ ಉಳಿದ ದಾರಿಯನ್ನು ಹೆಚ್ಚು ಪ್ರಮುಲ್ಲಿತರಾಗಿ ಹೆಜ್ಜೆ ಹಾಕಿ ನಡೆಯುವುದನ್ನು ಕಲಿಯಬಹುದಾಗಿದೆ. ಇದಕ್ಕೆ ಕೂಡ ಸೋಂಕುಗಳು ಬರದಂತೆ ತಡೆಯುವುದು ಇವೊತ್ತಿನ ಅಗತ್ಯವೆಂದು ನಾನು ಭಾವಿಸಿದ್ದೇನೆ. ಬೌದ್ಧ ಧರ್ಮಕ್ಕೆ ಬರಬಹುದಾದ ಸಾಮಾಜಿಕ ಸೋಂಕುಗಳನ್ನು ನಿವಾರಿಸಿಕೊಂಡು, ಇದನ್ನೊಂದು ಸರ್ವರೂ ಒಪ್ಪಿಕೊಳ್ಳುವ ಧಾರ್ಮಿಕ ಭಾವನೆಯ ಮಾರ್ಗವನ್ನಾಗಿ ರೂಪಿಸಿಕೊಂಡು ಹೋಗುವ ಬಗೆ ಹೇಗೆಂಬುದನ್ನು ಆಲೋಚಿಸಬೇಕಾಗಿದೆ. ನಮ್ಮಂತೆಯೇ ಸುಮಾರು ಎಂಬತ್ತು ಭಾಗದಷ್ಟು ಜನ ಈ ಹಿಂದು ಧರ್ಮದ ಕೂಪದಲ್ಲಿ ಬದುಕುತ್ತಿದ್ದಾರೆ.

ಆದರೆ ದುರ್ದೈವವಶಾತ್ ಅವರೆಲ್ಲರೂ ಕೂಡ 'ನಾವು ಮೇಲಿದ್ದೇವೆ' ಎನ್ನುವ ಭಾವನೆಯಲ್ಲಿ ಬದುಕುತ್ತಾ ಇದ್ದಾರೆ. ನನಗಿಂತಲೂ ೬೦ ಭಾಗ ಜನ ಕೆಳಗಿದ್ದಾರೆ ಎಂಬ ಆನಂದ ದಲ್ಲಿ ಬದುಕುತ್ತಿದ್ದಾರೆ. ಅವರಿಗೆ ಕೂಡ ವಿಮೋಚನೆ ಆಗಬೇಕು ಅವರಿಗೆ ವಿಮೋಚನೆ ಆಗದ ಹೊರತು ಕೇವಲ ನಮ್ಮೊಬ್ಬರ ವಿಮೋಚನೆಯಿಂದ ಈ ದೇಶ ಸರಿ ಹೋಗುವುದಿಲ್ಲ. ನಮ್ಮೊಬ್ಬರ ವಿಮೋಚನೆ ಈ ದೇಶವನ್ನು ಸರಿ ಮಾಡಲು ಆಗುವುದಿಲ್ಲ. ಯಾಕೆಂದರೆ ಶೇ. ೮೦ ಭಾಗ ಜನ ಅದೇ ಮನಸ್ಥಿತಿಯಲ್ಲಿದ್ದರೆ, ಏನು ತಾನೆ ಮಾಡಲು ಸಾಧ್ಯ? ಅವರ ಒಡನಾಟದಿಂದ ನಾವೇನು ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲ. ನಮ್ಮ ಒಡನಾಟದಿಂದ ಅವರೂ ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲ. ಎಷ್ಟು ವರ್ಷಗಳ ಕಾಲ ಈ ಭ್ರಾತೃತ್ವರಹಿತ ಜೀವನವನ್ನು ನಡೆಸಲು ಸಾಧ್ಯ? ನಮ್ಮ ಪೀಳಿಗೆಯೇ ಆಗಲಿ. ಆದುದರಿಂದ ೮೦ ಭಾಗ ಜನರನ್ನು ಕೂಡ ಇಂಥ ಶಾಪದಿಂದ ವಿಮೋಚನೆ ಮಾಡಿ ಈ ದಾರಿಯಲ್ಲಿ ಕರೆದುಕೊಂಡು ಹೋಗಬೇಕಾದ ಅಗತ್ಯವಿದೆ. □

ಮತಧರ್ಮದ ಪ್ರಶ್ನೆಯಲ್ಲ–ಅಧಿಕಾರ ಸಂಪತ್ತಿನ ಪ್ರಶ್ನೆ

(೧೮ನೇ ಪುಟದಿಂದ)

ನಾದ ಅಮೆರಿಕಾ ಅಲ್ಲವೇ? ಒಬ್ಬ ಅಮೆರಿಕ ಪ್ರಜೆ ಹತನಾದರೆ ಇಡೀ ವಿಶ್ವ ಕಣ್ಣೀರು ಸುರಿಸಿ ಭಯೋತ್ಪಾದಕರನ್ನು ಖಂಡಿಸಬೇಕು: ಆದರೆ ಅಮೆರಿಕಾ ಲಕ್ಷಗಟ್ಟಲೆ ಇರಾಕಿ ಜನರನ್ನು ಕೊಂದರೆ ಅದು ಭಯೋತ್ಪಾದನೆಯಲ್ಲ: ಯುದ್ಧವಲ್ಲ, ಹಿಂಸೆಯಲ್ಲ: ಅದು ಪ್ರಜಾಪ್ರಭುತ್ವ ನಿರ್ಮಾಣ, ಆಡಳಿತದ ಬದಲಾವಣೆ. ಇತ್ಯಾದಿ ನಾಗರಿಕ ಹಣೆಪಟ್ಟಿ ಧರಿಸುತ್ತದೆ. ಇಂತಹ ಘೋರ ಪಾತಕಗಳೇ ಭಯೋತ್ಪಾದನೆಗೆ ಬೀಜ, ನೀರು ಮತ್ತು ಗೊಬ್ಬರ.

ನಮ್ಮ ದೇಶದ ಆಂತರಿಕ ಭಯೋತ್ಪಾದನೆಗಳ ಹಿಂದೆ ಅಂತಾರಾಷ್ಟ್ರೀಯವಾಗಿ ನಾವು ಅಮೆರಿಕಾಕ್ಕೆ ಬೆಂಬಲ ನೀಡುವುದು ಒಂದು ಕಾರಣವಾಗಿ ಕೆಲಸ ಮಾಡುತ್ತದೆ. ಉಳಿದಂತೆ, ಮಿಲಿಟರಿ ಶಕ್ತಿಯಿಂದ ಜನತೆಯ ಆಶಯಗಳನ್ನು ಚಿವುಟಿ ಹಾಕಬಹುದೆಂಬ ಅಹಂಕಾರವು ಭಯೋತ್ಪಾದನೆಗೆ ಕಾರಣವಾಗುತ್ತದೆ. ಮತಾಂಧತೆ ಮತ್ತು ನೆರೆ ರಾಷ್ಟ್ರಗಳು ನಮ್ಮ ದೇಶದಲ್ಲಿ ಆಂತರಿಕ ಕಲಹ ಹುಟ್ಟಿ ಹಾಕಲು ಹೊಂಚು ಹಾಕುತ್ತಿರುವುದು, ಇವೆರಡೂ ಭಯೋತ್ಪಾದನೆಗೆ ಬೇರೆ ಕಾರಣಗಳಾಗಿವೆ.

೨. ಯಾರು ದುಷ್ಟರು ಮತ್ತು ಯಾರು ಭಯೋತ್ಪಾದಕರು ಎಂಬುದನ್ನು ಯಾವುದೋ ಒಂದು ದೇಶ ಅಥವಾ ಕೆಲವು ದೇಶಗಳ ಒಕ್ಕೂಟವು ತೀರ್ಮಾನಿಸುವ ಸಂದರ್ಭವಿರುವಾಗ ಮುಸ್ಲಿಮರನ್ನು ಸಾರಾ ಸಗಟಾಗಿ ನಿಂದಿಸುವುದು ಅಸಹಜವೇನಲ್ಲ. ಮೂಲತಃ ನಾವು ಹಾಕಿಕೊಳ್ಳಬೇಕಾದ ಪ್ರಶ್ನೆ ಬೇರೆ ತೆರನಾದುದು. ಅದೇನೆಂದರೆ ಮುಸ್ಲಿಮರ ದೇಶಗಳ ಮೇಲೆ (ಪ್ಯಾಲೆಸ್ಟೈನ್, ಸಿರಿಯ, ಇರಾನ್, ಲಿಬಿಯ ಇತ್ಯಾದಿ) ಮಾತ್ರವೇ ಏಕೆ ಪಶ್ಚಿಮದ ರಾಷ್ಟ್ರಗಳ ಕೆಂಗಣ್ಣು ಬಿದ್ದಿದೆ? ಉತ್ತರಗಳು ಎರಡು. (ಅ) ಅಲ್ಲಿಯ ತೈಲ ಸಂಪತ್ತು: (ಆ)ಮಿಲಿಟರಿ ನೆಲೆಗಳನ್ನು ಆ ಪ್ರದೇಶದಲ್ಲಿ ಹೊಂದಿದ್ದು ಅಮೆರಿಕಾವು ಆ ಪ್ರದೇಶದ ಆಳುವ ವರ್ಗವನ್ನು ತನ್ನ ಕೈಗೊಂಬೆ ಮಾಡಿಕೊಂಡಿರುವುದು. (ಈಜಿಪ್ಟ್ , ಜೋರ್ಡಾನ್, ಸೌದಿ ಅರೇಬಿಯ, ಇತ್ಯಾದಿ). ಇದೇ ಮುಸ್ಲಿಮರು ಈಗ ಐವತ್ತು ವರ್ಷಗಳ ಹಿಂದೆ ಇಂದಿನಂತೆ ಭಯೋತ್ಪಾದಕರಾಗಿರಲಿಲ್ಲವೇಕೆ? ಮತಧರ್ಮವು ಭಯೋತ್ಪಾದಕತೆಗೆ ಆಧಾರವೆನ್ನುವುದಾದರೆ ಆ ಧರ್ಮವು ಹುಟ್ಟಿದಾಗಿನಿಂದ ಸದಾ ಅದೇ ಅವಲಕ್ಷಣವನ್ನು ಹೊಂದಿರಬೇಕಾಗಿತ್ತು.

ಈಚಿನ ವರ್ಷಗಳಲ್ಲಿ ಗುಜರಾತಿನ ಮೋದಿ ಸರ್ಕಾರವು ಭಯೋತ್ಪಾದಕ ಕೃತ್ಯಗಳಿಗೆ ಬೆಂಬಲ ನೀಡಿದೆ. ಹಾಗಿದ್ದರೆ ಇನ್ನು ಮೇಲೆ ಮೋದಿಯವರ ಧರ್ಮವನ್ನು ಭಯೋತ್ಪಾದಕ ಧರ್ಮವೆಂದು ಹೇಳುವುದು ತರ್ಕಬದ್ಧವಾಗುತ್ತದೆ. ನಿಜಕ್ಕೂ ನೋಡಿದರೆ ಮತಧರ್ಮಕ್ಕೆ ಭಯೋತ್ಪಾದಕ ಲಕ್ಷಣಗಳಿರುವುದಿಲ್ಲ. ಅದು ದುಃಖ–ದುಮ್ಮಾನಗಳನ್ನು ಸಹನೆಯಿಂದ ಸಹಿಸಬೇಕೆಂದು ಬೋಧಿಸುವ ಲಕ್ಷಣವನ್ನು ಹೊಂದಿದೆ. ದಮನ–ದೌರ್ಜನ್ಯಗಳಿಗೆ ಹತಾಶರ, ಅಸಹಾಯಕರ ಉತ್ತರವಾಗಿ ಭಯೋತ್ಪಾದನೆ ಮೂಡುತ್ತದೆ. ಒಂದು ಮತಧರ್ಮವನ್ನು ನೀಚವೆಂದು ತುಚ್ಛೀಕರಿಸುವ ಪದ್ಧತಿ ಬೆಳೆದರೆ ಮತ್ತೆ ಧರ್ಮಯುದ್ಧಗಳ ಯುಗಕ್ಕೆ ಹಿಂದೆ ಸರಿಯುವುದು ಖಚಿತ. ವಸಾಹತುಶಾಹಿ ದೌರ್ಜನ್ಯಗಳಿಗೆ ಕ್ರೈಸ್ತ ಧರ್ಮವನ್ನು ಚರಿತ್ರಕಾರರು ತೆಗಳಿದ್ದಾರೆಯೇ? ಅಂತಹ ತೆಗಳಿಕೆಗಳು ಏನಿದ್ದರೂ ಭಂಡತನವನ್ನು ಹೆಚ್ಚಿಸುತ್ತವೆಯೇ ವಿನಾ ಯಾವ ಸಮಸ್ಯೆಯನ್ನೂ ಪರಿಹರಿಸುವುದಿಲ್ಲ. ಭಯೋತ್ಪಾದನೆಯು ಜನ್ಮ ತಾಳಲು ಕಾರಣವಾದ ಸಂಗತಿಗಳನ್ನು ಇಲ್ಲವಾಗಿಸದೆ ಅದನ್ನು ಹಿಮ್ಮೆಟ್ಟಿಸುವುದು ಅಸಾಧ್ಯ. ಅದು ಮತಧರ್ಮದ ಪ್ರಶ್ನೆಯಲ್ಲ, ಅಧಿಕಾರ– ಸಂಪತ್ತಿನ ಪ್ರಶ್ನೆ.

೩. ಈ ಪ್ರಶ್ನೆಗೆ ಉತ್ತರವು ಭಾಗಶಃ ಎರಡನೆಯ ಪ್ರಶ್ನೆಗೆ ನೀಡಿರುವ ಉತ್ತರದಲ್ಲೇ ಇದೆ. ದಬ್ಬಾಳಿಕೆ ನಡೆಸುತ್ತಿರುವ ಅಮೆರಿಕಾದ ಹಿಡಿತದಲ್ಲಿ ವಿಶ್ವದ ಮಾರುಕಟ್ಟೆ ಇದೆ. ವಿಶ್ವದ ಸಂಪತ್ತಿದೆ. ಮತ್ತು ಅತಿ ಪ್ರಬಲವಾದ ಶಸ್ತ್ರಾಸ್ತ್ರಗಳಿವೆ. ಇಡೀ ಮಾಧ್ಯಮಗಳ ಜಾಲ ಇದೆ. ಭಾರತದಂತಹ ದೇಶಗಳಲ್ಲಿ ವಿಶ್ವವನ್ನು ತಮ್ಮ ಸ್ವಂತಹ ಕಣ್ಣುಗಳಿಂದ ನೋಡದೆ ಅಮೆರಿಕಾದ ಬಳುವಳಿಯಾಗಿ ಪಡೆದ ಕಾಮಾಲೆ ಕಣ್ಣುಗಳಿಂದ ನೋಡುವ ಮೂರ್ಖ ಜನರ ಸಂತತಿ ವಿಫುಲವಾಗಿ ಬೆಳೆದಿದೆ. ಆದ್ದರಿಂದ ಅಮೆರಿಕಾ ಫಿಡೆಲ್ ಕ್ಯಾಸ್ಟ್ರೋನನ್ನು " ಸರ್ವಾಧಿಕಾರಿ" ಎಂದರೆ ನಮ್ಮ ಮಾಧ್ಯಮ ಬಸವಣ್ಣಗಳು ಕೋಲೆ ಬಸವರಾಗಿ ತಲೆದೂಗುತ್ತವೆ. ವೆನಿಝೂಲಾದ ಹೊಸ ಬೆಳವಣಿಗೆಗಳನ್ನು ಅಮೆರಿಕಾ ಟೀಕಿಸಿದರೆ ನಮ್ಮ ಬುದ್ಧಿವಂತ ಆಳುವ ವರ್ಗದ ಭಂಟರೂ ಅದೇ ಟೀಕೆ ಮಾಡುತ್ತಾರೆ. ಸ್ವಂತಿಕೆ ಮತ್ತು ಸ್ವಹಿತ, ಎರಡನ್ನೂ ಕಳೆದುಕೊಂಡವರ ದುರಂತ ಇದು. ಇಂದು ಬಹಳ ಹುಮ್ಮಸ್ಸಿನಿಂದ ಪ್ರತಿಪಾದಿಸಲಾಗುತ್ತಿರುವ ಭಾರತ–ಅಮೆರಿಕಾ ಪರಮಾಣು ಒಪ್ಪಂದವು ಮುರಿದು ಬಿದ್ದರೆ ಭವಿಷ್ಯದಲ್ಲಿ ಒಂದು ದಿನ ಭಾರತವನ್ನೂ ಅಮೆರಿಕಾ ಪ್ರಭುತ್ವವು ಇಂದಿನ ಭಯೋತ್ಪಾದಕರೊಡನೆ ಸಮೀಕರಿಸಿದರೆ ಆಶ್ಚರ್ಯ ಬೇಡ. ಶತಮಾನಗಳ ಕಾಲ ಅಸ್ಪೃಶ್ಯತೆಯನ್ನು ಘೋಷಿಸಿದ ಮತಧರ್ಮವನ್ನು ಭಯೋತ್ಪಾದಕ ಧರ್ಮವೆಂದು ಕರೆದರೆ ಯಾರೂ ಮುನಿಸಿಕೊಳ್ಳ ಬೇಕಾಗಿಲ್ಲ. ಆ ಧರ್ಮಕ್ಕೆ ಬೇರೆ ಸದ್ಗುಣಗಳಿರಬಹುದೇನೋ. ಆದರೆ ಭಯೋತ್ಪಾದಕ ಲಕ್ಷಣಗಳೂ ಇದೆ. ಮತೀಯ ದ್ವೇಷವನ್ನು ನಮ್ಮ ದೇಶದಲ್ಲಿ ಬಹಿರಂಗವಾಘಿ ಘೋಷಿಸಿ ಕಾರ್ಯಗತಗೊಳಿಸುವ ಮತಧರ್ಮಗಳು ಯಾವುವೆಂದು ಯಾರಿಗಾದರೂ ಸಂಶಯವಿದ್ದರೆ ಅವರು ಕಣ್ಣು ಬಿಡಲು ಕಲಿಯಬೇಕು.

೪. ನಮ್ಮ ನಮ್ಮ ದೇಶಗಳಲ್ಲಿ ಸಂಪತ್ತನ್ನು ಇಡೀ ಜನತೆಯ ಪರವಾಗಿ ಬಳಸುವುದು, ಬೆಳೆಸುವುದು, ಲೂಟಿಯನ್ನು ಪೂರ್ಣಾರ್ಥದಲ್ಲಿ ತಡೆಯುವುದು, ಜನತೆಯ ಆಕಾಂಕ್ಷೆಗಳನ್ನು ಪ್ರಜಾಪ್ರಭುತ್ವ ರೀತ್ಯಾ ಪೂರೈಸುವುದು, ಅರ್ಥವತ್ತಾದ ಸಂವಾದವನ್ನು ಸದಾ ಜಾರಿಯಲ್ಲಿರಿಸುವುದು, ಆಂತರಿಕ ವೈರುಧ್ಯಗಳಿಗೆ ಪರಿಹಾರ ಕಂಡುಕೊಳ್ಳುವುದು ಮತ್ತು ಅಂತಾರಾಷ್ಟ್ರೀಯ ರಾಜಕೀಯ ದಲ್ಲಿ ವಿಧ್ವಂಸಕ ಕೃತ್ಯಗಳನ್ನೆಸಗುವ ಸಾಮ್ರಾಜ್ಯಶಾಹಿಗೆ ಮಣ್ಣು ಮುಕ್ಕಿಸುವುದು, –ಇವು ಭಯೋತ್ಪಾದನೆಯ ನಿರ್ಮೂಲನಕ್ಕೆ ಕೆಲವು ಪ್ರಮುಖ ಮಾರ್ಗಗಳು. □

ಮಿಲಿಟರಿ ಶಕ್ತಿಯಿಂದ ಜನತೆಯ ಆಶಯಗಳನ್ನು ಚಿವುಟಿ ಹಾಕಬಹುದೆಂಬ ಅಹಂಕಾರವು ಭಯೋತ್ಪಾದನೆಗೆ ಕಾರಣ. ಮತಾಂಧತೆ ಮತ್ತು ನೆರೆ ರಾಷ್ಟ್ರಗಳು ನಮ್ಮ ದೇಶದಲ್ಲಿ ಆಂತರಿಕ ಕಲಹ ಹುಟ್ಟಿ ಹಾಕಲು ಹೊಂಚು ಹಾಕುತ್ತಿರುವುದು, ಭಯೋತ್ಪಾದನೆಗೆ ಬೇರೆ ಕಾರಣಗಳಾಗಿವೆ.

ಬುದ್ಧನೆಂದರೆ ಯಾವ ಬುದ್ಧ?

(೨೫ನೇ ಪುಟದಿಂದ)

ಇದು "ನಾಗಾರ್ಜುನನ ಮೂಲಮಾಧ್ಯಮ ಕಕಾರಿಕಾ" ಮಾತು (ಅನುವಾದ=ಎಸ್. ನಟರಾಜ. ಬೂದಾಳು ಅಭಿನವ ಪ್ರಕಾಶನ, ೨೦೦೬, ಪು-೧೨೨) ಮಹಾಯಾನ ಪಂಥದ ಗ್ರಂಥಗಳು ಬರಲಾರಂಭಿಸಿದ್ದು ನಿಜಕ್ಕೂ ಬುದ್ಧನ ನಂತರ ಐನೂರು ವರ್ಷಗಳು ಕಳೆದ ಮೇಲೆ. ಬುದ್ಧನ ಅಸಾಮಾನ್ಯ ಜ್ಞಾನವನ್ನು ಸಾಮಾನ್ಯರಿಗೆ ಬೋಧಿಸಲು ಜನಭಾಷೆಯಾದ ಪಾಲಿಯನ್ನು ಬಳಸಿದ್ದ;

ಇವರು ತಮ್ಮ ಗಹನವಾದ. ದಾರ್ಶನಿಕ ನಿಲುವುಗಳನ್ನು ವಿದ್ವತ್ಪ್ರಪಂಚದ ಮುಂದೆ ಸಾದರ ಪಡಿಸಲು ಶಿಷ್ಟಭಾಷೆಯಾದ ಸಂಸ್ಕೃತವನ್ನು ಬಳಸಿದರು. ಈ ಪಂಥದ ಪ್ರಮುಖ ಗ್ರಂಥಗಳಾದ ಪ್ರಜ್ಞಾಪಾರಮಿತಾ, ಲಂಕಾವತಾರ, ಸದ್ಧರ್ಮ ಪುಂಡರೀಕ, ಮುಂತಾದುವೆಲ್ಲಾ ಸಂಸ್ಕೃತದಲ್ಲಿವೆ.

ಕಠಿಣವಾದ ಪ್ರತಿಪಾದನೆ, ಸಂಸ್ಕೃತ ಭಾಷೆ, ಪ್ರಖರ ಭಾವನಾವಾದ, ಶಿಷ್ಟರ ಸೀಮಿತ ವ್ಯಾಪ್ತಿಗೆ ಒಳಪಡುವುದು, ಇವೆಲ್ಲಾ ಬುದ್ಧನ ಪದ್ಧತಿಗೆ ವ್ಯತಿರಿಕ್ತವಾದುವು. ಬೌದ್ಧ ಧರ್ಮವನ್ನು ಹೀಗೆ ಪರಿವರ್ತಿಸಲು ಕಾರಣಗಳೇನಿದ್ದಿರಬಹುದು? ಸಮಾಜದ ವಿಕಾಸದಲ್ಲಿ ಉಂಟಾಗುತ್ತಿದ್ದ ಹೊಸ ಸನ್ನಿವೇಶಗಳಿಂದ ಪ್ರಭಾವಿತವಾಗಿ ಇಂತಹ ಬೆಳವಣಿಗೆ ಆಯಿತೆ? ಈ ಪ್ರಶ್ನೆಯನ್ನು ಹಾಕಿಕೊಂಡು ಎ.ಕೆ. ವಾರ್ಡರ್ ಎಂಬ ವಿದ್ವಾಂಸರು ಒಂದು ಪ್ರಬುದ್ಧ ಪ್ರಬಂಧವನ್ನು ಬರೆದಿದ್ದಾರೆ. ಖ್ಯಾತ ಇತಿಹಾಸತಜ್ಞ ಆರ್.ಎಸ್. ಶರ್ಮಾ ಅವರು ಸಂಪಾದಿಸಿರುವ "ಹಿಸ್ಟಾರಿಕಲ್ ಪ್ರೋಬಿಂಗ್ಸ್" ಎಂಬ ಗ್ರಂಥದಲ್ಲಿ ಅದು ಸೇರ್ಪಡೆಯಾಗಿದೆ. ಆ ಗ್ರಂಥವು ಡಿ.ಡಿ. ಕೋಸಾಂಬಿಯವರ ಸಂಸ್ಮರಣೆಗಾಗಿ ಹೊರತಂದಿರುವ ಪ್ರೌಢ ಗ್ರಂಥ. ಊಳಿಗಮಾನ್ಯ ಪದ್ಧತಿಯು ಸ್ಥಿರವಾಗುವತ್ತ ನಡೆದ ಸಂಕ್ರಮಣ ಸ್ಥಿತಿಯ ಕಾಲ ಕ್ರಿ.ಶ. ಒಂದು ಮತ್ತು ಎರಡನೆಯ ಶತಮಾನ. ಊಳಿಗದವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿರುತ್ತಿದ್ದ ಭಾರಿ ಭೂಮಾಲಿಕರಿಗೆ ಮತ್ತು ಅವರ ಪೋಷಕರಾದ ರಾಜರಿಗೆ ಶ್ರದ್ಧೆಯಿಂದ ನಡೆದುಕೊಳ್ಳುವಂತಹ ಸೇವಕರ ಅವಶ್ಯಕತೆ ಇದ್ದಿತು.

ಧರ್ಮಶಾಸ್ತ್ರಕಾರರು ಚಿತ್ರಿಸಿರುವಂತಹ ಕ್ರೂರ ಸಮಾಜಗಳಲ್ಲಿ ಆಗಾಗ್ಗೆ ಕೆಳ ವರ್ಗಗಳವರು ತಿರುಗಿ ಬೀಳುತ್ತಿದ್ದುದುಂಟು. ಅದರಿಂದಾಗಿ ಮೇಲ್ವರ್ಗವು ತನ್ನ ಅಧೀನದಲ್ಲಿದ್ದವರಿಗೆ ಹತ್ತಾರು ರಿಯಾಯಿತಿಗಳನ್ನು ಕೊಡಬೇಕಾಗಿ ಬಂದಿತ್ತು. ಸಿಡಿದೇಳುವ ಮನೋಭಾವಕ್ಕೆ ಕಡಿವಾಣ ಹಾಕುವುದು ಆಳುವ ವರ್ಗವು ಯಾವಾಗಲೂ ಅನುಸರಿಸುವ ಒಂದು ನೀತಿ. ಬುದ್ಧರು ಮತ್ತು ಬೋಧಿಸತ್ವರು ನಿಷ್ಠೆ-ಗೌರವಗಳನ್ನು ಪಡೆಯಲು ಸಮರ್ಥರಾಗಿದ್ದಂತೆ ಪರೋಪಕಾರಿ ಭೂಮಾಲಿಕರು ಸಹ ಸಮರ್ಥರು, ಎಂಬ ಚಿತ್ರವನ್ನು ಜನರ ಮುಂದೆ ಇರಿಸಬೇಕಾಗಿತ್ತು. ಮಹಾಯಾನ ಬೌದ್ಧ ಧರ್ಮವು ಇದನ್ನು ಯಶಸ್ವಿಯಾಗಿ ನೆರವೇರಿಸಿತು. ಬುದ್ಧ ಮತ್ತು ಬೋಧಿಸತ್ವರನ್ನು ಅನುಕರಿಸುವ ಭೂಮಾಲಿಕರು ಬುದ್ಧರಂತೆ ವಂದ್ಯರು ಎಂಬ ಮಿಥ್ಯೆಯನ್ನು ಜನರ ಮನಸ್ಸಿನಲ್ಲಿ ಬೇರೂರುವಂತೆ ಮಾಡಲು ಮಹಾಯಾನ ಪಂಥವು ನೇರವಾಗಿ ಯತ್ನಿಸಲಿಲ್ಲ; ಆದರೆ ಬುದ್ಧ ಮತ್ತು ಅವನ ಧರ್ಮವನ್ನು ಮೊದಲಿನ ಸ್ವರೂಪ ಕಳೆದುಕೊಳ್ಳುವಂತೆ ಮಾಡಿದ್ದಂತೂ ನಿಜ. ಬುದ್ಧನು ಕ್ರಮೇಣ ಅವಲೋಕಿತೇಶ್ವರನಾಗುವತ್ತ ಮುನ್ನಡೆದದ್ದು ಮಹಾಯಾನದ ಕೊಡುಗೆ. ಅವನಿಗೆ ಶರಣಾಗುವಂತೆ ಅವನ ಪ್ರತಿರೂಪಗಳೆಂದು ಕರೆಯಲಾದ ಭೂಮಾಲಿಕರಿಗೆ ಊಳಿಗದವರು ಶರಣಾಗುವುದು ಒಂದು ಸಹಜ ಕ್ರಿಯೆ ಎಂಬಂತೆ ಚಿತ್ರಿಸಲಾಯಿತು. ಬುದ್ಧರು ಮತ್ತು ಬೋಧಿಸತ್ವರು ಶ್ರಮಣರನ್ನು ಪಾಲಿಸಿ ಪೋಷಿಸುವಂತೆ ಭೂಮಾಲಿಕರು ಊಳಿಗದವರನ್ನು ಪಾಲಿಸಿ ಪೋಷಿಸುತ್ತಾರೆ!

ಮತಧರ್ಮಗಳು ಊಳಿಗಮಾನ್ಯ ವ್ಯವಸ್ಥೆಯನ್ನಾಗಲಿ, ಇಂದಿನ ಬಂಡವಾಳಶಾಹಿ ವ್ಯವಸ್ಥೆಯನ್ನಾಗಲಿ ನೇರವಾಗಿ ರಕ್ಷಿಸಲು ಧಾವಿಸಿ ಬರುವುದಿಲ್ಲ. ಶರಣಾಗತಿಯ ಮನೋಭಾವವನ್ನು ಬೆಳೆಸಿ ವ್ಯವಸ್ಥೆಯನ್ನು ರಕ್ಷಿಸುವುದು, ವಿರೋಧದ ಭಾವನೆಯನ್ನು ಕುಗ್ಗಿಸಿ ಬಂಡೇಳುವ ಪ್ರವೃತ್ತಿಯನ್ನು ತಡೆಗಟ್ಟುವುದು, ಇದು ಮತಧರ್ಮಗಳು ಅನುಸರಿಸುವ ಹಾದಿ. ಸಾಮಾನ್ಯ ಜನರ ತಾತ್ವಿಕ ಸಂಪತ್ತನ್ನು ವೃದ್ಧಿಗೊಳಿಸಿದ್ದ ಬುದ್ಧನು, ಸಂಪತ್ತಿನ ಮಾಲಿಕರಾಗಿದ್ದವರಿಗೆ ಅನುಕೂಲವಾಗುವಂತಹ ತತ್ವವನ್ನು ಪ್ರತಿನಿಧಿಸುವ ಮೂರ್ತಿಯಾಗಿ ಮಾರ್ಪಾಟು ಹೊಂದಿದ್ದು ಮಹಾಯಾನದ ನೇತೃತ್ವದಲ್ಲಿ. ಮಹಾಯಾನ ಪಂಥಗಳು ದಾರ್ಶನಿಕ ಪ್ರಮೇಯಗಳನ್ನು ಆಳವಾದ ತರ್ಕದ ಸಾಧನದಿಂದ ಪ್ರತಿಪಾದಿಸುತ್ತಲೇ ಮೂಲ ಬೌದ್ಧ ಧರ್ಮದ ಆಶಯಗಳನ್ನು ನಗಣ್ಯವೆಂಬಂತೆ ದೂರೀಕರಿಸಿದರು. ಬುದ್ಧನ ಪರಿಭಾಷೆಯನ್ನು ಬಳಸುತ್ತಾ ಅದಕ್ಕೆ ಜಟಿಲವಾದ ವ್ಯಾಖ್ಯಾನ ನೀಡಿ, ದುಃಖ, ಅದರ ಕಾರಣ, ಮತ್ತು ನಿವಾರಣೆಯ ಮಾರ್ಗವನ್ನು ಗೌಣವಾಗಿಸುತ್ತಾ ಮುನ್ನಡೆದರು. ಮಹಾಯಾನ ಪಂಥವು ಪಂಡಿತರ ನಡುವೆ ಶೋಭಿಸಿತು, ಆದರೆ ಮೂಲ ಬೌದ್ಧ ಧರ್ಮದ ತಾತ್ವಿಕ ಚೌಕಟ್ಟಿನಿಂದ ಪಾಮರರು ವಂಚಿಸಲ್ಪಟ್ಟರು.

ಬುದ್ಧನು ಪ್ರಪಂಚವನ್ನು ವ್ಯಾವಹಾರಿಕ ಮತ್ತು ಪಾರಮಾರ್ಥಿಕವೆಂದು ಎರಡು ಸತ್ಯಗಳ ಆಧಾರದಿಂದ ವ್ಯಾಖ್ಯಾನಿಸಿರಲಿಲ್ಲ. ಆದರೆ ನಂತರದ ಮಹಾಯಾನವು ಸಂವೃತ್ತಿ (ಅಂದರೆ, ವ್ಯವಹಾರಕ್ಕೆ ಸೀಮಿತವಾದ್ದು) ಮತ್ತು ಪಾರಮಾರ್ಥಿಕವೆಂದು ಎರಡು ಸತ್ಯಗಳನ್ನು ಎತ್ತಿಹಿಡಿಯಿತು. ದುಃಖವು ಪಾರಮಾರ್ಥಿಕವಾಗಿ ದುಃಖವೇ ಅಲ್ಲವೆಂದು ತರ್ಕಿಸುವುದು ಇದರಿಂದ ಸಾಧ್ಯವಾಗುತ್ತದೆ. ಶೂನ್ಯವಾದ-ವಿಜ್ಞಾನವಾದಗಳು ಅಂತಿಮವಾಗಿ ಇಂತಹ ಸಾಮಾಜಿಕ ತತ್ವವನ್ನು ಪೊರೆಯುತ್ತವೆ. ನಾಗಾರ್ಜುನ, ಆರ್ಯದೇವ, ವಸುಬಂಧು, ಅಸಂಗ, ಮುಂತಾದ ಮಹಾಯಾನ ಪಂಥಗಳ ಪ್ರತಿಪಾದಕರು ನಾಲಂದಾ ವಿಶ್ವವಿದ್ಯಾಲಯದ ವಿದ್ವಾಂಸರು; ಕ್ರಿಸ್ತಪೂರ್ವ ಐದನೆಯ ಶತಮಾನದ ಬುದ್ಧ ಅಂತಹ ಹಣೆಪಟ್ಟಿ ಇಲ್ಲದವನು. ಅನಿತ್ಯ ಮತ್ತು ಅನಾತ್ಮ ವಾದಗಳನ್ನು ಅಂಗೀಕರಿಸುವಾಗ, ದುಃಖವೆಂಬ ಸತ್ಯವು ಎರಡು ತೆರನಾಗಿರಬಹುದೆಂದು ಅವನ ಊಹೆಗೆ ನಿಲುಕಿರಲಿಲ್ಲ. ಉಪನಿಷತ್ತುಗಳ ಭಾವನಾವಾದವನ್ನು ಬುದ್ಧನು ನಿರಾಕರಿಸಿ ಭೌತವಸ್ತುಗಳ ಸ್ವತಂತ್ರ ಅಸ್ತಿತ್ವವನ್ನು ಮಾನ್ಯ ಮಾಡಿದ, ಆದರೆ ಮಾಧ್ಯಮಿಕರಂತಹ ಮಹಾಯಾನ ಪಂಥದವರು ಮತ್ತೆ ಭಾವನಾವಾದಕ್ಕೆ ಜೀವ ಕೊಟ್ಟು ಬುದ್ಧನನ್ನು ನಿರಾಕರಿಸಿದರು; ಅವನಿಗೆ ಹೊಸ ಅವತಾರ ನೀಡಿದರು. ಮಾಧ್ಯಮಿಕರ ಒಂದು ಸಿದ್ಧಾಂತವನ್ನು ಹೀಗೆ ನಿರೂಪಿಸುತ್ತಾರೆ:

"ತತ್ತತ್ ಪ್ರಾಪ್ಯಯದುತ್ಪನ್ನಂನ ಉತ್ಪನ್ನಂ ತತ್ ಸ್ವಭಾವತಃ"- ಅಂದರೆ, ಯಾವುದನ್ನಾದರೂ ಆಧರಿಸಿ ಅಸ್ತಿತ್ವಕ್ಕೆ ಬರುವ ವಸ್ತುವು ತನ್ನಿಂದಲೇ ಅಸ್ತಿತ್ವಕ್ಕೆ ಬಂದುದಲ್ಲ. ಬೇರೆ ಮಾತುಗಳಲ್ಲಿ ಸರಳವಾಗಿ ಹೇಳುವುದಾದರೆ, ಆ ವಸ್ತುವು ಅಸ್ತಿತ್ವದಲ್ಲಿರಲಿಲ್ಲ, ಎಂದರ್ಥ. ಅಸ್ತಿತ್ವದಲ್ಲಿಲ್ಲದಂತಹ ದುಃಖವನ್ನು ನಿವಾರಿಸುವ ಅಗತ್ಯವಾದರೂ ಎಲ್ಲಿಯದು ಎಂಬ ಪ್ರಶ್ನೆ ಆಗ ಅಪ್ರಸ್ತುತವಾಗುವುದಿಲ್ಲ. ಬುದ್ಧನ ಪ್ರತೀತ್ಯ ಸಮುತ್ಪಾದವನ್ನು ವ್ಯಾಖ್ಯಾನಿಸಿದ್ದು ಈ ರೀತಿಯಲ್ಲಲ್ಲ. ಆತನ ಗ್ರಹಿಕೆ ಸುಲಭದಲ್ಲಿ ಅರ್ಥವಾಗುವಂಥದು: ಅಸ್ತಿತ್ವದಲ್ಲಿರುವ ಪ್ರತಿಯೊಂದು ಸಂಗತಿ ಅಥವಾ ಸಾಮಗ್ರಿಯೂ ಒಂದು ಕಾರಣದಿಂದ ಉಂಟಾಗಿದೆ, ಎನ್ನುವುದು ಅವನ ತತ್ವ. ಇದನ್ನು ತಲೆಕೆಳಗು ಮಾಡಿ "ವಿಗ್ರಹವ್ಯಾವರ್ತನೀ" ಎಂಬ ಮಹಾಯಾನ ಪಂಥದ ಗ್ರಂಥವು ಹೇಳುತ್ತದೆ: ಯಾವುದೇ ಕಾರಣದಿಂದಲೇ ಆಗಲಿ ಉತ್ಪನ್ನವಾಗುವ ಸಂಗತಿ ಅಥವಾ ಸಾಮಗ್ರಿಯು ಅಸತ್ಯವಾಗಿರುತ್ತದೆ"

ಇದನ್ನೆಲ್ಲಾ ಗಮನಿಸಿದಾಗ ನಾವು ಯಾವ ಬುದ್ಧನನ್ನು ಸ್ವೀಕರಿಸುತ್ತೇವೆಂಬ ಪ್ರಶ್ನೆಯು ಮಹತ್ವದ್ದಾಗಿರುತ್ತದೆ. ದುಃಖ ಮುಂತಾದುವಕ್ಕೆ ಅಸ್ತಿತ್ವವಿದೆ, ಅವನ್ನು ನಿವಾರಿಸಲು ಕ್ರಮವೊಂದು ಇದೆ ಎನ್ನುವ ಬುದ್ಧ ನಮ್ಮವನೋ, ಅಥವಾ ಅಸ್ತಿತ್ವವನ್ನೇ ಹೊಂದಿರದ ದುಃಖವನ್ನು ನಿವಾರಿಸುವ ಅಗತ್ಯವಿಲ್ಲ, ನೀವು ಸುಮ್ಮನೆ ಬುದ್ಧರಿಗೆ-ಬೋಧಿಸತ್ವರಿಗೆ ಶರಣಾಗಿ, ಆಗ ಎಲ್ಲವೂ ಪರಿಸಮಾಪ್ತಿಯಾಗುತ್ತದೆ. ಎನ್ನುವ ಬುದ್ಧ ನಮ್ಮವನೋ? ಮಹಾಯಾನ ಪಂಥದ ಮಾಧ್ಯಮಿಕರ ಶೂನ್ಯವು ಶೂನ್ಯವಲ್ಲ, ಅದು "ಅನಿರ್ವಚನೀಯ ಅಂತಿಮ ಸತ್ಯದ ಅಭಿಧಾನ" ಎನ್ನುತ್ತಾ ಶೂನ್ಯವಾದದ ಸಮರ್ಥನೆ ನೀಡುವುದುಂಟು. ಇದು ಉಪನಿಷತ್ತಿನ ಬ್ರಹ್ಮವಸ್ತುವಿಗಿಂತ ಭಿನ್ನವಲ್ಲ ಮತ್ತು ಬುದ್ಧನು ಅದನ್ನು ಮಾನ್ಯ ಮಾಡಿರಲಿಲ್ಲ. ಅವೇ ಉಪನಿಷತ್ತುಗಳಲ್ಲಿ ಬೇರೊಂದು ಚಿಂತನಾ ವಿಧಾನವೂ ಇದೆ; ಅದನ್ನಿಲ್ಲಿ ಚರ್ಚೆಗೆತ್ತಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. □

ಮತಧರ್ಮಗಳು ಊಳಿಗಮಾನ್ಯ ವ್ಯವಸ್ಥೆಯನ್ನಾಗಲಿ, ಇಂದಿನ ಬಂಡವಾಳಶಾಹಿ ವ್ಯವಸ್ಥೆಯನ್ನಾಗಲಿ ನೇರವಾಗಿ ರಕ್ಷಿಸಲು ಧಾವಿಸಿ ಬರುವುದಿಲ್ಲ. ಶರಣಾಗತಿಯ ಮನೋಭಾವವನ್ನು ಬೆಳೆಸಿ ವ್ಯವಸ್ಥೆಯನ್ನು ರಕ್ಷಿಸುವುದು, ವಿರೋಧದ ಭಾವನೆಯನ್ನು ಕುಗ್ಗಿಸಿ ಬಂಡೇಳುವ ಪ್ರವೃತ್ತಿ ಯನ್ನು ತಡೆಗಟ್ಟುವುದು, ಇದು ಮತಧರ್ಮಗಳು ಅನು ಸರಿಸುವ ಹಾದಿ.

ನರಕ ಸಾದೃಶ ಕೃಷಿ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ದಲಿತ ಮತ್ತು ದಲಿತೇತರ ವ್ಯಕ್ತಿ ಎಷ್ಟೇ ಒಳ್ಳೆ ಸ್ನೇಹಿತರಾಗಿದ್ದರೂ ಸಹ ಅವರಿಬ್ಬರೂ ಕೃಷಿಕ ವ್ಯವಸ್ಥೆಯಲ್ಲಿ ಒಟ್ಟಿಗೆ ಕುಂತು ಊಟ ಮಾಡುವುದಿಲ್ಲ. ದಲಿತೇತರ ವ್ಯಕ್ತಿ ದಲಿತನ ಮನೆಗೆ ಊಟಕ್ಕೆ ಬರುವುದೆಂದರೆ ದಲಿತನಿಗೆ ಹೆಮ್ಮೆಯ ಸಂಗತಿಯಾಗುತ್ತದೆಯಾದರೆ, ದಲಿತೇತರ ವ್ಯಕ್ತಿಯ ಮನೆಯಲ್ಲಿ ದಲಿತನೊಬ್ಬ ಊಟಕ್ಕೆ ಬರುವುದೆಂದರೆ ಸಮಸ್ಯೆಯಾಗುತ್ತದೆ. ಅಂಥ ಕುಟುಂಬಗಳಲ್ಲಿ ಹಿರಿಯರು ದಲಿತನನ್ನು ಊಟಕ್ಕೆ ಕರೆಯಲು ಒಪ್ಪುವುದಿಲ್ಲ. ಭಾರತದ ಕೆಲವು ಪ್ರದೇಶಗಳಲ್ಲಿ ಅಂಥ ಕ್ರಿಯೆ ಬಹಿಷ್ಕಾರವನ್ನು ಒಳಗೊಂಡಿರುತ್ತದೆ.

ಆದ್ದರಿಂದ ಆತ ದಲಿತನನ್ನು ಎಂದೂ ತನ್ನ ಮನೆಗೆ ಊಟಕ್ಕೆ ಕರೆಯುವುದಿಲ್ಲ. ಇಂಥ ಸಾಮಾಜಿಕ ದುರಂತಕ್ಕೆ ಭಾರತೀಯ ಕೃಷಿಕ ಸಮಾಜ ಒಂದು ಜೀವಂತ ಮ್ಯೂಸಿಯಂ ಆಗಿಬಿಟ್ಟಿದೆ. ಆದರೆ ನಗರ ವ್ಯವಸ್ಥೆಯಲ್ಲಿ ಬಂಡವಾಳಶಾಹಿಯ ಕೂಸುಗಳಾಗಿರುವ ಅವರಿಬ್ಬರೂ ಸಹ ಜತೆಯಾಗಿ ಸಿನಿಮಾಕ್ಕೆ ಹೋಗಿ, ಹೋಟಲಿನಲ್ಲಿ ಕುಂತು ಊಟ ಮಾಡಬಲ್ಲರು.

ಇಂಥ ಮುಜುಗರವನ್ನು ನಮ್ಮ ಎಲ್ಲಾ ಮೊದಲನೇ ತಲೆಮಾರಿನ ಶಿಕ್ಷಿತ ದಲಿತರು ಅನುಭವಿಸಿದ್ದಾರೆ. ಕೃಷಿಕ ಸಮಾಜದಲ್ಲಿನ ಅವರ ಇಂಥ ಭಯಂಕರ ಅನುಭವ ಹಾಗೂ ಬಂಡವಾಳಶಾಹಿ ವ್ಯವಸ್ಥೆಯಡಿ ಅವರಿಗೆ ಸಿಕ್ಕ ಮುಕ್ತತೆಯ ಹೊರತಾಗಿಯೂ ಅವರೆಲ್ಲಾ ಬಂಡವಾಳಶಾಹಿಯನ್ನು ಶತ್ರುವಿನಂತೆಯೇ ನೋಡುತ್ತಾರೆ.

ಗ್ರಾಮಗಳಲ್ಲಿ ದಲಿತರಿಗೆ ಉದ್ಯೋಗ ದೊರೆಯುವುದಿಲ್ಲವೆಂದು, ಅವರಿಗೆ ದಿನಸಿ ಅಂಗಡಿಯಲ್ಲಿ ಧಾನ್ಯ ಕೊಳ್ಳಲು ಬಿಡುವುದಿಲ್ಲವೆಂದು, ಕೆಲವೊಮ್ಮೆ ವೈದ್ಯರು ಅವರಿಗೆ ಚಿಕಿತ್ಸೆ ನೀಡುವುದಿಲ್ಲವೆಂದೂ ದಿನನಿತ್ಯ ಪತ್ರಿಕೆಗಳಲ್ಲಿ ವರದಿಗಳನ್ನು ಓದುತ್ತಿರುತ್ತೇವೆ. ಆದರೆ ದಲಿತರಿಗೆ ಬಹಿಷ್ಕಾರ ಹಾಕಿದ ಅಂಥ ಯಾವುದೇ ವರದಿಗಳನ್ನು ನಾವು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾಣಲಾಗುವುದಿಲ್ಲ ಏಕೆ?

ಒಂದು ಉತ್ಪಾದನಾ ಘಟಕದಲ್ಲಿ ದಲಿತ ಮತ್ತು ದಲಿತೇತರ ಉದ್ಯೋಗಿಗಳು ಪ್ರತಿಭಟನೆ ನಡೆಸಬಹುದು. ಆಗ ಖಂಡಿತವಾಗಿಯೂ ಅವರನ್ನು ಬಂಧಿಸಿ, ದಂಡಿಸಬಹುದು; ಉದ್ಯೋಗದಿಂದ ಅವರು ವಜಾಗೊಳ್ಳುತ್ತಾರೆಯೂ ಹೌದು. ಗ್ರಾಮದಲ್ಲಿಯೂ ಸಹ ಪರಿಸ್ಥಿತಿ ಕೈಮೀರಿದಾಗಲೂ ಇದೇ ಸ್ಥಿತಿ ಉಂಟಾಗುತ್ತದೆ.

ದಲಿತ ಚಳವಳಿಗಳು ಇಂದು ತಮ್ಮ ಸೋಲುಗುಳಿತನದ ಹಲವಾರು ಸಿದ್ಧಾಂತಗಳಿಂದ ಹೊರಬಾರದೆ, ಬಂಡವಾಳಶಾಹಿಗೆ ವಿರೋಧಿಯಾದಾಗ ಸಮುದಾಯವನ್ನು ಕೃಷಿ ಸಮಾಜದ ನರಕಕ್ಕೆ ಸಿಕ್ಕಿಕೊಳ್ಳುವಂತೆ ಮಾಡುತ್ತವೆ. ಕಾರ್ಲ್‌ಮಾರ್ಕ್ಸ್‌ನಂಥವರಿಂದ ದಲಿತ ಚಳವಳಿಗಳು ಸ್ಫೂರ್ತಿಯನ್ನು ಪಡೆದುಕೊಳ್ಳಬಹುದು. ಆತನಿಗೆ ಬಂಡವಾಳಶಾಹಿ ವ್ಯವಸ್ಥೆ ಎನ್ನುವುದು ಕೃಷಿಕ ಸಮಾಜವನ್ನು ನಾಗರಿಕತೆಯತ್ತ ಒಯ್ಯುವ ಪ್ರಗತಿಯ ಪಥವಾಗಿತ್ತು.

ಆತನ ಸಮಾಜವಾದದ ತರ್ಕ ಉದ್ದೀಪನ ಔಷಧಿಯಾಗಬಹುದು. ಆದರೆ ಸಮಾಜವಾದ ಎನ್ನುವುದು ಎಲ್ಲಿದೆ? ಅಕ್ಟೋಬರ್‌ನ ಲೆನಿನ್ ಕ್ರಾಂತಿ ನುಚ್ಚುನೂರಾಗಿದೆ. ವಾಸ್ತವದಲ್ಲಿ ಪೂರ್ವ ಯೂರೋಪ್ ಎನ್ನುವುದು ಸಮಾಜವಾದದ ಭಾರದಿಂದ ಕುಸಿದುಹೋಗಿವೆ. ಹೀಗಿದ್ದರೂ, ಚೀನಾ ದೇಶವು ಶೀಘ್ರವಾಗಿ ಬಂಡವಾಳಶಾಹಿಯತ್ತ ಸಾಗಿ ಉಳಿದುಕೊಂಡಿತು.

ಗ್ರಾಮಗಳಲ್ಲಿ ದಲಿತರಿಗೆ ಉದ್ಯೋಗ ದೊರೆಯುವುದಿಲ್ಲವೆಂದು, ಅವರಿಗೆ ದಿನಸಿ ಅಂಗಡಿಯಲ್ಲಿ ಧಾನ್ಯ ಕೊಳ್ಳಲು ಬಿಡುವುದಿಲ್ಲವೆಂದು, ಕೆಲ ವೊಮ್ಮೆ ವೈದ್ಯರು ಅವರಿಗೆ ಚಿಕಿತ್ಸೆ ನೀಡುವುದಿಲ್ಲ ವೆಂದೂ ದಿನನಿತ್ಯ ಪತ್ರಿಕೆಗಳಲ್ಲಿ ವರದಿಗಳನ್ನು ಓದುತ್ತಿರುತ್ತೇವೆ. ಆದರೆ ದಲಿತರಿಗೆ ಬಹಿಷ್ಕಾರ ಹಾಕಿದ ಅಂಥ ಯಾವುದೇ ವರದಿಗಳನ್ನು ನಾವು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾಣಲಾಗುವು ದಿಲ್ಲ ಏಕೆ? ಒಂದು ಉತ್ಪಾದನಾ ಘಟಕದಲ್ಲಿ ದಲಿತ ಮತ್ತು ದಲಿತೇತರ ಉದ್ಯೋಗಿಗಳು ಪ್ರತಿಭಟನೆ ನಡೆಸಬಹುದು.

ಸಮಾಜವಾದ ಎನ್ನುವ ಸಿದ್ಧಾಂತ ಯಾವುದೇ ಮಾನವ ಪ್ರವೃತ್ತಿಯನ್ನು ಗಮನಿಸದೆ ವಾಸ್ತವದಿಂದ ದೂರ ಉಳಿದುಕೊಂಡುಬಿಟ್ಟಿದೆಯಾದ್ದರಿಂದ ಅದು ಸೋಲುವುದು ಖಚಿತ. ಎಲ್ಲಾ ಮಾನವರು ಅವರ ವರ್ಗ, ಜಾತಿ, ಲಿಂಗ, ವಯಸ್ಸು ಮತ್ತು ನಂಬಿಕೆಗಳನ್ನು ಹೊರತುಪಡಿಸಿದಾಗಿಯೂ ಸಹ ಇತರರಿಗಿಂತ ತಾವು ಹೆಚ್ಚಿನ ಸಾಧನೆಯಲ್ಲಿ ತೊಡಗುವವರಾಗಿದ್ದಾರೆ. ಮಗುವೊಂದು ತನ್ನ ತಂದೆಗಿಂತ ಅಧಿಕ ಸಾಧನೆಯಲ್ಲಿ ತೊಡಗುತ್ತಾನೆ. ಒಬ್ಬ ಸಹೋದರ ಇನ್ನೊಬ್ಬ ಸಹೋದರನಿಗಿಂತಲೂ ಹೆಚ್ಚಿನ ಸಾಧನೆ ಮಾಡುತ್ತಾನೆ. ಹಾಗೆಯೇ ಹೆಣ್ಣು ಮಕ್ಕಳೂ ಸಹ!

ಆದ್ದರಿಂದ, ಮಾನವನ ಸ್ಪರ್ಧಾತ್ಮಕತೆಯನ್ನು ಮತ್ತು ಗ್ರಾಹಕ ಪ್ರವೃತ್ತಿಯನ್ನು ಸಮಾಜವಾದ ಅದುಮಿ ಬಿಡುತ್ತದೆ. ಸಮಾವಾದ ಆಚರಣೆಯಲ್ಲಿರುವ ಸಮಾಜಗಳಲ್ಲಿ ಮಾನವರು ಗುರಿಯಿಲ್ಲದವರಂತಿರುತ್ತಾರೆ. ಜೀವನದಲ್ಲಿ ಗುರಿ ಇಲ್ಲದಿರುವಾಗ ಜನ ಮಹತ್ವಾಕಾಂಕ್ಷಿಗಳಾಗಿರುವುದಿಲ್ಲ. ಜೀವನ ತರಗೆಲೆಯಂತಿರುತ್ತದೆ. ಜನರೆಲ್ಲಾ ಮೂಲಭೂತ ಅಗತ್ಯಗಳಲ್ಲೇ ಜೀವಿಸುತ್ತಿರುತ್ತಾರೆ. ಆದ್ದರಿಂದ ರಷ್ಯಾ, ಪೂರ್ವ ಯೂರೋಪ್, ಚೀನಾ ದೇಶಗಳಲ್ಲಿ ಮೊದಮೊದಲು ಕೈಗಾರಿಕೆಗಳನ್ನು ಬದಿಗೊತ್ತಿದರು. ಅವರೆಲ್ಲಾ ಒಂದು ರೀತಿಯ ಗಾಂಧಿಯನ್ ಪ್ರವೃತ್ತಿಗೆ ಸಿಲುಕಿದರು.

ಹೀಗಿದ್ದರೂ ಹಲವಾರು ದಲಿತ ಸಂಘಟನೆಗಳು ಅಥವಾ ಮೊದಲ ತಲೆಮಾರಿನ ಶಿಕ್ಷಿತ ದಲಿತರು ನೌಕರಿ ಗಳಿಸಿಕೊಂಡು ನಗರ ಬದುಕಿಗೆ ಆಕರ್ಷಿತರಾದರೇ ವಿನಾಃ ಕೃಷಿಕ ಸಮಾಜದೆಡೆ ಅಲ್ಲ.

ದಲಿತ ಚಳವಳಿಗಳು ಇಂದು ತಮ್ಮ ಸೋಲುಗುಳಿತನದ ಹಲವಾರು ಸಿದ್ಧಾಂತಗಳಿಂದ ಹೊರಬಾರದೆ, ಬಂಡವಾಳಶಾಹಿಗೆ ವಿರೋಧಿಯಾದಾಗ ಸಮುದಾಯವನ್ನು ಕೃಷಿ ಸಮಾಜದ ನರಕಕ್ಕೆ ಸಿಕ್ಕಿಕೊಳ್ಳುವಂತೆ ಮಾಡುತ್ತವೆ. ಕಾರ್ಲ್‌ಮಾರ್ಕ್ಸ್‌ನಂಥವರಿಂದ ದಲಿತ ಚಳವಳಿಗಳು ಸ್ಫೂರ್ತಿಯನ್ನು ಪಡೆದುಕೊಳ್ಳಬಹುದು. ಆತನಿಗೆ ಬಂಡವಾಳಶಾಹಿ ವ್ಯವಸ್ಥೆ ಎನ್ನುವುದು ಕೃಷಿಕ ಸಮಾಜವನ್ನು ನಾಗರಿಕತೆಯತ್ತ ಒಯ್ಯುವ ಪ್ರಗತಿಯ ಪಥವಾಗಿತ್ತು. ಆತನ ಸಮಾಜವಾದದ ತರ್ಕ ಉದ್ದೀಪನ ಔಷಧಿಯಾಗಬಹುದು. ಆದರೆ ಸಮಾಜವಾದ ಎನ್ನುವುದು ಎಲ್ಲಿದೆ? ಅಕ್ಟೋಬರ್‌ನ ಲೆನಿನ್ ಕ್ರಾಂತಿ ನುಚ್ಚುನೂರಾಗಿದೆ. ವಾಸ್ತವದಲ್ಲಿ ಪೂರ್ವ ಯೂರೋಪ್ ಎನ್ನುವುದು ಸಮಾಜವಾದದ ಭಾರದಿಂದ ಕುಸಿದು ಹೋಗಿವೆ. ಹೀಗಿದ್ದರೂ, ಚೀನಾ ದೇಶವು ಶೀಘ್ರವಾಗಿ ಬಂಡವಾಳಶಾಹಿಯತ್ತ ಸಾಗಿ ಉಳಿದುಕೊಂಡಿತು.

ಅನು : ಡೊಮಿನಿಕ್. ಡಿ

ಗಲಭೆಯನ್ನು ಆಚರಿಸುವ ಬಗೆ

ಎಲ್ಲಾ ದಲಿತ ಸಿದ್ಧಾಂತಗಳಲ್ಲಿ ಪರೋಕ್ಷವಾಗಿ ಯಾದರೂ ಕೈಗಾರೀಕೃತ ಮತ್ತು ನಗರೀಕೃತ ಭಾರತದೆಡೆ ಒಮ್ಮತವಿದೆಯೆಂಬುದನ್ನು ಗಮನಿಸಬೇಕಾಗುತ್ತದೆ. ಶಿಕ್ಷಿತ ದಲಿತನಾರೂ ಸಹ ಕೃಷಿಕ ಸಮಾಜವನ್ನು ಪ್ರೀತಿಸಲಾರ. ಇದಕ್ಕಿಂತಲೂ ಮುಖ್ಯವಾದ ಪ್ರಶ್ನೆಯೆಂದರೆ ಕೃಷಿಕ ಊಳಿಗಮಾನ್ಯ ಸಮಾಜವನ್ನು ಯಾವಶಕ್ತಿ ಪಲ್ಲಟಗೊಳಿಸಬಹುದು ಎಂಬುದಾಗಿದೆ.

ಅನುಭವ ತೋರಿಸಿಕೊಟ್ಟಿರುವಂತೆ ಸಮಾಜವಾದ ಕೈಗಾರೀಕರಣವನ್ನು ಮತ್ತು ನಗರೀಕರಣವನ್ನು ಕುಂಟಿತಗೊಳಿಸುತ್ತದೆ. ಕೈಗಾರೀಕರಣವಿಲ್ಲದೆ ನಗರೀಕರಣ ಸಾಧ್ಯವಿಲ್ಲ. ಆದ್ದರಿಂದ ಜಗತ್ತಿನಾದ್ಯಂತ ಬಂಡವಾಳಶಾಹಿ ಸಿದ್ಧಾಂತ ಕೈಗಾರಿಕಾ ಕ್ರಾಂತಿಗೆ ಕಾರಣವಾಯಿತು ಎಂಬುದನ್ನು ನಾವೆಲ್ಲಾ ತಿಳಿದುಕೊಂಡಿದ್ದೇವೆ. ಕೃಷಿಕ ಸಮಾಜದ ಬದಲಾವಣೆಗೆ ಬಂಡವಾಳಶಾಹಿ ವ್ಯವಸ್ಥೆ ಮಾತ್ರ ಕಾರಣವಾಗುತ್ತದೆ ಎಂಬುದನ್ನು ಮತ್ತೊಮ್ಮೆ ಒತ್ತಿ ಹೇಳಬೇಕಾಗಿಲ್ಲ. ಇದನ್ನು ಬಿಟ್ಟು ಭಾರತ ಕೈಗಾರೀಕರಣಗೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ದಲಿತ ಚಳವಳಿಗಳು ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಮರು ಚಿಂತಿಸುವ ಅಗತ್ಯವಿದೆ.

ನಾವು ಬಂಡವಾಳ ಶಾಹಿ ವಿರುದ್ಧ ಹೋರಾಡುವುದೆಂದರೆ ಅಂತಿಮವಾಗಿ ಕೃಷಿಕ ಸಮಾಜವನ್ನು ಎತ್ತಿಹಿಡಿಯುವುದೇ ಆಗುತ್ತದೆ. ದಲಿತ ಚಳವಳಿಗಳು ಭಾರತದಲ್ಲಿ ಬಂಡವಾಳ ಹಂಚಿಕೆಗಾಗಿ ಹೋರಾಟ ನಡೆಸಬೇಕಾಗಿ ದೆಯೇ ಹೊರತು ಮತ್ತೇನು ಅಲ್ಲ. ಆಗಲೇ ವ್ಯಾಪಾರದಲ್ಲಿ ಅವಕಾಶ ಸಿಕ್ಕಂತಾಗುತ್ತದೆ.

ಆದ್ದರಿಂದ ಬಂಡವಾಳಶಾಹಿಯಲ್ಲಿ ದಲಿತರು ಹಕ್ಕುಳ್ಳವರಾಗಿ ಭಾರತದಲ್ಲಿರುವ ಕೃಷಿಕ ಸಮಾಜದ ಬದಲಾವಣೆಗೆ ಕಾರಣೀಭೂತರಾಗಬೇಕಾಗಿದೆ.

ಭಾರತೀಯ ಚರಿತ್ರೆಯಲ್ಲಿ 1857 ಒಂದು ಮರೆಯಲಾಗದ ಬಹುಮುಖ್ಯ ವರ್ಷ. ಆಧುನಿಕ ಭಾರತೀಯ ಚರಿತ್ರೆಯನ್ನು ಆರಂಭಿಸಿದ ಪ್ಲಾಸೀ ಕದನದ ಸೆಂಟಿನರಿಯನ್ನು ಆ ವರ್ಷ ನೆನಪಿಸುತ್ತದೆ.

ಕೇವಲ ನೂರು ವರ್ಷಗಳಳೊಳಗೆ ಅಂದರೆ ಏಪ್ರಿಲ್ 4, 1853ರ ವೇಳೆಗೆ ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ಒಂದು ಮಹತ್ವದ ಸಾಮಾಜಿಕ ಕ್ರಾಂತಿಗೆ ಮುನ್ನುಡಿ ಹಾಕಿತೆಂದರೆ ಅದಕ್ಕೆ ರಾಬರ್ಟ್ ಕ್ಲೈವ್‌ನ ವ್ಯಕ್ತಿಗತ ಸಾಹಸಗಳೇ ಮುಖ್ಯ ಕಾರಣ ಎಂದರೆ ತಪ್ಪಾಗಲಾರದು. ಅಂದು ಮೊದಲ ಪ್ರಯಾಣಿಕ ರೈಲು ಪೋರ್ ಬಂದರ್, ಮುಂಬಾಯಿ ಮತ್ತು ಥಾನಾಗಳ ನಡುವೆ ಸಂಚರಿಸಲು ತೊಡಗಿತು. ನಮಗೆ ಗೊತ್ತಿರುವಂತೆ ಅಸ್ಪೃಶ್ಯರೆನಿಸಿಕೊಂಡವರಿಗೆ ರೈಲು ಒಂದು ಪಕ್ಷಾತೀತವಾಗಿ ಅಲ್ಲಿ ಕುಳಿತುಕೊಳ್ಳಲು ಒಂದು ಅವಕಾಶವನ್ನು ಕಲ್ಪಿಸಿತು. ಅಲ್ಲಿಂದ ಆರಂಭವಾದ ಆ ಪ್ರಕ್ರಿಯೆಯಲ್ಲಿ ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಮಾಡದಷ್ಟು ಹೆಚ್ಚಿನ ಕಾರ್ಯವನ್ನು ಭಾರತೀಯ ರೈಲ್ವೇಸ್ ಪ್ರತ್ಯೇಕತೆಯ ವಿರುದ್ಧ ಮಾಡಿತೆಂದರೆ ನಂಬಲಾಗದು.

ಅದಕ್ಕಿಂತಲೂ ಹೆಚ್ಚಾಗಿ ಆಧುನಿಕ ಯೂರೋಪಿಗೆ 1215ರಲ್ಲಿ ಸಹಿಗೊಂಡ **ಮಾಗ್ನ ಕಾರ್ಟ ಲಿಬೇರ್ತಾತುಮ್** (ಸ್ವಾತಂತ್ರ್ಯದ ಶ್ರೇಷ್ಠ ಅಧಿನಿಯಮ) ಹೇಗೆ ಮುಖ್ಯವೋ ಅದಕ್ಕಿಂತಲೂ ಅಧಿಕವಾಗಿ 1857 ನಮಗೆ ಮುಖ್ಯವಾಗುತ್ತದೆ. **ಮಾಗ್ನ ಕಾರ್ಟ ಲಿಬೇರ್ತಾತುಮ್** ಯೂರೋಪಿನಲ್ಲಿ ಆಧುನಿಕ ಸಂವಿಧಾನಬದ್ಧ ಆಡಳಿತದ ವಿಕಾಸಕ್ಕೆ ನಾಂದಿಯಾಯಿತು. ಹಾಗೆಯೇ 1857 ಭಾರತದಲ್ಲಿ ವಿಮುಕ್ತಿಯ ಬೀಜವನ್ನು ಬಿತ್ತುತ್ತದೆ. **ಮಾಗ್ನ ಕಾರ್ಟ ಲಿಬೇರ್ತಾತುಮ್** ನಂತೆ 1857 ನಮ್ಮ ಬದುಕನ್ನು ಮತ್ತು ಚಿಂತನೆಯನ್ನು ಪ್ರಭಾವಿಸುತ್ತಿದೆ.

ಭಾರತೀಯ ಆಧುನಿಕತೆಗೆ ದೂತನಾಗಿರುವ ಚಾರ್ಲ್ಸ್ ಗ್ರಾಂಟ್ ಹೀಗೆನ್ನುತ್ತಾನೆ, "ಈ ದುಸ್ಥಿತಿಗೆ ಕಾರಣವಾಗಿರುವುದು ಅಜ್ಞಾನ ಮತ್ತು ಅದಕ್ಕೆ ಪರಿಹಾರವೆಂದರೆ ಶಿಕ್ಷಣವೇ ಆಗಿದೆ". ಈ ಸೂಚನೆಯೊಂದಿಗೆ ಗ್ರಾಂಟ್ ಮತ್ತು ಆತನ ಸಹಪಾಠಿಗಳು ಉತ್ಸಾಹದಿಂದ ಭಾರತೀಯರಿಗೆ ಆಧುನಿಕ ಶಿಕ್ಷಣವನ್ನು ನೀಡುವ ಜವಾಬ್ದಾರಿಯನ್ನು ಕಂಪನಿಗೆ ವಹಿಸಿಕೊಡುವಂತೆ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಪ್ರಭಾವ ಬೀರತೊಡಗುತ್ತಾರೆ. ಈ ಗುಂಪಿನಲ್ಲಿ ಮೆಕಾಲೆಯ ತಂದೆ ಜಕರಿಯಾ ಮೆಕಾಲೆಯವರೂ ಸಹ ಇದ್ದರು. ಹೀಗೆ ಭಾರತೀಯರಿಗೆ ಶಿಕ್ಷಣ ನೀಡುವ ಗೊತ್ತುವಳಿ ಆದಾಕ್ಷಣ ಕಂಪನಿಯು ಅದಕ್ಕಾಗಿ ಒಂದು ಲಕ್ಷವನ್ನು ಮೀಸಲಿಟ್ಟ ಕಾರಣ ಕ್ಲಾಫಾಂ ಶಾಲೆ ಮುಂದೆ ಉದಯಿಸುತ್ತದೆ. ಅಲ್ಲದೆ ಕಂಪನಿಯು ಇಲ್ಲಿನ ಸ್ಥಳೀಯ ಶಿಕ್ಷಣದ ಬಗ್ಗೆ ಒಂದು ಸಮೀಕ್ಷೆಯನ್ನು ಕೈಗೊಳ್ಳುತ್ತದೆ. ಅದರಲ್ಲಿ ಅಸ್ಪೃಶ್ಯರ ಸಾಕ್ಷರತೆಯ ಬಗ್ಗೆಯೂ ಅಂಕಿ-ಅಂಶಗಳನ್ನು ಸಂಗ್ರಹಿಸುವ ಉದ್ದೇಶವೂ ಇತ್ತು.

1857, ಮೇ 20ರಂದು ಈಸ್ಟ್ ಇಂಡಿಯಾ ಕಂಪನಿಯ ಕೋರ್ಟ್ ಆಫ್ ಡೈರೆಕ್ಟರ್ಸ್ ಈ ಕೆಳಗಿನ ಆದೇಶವನ್ನು ಹೊರಡಿಸುತ್ತಾರೆ:

"ಒಂದು ಸರ್ಕಾರಿ ಶಾಲೆ ಅಥವಾ ಕಾಲೇಜು ಜಾತಿಯಾಧಾರದಲ್ಲಿ ಯಾರಿಗೂ ಸಹ ಪ್ರವೇಶವನ್ನು ನಿರಾಕರಿಸಬಾರದು ಹಾಗೂ 1863ರಲ್ಲಿ ರಾಜ್ಯ ಕಾರ್ಯದರ್ಶಿ ಮರುಪರಿಶೀಲಿಸಿ, ಈಗ ಅದು ನಿಯಮವಾಗುವಂತೆ ಮಾಡಲಾಗಿದೆ. ಅಲ್ಲದೆ, ಎಲ್ಲಾ ಸಂಸ್ಥೆಗಳು ಅದನ್ನು ಎಚ್ಚರಿಕೆಯಿಂದ ಅನ್ವಯಿಸತಕ್ಕದ್ದು. ಸಾರ್ವಜನಿಕ ಹಣದಿಂದ ಈ ಸಂಸ್ಥೆಗಳನ್ನು ನಡೆಸುತ್ತಿರುವುದರಿಂದ ಅಲ್ಲಿ ಯಾವುದೇ ಜನಾಂಗಕ್ಕೆ ಮೀಸಲಾಗಿರಕೂಡದು. ಕೆಲವೊಮ್ಮೆ ಮೊಂಡುವಾದ ಹೂಡುವ ಯಾವುದೇ ಸಮಾಜವೂ ಸಹ ಯಾವುದೇ ಸಬೂಬುಗಳನ್ನು ನೀಡಿದರೂ ಸಹ, ಅವರ ಧಾರ್ಮಿಕ ಭಾವನೆಗಳಿಗೆ ಒತ್ತುಕೊಡದೆ ಅನುಸರಿಸತಕ್ಕದ್ದು..."

1854ರಲ್ಲಿ ಬ್ರಿಟಿಷರು ಆಧುನಿಕ ವಿದ್ಯಾಭ್ಯಾಸವನ್ನು ಆರಂಭಿಸುತ್ತಾರೆ. ಆಗ ಹೊಸ ಸಮಸ್ಯೆಯೊಂದು ಎದುರಾಗುತ್ತದೆ. ದೇಶದ ಅನೇಕ ಕಡೆ ಅಸ್ಪೃಶ್ಯರೂ ಸಹ ಶಿಕ್ಷಣಕ್ಕೆ ಅರ್ಹರು ಎನ್ನುವುದನ್ನು ಒಪ್ಪದ ಸಮಾಜವು ಸಿಟ್ಟುಗೊಳ್ಳುತ್ತದೆ. ಈ ಸಮಾಜ ತಮ್ಮ ಧಾರ್ಮಿಕ ಮತ್ತು ಸಾಮಾಜಿಕ ನಿರ್ಬಂಧಗಳನ್ನು ತೋರಿಸುತ್ತಾ ಅಸ್ಪೃಶ್ಯರು ಶಾಲೆ ಪ್ರವೇಶಿಸುವುದನ್ನು ವಿರೋಧಿಸಿದರು. ಈ ಪರಿಸ್ಥಿತಿಯನ್ನು ಗಮನಿಸಿದ ಈಸ್ಟ್ ಇಂಡಿಯಾ ಕಂಪನಿಯು ಮೇ 20, 1857ರಲ್ಲಿ ಒಂದು ಕಾನೂನನ್ನು ಜಾರಿಗೊಳಿಸುತ್ತದೆ. ಆಗ ಅನೇಕ ಶಾಲೆಗಳು ಅಸ್ಪೃಶ್ಯಮಕ್ಕಳು ಶಾಲೆ ಪ್ರವೇಶಿಸುವುದನ್ನು ಬಹಿಷ್ಕರಿಸಿದವು. ಅನೇಕಕಡೆ ಅಸ್ಪೃಶ್ಯ ಕೇರಿಗಳಿಗೆ ನುಗ್ಗಿ ಆಕ್ರಮಣ ನಡೆಸಿದರಲ್ಲದೆ, ಅವರ ಮನೆಗಳನ್ನು ಮತ್ತು ಬೆಳೆಗಳನ್ನು ಸುಡಲಾಯಿತು. ಭಾರತೀಯ ಸಮಾಜದ ಈ ಕ್ರಮದಿಂದ ಬೇಸತ್ತ ಬ್ರಿಟಿಷರು ದಲಿತ ಮಕ್ಕಳಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆರೆಯಬೇಕಾಯಿತು. ಹೀಗೆ ದಲಿತರಿಗೆ ಅಕ್ಷರಾಭ್ಯಾಸ ಮೊದಲಾಯಿತು.

1857ರ ಈ ವಿದ್ಯಮಾನವು ಅದ್ಭುತವಾಗಿ ಚಾರಿತ್ರಿಕ ಸಂಕಥನಗಳನ್ನು ರೂಪಿಸಿತು. ಕಂಪನಿಯ ಹಿಂದಿನ ಅಧ್ಯಕ್ಷ ಹಾಗೂ ಪಾರ್ಲಿಮೆಂಟ್ ಸದಸ್ಯನಾಗಿದ್ದ ಚಾರ್ಲ್ಸ್‌ಗ್ರಾಂಟ್ (1746-1833) ಬರೆದ "ಗ್ರೇಟ್ ಬ್ರಿಟನ್‌ನ ಏಷಿಯಾಟಿಕ್ ಜನರ ಅದರಲ್ಲೂ ಮೊರಾಲ್ಸ್‌ರ ಸ್ಥಿತಿಗತಿ ಮತ್ತು ಅವರನ್ನು ಅಭಿವೃದ್ಧಿಪಡಿಸುವ ಮಾರ್ಗೋಪಾಯಗಳು" ಎಂಬ ಕೃತಿಯನ್ನು ಬರೆದು ಅದನ್ನು ಕೋರ್ಟ್ ಆಫ್ ಡೈರೆಕ್ಟರ್ಸ್‌ಗೆ 1797ರಲ್ಲೇ ಸಲ್ಲಿಸಿದ್ದ.

ಭಾರತೀಯ ಆಧುನಿಕತೆಗೆ ದೂತನಾಗಿರುವ ಚಾರ್ಲ್ಸ್‌ಗ್ರಾಂಟ್ ಹೀಗೆನ್ನುತ್ತಾನೆ, "ಈ ದುಸ್ಥಿತಿಗೆ ಕಾರಣವಾಗಿರುವುದು ಅಜ್ಞಾನ ಮತ್ತು ಅದಕ್ಕೆ ಪರಿಹಾರವೆಂದರೆ ಶಿಕ್ಷಣವೇ ಆಗಿದೆ". ಈ ಸೂಚನೆಯೊಂದಿಗೆ ಗ್ರಾಂಟ್ ಮತ್ತು ಆತನ ಸಹಪಾಠಿಗಳು ಉತ್ಸಾಹದಿಂದ ಭಾರತೀಯರಿಗೆ ಆಧುನಿಕ ಶಿಕ್ಷಣವನ್ನು ನೀಡುವ ಜವಾಬ್ದಾರಿಯನ್ನು ಕಂಪನಿಗೆ ವಹಿಸಿಕೊಡುವಂತೆ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಪ್ರಭಾವ ಬೀರತೊಡಗುತ್ತಾರೆ. ಈ ಗುಂಪಿನಲ್ಲಿ ಮೆಕಾಲೆಯ ತಂದೆ ಜಕರಿಯಾ ಮೆಕಾಲೆಯವರೂ ಸಹ ಇದ್ದರು. ಹೀಗೆ ಭಾರತೀಯರಿಗೆ ಶಿಕ್ಷಣ ನೀಡುವ ಗೊತ್ತುವಳಿ ಆದಾಕ್ಷಣ ಕಂಪನಿಯು ಅದಕ್ಕಾಗಿ ಒಂದು ಲಕ್ಷವನ್ನು ಮೀಸಲಿಟ್ಟ ಕಾರಣ ಕ್ಲಾಫಾಂ ಶಾಲೆ ಮುಂದೆ ಉದಯಿಸುತ್ತದೆ. ಅಲ್ಲದೆ ಕಂಪನಿಯು ಇಲ್ಲಿನ ಸ್ಥಳೀಯ ಶಿಕ್ಷಣದ ಬಗ್ಗೆ ಒಂದು ಸಮೀಕ್ಷೆಯನ್ನು ಕೈಗೊಳ್ಳುತ್ತದೆ. ಅದರಲ್ಲಿ ಅಸ್ಪೃಶ್ಯರ ಸಾಕ್ಷರತೆಯ ಬಗ್ಗೆಯೂ ಅಂಕಿ-ಅಂಶಗಳನ್ನು ಸಂಗ್ರಹಿಸುವ ಉದ್ದೇಶವೂ ಇತ್ತು.

ಮದ್ರಾಸ್‌ನ ಗೌರ್ನರ್ ಆಗಿದ್ದ ಸರ್ ಥಾಮಸ್ ಮನ್ರೋ 1822ರ ಜುಲೈನಲ್ಲಿ ಗುರುತಿಸಿದಂತೆ ಸ್ಥಳೀಯ ಶಿಕ್ಷಣ ಪಡೆಯುತ್ತಿದ್ದವರ ಸಂಖ್ಯೆ ಸುಮಾರು 1,88,650. ಆದರೆ ಅವರಲ್ಲಿ ಅಸ್ಪೃಶ್ಯರು ಒಬ್ಬರು ಇರಲಿಲ್ಲ. ಹಾಗೆಯೇ ಮುಂಬಾಯಿ ಪ್ರಾಂತ್ಯದಲ್ಲಿ ಸಮೀಕ್ಷೆ ನಡೆಸಿದ ಮೌಂಟ್ ಸ್ಟುವರ್ಟ್ ಎಲ್ಫಿನ್ಸ್ಟೋನ್ ಸಹ ಗುರುತಿಸಿದಂತೆ ಅಸ್ಪೃಶ್ಯರು ಯಾರು ಅಂಥ ಶಿಕ್ಷಣವನ್ನು ಪಡೆಯುತ್ತಿರಲಿಲ್ಲ. ಬಂಗಾಳದಲ್ಲಿ ಸಮೀಕ್ಷೆ ನಡೆಸಿದ ಗೌರ್ನರ್ ಡಬ್ಲ್ಯು ಆಡಂನಿಗೆ ಕೆಲವೇ ಮಂದಿ ಅಸ್ಪೃಶ್ಯರು ಅಲ್ಲಿ ಕಂಡುಬಂದರು.

ಇದರಿಂದ ಆಘಾತಕ್ಕೊಳಗಾದ ಬ್ರಿಟಿಷರು ಗುರುತಿ

ಹಿದ್ದೇನೆಂದರೆ ಅಂಥ ಶಾಲೆಗಳನ್ನು ನಡೆಸುತ್ತಿದ್ದವರು ಪಂಡಿತರು ಮತ್ತು ಮದ್ರಸಾಗಳು ಆಗಿದ್ದು ಅಲ್ಲಿ ಅಸ್ಪೃಶ್ಯರಿಗೆ ಪ್ರವೇಶ ಇರಲಿಲ್ಲ. ಹೀಗಿರುವಲ್ಲಿ 1857 ಅಂಥ ಸ್ಥಿತಿಯನ್ನು ಪಲ್ಲಟಗೊಳಿಸಿತು. ಆದ್ದರಿಂದ ಅಂಥ ವರ್ಷವನ್ನು ನಾವು ಸಂಭ್ರಮದಿಂದ ಆಚರಿಸಬಾರದೇಕೆ?

ಬಹು ಮುಖ್ಯ ಸಮಸ್ಯೆಯೆಂದರೆ ಇಂದಿಗೂ ಸಹ ಸಮಾನತೆಯೆನ್ನುವುದು ಅಳತೆಗೆ ಸಿಗದೆ ರಹಸ್ಯವಾಗಿಯೇ ಉಳಿದುಕೊಂಡಿರುವುದು. ಅದರ ಬಗ್ಗೆ ನಾವು ಮಾತನಾಡಿದಷ್ಟು ಅದು ಮತ್ತಷ್ಟು ಗೊಂದಲಕ್ಕೆ ಬೀಳುತ್ತದೆ.

ಇಲ್ಲೊಂದು ನಿದರ್ಶನವನ್ನು ಗಮನಿಸೋಣ. ದಲಿತ ಕುಟುಂಬದ ವ್ಯಕ್ತಿಯೊಬ್ಬ ಮಾರುತಿ 800ನಲ್ಲಿರುವಾಗ ಆತನ ನೆರೆಯವ ಒಂದು ಮೆರ್ಸಿಡಸ್ ಕಾರೊಂದನ್ನು ಖರೀಗಿಸುತ್ತಾನೆ. ಇದನ್ನು ಅಸಮಾನತೆ ಎಂದಿಟ್ಟುಕೊಳ್ಳೋಣ. ಈ ಪ್ರಕರಣದಲ್ಲಿ ದಲಿತ ಏನು ಮಾಡಬೇಕು? ಆತ ಇಂಥ ಅಸಮಾನತೆಯನ್ನು ಸೃಷ್ಟಿಸಿದ ವ್ಯವಸ್ಥೆಯ ವಿರುದ್ಧ ಹೋರಾಡಬೇಕೆ ಅಥವಾ ತನ್ನ ಮಕ್ಕಳು ಮೆರ್ಸಿಡಸ್ ಮಾಲೀಕರಾಗುವಂತೆ ಆತ ದುಡಿಯಬೇಕೆ?

ಸಮಾನತೆಯ ಇಂಥ ಮೆರ್ಸಿಡಸ್, ಬೆಂಝ್, ಮಾರುತಿ 800ಗಾಗಿ ದಲಿತ ಚಳವಳಿ ಹೋರಾಡುವಂತೆ ಚಳವಳಿಯೊಳಗೇ ಒಳಸುಳಿಗಳು ಹರಡಿಬಿಟ್ಟಿವೆ. ಈ ಅಸಮಾನತೆಯ ತರ್ಕ ಅಂತಿಮವಾಗಿ ಕೊನೆಯಾಗುವುದು ಎಲ್ಲಿ? ದಲಿತೇತರರೆಲ್ಲಾ ಅಂಥ ಮೆರ್ಸಿಡೆಸ್‌ನ್ನು ಹೊಂದಿದ್ದಾರೆಯೇ? ಇದಕ್ಕೆ ಉತ್ತರ– ಖಂಡಿತವಾಗಿಯೂ ಇಲ್ಲ. ಹೀಗಿರುವಲ್ಲಿ ಬಹುಸಂಖ್ಯಾತ ದಲಿತೇತರು ಇಂಥ ಅಸಮಾನ ವ್ಯವಸ್ಥೆಯ ವಿರುದ್ಧ ಹೋರಾಡಬೇಕಲ್ಲವೆ?

ವಾದಕ್ಕಾಗಿ ಹೇಳುವುದಾದರೆ ಜಾತಿ ವ್ಯವಸ್ಥೆಗೆ ಕಾರಣ ಕರ್ತರಾದ ಬ್ರಾಹ್ಮಣರನ್ನೊಳಗೊಂಡಂತೆ ಅದು ಎಲ್ಲರನ್ನೂ ಹಿಂಸಿಸುತ್ತದೆ. ಆದ್ದರಿಂದ ಭಾರತೀಯರೆಲ್ಲರೂ ಸಹ ಈ ಅಸಮಾನತೆಗೆ ಕಾರಣವಾಗಿರುವ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಬೇಕು. ಅದೇ ತರ್ಕವನ್ನು ಮುಂದುವರೆಸಿ ಹೇಳಬೇಕಾದರೆ ಮೆರ್ಸಿಡೆಸ್ ಇಲ್ಲದಿರುವ ಜರ್ಮನ್ನರು, ಬ್ರಿಟಿಷರು, ಫ್ರೆಂಚರು ಮತ್ತು ಅಮೇರಿಕನ್ನರು ಸಹ ಅಂಥ ಅಸಮಾನತೆಯ ವಿರುದ್ಧ ಹೋರಾಡಬೇಕಾಗುತ್ತದೆ.

ಇದಕ್ಕಿರುವ ಒಂದೇ ಒಂದು ಪರಿಹಾರವೆಂದರೆ ಎಲ್ಲರಿಗೂ ಸಾಧ್ಯವಾಗುವವರೆಗೂ ಐಶರಾಮಿಯ ಸಂಕೇತವಾದ ಮೆರ್ಸಿಡಸ್ ಇಲ್ಲದಂತೆ ಮಾಡುವುದು. ಇದು ಅಂತಿಮವಾಗಿ ಮಾರ್ಕ್ಸ್‌ವಾದದ ವಿಧಾನಕ್ಕೆ ಜೋತು ಬೀಳುತ್ತದೆ – ಎಲ್ಲರೂ ಸಹ ಐಶಾರಾಮಿಯಾಗದಿದ್ದಲ್ಲಿ ದಾರಿದ್ರ್ಯದಲ್ಲೇ ಎಲ್ಲರೂ ಇರಲಿ ಎಂದಾಗುತ್ತದೆ. ಈ ನಿಯಮವನ್ನು ಸಮಾಜವಾದಿ ರಾಷ್ಟ್ರಗಳಲ್ಲೆಲ್ಲಾ ಮಾರ್ಕ್ಸ್‌ವಾದಿ ಸಮಾನತೆಯನ್ನು ಅನುಸರಿಸಲಾಗಿತ್ತು. ದಶಕಗಳ ಕಾಲ ಅದರಿಂದ ಬೇಸತ್ತ ಜನರೆಲ್ಲಾ, ಕ್ಯೂಬಾ ಮತ್ತು ದಕ್ಷಿಣ ಕೊರಿಯಾವನ್ನು ಹೊರತು ಪಡಿಸಿ, ಉಳಿದೆಲ್ಲಾ ಆ ಸಮಾನತೆಯ ನಿಯಮದಿಂದ ಹೊರಬಂದವು. ಆದ್ದರಿಂದ ದಲಿತರು ಸಮಾನತೆಯನ್ನು ಅಳೆಯುವಾಗ ಪಾಠಕಲಿಯಬೇಕಾಗಿದೆ.

ದಲಿತ ಕುಟುಂಬದ ವ್ಯಕ್ತಿಯೊಬ್ಬ ಮಾರುತಿ 800ನಲ್ಲಿರುವಾಗ ಆತನ ನೆರೆಯವ ಒಂದು ಮೆರ್ಸಿಡಸ್ ಕಾರೊಂದನ್ನು ಖರೀದಿಸುತ್ತಾನೆ. ಇದನ್ನು ಅಸಮಾನತೆ ಎಂದಿಟ್ಟುಕೊಳ್ಳೋಣ. ಈ ಪ್ರಕರಣದಲ್ಲಿ ದಲಿತ ಏನು ಮಾಡಬೇಕು? ಆತ ಇಂಥ ಅಸಮಾನತೆಯನ್ನು ಸೃಷ್ಟಿಸಿದ ವ್ಯವಸ್ಥೆಯ ವಿರುದ್ಧ ಹೋರಾಡಬೇಕೆ ಅಥವಾ ತನ್ನ ಮಕ್ಕಳು ಮೆರ್ಸಿಡಸ್ ಮಾಲೀಕರಾಗುವಂತೆ ಆತ ದುಡಿಯಬೇಕೆ? ಸಮಾನತೆಯ ಇಂಥ ಮೆರ್ಸಿಡಸ್, ಬೆಂಝ್, ಮಾರುತಿ 800ಗಾಗಿ ದಲಿತ ಚಳವಳಿ ಹೋರಾಡುವಂತೆ ಚಳವಳಿಯೊಳಗೇ ಒಳಸುಳಿಗಳು ಹರಡಿಬಿಟ್ಟಿವೆ. ಈ ಅಸಮಾನತೆಯ ತರ್ಕ ಅಂತಿಮವಾಗಿ ಕೊನೆಯಾಗುವುದು ಎಲ್ಲಿ? ದಲಿತೇತರರೆಲ್ಲಾ ಅಂಥ ಮೆರ್ಸಿಡೆಸ್‌ನ್ನು ಹೊಂದಿದ್ದಾರೆಯೇ? ಇದಕ್ಕೆ ಉತ್ತರ– ಖಂಡಿತವಾಗಿಯೂ ಇಲ್ಲ. ಹೀಗಿರುವಲ್ಲಿ ಬಹುಸಂಖ್ಯಾತ ದಲಿತೇತರು ಇಂಥ ಅಸಮಾನ ವ್ಯವಸ್ಥೆಯ ವಿರುದ್ಧ ಹೋರಾಡಬೇಕಲ್ಲವೆ? ವಾದಕ್ಕಾಗಿ ಹೇಳುವುದಾದರೆ ಜಾತಿ ವ್ಯವಸ್ಥೆಗೆ ಕಾರಣ ಕರ್ತರಾದ ಬ್ರಾಹ್ಮಣರನ್ನೊಳಗೊಂಡಂತೆ ಅದು ಎಲ್ಲರನ್ನೂ ಹಿಂಸಿಸುತ್ತದೆ. ಆದ್ದರಿಂದ ಭಾರತೀಯರೆಲ್ಲರೂ ಸಹ ಈ ಅಸಮಾನತೆಗೆ ಕಾರಣವಾಗಿರುವ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಬೇಕು. ಅದೇ ತರ್ಕವನ್ನು ಮುಂದುವರೆಸಿ ಹೇಳಬೇಕಾದರೆ ಮೆರ್ಸಿಡೆಸ್ ಇಲ್ಲದಿರುವ ಜರ್ಮನ್ನರು, ಬ್ರಿಟಿಷರು, ಫ್ರೆಂಚರು ಮತ್ತು ಅಮೆರಿಕನ್ನರು ಸಹ ಅಂಥ ಅಸಮಾನತೆಯ ವಿರುದ್ಧ ಹೋರಾಡಬೇಕಾಗುತ್ತದೆ.

ಮಾರ್ಕ್ಸ್‌ವಾದದ ಸಮಾನತೆಯೆನ್ನುವುದು ಗಾಂಧಿ ಸಿದ್ಧಾಂತದ ಎಳೇ ರೂಪ ಅಥವಾ ನಿರಾಶಾವಾದದ ಉನ್ನತ ಸ್ಥಿತಿಯಾದೀತು. ಒಬ್ಬ ನಿರಾಶ ವ್ಯಕ್ತಿ ಏನು ಇಲ್ಲವೋ ಅದನ್ನು ಬಯಸುತ್ತಾನೆ. ಯಾವುದನ್ನು ಆತ ಪಡೆಯಲಾಗುವುದಿಲ್ಲವೋ ಅಂಥ ಸುಖದ ಸಂಕೇತಗಳಾದ ಮೆರ್ಸಿಡಸ್ – ಬೆಂಝ್ ಮುಂತಾದುವುಗಳನ್ನು ಅವಹೇಳನ ಮಾಡಿ ತಿರಸ್ಕರಿಸಿಬಿಡುತ್ತಾನೆ.

ಈ ಪ್ರಜ್ಞಾ ಸ್ಥಿತಿಯಲ್ಲಿ ನಿರಾಶಾವಾದಿಯು ಸಮಾನತೆಯನ್ನು ಬಯಸುತ್ತಾ ನೆರೆಯವನ ಮೆರ್ಸಿಡಸ್ ಬಗ್ಗೆ ಚಿಂತಿಸುತ್ತಾ ತನ್ನಲ್ಲಿರುವ ಮಾರುತಿ ಬಗ್ಗೆ ವರಿ ಮಾಡುವುದು ಹುಚ್ಚುತನವಾದೀತು. ಹೀಗೆ ತನ್ನೆಲ್ಲಾ ಸಾಮರ್ಥ್ಯ ಮತ್ತು ಸಂಪನ್ಮೂಲಗಳನ್ನು ಹೂಡಿ ಪಕ್ಕದ ಮನೆಯ ಹತ್ತಿರ ನಿಲ್ಲಿಸಿರುವ ಮೆರ್ಸಿಡಸ್ ಬಗ್ಗೆ ಹೋರಾಡುತ್ತಿರುತ್ತಾನಷ್ಟೆ. ಈ ಪ್ರಕ್ರಿಯೆಯಲ್ಲಿ ತನ್ನ ಭವಿಷ್ಯದ ಬಗ್ಗೆ ತಾನೇ ಪೂರ್ಣವಿರಾಮ ಹಾಕಿ, ತನ್ನ ಮಕ್ಕಳು ಮಾರುತಿಯನ್ನಾದರೂ ಕೊಳ್ಳಲಾಗದಂತೆ ಮಾಡಿಬಿಡುತ್ತಾನೆ. ಆದರೆ ಆತನ ನೆರೆಯವ ಮಾತ್ರ ಅತ್ಯಾಧುನಿಕವಾದ ಮೆರ್ಸಿಡಸ್‌ನ್ನು ಕೊಂಡುಕೊಳ್ಳುತ್ತಾನೆ. ಹೀಗಿರುವಾಗ ಸಮಾನತೆಯನ್ನು ಬಯಸುವ ವ್ಯಕ್ತಿ ಮಾತ್ರ ನಿರಂತರವಾಗಿ ಕಳೆದುಕೊಳ್ಳುತ್ತಾ ಬಲಿಪಶುವಾಗಿಬಿಡುತ್ತಾನೆ.

ಆರ್ಥಿಕ ಪ್ರಗತಿಯನ್ನು ಕಾಣುತ್ತಿರುವ ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ದಲಿತ ಚಳವಳಿಗಳು ನಿರಾಶವಾದಿಯ ಸಮಾನತೆಯ ಬಲೆಯಲ್ಲಿ ಸಿಲುಕಿಕೊಳ್ಳುವ ಅಗತ್ಯವಿಲ್ಲ. ಯಾವ ಉದ್ಯಮಿ ಎಷ್ಟು ಪಟ್ಟು ಹಣ ಗಳಿಸಿದ್ದಾನೆ ಎನ್ನುವುದಕ್ಕಿಂತಲೂ ಯಾಕೆ ಎಲ್ಲಾ ದಲಿತರು ಒಂದು ಸೈಕಲ್ ಅಥವಾ ಮೋಟರ್ ಸೈಕಲ್ ಕೊಂಡುಕೊಳ್ಳಲಾಗಿಲ್ಲ ಎನ್ನುವುದನ್ನು ದಲಿತರು ಇಂದು ಯೋಚಿಸಬೇಕಾಗಿದೆ.

ಮತ್ತೊಂದು ರೀತಿಯಲ್ಲಿ ಹೇಳಬೇಕಾದರೆ ದಲಿತ ಸಂಘಟನೆಗಳು ಬದುಕಿನ ದೈನಂದಿನ ಅನತ್ಯಗಳ ಬಗ್ಗೆ ಯೋಚಿಸಬೇಕಾಗಿದೆ. ದಲಿತರು ಮೆರ್ಸಿಡಸ್ ಮಾಲೀಕರೊಡನೆ ಸ್ನೇಹ ಬೆಳೆಸಿಕೊಳ್ಳಬೇಕಾಗುತ್ತದೆ. ಅಲ್ಲದೆ ಉತ್ತಮ ಬದುಕಿಗಾಗಿ ಅಂದರೆ ಶಿಕ್ಷಣ, ಆರೋಗ್ಯ, ವಿಮೆ, ನಿರಂತರ ಆದಾಯ ಮತ್ತು ಪ್ರಜಾಪ್ರಭುತ್ವವನ್ನು ಬಯಸುತ್ತಾ ಸಂಘಟನೆಗಳನ್ನು ಗಟ್ಟಿಗೊಳಿಸಿಕೊಳ್ಳಬೇಕಿದೆ.

ಈ ವಿಷಗಳಿಗಾಗಿ ದಲಿತ ಸಂಘಟನೆಗಳು ಡಾ. ಅಂಬೇಡ್ಕರ್‌ರವರನ್ನು ಮತ್ತೊಮ್ಮೆ ಹಿಂತಿರುಗಿ ನೋಡಬೇಕಾಗಿದೆ. ಅವರು ಜಾತಿ ವ್ಯವಸ್ಥೆ ಸಂಪೂರ್ಣವಾಗಿ ನಾಶವಾಗುವ ತನಕ ಕಾದು ಕೂರಲಿಲ್ಲ. ಬದಲು ಸರ್ಕಾರಿ ನೌಕರಿಯಲ್ಲಿ ಮೀಸಲಾತಿಗಾಗಿ ಹೋರಾಟ ನಡೆಸಿದರು. ಅಲ್ಲದೆ ತಮ್ಮ ಕೈಗೆ ರಾಜ್ಯಾಧಿಕಾರ ಸಿಗುವ ತನಕ ಕಾದು ಕೂತಿರದೆ ಸ್ಕಾಲರ್‌ಶಿಪ್ ಹಕ್ಕುಗಳು ಮತ್ತು ಶಿಕ್ಷಣದಲ್ಲಿ ಮೀಸಲಾತಿಯನ್ನು ಪಡೆಯಲು ಗಮನಹರಿಸಿದರು. ಹೀಗೆ ಅವರು ಪ್ರತಿಯೊಂದು ಇಟ್ಟಿಗೆಯನ್ನು ಜೋಡಿಸುತ್ತಾ ದಲಿತ ಕನಸನ್ನು ಕಟ್ಟಿದರು. ಈ ಕಾರಣದಿಂದಾಗಿ ಇಂದು ದಲಿತ ಮಧ್ಯಮವರ್ಗವೊಂದು ಅಸ್ತಿತ್ವಕ್ಕೆ ಬಂದಿದೆ. ಆದರೆ ಅಂಬೇಡ್ಕರೋತ್ತರ ದಲಿತ ಸಂಘಟನೆಗಳು ಐಶಾರಾಮಿ ಮುಖ್ಯವಾಹಿನಿಯ ಬಲೆಗೆ ಬಿದ್ದು ಇಲ್ಲದ ಕನಸನ್ನು ದಲಿತ ಸಮುದಾಯಗಳಿಗೆ ಕಟ್ಟಿಕೊಡಲು ಹೋಗಿ ಗಾಳಿಯಲ್ಲಿ ಗುದ್ದಿ ಮೈ ಪರಚಿಕೊಳ್ಳುತ್ತಿವೆ. ಆ ರೀತಿಯಾಗಿ ಸಮಾಜವೂ ಸಹ ಪರಿವರ್ತನೆಯಾಗುವುದಿಲ್ಲ.

ಕನಸು ಕಟ್ಟುವಿಕೆ

ಅಮೆರಿಕಾ ದೊಡ್ಡ ಪಿಶಾಚಿ ಅಲ್ಲ

ಕಳೆದ ಐದು ದಶಕಗಳನ್ನು ಸಮಾನತೆಯನ್ನು ಬೇಡುತ್ತಾ ಅಂಬೇಡ್ಕರೋತ್ತರ ದಲಿತ ಸಂಘಟನೆಗಳು ಸಮ್ಮನೆ ಪೋಲುಮಾಡಿದವು. ಅದು ನಿಲ್ಲಬೇಕಾಗಿದೆ. ಬದಲು, ಅವರು ದಲಿತ ಕನಸನ್ನು ಕಾಣಬೇಕಾಗಿದೆ. ಹೊಸ ಆರ್ಥಿಕತೆಯಲ್ಲಿ ಅವರು ತಮ್ಮ ಪಾಲು ಮತ್ತು ಉದ್ಯಮಶೀಲತೆಯನ್ನು ಕಟ್ಟಿಕೊಳ್ಳಬೇಕಾಗಿದೆ.

ಅಮೆರಿಕಾದ ವಾರ್ಷಿಕ ಆದಾಯ $13.13 ಟ್ರಿಲಿಯನ್ ಇದ್ದು ಜಗತ್ತಿನ ಬಹು ದೊಡ್ಡ ಆರ್ಥಿಕ ರಾಷ್ಟ್ರ ಎನಿಸಿಕೊಂಡಿದೆ. ಇಷ್ಟೊಂದು ಸಂಪತ್ತು ಇರುವುದರಿಂದಲೇ ಅಮೆರಿಕಾವು ತನ್ನ ಜನರನ್ನು ರಕ್ಷಿಸಿಕೊಳ್ಳಬಹುದು ಮತ್ತು ಅವರ ಅಗತ್ಯಗಳನ್ನು ಸುಲಭವಾಗಿ ಪೂರೈಸಿಕೊಳ್ಳಬಹುದು. ಹೀಗಿರುವಲ್ಲಿ ಅದನ್ನು ತೃತೀಯ ರಾಷ್ಟ್ರಗಳನ್ನು ಹೀರುವ ಸಾಮ್ರಾಜ್ಯಶಾಹಿ ರಾಷ್ಟ್ರ ಎಂದು ಕರೆಯುವುದರಲ್ಲಿ ಏನೇನೂ ಹುರುಳಿಲ್ಲ.

ಎಡಪಂಥೀಯರಿಗೆ ತದ್ವಿರುದ್ಧವಾಗಿ ಅಮೆರಿಕಾ ಏನು ಇತರ ರಾಷ್ಟ್ರಗಳಿಂದ ಕಬಳಿಸುತ್ತಿದೆಯೋ ಅದಕ್ಕಿಂತಲೂ ಅಧಿಕವಾಗಿ ಅದು ಜಗತ್ತಿಗೆ ನೀಡುತ್ತಿದೆ. ಕಳೆದ ವರ್ಷ ಅದರ ರಫ್ತು $1000 ಬಿಲಿಯನ್ ಇದ್ದು, ಆಮದು $1869 ಬಿಲಿಯನ್ ರಷ್ಟಾಗಿತ್ತು. ಅಂದರೆ ಸುಮಾರು $869 ಬಿಲಿಯನ್ ಮೊತ್ತವನ್ನು ಅದು ಜಗತ್ತಿಗೆ ನೀಡಿತು. ಅಂದರೆ ಇರಾನ್ ($516.7 ಬಿಲ್ಲಿಯನ್), ಸೌದಿಅರೇಬಿಯಾ ($310.2 ಬಿಲ್ಲಿಯನ್) ಮತ್ತು ಕುವೈತ್ ($48 ಬಿಲಿಯನ್) ರಾಷ್ಟ್ರಗಳ ಒಟ್ಟು ವಾರ್ಷಿಕ ಆದಾಯಕ್ಕೆ ಸಮನಾದುದು.

ಇನ್ನೂ ಮುಂದೆ ಸಾಗಿ ನೋಡುವುದಾದರೆ ಚೀನಾ ಮತ್ತು ಮೆಕ್ಸಿಕೋಗಳಿಂದ 1/4 ಭಾಗದಷ್ಟು ಆಮದು ಪದಾರ್ಥಗಳನ್ನು ಅಮೆರಿಕಾ ಬರಮಾಡಿಕೊಳ್ಳುತ್ತದೆ. ಎಲ್ಲಾ ರಫ್ತು ಪದಾರ್ಥಗಳನ್ನು ಗಮನಿಸಿದಲ್ಲಿ 1/3 ಭಾಗದಷ್ಟು ಪದಾರ್ಥಗಳು (ಶೇ.32 ರಷ್ಟು) ಗ್ರಾಹಕ ವಸ್ತುಗಳೇ ಆಗಿವೆ. ಅಲ್ಲದೆ ಅದರಲ್ಲಿ ಶೇ.5ರಷ್ಟು ಬೇಸಾಯಕ್ಕೆ ಸಂಬಂಧಿಸಿದ್ದಾಗಿವೆ. ಇವುಗಳಲ್ಲಿ ಅಧಿಕ ಶ್ರಮಶಕ್ತಿಯ ಉತ್ಪದನಾ ತಂತ್ರಜ್ಞಾನವನ್ನು ಬಳಸಿ ತಯಾರಾದ ಉತ್ಪನ್ನಗಳೇ ಸೇರಿವೆ. ಉದಾಹರಣೆಗೆ ಗೊಂಬೆಯಂಥ ವಸ್ತುಗಳನ್ನು ಅಮೇರಿಕಾವು ಚೀನಾದಿಂದ ತರಿಸಿಕೊಳ್ಳುತ್ತದೆ. ಅದರ ಖರ್ಚು $22 ಬಿಲ್ಲಿಯನ್‌ನ್ನಷ್ಟಾಗುತ್ತದೆ. ಅಂದರೆ ಅದು ಆಫ್ಘನಿಸ್ತಾನ್‌ನ ವಾರ್ಷಿಕ ಆದಾಯದಷ್ಟಿದೆ. ಮಿಲಿಯಗಟ್ಟಳೆ ಗೊಂಬೆ ತಯಾರಿಸುವ ಚೀನಾದ ಶ್ರಮಿಕರು ಕೆಳವರ್ಗಗಳಿಂದಲೇ ಬಂದಿರುವವರಾಗಿದ್ದಾರೆ.

ಅದಿರಲಿ, ಭಾರತದ ಬೃಹತ್ ರಫ್ತು ಸಹ ಅಮೆರಿಕಾ ದೇಶಕ್ಕೆ ಸಾಗುತ್ತದೆ. 2005ರ ತನಕ ಅಮೆರಿಕಾಕ್ಕೆ ಸಾಗಿಸುತ್ತಿದ್ದ ರಫ್ತು ಪದಾರ್ಥಗಳಲ್ಲಿ ಶೇ.29 ರಷ್ಟು ವಜ್ರಗಳಿಗೆ ಸಂಬಂಧಿಸಿತ್ತು. ಮತ್ತೊಂದು ಶೇ.25ರಷ್ಟು ಬಟ್ಟೆ ಉದ್ಯಮಕ್ಕೆ ಸೇರಿದ್ದಾಗಿತ್ತು. ಹಾಗೆಯೇ ರಫ್ತಿನ ಅಧಿಕ ಭಾಗ ಚರ್ಮ ಮತ್ತು ಕರಕುಶಲ ವಸ್ತುಗಳಾಗಿದ್ದವು. ವಜ್ರ, ಚರ್ಮ ಮತ್ತು ಬಟ್ಟೆ ಉದ್ಯಮಗಳಲ್ಲಿ ದುಡಿಯುತ್ತಿರುವವರು ಶ್ರಮಜೀವಿಗಳೇ ಆಗಿದ್ದಾರೆನ್ನುವುದನ್ನು ಮತ್ತೆ ಹೇಳಬೇಕಾಗಿಲ್ಲ. ಹೀಗೆ ಅಮೆರಿಕಾಗೆ ತಯಾರಿಸುವ ಪದಾರ್ಥಗಳಿಂದಲೇ ಅನೇಕ ಕೆಳ ಆರ್ಥಿಕತೆಗಳಲ್ಲಿ ದುಡಿಯುತ್ತಿರುವವರ ಬದುಕು ಸಾಗುತ್ತಿರುವುದು.

ಸಾಂಪ್ರದಾಯಿಕ ಬಂಡವಾಳಶಾಹಿಯನ್ನು ವಿಕೇಂದ್ರೀಕರಿಸುತ್ತಿರುವಲ್ಲಿ ಹೊರ ಗುತ್ತಿಗೆ ಪದ್ಧತಿ ಪ್ರಧಾನ ಪಾತ್ರ ವಹಿಸುತ್ತಿದೆ. ಈ ವಿದ್ಯಮಾನಕ್ಕೆ ಅಮೆರಿಕಾ ಕೇಂದ್ರಬಿಂದುವಾಗಿ ಪರಿಣಮಿಸಿದೆ. ತನ್ನೊಳಗೇ ಕಾರ್ಮಿಕರ ಪ್ರತಿಭಟನೆ ಇದ್ದಾಗ್ಯೂ ಸಹ 2002-03ರಲ್ಲಿ ಅಮೆರಿಕಾವು 7,50,000 ಉನ್ನತ ತಾಂತ್ರಿಕತೆಯನ್ನು ಬಯಸುವ ಉದ್ಯೋಗಗಳನ್ನು ಸಮುದ್ರದಾಚೆಗೆ ಹೊರಗುತ್ತಿಗೆಗೆ ನೀಡಿತು. ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಅಧ್ಯಯನದ ಪ್ರಕಾರ ಮುಂಬರುವ ವರ್ಷಗಳಲ್ಲಿ 14 ಮಿಲಿಯನ್ ಉದ್ಯೋಗಗಳು ಹೀಗೆ ಸಮುದ್ರದಾಚೆಗೆ ಚಲಿಸಲಿವೆ.

ಈ ಉದ್ಯೋಗಗಳಲ್ಲಿ ಹೆಚ್ಚಿನವು ಮೆಕ್ಸಿಕೋ, ಚೀನಾ ಮತ್ತು ಭಾರತ ದೇಶಗಳಿಗೆ ಬರುತ್ತವೆ. ಭಾರತದ 1.2 ಮಿಲಿಯನ್ ಒಟ್ಟು ಐಟಿ ಕಾರ್ಮಿಕರಲ್ಲಿ ಶೇ. 66 ಮಂದಿ ಅಮೆರಿಕಾ ಕಂಪನಿಗಳಿಗೆ ದುಡಿಯುತ್ತಿದ್ದಾರೆ. ಹೀಗಿರುವಾಗ ಎಡಪಂಥೀಯರು ಮಾಡುತ್ತಿರುವ ಅಮೆರಿಕಾ ವಿರೋಧಿ ನಿಲುವು ಯಶಸ್ಸು ಪಡೆದರೆ ಅದರಿಂದ ಭಾರತಕ್ಕೆ ಆಗುವ ತೊಂದರೆ ಊಹಿಸಲಾದೀತೆ?

ಈ ಎಡಪಂಥೀಯರ ವಿರೋಧ ಕೇವಲ ಇಂಡೋ-ಅಮೆರಿಕಾ ಒಪ್ಪಂದಕ್ಕೆ ಮಾತ್ರ ಸೀಮಿತವಲ್ಲ. ತಾಂತ್ರಿಕವಾಗಿ ಮನಮೋಹನ್ ಸಿಂಗ್ ಭಾರತವನ್ನು ಅಮೆರಿಕಾದ ಕಡೆ ಸಾಗುವುದನ್ನು ಸಹ ಅವರು ವಿರೋಧಿಸುತ್ತಿದ್ದಾರೆ. ಅಂದರೆ ಎಡಪಂಥೀಯರ ಪ್ರಕಾರ ಅಮೆರಿಕಾದ ಬಂಡವಾಳಶಾಹಿ ಭಾರತವನ್ನು ಮುನ್ನಡೆಸುವುದು ಬೇಡ. ಆದರೆ ಅಧಿಕೃತವಾಗಿ ಹೇಳುವುದಾದರೆ ಎಡಪಂಥೀಯರ ಈ ಅಮೆರಿಕಾ ವಿರೋಧಿ ನಿಲುವು ಆರ್.ಎಸ್.ಎಸ್.ನ ಸ್ವದೇಶಿ ಚಳವಳಿಯಂತೆಯೇ ಇದೆ ಎನ್ನುವುದನ್ನು ನಾವು ಗಮನಿಸಬೇಕಾಗುತ್ತದೆ. 1967, 1977 ಮತ್ತು 1989ರಲ್ಲಿ ಎಡಪಂಥೀಯರು ಆರ್.ಎಸ್.ಎಸ್.ನೊಟ್ಟಿಗೆ ಕಾರ್ಯಕಾರಿ ಸಂಬಂಧವನ್ನು ಹೊಂದಿದ್ದರು.

ಅಮೆರಿಕಾವೂ ಸಹ ಒಂದು ವ್ಯಕ್ತಿಗತ ರಾಷ್ಟ್ರ ಎಂಬುದನ್ನು ಎಡಪಂಥೀಯರು ಮತ್ತು ಆರ್.ಎಸ್.ಎಸ್ ನಂಬಲು ತಯಾರಿಲ್ಲ. ಇತ್ತೀಚಿನ ವರ್ಷಗಳಲ್ಲಿ ಅಮೆರಿಕಾವು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಕೇಂದ್ರವಾಗಿ, ಹಲವಾರು ಸಂಸ್ಕೃತಿಗಳನ್ನು ಮತ್ತು ಜಾಗತಿಕ ವಾಣಿಜ್ಯ ವಹಿವಾಟಿನ ಕೇಂದ್ರಬಿಂದುವಾಗಿ ಅದು ಜಗತ್ತಿನ ನಿರೀಕ್ಷೆಗಳಿಗೆ ತನ್ನನ್ನೇ ತೆರೆದುಕೊಂಡಿದೆ.

19 ಮತ್ತು 20ನೇ ಶತಮಾನಗಳಲ್ಲಿ ಇಂಗ್ಲೆಂಡ್ ಏನಾಗಿತ್ತೋ ಅದೇ ಈಗ ಅಮೇರಿಕಾ ಆಗಿದೆ. ಇಂಗ್ಲೆಂಡ್ ಕೈಗಾರಿಕಾ ಕ್ರಾಂತಿಗೆ ಕಾರಣವಾಗಿ ಅಮೆರಿಕಾವನ್ನೊಳಗೊಂಡಂತೆ ಜಗತ್ತಿನಾದ್ಯಂತ ಅದು ಪ್ರಜಾಪ್ರಭುತ್ವನ್ನು ಹರಡಿತು.

ಆದರೆ ಅದು ಈಗ ಅದೇ ಪಾತ್ರವನ್ನು ವಹಿಸುತ್ತಿಲ್ಲ. ಅದು ಕೇಂದ್ರೀಕೃತ ಬಂಡವಾಳಶಾಹಿಯನ್ನು ಹುಟ್ಟುಹಾಕಿತು. ಅಮೆರಿಕಾ ಅಂಥದನ್ನು ಈಗ ವಿಕೇಂದ್ರೀಕರಿಸುವತ್ತ ಸಾಗಿದೆ. ಅಂದರೆ ಬಂಡವಾಳಶಾಹಿಯ ಪ್ರಜಾಸತ್ತಾತ್ಮೀಕರಣದತ್ತ ಅಮೇರಿಕಾ ಕ್ರಾಂತಿ ಕಹಳೆಯನ್ನು ಊದುತ್ತಿದೆ.

ಅಲ್ಲದೆ ಹೊರಗುತ್ತಿಗೆ ಎನ್ನೋ ವಿದ್ಯಮಾನ ಕೇಂದ್ರೀಕೃತ ವಾಣಿಜ್ಯ-ವಹಿವಾಟನ್ನು ಜಾಗತಿಕವಾಗಿ ಛಿದ್ರೀಕರಿಸುತ್ತಿದೆ.

ಆದ್ದರಿಂದ ಅಮೆರಿಕಾದಿಂದ ಇಂಡಿಯ ಬಿಡಿಸಿಕೊಳ್ಳುವುದು ಎಂದರೆ ಯೂರೋಪ್, ಪೂರ್ವ ಏಷ್ಯಾ ಮತ್ತು ಆಸ್ಟ್ರೇಲಿಯಾ ದೇಶಗಳು ಸೃಷ್ಟಿಸುತ್ತಿರುವ ಅವಕಾಶಗಳನ್ನು ಕಳೆದುಕೊಳ್ಳುವುದು ಎಂದೇ ಅರ್ಥ.

ಎಡಪಂಥೀಯರು ನೀಡುತ್ತಿರುವ ಸೂಚನೆಗಳನ್ನು ಭಾರತ ಅನುಸರಿಸುತ್ತದೆಯಾದರೆ ನಾವು ಯಾರೊಡನೆ ವ್ಯಾಪಾರ ಮಾಡುವುದು? ರಷ್ಯಾ ಮತ್ತು ಚೀನಾಗಳೊಡನೆ ಮಾಡಬಹುದಲ್ಲ ಎಂದು ಎಡಪಂಥೀಯರು ಉತ್ತರ ನೀಡಬಹುದು. ಇದು ಒಳ್ಳೆಯ ಸೂಚನೆಯೆಂದು ಅನಿಸದು. ರಷ್ಯಾದ ಆಮದು $100 ಬಿಲ್ಲಿಯನ್‌ಗಿಂತಲು ಕಮ್ಮಿಯಾದುದು. ಅಲ್ಲದೆ, ಚೀನಾ ಇಂಡಿಯಾದ ಪ್ರತಿ ಸ್ಪರ್ಧಿ ಅಷ್ಟೆ. ಹೀಗೆ ಎಡಪಂಥೀಯರ ಅಮೆರಿಕಾ ವಿರೋಧಿ ನಿಲುವು ಗಟ್ಟಿಯಾಗಲು ಬಿಟ್ಟಲ್ಲಿ ಹಸಿವು ಮತ್ತು ವಿಕೋಪಗಳು ವಕ್ರಾಯಿಸುತ್ತವೆ ಎಂಬುದರಲ್ಲಿ ಸಂಶಯವಿಲ್ಲ.

ರಾಷ್ಟ್ರೀಯ ಸಂಖ್ಯಾ ಸಮೀಕ್ಷಾ ವರದಿಯ ಪ್ರಕಾರ ವರ್ಷದ ಕೆಲವು ತಿಂಗಳುಗಳಲ್ಲಿ ಗ್ರಾಮೀಣ ಕುಟುಂಬಗಳು ಸಾಕಷ್ಟು ಆಹಾರವಿಲ್ಲದೆ ನಲುಗುತ್ತಿವೆ. ಇದು ಬಂಗಾಳದಲ್ಲಿ ಶೇ.10.6 ರಷ್ಟಿದ್ದರೆ ಒರಿಸ್ಸಾದಲ್ಲಿ ಶೇ.4.8ರಷ್ಟಿದೆ.

ಹಾಗಾದರೆ ಎಡಪಂಥೀಯರು ಭಾರತವನ್ನು ಹಸಿವಿನತ್ತ ಕೊಂಡೊಯ್ಯಲು ಬಿಡಬೇಕೆ? □

ಅಮೆರಿಕಾದಿಂದ ಇಂಡಿಯ ಬಿಡಿಸಿಕೊಳ್ಳುವುದು ಎಂದರೆ ಯೂರೋಪ್, ಪೂರ್ವ ಏಷ್ಯಾ ಮತ್ತು ಆಸ್ಟ್ರೇಲಿಯಾ ದೇಶಗಳು ಸೃಷ್ಟಿಸುತ್ತಿರುವ ಅವಕಾಶಗಳನ್ನು ಕಳೆದುಕೊಳ್ಳುವುದು ಎಂದೇ ಅರ್ಥ. ಎಡಪಂಥೀಯರು ನೀಡುತ್ತಿರುವ ಸೂಚನೆಗಳನ್ನು ಭಾರತ ಅನುಸರಿಸುತ್ತದೆಯಾದರೆ ನಾವು ಯಾರೊಡನೆ ವ್ಯಾಪಾರ ಮಾಡುವುದು? ರಷ್ಯಾ ಮತ್ತು ಚೀನಾಗಳೊಡನೆ ಮಾಡಬಹುದಲ್ಲ ಎಂದು ಎಡಪಂಥೀಯರು ಉತ್ತರ ನೀಡಬಹುದು. ಇದು ಒಳ್ಳೆಯ ಸೂಚನೆಯೆಂದು ಅನಿಸದು. ರಷ್ಯಾದ ಆಮದು $100 ಬಿಲ್ಲಿಯನ್‌ಗಿಂತಲು ಕಮ್ಮಿ.

ಬುದ್ಧಾಯಣ

೨೭

ದೇಹದಂಡನೆ ವ್ಯರ್ಥ; ಚಿಂತನೆಯೇ ಶ್ರೇಷ್ಠ

ಸಿ. ಎಚ್. ರಾಜಶೇಖರ್

ಗೌತಮ ಬುದ್ಧನ ಅಸಂಖ್ಯಾತ ಸಮಕಾಲೀನರಲ್ಲಿ ನಿಗ್ರೋಧನೆಂಬ ಮಹಾಯೋಗಿಯು ಪ್ರಮುಖನು. ಆತ ಅಗ್ನಿಯ ಆರಾಧಕ. ಕಠಿಣ ದೇಹದಂಡನೆಯೇ ಮುಕ್ತಿಗೆ ಮಾರ್ಗವೆಂದು ನಂಬಿ ಅದರಂತೆ ಆಚರಿಸಿ ಪ್ರಖ್ಯಾತನಾಗಿದ್ದ. ಆತ ಅಸಂಖ್ಯಾತ ಶಿಷ್ಯರನ್ನು ಹೊಂದಿದ್ದ. ಎಲ್ಲಿಯೂ ಒಂದು ಕಡೆ ನೆಲೆಯಾಗಿ ನಿಂತವನಲ್ಲ. ನೆಲೆ ನಿಂತು ಒಂದು ಕಡೆ ಸ್ಥಿರತೆ ಕಂಡುಕೊಂಡರೆ ಅದು ತನ್ನ ಸಾಧನೆಗೆ ಸಂಚಕಾರ ಎಂದು ಭಾವಿಸಿದಾತ. ಹಾಗಾಗಿ ತನ್ನ ಅಸಂಖ್ಯಾತ ಶಿಷ್ಯರೊಂದಿಗೆ ಊರಿಂದ ಊರಿಗೆ, ಕಾಡಿಂದ ಕಾಡಿಗೆ ನಿರಂತರವಾಗಿ ಅಲೆಯುತ್ತಿದ್ದ ಅಲೆಮಾರಿ.

ಈತನ ಬದುಕಿಗೆ ಒಂದೇ ಒಂದು ಮಹಾನ್ ಬಯಕೆ ಎಂದರೆ ಎಂದಾದರೊಂದು ದಿನ ತನ್ನ ಅಲೆಮಾರಿಯ ಜೀವನದಲ್ಲಿ ಬುದ್ಧನನ್ನು ಸಂಧಿಸಬೇಕು. ಅವನೊಂದಿಗೆ ಮಾತನಾಡಬೇಕು. ನಾನು ಮೇಲೋ ಅವನು ಮೇಲೋ ಎಂಬುದನ್ನು ಚರ್ಚಿಸಬೇಕು... ನನ್ನ ಸಾಧನೆ, ಮಾರ್ಗ, ಯೋಗ ಮತ್ತು ಕಠಿಣ ದೇಹದಂಡನೆಯ ಕ್ರಮವನ್ನು ಅವನೆದುರು ಸಮರ್ಥಿಸಿಕೊಳ್ಳಬೇಕು. ನಿಜವಾದ ಸಾಧನೆಯೇ ನಿಜವಾದ ಧರ್ಮ ಎಂದು ಸಾರಬೇಕು ಎಂದು ಹಂಬಲಿಸುತ್ತಿದ್ದ.

ಅಂತಹ ಒಂದು ಸಂದರ್ಭದಲ್ಲಿ ಬುದ್ಧನು ರಾಜಗೃಹದ ಬಳಿಯ ಗೃಧ್ರಕೂಟ ಎಂಬ ಪವಿತ್ರವನದಲ್ಲಿ ಬೀಡುಬಿಟ್ಟಿದ್ದ. ನಿಗ್ರೋಧನು ಅದಕ್ಕೆ ಅತೀ ಸಮೀಪದ ಸಮಗಧ ನದಿ ತೀರದಲ್ಲಿ ಅಲೆಮಾರಿಗಳಿಗೆಂದೇ ರಾಣಿ ಊದುಂಬಾರಿಕಾ ನಿರ್ಮಿಸಿದ್ದ ಆಶ್ರಮದಲ್ಲಿ ತನ್ನ ಅಸಂಖ್ಯಾತ ಶಿಷ್ಯರೊಂದಿಗೆ ತಂಗಿದ್ದ. ಒಂದು ಮುಂಜಾನೆ ಬುದ್ಧನು ಗೃಧ್ರಕೂಟದ ಕಡಿದಾದ ಪರ್ವತ ಶ್ರೇಣಿಯಿಂದ ಇಳಿದು ಸಮಗಧ ನದಿ ತೀರ ತಲುಪಿದ. ಅಲ್ಲಿ ಚಿನ್ನಾಟವಾಡುತ್ತಿದ್ದ ನವಿಲುಗಳನ್ನು ಕಂಡು ಆನಂದಿಸಿದ. ಅವುಗಳ ಮೈನೇವರಿಸುತ್ತಾ ತಾನು ತಂದ ಆಹಾರವನ್ನು ನವಿಲುಗಳಿಗೆ ಹಂಚಿದ. ಆಹಾರ ಮುಗಿದ ನಂತರ ನವಿಲುಗಳ ಹಿಂಡು ಮತ್ತೆ ಕಾಡು ಸೇರಿತು.

ಬುದ್ಧ ಯಾವುದೋ ದೀರ್ಘ ಚಿಂತನೆಗೆ ಮುಳುಗಿ ಸುಮಗಧ ನದಿ ತೀರದಲ್ಲಿ ಶತಪಥ ಓಡಾಡುತ್ತಿದ್ದ. ಇದನ್ನು ಗಮನಿಸದ ನಿಗ್ರೋಧನನ ಸಂತೋಷಕ್ಕೆ ಪಾರವೇ ಇಲ್ಲ. ತನ್ನ ಅಸಂಖ್ಯಾತ ಶಿಷ್ಯರನ್ನು ಉದ್ದೇಶಿಸಿ:

'ಶಿಷ್ಯರೇ ನನಗೆ, ಇಂದು ಪವಿತ್ರ ದಿನ. ಏಕೆಂದರೆ, ಬದುಕಿಡಿ ಹಂಬಲಿಸಿದ ಪವಿತ್ರಾತ್ಮನ ದರ್ಶನಭಾಗ್ಯ ಇಂದು ನನಗೆ ಲಭಿಸಿದೆ. ಅದೋ ನೋಡಿ ನದಿಯ ದಂಡೆಯ ಮೇಲೆ ರಾಜಗಾಂಭೀರ್ಯದಿಂದ ಶತಪಥ ಹಾಕುತ್ತಿರುವನಲ್ಲಿ ಆ ಮಹಾ ತೇಜಸ್ವಿಯೇ ಗೌತಮ ಬುದ್ಧ. ಗಲಾಟೆ ಮಾಡಬೇಡಿ. ಆತನ ಮೌನಕ್ಕೆ ಭಂಗ ತರಬೇಡಿ. ಆ ಸಮಣನೇ ನನ್ನ ನಿಜವಾದ ಸ್ನೇಹಿತ. ಆತನ ಬಳಿ ಹೋಗಿ ನನ್ನ ಪರಿಚಯ ಮಾಡಿಕೊಂಡು ನಮ್ಮ ಸಭೆಗೆ ಕರೆ ತರುತ್ತೇನೆ. ನೀವುಗಳು ಇಲ್ಲಿಯೇ ಇರಿ' ಎಂದ ನಿಗ್ರೋಧನು ಬುದ್ಧನ ಬಳಿ ಸಾರಿ ನಿಂತ.

'ಸೂರ್ಯೋದಯದಲ್ಲಿ ಬುದ್ಧನ ದೃಷ್ಟಿ ನೆಟ್ಟಿತ್ತು. ಅದೆಷ್ಟೋ ಹೊತ್ತಿನ ಬಳಿಕ ದೃಷ್ಟಿಯನ್ನು ನಿಗ್ರೋಧನ ಕಡೆ ತಿರುಗಿಸಿ:

'ಕ್ಷಮಿಸು ಮಿತ್ರ...! ನೀನಾರೋ ಏನೋ ನಾನರಿಯೇ, ನನ್ನಿಂದ ಏನಾದರೂ ಅಲಕ್ಷ್ಯವಾಗಿದ್ದರೆ ಕ್ಷಮೆ ಇರಲಿ.'

'ಇಲ್ಲ ಮಹಾತ್ಮ...! ಆ ಸೂರ್ಯೋದಯವನ್ನು ನಿನ್ನ ಮುಖ

'ಶಿಷ್ಯರೇ ನನಗೆ, ಇಂದು ಪವಿತ್ರ ದಿನ. ಏಕೆಂದರೆ, ಬದುಕಿಡಿ ಹಂಬಲಿಸಿದ ಪವಿತ್ರಾತ್ಮನ ದರ್ಶನ ಭಾಗ್ಯ ಇಂದು ನನಗೆ ಲಭಿಸಿದೆ. ಅದೋ ನೋಡಿ ನದಿಯ ದಂಡೆಯ ಮೇಲೆ ರಾಜಗಾಂಭೀರರ್ಯದಿಂದ ಶತಸಥ ಹಾಕುತ್ತಿರುವವನಲ್ಲಿ ಆ ಮಹಾ ತೇಜಸ್ವಿಯೇ ಗೌತಮ ಬುದ್ಧ. ಗಲಾಟೆ ಮಾಡಬೇಡಿ. ಆತನ ಮೌನಕ್ಕೆ ಭಂಗ ತರಬೇಡಿ. ಆ ಸಮಣನೇ ನನ್ನ ನಿಜವಾದ ಸ್ನೇಹಿತ. ಆತನ ಬಳಿ ಹೋಗಿ ನನ್ನ ಪರಿಚಯ ಮಾಡಿಕೊಂಡು ನಮ್ಮ ಸಭೆಗೆ ಕರೆ ತರುತ್ತೇನೆ. ನೀವುಗಳು ಇಲ್ಲಿಯೇ ಇರಿ.' ಎಂದ ನಿಗ್ರೋಧನು ಬುದ್ಧನ ಬಳಿ ಸಾರಿ ನಿಂತ.



ದಲ್ಲಿಯೇ ಕಂಡು ಕಾಲನಲ್ಲಿ ಕರಗಿ ಹೋಗಿದ್ದೆ. ನನ್ನ ನಾಮಾಂಕಿತ ನಿಗ್ರೋಧ...! ನಿಗ್ರೋಧ ಮಹಾ ಯೋಗಿ...!! ನಾನು ಇಲ್ಲಿಯೇ ಸಮೀಪದಲ್ಲಿ ನನ್ನ ಅಸಂಖ್ಯಾತ ಶಿಷ್ಯರೊಂದಿಗೆ ತಂಗಿದ್ದೇನೆ. ತಾವು ನನ್ನ ಸಭೆಗೆ ದಯಮಾಡಿಸಬೇಕು. ನನ್ನ ಸ್ನೇಹಕ್ಕೆ ಮನ್ನಣೆ ಕೊಡ ಬೇಕು ಎಂಬುದೇ ನನ್ನ ವಿನಯ ವಿನಂತಿ.

'ಸಮಾನ ವಯಸ್ಕರಲ್ಲಿ ಉಪಚಾರದ ಮಾತುಗಳೇಕೆ ಗೆಳೆಯಾ...! ನಡೆ ಹೋಗೋಣ' ಎಂದ ಬುದ್ಧನು ನಿಗ್ರೋಧನನೊಂದಿಗೆ ನಡೆಯ ತೊಡಗಿದ. ಸಮೀಪದಲ್ಲಿಯೇ ಆಶ್ರಮ ಗೋಚರಿಸಿತು. ಆತನ ಅಸಂಖ್ಯಾತ ಶಿಷ್ಯರು:

'ಪ್ರಭು, ಪವಿತ್ರಾತ್ಮರು ದಯಮಾಡಿಸಲಿ! ಮಹಾತ್ಮರಿಗೆ ಸ್ವಾಗತ! ತಮಗಾಗಿ ಸಿದ್ಧಪಡಿಸಿರುವ ಆಸನವನ್ನು ಸ್ವೀಕರಿಸಿ!' ಎನ್ನಲು:

ಬುದ್ಧನು ಸ್ವಾಗತವನ್ನು ಮುಗುಳ್ನಗೆಯಿಂದ ಸ್ವೀಕರಿಸಿ ಕುಳಿತುಕೊಂಡನು. ನಿಗ್ರೋಧನು ಅವನ ಪಕ್ಕದಲ್ಲಿ ಅವನಿಗಿಂತ ಕೆಳಗಿದ್ದ ಆಸನದಲ್ಲಿ ಕುಳಿತನು. ಉಪಚಾರದ ಮಾತುಗಳು ಮುಗಿದ ನಂತರ ನಿಗ್ರೋಧ ತನ್ನ ಸಾಧನೆಯ ಬಗ್ಗೆ ಬಗೆ ಬಗೆಯಾಗಿ ಬೀಗಿ ಕೊಂಡನು. ಕಠಿಣ ದೇಹದಂಡನೆಯ ಹೊರತು ಧರ್ಮಕ್ಕೆ ಅರ್ಥವಿಲ್ಲ ಎಂದು ವಾದಿಸಿದ ನಿಗ್ರೋಧ ಬುದ್ಧನನ್ನು ಉದ್ದೇಶಿಸಿ:

'ಸಮಣ ಗೋತಮರು ನಮ್ಮ ಸಭೆಗೆ ಬಂದ ಸಲುಗೆಯ ಸಲುವಾಗಿ ನನ್ನಲ್ಲಿ ಅಪಾರ ದಿನದಿಂದ ಮನೆ ಮಾಡಿದ್ದ ಕೆಲವು ಪ್ರಶ್ನೆಗಳನ್ನು ಕೇಳ ಬಯಸುತ್ತೇನೆ. ಮಹಾತ್ಮರೇ, ತಾವು ಯಾವ ಧರ್ಮವನ್ನು ನಿಮ್ಮ ಶಿಷ್ಯರಿಗೆ ಬೋಧಿಸುತ್ತೀರಿ? ಆ ಧರ್ಮ ಇದೆ ಏನು? ಮತ್ತು ಅದರ ಮೂಲತತ್ವ ಏನು?'

'ಗೆಳೆಯ ನಿಗ್ರೋಧನೇ, ಯಾವುದೇ ಸಾಧನೆ ಇಲ್ಲದೆ, ಬೋಧನೆ ಇಲ್ಲದೆ ನನ್ನ ಧರ್ಮವನ್ನು ತಿಳಿಯುವುದು ಕಷ್ಟ. ಪ್ರತಿ ಮನುಷ್ಯನಲ್ಲಿನ ಪೂರ್ವಾಗ್ರಹವನ್ನು ತೊರೆದಾಗಲೇ ಧರ್ಮದ ಹೆಬ್ಬಾಗಿಲು ತೆರೆಯುವುದು. ಅದೇ ಮೊದಲ ಹಂತ. ನನ್ನ ಧರ್ಮದ ಮೂಲ ತತ್ವವೇ ಸದಾಚಾರ. ಬದುಕು ಇದೇ ಎನ್ನುವುದಾದರೆ ನನ್ನ ಧರ್ಮವೂ ಇದೆ. ನಾನು ನನ್ನ ಶಿಷ್ಯರಿಗೆ ಬೋಧಿಸುವುದು ಇಷ್ಟೇ: ವಿದ್ಯೆ, ವಿಚಾರ, ವಿಜ್ಞಾನ ಮತ್ತು ಮಾನವೀಯತೆ ಹಾಗೂ ಸಮಾನತೆ!'

'ಆದರೆ ಗೆಳೆಯಾ ನಿಗ್ರೋಧ, ನಿನ್ನ ಕಠಿಣ. ದೇಹ ದಂಡನೆಯಲ್ಲಿ ಯಾವ ಸಾರ್ಥಕತೆ ಅಥವಾ ನಿರರ್ಥಕ ಅಡಗಿದೆ?'

'ಪ್ರಭು, ನಾವು ಕಠಿಣ, ದೇಹದಂಡನೆ ವಿಧಿಗಳನ್ನು ಬೋಧಿಸುತ್ತೇವೆ. ಅವುಗಳನ್ನು ಅಗತ್ಯವೆಂದು ನಾವು ಪರಿಗಣಿಸುತ್ತೇವೆ. ನಾವು ಅವುಗಳಿಗೆ ಬದ್ಧರಾಗಿದ್ದೇವೆ.'

'ನಿಗ್ರೋಧ, ನಿನ್ನ ಕಠಿಣ ದೇಹದಂಡನೆಯ ಫಲವಾಗಿ ನಿನ್ನ ಒಬ್ಬ ಸನ್ಯಾಸಿ ಬೆತ್ತಲೆ ಇರುತ್ತಾನೆ ಎಂದು ತಿಳಿಯೋಣ. ಅವನಿಗೆ ಒಂದೇ ಮನೆಯ ಭಿಕ್ಷೆ ಇರಬಹುದು. ಒಂದು ತುತ್ತು ಮಾತ್ರ ಉಣ್ಣುವವನಿರಬಹುದು. ಅಥವಾ ಎರಡು ತುತ್ತು ಇಲ್ಲವೇ ಏಳು ಮನೆಯ ಭಿಕ್ಷೆ ಎಂದಿಟ್ಟುಕೋ. ಇಲ್ಲವೇ ಬಸಿರಿಯಿಂದಾಗಲಿ ಬಾಣಂತಿಯಿಂದಾಗಲಿ, ಪುರುಷರೊಂದಿಗೆ ಸಂಭೋಗದಲ್ಲಿ ನಿರತಳಾದ ಸ್ತ್ರೀಯರಿಂದಾಗಲಿ, ಅವನು ಏನನ್ನೂ ಸ್ವೀಕರಿಸುವುದಿಲ್ಲ ಎಂದು ಇಟ್ಟುಕೋ. ಹಾಗೆಯೇ ಅವನು ಬರಗಾಲದ ಬಡವರ ಮನೆಯ ಆಹಾರ, ಮೀನು, ಮಾಂಸ ಮದ್ಯವನ್ನು ಸ್ವೀಕರಿಸುವುದಿಲ್ಲ ಎಂದುಕೋ. ಯಾವಾಗಲೂ ಒಂಟಿಕಾಲಿನಲ್ಲಿ ನಿಂತಿರುವವನು, ಕುಕ್ಕೂರಗಾಲಿನಲ್ಲಿ ಕುಳಿರುವವನೋ ಅಥವಾ ಸ್ಮಶಾನದಲ್ಲಿ ಬಿಸಾಡಿದ ಶವವಸ್ತ್ರ, ಬಿಸಾಡಿದ ಚಿಂದಿಯ ಬಟ್ಟೆ, ಜಿಂಕೆಯ ಚರ್ಮವನ್ನು ಉಡುವವನಾಗಿದ್ದು, ಮುಳ್ಳುಹಾಸಿಗೆಯ ಮೇಲೆ ಮಲಗುವವನೂ ಎಂದಿಟ್ಟುಕೋ, ಆದರೆ ಅವನಲ್ಲಿ ಅವನದೇ ಆದ ಕೆಲ ದುರಾಭ್ಯಾಸಗಳಿವೆ. ಅವನು ಕೈ ನೆಕ್ಕುತ್ತಾನೆ. ಯಾವ ಮಾರ್ಗಕ್ಕೂ ಅವನು ಬೆಲೆ ಕೊಡುವುದಿಲ್ಲ. ತನ್ನ ದುರಾಭ್ಯಾಸವನ್ನು ನಿಲ್ಲಿಸುವುದು ಇಲ್ಲ. ಸ್ವತಃ ಬುದ್ಧಿ ಇಲ್ಲ. ತನ್ನ ಅಂತರಂಗದ ಸತ್ಯಕ್ಕೆ ತಾನು ತಲೆ ಬಾಗುವುದಿಲ್ಲ. ನೀನು ಹೇಳಿದ್ದೆ ಸರಿ, ನೀನೇ ಎಲ್ಲವೂ, ಪ್ರಶ್ನಿಸುವ ಚರ್ಚಿಸುವ, ಪ್ರತಿಭಟಿಸುವ ಗೋಜಿಗೆ ಹೋಗುವುದಿಲ್ಲ'

'ನಿಗ್ರೋಧ, ಒಬ್ಬ ಇಷ್ಟೆಲ್ಲಾ ಮಾಡುತ್ತಾನೆಂದು ತಿಳಿ. ಅವನ ಬಗ್ಗೆ ನಿನಗೆ ಏನು ಅನಿಸುತ್ತದೆ? ಇವೆಲ್ಲವನ್ನೂ ಮಾಡಿದವನು ದೇಹದಂಡನೆಯ ಕಠಿಣ ವ್ರತಗಳನ್ನು ಆಚರಿಸಿದ್ದಾನೆಂದರ್ಥವೋ ಅಲ್ಲವೋ?'

'ಹಾಗಾದರೆ ನಿಗ್ರೋಧ, ನಿನ್ನ ವ್ರತ ಮತ್ತು ದೃಷ್ಟಿಯಲ್ಲಿ ದೋಷವಿದೆ ಎಂದು ನಾನು ಸಾರುತ್ತೇನೆ.'

'ಪ್ರಭು, ಅದರಲ್ಲಿ ದೋಷವಿದೆ ಎಂದು ಹೇಗೆ ಹೇಳುತ್ತಿರಾ?'

'ನಿಗ್ರೋಧ, ಒಂದು ವೇಳೆ ಒಬ್ಬ ಸಂನ್ಯಾಸಿಯು ಕಠಿಣ ವ್ರತ ಆಚರಿಸಿದರೆ, ಆ ಮೂಲಕ ಅವನು ಅಲ್ಪ ತೃಪ್ತನಾಗುತ್ತಾನೆ. ತನ್ನ ಧ್ಯೇಯ ಸಾಧಿಸಿಯಾಯಿತು ಎಂದು ತಿಳಿಯುತ್ತಾನೆ. ಸ್ವಪ್ರಶಂಸೆ ಮಾಡಿಕೊಂಡು ಇತರರನ್ನು ಹಳಿಯುತ್ತಾನೆ. ಆ ಮೂಲಕ ಅವನಿಗೆ ಮದ ಬರುತ್ತದೆ. ಮೋಹ ಉಂಟಾಗುತ್ತದೆ, ಅದರಿಂದಾಗಿ ಅವನು ಅಜಾಗರೂಕನಾಗುತ್ತಾನೆ. ನಂತರದ ದಿನಗಳಲ್ಲಿ ಅವನಿಗೆ ಕಾಣಿಕೆಗಳು, ಸನ್ಮಾನ ಮತ್ತು ಯಶಸ್ಸು ಸಿಕ್ಕುತ್ತದೆ. ಹೀಗಾಗಿ ಅವನು ಅಲ್ಪತೃಪ್ತನಾಗಿ ಪರಿವರ್ತನೆಗೊಳ್ಳುತ್ತಾನೆ. ಇತರರನ್ನು ಹಳಿಯುತ್ತಾನೆ, ಮುಂದೆ ಆಹಾರದ ವಿಷಯ ಬಂದಾಗ: ಈ ಆಹಾರ ನನಗೆ ಸೇರುತ್ತದೆ. ಆಹಾರ ನನಗೆ ಸೇರುವುದಿಲ್ಲ ಎಂದು ಸವಿಗೆ ಮತ್ತು ಸುಖಕ್ಕೆ ಅಂಟಿಕೊಳ್ಳುತ್ತಾನೆ.'

'ಕಾಲ ಕಳೆದಂತೆ, ರಾಜರು, ಅವನ ಮಂತ್ರಿಗಳು, ಅಧಿಕಾರಿಗಳು, ಗಣ್ಯರೂ, ಬ್ರಾಹ್ಮಣರೂ, ಗೃಹಸ್ಥರೂ, ತತ್ವ ಸಂಸ್ಥಾಪಕರೂ ನನಗೆ ಬೆಲೆ ಕೊಡುತ್ತಾರೆ, ನನಗೆ ತಲೆಬಾಗುತ್ತಾರೆ ಎಂದು ತಿಳಿದು ಅದರಂತೆ ಬೀಗುತ್ತಾನೆ. ನಿಜವಾದ ಸಂನ್ಯಾಸಿಯನ್ನು ಭಿಕ್ಷುವನ್ನು ಅಲ್ಲಗಳೆಯುತ್ತಾನೆ. ಅಷ್ಟೇ ಅಲ್ಲ ಮುಂದೆ ಹೋಗಿ ಬ್ರಾಹ್ಮಣನು ಪ್ರಜೆಗಳಿಂದ ಪೂಜಿಸಲ್ಪಡುವುದನ್ನು, ಸನ್ಮಾನಿಸಲ್ಪಡುವುದನ್ನೂ, ಕಾಣಿಕೆ ಪಡೆಯುವುದನ್ನೂ ನೋಡುತ್ತಾನೆ' ಅದನ್ನು ಗಮನಿಸಿದ ಈ ಸಂನ್ಯಾಸಿ ಹೀಗೆ ಯೋಚಿಸುತ್ತಾನೆ:

'ಐಷಾರಾಮದಲ್ಲಿ ವಾಸಿಸುವ ಬ್ರಾಹ್ಮಣನ ಕಡೆ ಪ್ರಜೆಗಳು ಗಮನ ಹರಿಸುತ್ತಾರೆ. ಅವನನ್ನು ಪೂಜಿಸುತ್ತಾರೆ, ಸನ್ಮಾನಿಸುತ್ತಾರೆ ಅವನಿಗೆ ಕಾಣಿಕೆ ಸಲ್ಲಿಸುತ್ತಾರೆ.'

'ಆದರೆ ಸಂನ್ಯಾಸಿಯಂತೆ ನಿಜವಾಗಿಯೂ ಕಠಿಣ ವ್ರತ ಆಚರಿಸುವ ನನ್ನ ಕಡೆ ಅವರು ನೋಡುವುದಿಲ್ಲ, ನನಗೆ ಗೌರವ, ಸನ್ಮಾನ ಮತ್ತು ಕಾಣಿಕೆ ಸಲ್ಲಿಸುವುದಿಲ್ಲ, ಹೀಗೆ ಅವನು ಪ್ರಜೆಗಳ ಬಗ್ಗೆ ದ್ವೇಷ ಮತ್ತು ಅಸೂಯೆ ಬೆಳೆಸಿಕೊಳ್ಳುತ್ತಾನೆ.'

'ನಿಗ್ರೋಧ, ಕಟ್ಟಕಡೆಗೆ ಆ ಸಂನ್ಯಾಸಿಯೂ ನಿಗೂಢವಾದುದನ್ನು ಆಚರಿಸುತ್ತಾನೆ. ಜನ ವಿರೋಧಿಯಾಗುತ್ತಾನೆ. ಜನಗಳಿಗೆ ವಿದ್ಯೆಯ ಬದಲು ಅಜ್ಞಾನವನ್ನು ಹೇಳಿಕೊಡುತ್ತಾನೆ. ಪ್ರಜ್ಞಾ ಪೂರ್ವಕವಾಗಿ ಅಸತ್ಯವನ್ನು ಹೇಳುತ್ತಾನೆ. ಅಲ್ಲದೆ ಆ ಸಂನ್ಯಾಸಿಯು ದ್ವೇಷ ಮತ್ತು ಅಸೂಯೆ ಬೆಳೆಸಿಕೊಂಡಂತೆ, ಕಪಟ ಮತ್ತು ಮೋಸ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವ ಸಾಧ್ಯತೆಯೂ ಇದೆ. ಅವನು ಕುಯುಕ್ತಿಯ ತಂತ್ರಿಯಾಗಬಹುದು. ಕಠಿಣ ಹೃದಯದ ಅಹಂಕಾರಿಯಾಗಬಹುದು. ದುಷ್ಟ ಬಯಕೆಗಳನ್ನು ಬೆಳೆಸಿಕೊಂಡು, ಅವುಗಳ ದಾಸನಾಗಬಹುದು. ಅವನು ಕೆಟ್ಟ ಅಭಿಮತಗಳನ್ನು ಬೆಳೆಸಿಕೊಂಡು ಅಲೌಕಿಕ ಅಭಿಪ್ರಾಯಗಳಿಗೆ ಬಲಿಯಾಗುತ್ತಾನೆ. ಅವನು ತನ್ನ ಅನುಭವಗಳನ್ನೂ ತಪ್ಪಾಗಿ ಅರ್ಥೈಸುತ್ತಾನೆ. ಸಂನ್ಯಾಸದಿಂದ ವಿಮುಖನಾಗಿ ಅದರಿಂದ ದೂರ ಹೋಗುತ್ತಾನೆ.'

'ನಿಗ್ರೋಧ, ಈಗ ಹೇಳು: ಈ ಎಲ್ಲವೂ ಆ ಸಂನ್ಯಾಸಿಯಲ್ಲಿ ವೈಯಕ್ತಿಕ ದೋಷಗಳಲ್ಲವೆ? ನಿನ್ನ ಸಾಧನೆ ಮತ್ತು ಪ್ರಶಂಸೆಯ ಪ್ರಕಾರ ದೇಹ ದಂಡನೆಯ ಕಠಿಣ ವ್ರತಗಳಲ್ಲಿರುವ ಇವು ದೋಷಗಳೋ ಅಥವಾ ಅಲ್ಲವೋ? ಈ ಎಲ್ಲದರ ಹಿಂದೆ ಯಾವ ಸಾರ್ಥಕತೆ ಇದೆ? ನಿನ್ನ ಉದ್ದೇಶ ಮತ್ತು ಸಾಧನೆ ಎಲ್ಲಾ ನಿರರ್ಥಕವಲ್ಲವೆ?!'

'ಹೌದು, ಗುರುದೇವಾ, ದೇಹದಂಡನೆಯ ಕಠಿಣ ವ್ರತಗಳಲ್ಲಿರುವ ಇವು ಖಂಡಿತವಾಗಿಯೂ ದೋಷಗಳೇ, ಈ ಅಪರಾಧದಿಂದ ದೂರವಿರುವ ಬಗೆ ಹೇಗೆ?'

'ನಿಗ್ರೋಧ, ದೇಹದಂಡನೆಗೆ ಬದಲು ಮಾನಸಿಕ ಚಿಂತನೆಗೆ ತೊಡಗು! ಅದೇ ಎಲ್ಲ ಒಳಿತಿಗೂ ಮೂಲ.!!'

'ಹೌದು, ಗುರುದೇವಾ: ನೀನು ನಿಜಕ್ಕೂ ಈ ಜಗದ ಮಾನಸಿಕ ಚಿಕಿತ್ಸಕ...!!' □

'ನಿಗ್ರೋಧ, ಒಂದು ವೇಳೆ ಒಬ್ಬ ಸಂನ್ಯಾಸಿಯು ಕಠಿಣ ವ್ರತ ಆಚರಿಸಿದರೆ, ಆ ಮೂಲಕ ಅವನು ಅಲ್ಪ ತೃಪ್ತನಾಗುತ್ತಾನೆ. ತನ್ನ ಧ್ಯೇಯ ಸಾಧಿಸಿಯಾಯಿತು ಎಂದು ತಿಳಿಯುತ್ತಾನೆ. ಸ್ವಪ್ರಶಂಸೆ ಮಾಡಿಕೊಂಡು ಇತರರನ್ನು ಹಳಿಯುತ್ತಾನೆ. ಆ ಮೂಲಕ ಅವನಿಗೆ ಮದ ಬರುತ್ತದೆ. ಮೋಹ ಉಂಟಾಗುತ್ತದೆ, ಅದರಿಂದಾಗಿ ಅವನು ಅಜಾಗರೂಕನಾಗುತ್ತಾನೆ. ನಂತರದ ದಿನಗಳಲ್ಲಿ ಅವನಿಗೆ ಕಾಣಿಕೆಗಳು, ಸನ್ಮಾನ ಮತ್ತು ಯಶಸ್ಸು ಸಿಕ್ಕುತ್ತದೆ. ಹೀಗಾಗಿ ಅವನು ಅಲ್ಪತೃಪ್ತನಾಗಿ ಪರಿವರ್ತನೆಗೊಳ್ಳುತ್ತಾನೆ. ಇತರರನ್ನು ಹಳಿಯುತ್ತಾನೆ, ಮುಂದೆ ಆಹಾರದ ವಿಷಯ ಬಂದಾಗ: ಈ ಆಹಾರ ನನಗೆ ಸೇರುತ್ತದೆ. ಆಹಾರ ನನಗೆ ಸೇರುವುದಿಲ್ಲ ಎಂದು ಸವಿಗೆ ಮತ್ತು ಸುಖಕ್ಕೆ ಅಂಟಿಕೊಳ್ಳುತ್ತಾನೆ.'

'SAMVADA' Kannada Monthly, Oct 2007 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ರಾಷ್ಟ್ರಪಿತನ ಸ್ಮರಣೆಯೇ..
..ನಮ್ಮ ಧನ್ಯತೆಗೆ ಪ್ರೇರಣೆ.

ನಮ್ಮ
ತ್ಯಾಗ.
ಪರಿಶ್ರಮ.
ಪ್ರಾಮಾಣಿಕತೆ.
ಸತ್ಯ.
ಸಹಿಷ್ಣುತೆಗಳೊಂದಿಗೆ

ವಿಶ್ವಮಾನವ ಗಾಂಧೀಜಿಗೆ
ನಾವು ನಮಿಸೋಣ.

ಮೇಲಿನ ಅಮೂಲ್ಯ ಕೊಡುಗೆಗಳೇ ವಿಶ್ವಭ್ರಾತೃತ್ವಕ್ಕೆ ನಾಂದಿಯಾಗಲಿ.

ಕರ್ನಾಟಕ ವಾರ್ತೆ
Karnataka Information